ಸಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಿತ ದೇವಾಲಯಗಳು

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಬಂಧ

ಸಂಶೋಧಕರು

ಗಿರಿಜಾ

ಮಾರ್ಗದರ್ಶಕರು

ಡಾ. ಡಿ.ವಿ. ಪರಮಶಿವಮೂರ್ತಿ

ಅಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೩

Binding at
CREATOR, Hospet,
Ph : 423152

ಸಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಿತ ದೇವಾಲಯಗಳು

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಬಂಧ

ಸಂಶೋಧಕರು

ಗಿರಿಜಾ

ಮಾರ್ಗದರ್ಶಕರು

ಡಾ. ಡಿ.ವಿ.ಪರಮಶಿವಮೂರ್ತಿ

ಅಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೩

ದೃಢೀಕರಣ ಪತ್ರ

ಕುಮಾರಿ ಗಿರಿಜಾ ಇವರು '**ಸಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಿತ ದೇವಾಲಯಗಳು**' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಶಾಸನಶಾಸ್ತ್ರ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೧೭ ಏಪ್ರಿಲ್ ೨೦೦೩
ಸ್ಥಳ : ವಿದ್ಯಾರಣ್ಯ

(ಡಾ. ಡಿ.ವಿ.ಪರಮಶಿವಮೂರ್ತಿ)
ಮಾರ್ಗದರ್ಶಕರು
ಅಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪ್ರಮಾಣ ಪತ್ರ

'ಸಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಿತ ದೇವಾಲಯಗಳು' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ. ಡಿ.ವಿ.ಪರಮಶಿವಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಶಾಸನಶಾಸ್ತ್ರ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಗಿರಿಜಾ

(ಗಿರಿಜಾ)

ಸಂಶೋಧಕರು

ದಿನಾಂಕ : ೧೬ ಏಪ್ರಿಲ್ ೨೦೦೩

ಸ್ಥಳ : ವಿದ್ಯಾರಣ್ಯ

[illegible]

[illegible]

[illegible]

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದಲ್ಲಿ ಎಂ.ಫಿಲ್ ಪದವಿಯ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಎಚ್.ಜೆ.ಲಕ್ಕಪ್ಪಗೌಡ ಅವರಿಗೆ ಮತ್ತು ಮಾನ್ಯ ಕುಲಸಚಿವರಾದ ಡಾ. ಕೆ.ವಿ.ನಾರಾಯಣ ಅವರಿಗೆ,

ಈ ಪ್ರಬಂಧ ರೂಪುಗೊಳ್ಳಲು ನನಗೆ ಸಹಾಯ ಸಹಕಾರಗಳೊಂದಿಗೆ ಮಾರ್ಗದರ್ಶನ ಮಾಡಿದ ಶಾಸನಶಾಸ್ತ್ರ ವಿಭಾಗದ ಅಧ್ಯಾಪಕರಾದ ಡಾ. ಡಿ.ವಿ.ಪರಮಶಿವಮೂರ್ತಿ ಅವರಿಗೆ, ಎಲ್ಲಾ ರೀತಿಯ ನೆರವು ನೀಡಿ ಸಹಕರಿಸಿದ ವಿಭಾಗದ ಮುಖ್ಯಸ್ಥರಾದ ಡಾ. ದೇವರಕೊಂಡಾರೆಡ್ಡಿ ಅವರಿಗೆ, ಅಧ್ಯಾಪಕರಾದ ಡಾ. ಕೆ.ಜಿ.ಭಟ್‌ಸೂರಿ, ಶ್ರೀ ಕಲವೀರ ಮನ್ವಾಚಾರಿ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ,

ನನ್ನ ವಿದ್ಯಾಭ್ಯಾಸಕ್ಕೆ ಸದಾ ಪ್ರೀತಿ ವಾತ್ಸಲ್ಯದಿಂದ ಪ್ರೋತ್ಸಾಹ ನೀಡುತ್ತಿರುವ ನನ್ನ ಪೂಜ್ಯ ತಂದೆ, ತಾಯಿಯವರಿಗೆ ಹಾಗೂ ಅಧ್ಯಯನದ ಅವಧಿಯಲ್ಲಿ ನನಗೆ ಎಲ್ಲಾ ರೀತಿಯಿಂದ ಸಹಕರಿಸಿರುವ ನನ್ನ ಅಣ್ಣ ಬಿ. ಶಿವಪ್ರಕಾಶ್, ಅಕ್ಕ, ಭಾವ, ತಮ್ಮಂದಿರಿಗೆ,

ಸಂಡೂರಿಗೆ ಸಂಬಂಧಪಟ್ಟ ಕೆಲವು ಮಾಹಿತಿಯನ್ನು ತಿಳಿಸಿದ ಶ್ರೀ ಮಲ್ಲಿಕಾರ್ಜುನ ಪ್ರಭುಸ್ವಾಮಿ ವಿರಕ್ತಮಠ, ಕಲಾವಿದರಾದ ಶ್ರೀ ವಿ.ಟಿ.ಕಾಳೆ, ಎಸ್.ಇ.ಎಸ್. ಕಾಲೇಜಿನ ಮುಖ್ಯಸ್ಥರಾದ ಡಾ. ಎ. ವೃಷಭೇಂದ್ರಾಚಾರ್ಯ, ಕುಮಾರಸ್ವಾಮಿ ದೇವಾಲಯದ ಕೆಲವು ಛಾಯಾಚಿತ್ರಗಳನ್ನು ತೆಗೆಯಲು ಅವಕಾಶ ಕೊಟ್ಟ ಸಂಡೂರು ಅರಮನೆಯ ಅಧಿಕಾರಿಗಳಾದ ಶ್ರೀ ಜಿ.ವಿ.ಕುಂಟೆ ಅವರಿಗೆ, ನನ್ನ ಪ್ರಬಂಧಕ್ಕೆ ಅವಶ್ಯಕವಾದ ಕುಮಾರಸ್ವಾಮಿ ದೇವಾಲಯದ ಕೆಲವು ಛಾಯಾಚಿತ್ರಗಳನ್ನು ಒದಗಿಸಿಕೊಟ್ಟ ಶ್ರೀ ನಾಜಿಂಶೇಕ್ ಅವರಿಗೆ, ಸಂಡೂರಿನ ನಕ್ಷೆಯನ್ನು ಕೊಟ್ಟು ಸಹಕರಿಸಿದ ಸಂಡೂರಿನ ಗ್ರಾಮಪಂಚಾಯಿತಿ ಕಾರ್ಯದರ್ಶಿಗಳಾದ ಶ್ರೀ ಎಂ.ಈರಣ್ಣ ಅವರಿಗೆ,

ಎಂ.ಫಿಲ್ ಅಧ್ಯಯನದ ಅವಧಿಯಲ್ಲಿ ಸಹಕಾರ ನೀಡಿದ ನನ್ನ ಎಲ್ಲಾ ಸ್ನೇಹಿತರಿಗೂ ಹಾಗೂ ಈ ಪ್ರಬಂಧವನ್ನು ಅಂದವಾಗಿ ಸಂಯೋಜಿಸಿಕೊಟ್ಟ ಹೊಸಪೇಟೆಯ ಶ್ರೀ ಸೋಮನಾಥ ಕುದಿತಿನಿ ಅವರಿಗೆ

ನನ್ನ ಪ್ರೀತಿಪೂರ್ವಕ ತುಂಬು ಹೃದಯದ ಕೃತಜ್ಞತೆಗಳು

ಗಿರಿಜಾ

ಪರಿವಿಡಿ

ಸಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಿತ ದೇವಾಲಯಗಳು

೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಒಂದು ಪ್ರದೇಶದ ಇತಿಹಾಸವನ್ನು ತಿಳಿಯಲು ಅಲ್ಲಿ ದೊರೆಯುವ ಶಾಸನಗಳು ನಮಗೆ ಮೂಲ ಆಕರಗಳಾಗುತ್ತವೆ. ಈ ಶಾಸನಗಳು ನಮ್ಮ ದೇಶದ ಸಂಪತ್ತು ಹಾಗೂ ಹೆಚ್ಚು ಪ್ರಾಮಾಣಿಕ ದಾಖಲೆಗಳು. ಕಳೆದು ಹೋದ ಐಶ್ವರ್ಯ ಮರಳಿ ಪಡೆಯಬಹುದು. ಆದರೆ ಇವುಗಳು ನಾಶವಾದರೆ ಮರಳಿ ಪಡೆಯಲು ಸಾಧ್ಯವಿಲ್ಲ. ಇವು ನಮ್ಮ ಸಂಸ್ಕೃತಿಯ ಚಿನ್ನದ ಗಣಿಗಳು. ಇವನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಈ ನಮ್ಮ ಅಧ್ಯಯನದಲ್ಲಿ ಸಂಡೂರು ತಾಲೂಕಿನ ಪ್ರಾಚೀನ ಕಾಲದ ಶಾಸನಗಳನ್ನು ಹಾಗು ದೇವಾಲಯಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಆದರೆ ಅವುಗಳ ಸಂಖ್ಯೆ ಬಹಳ ಕಡಿಮೆ. ಅವುಗಳಲ್ಲಿ ಹೆಚ್ಚಾಗಿ ಈ ಪರಿಸರದಲ್ಲಿಯ ಶಾಸನಗಳು ಮತ್ತು ದೇವಾಲಯಗಳು ವಿಜಯನಗರ ಕಾಲಕ್ಕೆ ಸೇರಿರುತ್ತವೆ. ಈ ಪರಿಸರದಲ್ಲಿಯ ಹೆಚ್ಚಿನ ಶಾಸನಗಳು ದೇವಾಲಯಗಳಿಗೆ ನೀಡಿದ ದಾನ ದತ್ತಿಗಳನ್ನು ಕುರಿತ ವಿಷಯಗಳನ್ನು ತಿಳಿಸುತ್ತವೆ. ವೀರ ಪರಂಪರೆಯ ಪ್ರತೀಕವಾದ ಹಲವಾರು ವೀರಗಲ್ಲುಗಳು ಈ ಪರಿಸರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿವೆ.

ಸಂಡೂರು ಪಟ್ಟಣವು ಬಳ್ಳಾರಿ ಜಿಲ್ಲೆಯಿಂದ ನೈರುತ್ಯಕ್ಕೆ ೪೮ ಕಿ.ಮೀ.ದೂರದಲ್ಲಿದೆ. ಈ ಪ್ರದೇಶವು ಬಳ್ಳಾರಿ ಜಿಲ್ಲೆಯ ಪುಟ್ಟ ಕಾಶ್ಮೀರ ಹಾಗು ಈ ಜಿಲ್ಲೆಯ ಮಲೆನಾಡು ಎಂದು ಕರೆಸಿಕೊಂಡಿದೆ. ಬೆಟ್ಟಗಳಿಂದಾವೃತವಾಗಿ ಸ್ಥಳ ಮಹಿಮೆ, ನಿಸರ್ಗ ಸಂಪತ್ತು, ಕಪ್ಪು ಬಂಗಾರಗಳ ನಿಕ್ಷೇಪ - ಈ ಎಲ್ಲಾ ಪ್ರಾಕೃತಿಕ ಸೌಂದರ್ಯ ಪಡೆದಿರುವ ಈ ಪ್ರದೇಶವು ಕರ್ನಾಟಕದಲ್ಲೇ ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಪೌರಾಣಿಕ - ಐತಿಹಾಸಿಕ ಮಹತ್ವಗಳಿಂದ ಸ್ಥಾನಿಕ ಮೌಲ್ಯವನ್ನು ಹೆಚ್ಚಿಸಿಕೊಂಡಿದೆ.

ಇಲ್ಲಿ ಗತವೈಭವ ಹಾಗು ಸಂಸ್ಕೃತಿಯನ್ನು ಸಾರಿ ಹೇಳುವ ಅನೇಕ ದೇವಾಲಯಗಳು, ಶಾಸನಗಳು, ತೀರ್ಥಕ್ಷೇತ್ರಗಳು ಮತ್ತು ಪ್ರೇಕ್ಷಣೀಯ ಸ್ಥಳಗಳನ್ನೊಳಗೊಂಡಂತಹ ಪ್ರದೇಶವಿದಾಗಿದೆ.

ಅಂದಿನ ಕಾಲದಲ್ಲಿ ರಚನೆಗೊಂಡ ಶಾಸನಗಳು ಇಂದಿನ ಊರ ಜನರ ನಿರ್ಲಕ್ಷತೆಯಿಂದ ಮನೆಯ ತಳಪಾಯದ ಕಲ್ಲುಗಳೋ, ಗೋಡೆಯಗಲ್ಲುಗಳೋ ಅಥವಾ ಬೀದಿಗೆ ಹಾಸುವ ಕಲ್ಲುಗಳಾಗಿಯೋ, ಹೀಗೆ ಒಂದಲ್ಲಾ ಒಂದು ರೀತಿಯಿಂದ ಈ ಶಾಸನಗಳು ಯಾವುದೇ ರಕ್ಷಣೆಯಿಲ್ಲದೇ ಹಾಳಾಗುತ್ತಿವೆ. ಇನ್ನೂ ಬಹಳಷ್ಟು ದೇವಾಲಯಗಳು ಸಾರ್ವಜನಿಕರ ಹಾಗೂ ಸರಕಾರದ ಸಂರಕ್ಷಣೆಯಿಲ್ಲದೆ ಹಾಳಾಗಿ ಕಾಣದಂತಾಗುತ್ತಿವೆ.

ಹೀಗಿದ್ದಾಗ್ಯೂ ಗ್ರಾಮದಲ್ಲಿ ಕೆಲವು ದೇವಾಲಯಗಳು ಮತ್ತು ಶಾಸನಗಳು, ಕೋಟೆ, ಮಠ, ಬಾವಿ, ಕೆರೆ, ಪುಷ್ಕರಣಿ ಹಾಗೂ ಕೆಲವು ಸ್ಮಾರಕಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ನೋಡುಗರ ಗಮನ ಸೆಳೆದಿವೆ.

ಈ ಭಾಗಕ್ಕೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿದ್ದರೂ ಅವಕ್ಕೆ ಪೋಷಕವಾಗುವ ಲೇಖನಗಳು ಮತ್ತು ಕೃತಿಗಳು ಇನ್ನು ಬರಬೇಕಾಗಿದೆ. ಈ ಕೊರತೆಯನ್ನು ನೀಗಿಸುವ ದೃಷ್ಟಿಯಿಂದ ಅನೇಕ ಪ್ರದೇಶಗಳಲ್ಲಿ ವ್ಯಾಪಕ ಅಧ್ಯಯನ ನಡೆಯಬೇಕಾಗಿದೆ. ಈ ಪ್ರದೇಶಕ್ಕೆ ಸಂಬಂಧಿಸಿದಂತೆ ವಾಸುದೇವ ಬಡಿಗೇರ ಅವರು 'ಸಂಡೂರು ಪರಿಸರದ ಕಾರ್ತಿಕೇಯ ತಪೋವನ' ಎಂಬ ಚಾರಿತ್ರಿಕ ಅಧ್ಯಯನದ ಕೃತಿಯಲ್ಲಿ ಕರ್ನಾಟಕದಲ್ಲಿ ಕಾರ್ತಿಕೇಯನ ಆರಾಧನೆ ಬಹು ಹಿಂದಿನ ಕಾಲದಿಂದಲೂ ಹೇಗೆ ನಡೆದುಬಂದಿದೆ, ಅದರಲ್ಲೂ ವಿಶೇಷವಾಗಿ ಈಗಿನ ಸಂಡೂರು, ಕುಡತಿನಿ, ಕೊಳಗಲ್ಲು ಗ್ರಾಮಗಳಲ್ಲಿ, ಮಧ್ಯಕಾಲೀನ ಯುಗದಲ್ಲಿ ಕಾರ್ತಿಕೇಯನ ಆರಾಧನೆ ವಿಶೇಷವಾಗಿದ್ದು, ಬಾದಾಮಿ ಚಾಲುಕ್ಯರ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕುಮಾರಸ್ವಾಮಿಯ ಅನೇಕ ಶಿಲ್ಪಗಳ ಕಂಡರಣೆಯಾಯಿತು ಮತ್ತು ದೇವಾಲಯಗಳ ನಿರ್ಮಾಣವಾಯಿತು ಎಂದು ಹಾಗೂ ಕುಮಾರಸ್ವಾಮಿಯ ಆರಾಧನೆ, ಐತಿಹ್ಯ, ಶಿಲ್ಪಗಳು ದೇವಾಲಯಗಳ ಬಗ್ಗೆ ಅನೇಕ ವಿವರಗಳನ್ನು ನೀಡಿದ್ದಾರೆ.

ಹಾಗೆಯೇ 'ಸ್ಕಂದ - ಶ್ರೀಗಂಧ' ಎನ್ನುವ ಸ್ಮರಣ ಸಂಚಿಕೆಯಲ್ಲಿ ಪ್ರಕಟವಾದ ಮೃತ್ಯುಂಜಯ ರುಮಾಲೆಯವರ 'ಸಂಡೂರು : ಒಂದು ಪರಿಚಯ' ಎಂಬ ಲೇಖನದಲ್ಲಿ ಸಂಡೂರಿನ ಇತಿಹಾಸದ ಬಗ್ಗೆ ಐತಿಹಾಸಿಕವಾಗಿ, ರಾಜಕೀಯವಾಗಿ ಹಾಗೂ ಪ್ರಮುಖ ಪ್ರೇಕ್ಷಣೀಯ ತೀರ್ಥಕ್ಷೇತ್ರಗಳನ್ನೊಳಗೊಂಡ ಪ್ರದೇಶಗಳ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯ ನೀಡಲಾಗಿದೆ ಹಾಗೂ ಇದೇ ಸಂಚಿಕೆಯಲ್ಲಿ ಬಂದ ಇನ್ನೊಂದು ಲೇಖನವೆಂದರೆ ಜಿ.ಎಚ್.ಸಂಭಾಪೂರವರು ಬರೆದ 'ಪುರಾಣಗಳಲ್ಲಿ ಸ್ಕಂದಜನ್ಮ ವೃತ್ತಾಂತಗಳು' ಎಂಬ ಲೇಖನದಲ್ಲಿ ಕುಮಾರಸ್ವಾಮಿಯ ಜನನದ ಬಗ್ಗೆ ವೇದ, ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿ ಹಾಗೂ ಪುರಾಣಗಳಾದ ಸ್ಕಂದ, ವಾಯು (೭೨ನೇ ಸರ್ಗ), ಮತ್ಸ್ಯಪುರಾಣದ (೧೫೮ - ೧೬೦ ಸರ್ಗ) ಬ್ರಹ್ಮಪುರಾಣ (೧೨೮ ಸರ್ಗ)ಗಳಲ್ಲಿ ಸ್ಕಂದನ ಜನ್ಮ ವೃತ್ತಾಂತವನ್ನು ತಿಳಿಸಿಕೊಟ್ಟಿದ್ದಾರೆ. ಹಾಗೂ

ಡಾ.ಎಸ್.ಎ.ಅಪ್ಪನಗೌಡರು ಬರೆದ 'ಬಳ್ಳಾರಿ ಜಿಲ್ಲೆಯ ಖನಿಜ ಸಂಪತ್ತು' ಎಂಬ ಲೇಖನದಲ್ಲಿ ಸಂಡೂರಿನ ಸುತ್ತಮುತ್ತಲು ಇರುವ ಎತ್ತರವಾದ ಪರ್ವತಗಳಲ್ಲಿ ದೊರೆಯುವ ಐರನ್ ಫಾರ್ಮೇಶನ್ ಎಂಬ ಕಲ್ಲಿನಲ್ಲಿ ಕಬ್ಬಿಣದ ನಿಕ್ಷೇಪಗಳು ದೊರೆಯುತ್ತವೆ ಹಾಗೂ ಇವು ಉತ್ತಮ ದರ್ಜೆಗೆ ಸೇರಿದ ಅದಿರು ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಹಾಗೂ ಡಾ. ಆರ್.ಪುರುಷೋತ್ತಮರೆಡ್ಡಿ ಅವರು 'ಸಂಡೂರು ಪ್ರದೇಶದ ಕಬ್ಬಿಣ ತಯಾರಿಕೆ ಒಂದು ಐತಿಹಾಸಿಕ ನೋಟ' ಎಂಬ ಲೇಖನದಲ್ಲಿ ಭಾರತದಲ್ಲಿ ದೊರೆಯುವ ಕಬ್ಬಿಣದ ಅದಿರುಗಳಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಬಳ್ಳಾರಿಯಲ್ಲಿ ಈ ಕಬ್ಬಿಣ ತಯಾರಿಕೆಯ ಕಾರ್ಯ ನಡೆದಿರುವುದು ಕಂಡುಬರುತ್ತದೆ. ನಮ್ಮ ನಾಗರೀಕತೆ ಶಿಲಾಯುಗ, ಕಂಚಿನಯುಗ ನಂತರ ಕಬ್ಬಿಣಯುಗ ಪ್ರವೇಶಿಸಿದ್ದು, ಕ್ರಿ.ಪೂ. ೨೦೦೦ ದಿಂದ ೧೨೦೦ ವರ್ಷದ ಕಾಲಾವಧಿಯಲ್ಲಿ ಬಳಸಿರುವ ಬಗೆ ಬಗೆಯ ಕಬ್ಬಿಣದ ವಸ್ತುಗಳು ದೊರೆತಿದ್ದು, ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲಿಯೂ ಈ ಲೋಹದ ವರ್ಣನೆ ಇದೆ. ಹಾಗೂ ಕಬ್ಬಿಣ ತಯಾರಿಕೆಯ ಕಾರ್ಯ ಈ ಸಂಡೂರು ಪ್ರದೇಶದಲ್ಲಿ ವ್ಯಾಪಕವಾಗಿ ಹರಡಲು ಕಾರಣ ಇಲ್ಲಿಯ ಕಬ್ಬಿಣದ ಅದಿರು ಉತ್ತಮ ದರ್ಜೆಯದ್ದಾಗಿದೆ. ಇದಕ್ಕೆ ಆಧಾರವೆಂಬಂತೆ ಯಶವಂತ ನಗರದ ಬಳಿ ದೊರೆಯುವ ಕಿಟ್ಟದ ರಾಶಿಯ ಗುಡ್ಡೆಗಳು ಹಾಗೂ ಕುಲುಮೆಯಲ್ಲಿ ಬಳಸುತ್ತಿದ್ದ ಜೇಡಿಮಣ್ಣಿನ ಕೊಳವೆಗಳು ಬೂದಿಯ ರಾಶಿಯನ್ನು ಇಂದಿಗೂ ಅಲ್ಲಿ ಕಾಣಬಹುದು ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಡಾ.ಜೆ.ಎಂ.ನಾಗಯ್ಯನವರ 'ವಡ್ಡಾರಾಧನೆ ಸೂಚಿಸುವ ಬಸದಿ ಮತ್ತು ಸಂಡೂರು' ಎಂಬ ಲೇಖನದಲ್ಲಿ, ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ'ಯ ಕಾರ್ತಿಕೇಯ ಯತಿ ಕುಮಾರಸ್ವಾಮಿಯೆಂಬ ದೇವರಾಗಿಯೂ ಆ ಬಸದಿಯೇ ಅನ್ಯ ದೇವಾಲಯವಾಗಿಯೂ ಪರಿವರ್ತನೆಗೊಂಡಿರಬಹುದು ಎಂಬುದರ ಬಗ್ಗೆ ಹಾಗು ಕುಮಾರಸ್ವಾಮಿ ಬೆಟ್ಟದ ಕೆಳಭಾಗದಲ್ಲಿ ನಂದಿಹಳ್ಳಿಗೆ ಪಶ್ಚಿಮಕ್ಕೆ ಇರುವ ಜೋಗಿಕೊಳ್ಳವನ್ನು ಕಥೆಯಲ್ಲಿರುವ ಬಸದಿಯ ಪ್ರದೇಶವಾಗಿರಬೇಕೆಂದೂ ಹೇಳುತ್ತಾ ಈ ಲೇಖನದಲ್ಲಿಯ ವಡ್ಡಾರಾಧನೆ ಸೂಚಿಸುವ ಬಸದಿ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಸಬೇಕಾಗಿ ವಿದ್ವಾಂಸರ ಗಮನ ಸೆಳೆದಿದ್ದಾರೆ. ಅ.ಸುಂದರ ಅವರು ಶ್ರೀಮದ್ರಾಮಾಯಣದ 'ಕಾರ್ತಿಕೇಯ ವನ'ವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ? ಎಂಬ ಲೇಖನದಲ್ಲಿ ಸಂಡೂರಿನ ಕುಮಾರಸ್ವಾಮಿ ಬೆಟ್ಟವು ಒಂದು ಕ್ಷೇತ್ರ. ಶ್ರೀ ಮದ್ರಾಮಾಯಣದ ಕಿಷ್ಕಿಂದಾ ಕಾಂಡದಲ್ಲಿ ಉಲ್ಲೇಖವಾದ ಕಾರ್ತಿಕೇಯ ವನವೂ ಈ ಕ್ಷೇತ್ರವೇ ಎಂದು ನಂಬಿಕೆ. ಇಲ್ಲಿನ ದೇವಾಲಯ, ಶಿಲ್ಪಗಳು ಮತ್ತು ಕ್ಷೇತ್ರ ಮಹಿಮೆಯ ಬೆಳವಣಿಗೆ ಬಗ್ಗೆ ಕೆಲವು ಐತಿಹಾಸಿಕ ಅಂಶಗಳನ್ನು ಸೂಚಿಸುತ್ತವೆ. ಹಾಗೂ ಕುಡತಿನಿಯ ಕಾರ್ತಿಕೇಯ ತಪೋವನದ ಉಲ್ಲೇಖವಿರುವ ಶಾಸನಗಳ ಬಗ್ಗೆ ಪಟ್ಟಿಯನ್ನು ಹಾಗೂ ರಾಜಕೀಯವಾಗಿ, ಐತಿಹಾಸಿಕವಾಗಿ, ಪುರಾತತ್ವ ಹಿನ್ನೆಲೆಯಲ್ಲಿ ಕೆಲವು ವಿಚಾರಗಳನ್ನು ಸಂಕ್ಷಿಪ್ತವಾಗಿ ತಿಳಿಸಿರುತ್ತಾರೆ. ಎಸ್.ಎಂ.ನಾಗಭೂಷಣ ಅವರು 'ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ' ಎಂಬ ಲೇಖನದಲ್ಲಿ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯಲ್ಲಿ ಈ ಪ್ರದೇಶವನ್ನು ಕುರಿತು ಸಂಕ್ಷಿಪ್ತ

ವಿಚಾರಗಳನ್ನು ಹಾಗೂ ಕೆಲವು ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ತಿಳಿಸಿದ್ದಾರೆ. ಹಾಗೂ ಎಂ.ಎಂ.ಕಲಬುರ್ಗಿ ಅವರ 'ಶ್ರೀ ಕೋಮಾರ ದೇವರ ಕ್ಷೇತ್ರದ ಕೈಫಿಯತ್ತು'ದಲ್ಲಿ ಕುಮಾರಸ್ವಾಮಿಯ ಕ್ಷೇತ್ರದ ಬಗ್ಗೆ ವಿವರ ನೀಡಿದ್ದಾರೆ. ಹಾಗೂ 'ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ' ಎಂಬ ಜೆ.ಎಂ.ನಾಗಯ್ಯನವರ ಕೃತಿಯಲ್ಲಿ ರಾಜಕೀಯವಾಗಿ ಬಳ್ಳಾರಿ ಜಿಲ್ಲೆ ಕರ್ನಾಟಕ ಸಂಸ್ಕೃತಿಗೆ ವಿಶಿಷ್ಟ ಕೊಡುಗೆ ನೀಡಿದ ಬಗ್ಗೆ ಅಂದರೆ ಈ ಪರಿಸರದಲ್ಲಿ ಅನೇಕ ರಾಜ ಮನೆತನಗಳು, ಪಾಳೇಗಾರರು, ಪೇಶ್ವೆಗಳು ಆಳಿದ ಬಗ್ಗೆ ವಿಷಯವನ್ನು ಹೇಳುತ್ತಾ ಸಂಡೂರು ಪರಿಸರದಲ್ಲಿಯೂ ಆಳಿದ ಅರಸರ ಇತಿಹಾಸದ ಬಗ್ಗೆ ಕೆಲವು ಸಂಕ್ಷಿಪ್ತ ವಿಚಾರವನ್ನು ತಿಳಿಸಿದ್ದಾರೆ.

ಒಟ್ಟಿನಲ್ಲಿ ಸಂಡೂರಿನ ಬಗ್ಗೆ ಏನೇ ಅಧ್ಯಯನ ನಡೆದಿದ್ದರೂ ಅವುಗಳಲ್ಲಿ ಕೆಲವೇ ಕೆಲವು ಅಂಶಗಳು ಮಾತ್ರ ಉಲ್ಲೇಖಗೊಂಡಿವೆ. ಆದ್ದರಿಂದ ನಾವು ವಿಸ್ತಾರವಾದ ಅಧ್ಯಯನ ಕೈಗೊಳ್ಳುವ ಉದ್ದೇಶದಿಂದ 'ಸಂಡೂರು ಪರಿಸರದ ಶಾಸನೋಲ್ಲೇಖಿತ ದೇವಾಲಯಗಳು' ಎಂಬ ಅಧ್ಯಯನ ಕೈಗೊಂಡಿರುವೆವು. ಸಂಡೂರಿನ ಶಾಸನಗಳು ಮತ್ತು ದೇವಾಲಯಗಳ ಬಗೆಗೆ ಮೊದಲ ಬಾರಿಗೆ ಇಲ್ಲಿ ವಿವರವಾಗಿ ಅಧ್ಯಯನ ನಡೆಸಲಾಗಿದೆ. ನಮ್ಮ ಅಧ್ಯಯನಕ್ಕೆ ಈ ಪರಿಸರದಲ್ಲಿ ದೊರೆಯುವ ಸುಮಾರು ೨೭ ಶಾಸನಗಳು ಹಾಗೂ ಬಳ್ಳಾರಿ ಜಿಲ್ಲಾ ಶಾಸನ ಸಂಪುಟ - ೧ರಲ್ಲಿ ಸೇರಿಸದಿರುವ ಈ ಪ್ರದೇಶದ ೧೦ ಶಾಸನಗಳನ್ನು ಇಲ್ಲಿ ಸೇರಿಸಿ ಪರಿಚಯಿಸಲಾಗಿದೆ. ಇನ್ನೂ ೧೨ ದೇವಾಲಯಗಳನ್ನು ಬಳಸಿಕೊಳ್ಳಲಾಗಿದೆ. ದೇವಾಲಯಗಳ ವಾಸ್ತುಶೈಲಿ, ನಿರ್ಮಾಣ ತಂತ್ರ, ಶಿಲ್ಪ ಮತ್ತು ಅವುಗಳ ಶೈಲಿ, ಶಾಸನಗಳ ವಸ್ತು ಅವುಗಳಲ್ಲಿ ಕಂಡುಬರುವ ವಿಷಯ ವೈವಿಧ್ಯತೆ ಮೊದಲಾದ ಅಂಶಗಳನ್ನು ಈ ಪ್ರಬಂಧದಲ್ಲಿ ವಿವರವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಅಲ್ಲದೆ ಈ ಪರಿಸರದಲ್ಲಿಯ ಕೋಟೆಗಳು ಇತರೇ ಸ್ಮಾರಕಗಳು, ವೀರಗಲ್ಲು, ಬಾವಿ, ಕೆರೆ, ಪುಷ್ಕರಣಿ ಮೊದಲಾದವುಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ಒಟ್ಟಾರೆಯಾಗಿ ಈ ಪರಿಸರದಲ್ಲಿ ದೊರೆಯುವ ದೇವಾಲಯಗಳು, ಶಾಸನಗಳು ಮತ್ತು ಸ್ಮಾರಕಗಳನ್ನು ಅಭ್ಯಾಸಿಸುವುದರ ಮೂಲಕ ಸಂಡೂರಿನ ಪರಿಸರದ ಪರಂಪರೆ ಮತ್ತು ಸಂಸ್ಕೃತಿಯನ್ನು ಪುನರಚಿಸಲು ಪ್ರಯತ್ನಿಸಲಾಗಿದೆ. ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ದೊರಕಿರುವ ಎಲ್ಲಾ ಆಕರಗಳನ್ನು ಸಮರ್ಥವಾಗಿ, ಪ್ರಾಮಾಣಿಕವಾಗಿ ಬಳಸಿಕೊಂಡು ಈ ಪರಿಸರವನ್ನು ವಿವಿಧ ಮುಖಗಳಿಂದ ಪರಿಚಯಿಸುವ ಪ್ರಯತ್ನವೇ ಈ ಪ್ರಬಂಧವಾಗಿದೆ.

ಪ್ರಸ್ತುತ ಈ ನಿಬಂಧದಲ್ಲಿರುವ ಐದು ಅಧ್ಯಾಯಗಳು ಸಂಡೂರು ಪರಿಸರದ ಶಾಸನೋಲ್ಲೇಖಿತ ದೇವಾಲಯದ ಅಧ್ಯಯನವನ್ನು ಮಾಡುವ ಮೊಟ್ಟಮೊದಲ ಪ್ರಯತ್ನವಾಗಿದೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದ್ದು, ಈ ಅಧ್ಯಯನ ಮಾಡಲು ಆಯ್ದುಕೊಂಡ ಮೂಲ ಆಕರಗಳ ಬಗ್ಗೆ ವಿವರಿಸಲಾಗಿದೆ. ಪೌರಾಣಿಕವಾಗಿ, ಐತಿಹಾಸಿಕವಾಗಿ, ಪುರಾತತ್ವ ಹಿನ್ನೆಲೆಯಲ್ಲಿ ಮತ್ತು ಇತ್ತೀಚಿನ ಇತಿಹಾಸದ ಆಧಾರಗಳ, ಆಕರಗಳನ್ನು ಮುಖ್ಯವಾಗಿಟ್ಟುಕೊಂಡು ಪ್ರಸ್ತಾವನೆಯನ್ನು ಇಲ್ಲಿ

ಮಾಡಲಾಗಿದೆ. ಪ್ರಾದೇಶಿಕ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡುವ ದೃಷ್ಟಿಯಲ್ಲಿ ಈ ಅಧ್ಯಯನದ ಅವಶ್ಯಕತೆಯನ್ನು ಇಲ್ಲಿ ಒತ್ತಿ ಹೇಳಲಾಗಿದೆ.

ಅಧ್ಯಾಯ ಎರಡರಲ್ಲಿ ಸಂಡೂರು ಪರಿಸರದ ಇತಿಹಾಸದ ಬಗ್ಗೆ ಹೇಳಲಾಗಿದ್ದು, ಸಂಡೂರು ಪರಿಸರದ ಪೂರ್ವ ಇತಿಹಾಸ ಕಾಲದ ಇತಿಹಾಸವನ್ನು ಹೇಳಲಾಗಿದೆ. ಹಾಗೂ ಭೌಗೋಳಿಕ ಪ್ರಭಾವ ಮತ್ತು ಪರಿಸರದ ಸನ್ನಿವೇಶಗಳನ್ನು ಕುರಿತು ವಿವರಿಸಲಾಗಿದೆ. ಈ ಪರಿಸರವು ಧಾರ್ಮಿಕ ಕ್ಷೇತ್ರವಾಗಿತ್ತೆಂದು ಪುರಾಣಗಳ ಹಿನ್ನೆಲೆಯಿಂದ ತಿಳಿದುಬರುತ್ತದೆ. ಐತಿಹಾಸಿಕ ಹಿನ್ನೆಲೆಯ ಭಾಗದಲ್ಲಿ ಸಂಡೂರು ಪರಿಸರವನ್ನು ಆಳಿದ ಅರಸರುಗಳಾದ ಚಾಲುಕ್ಯ ಪೂರ್ವಯುಗದಿಂದ ಹಿಡಿದು ವಿಜಯನಗರದ ಅರಸರುಗಳ ಕಾಲದವರೆಗೆ ಹಾಗೂ ಪಾಳೇಗಾರರಾದ ಕುಮ್ಮಟದ ಪಾಳೇಗಾರರಿಂದ ಹಿಡಿದು ಜರಿಮಲೆ ಪಾಳೇಗಾರರವರೆಗೂ ಹಾಗೂ ಇವರುಗಳ ನಂತರದ ಅವಧಿಯಲ್ಲಿ ಈ ಪ್ರದೇಶವನ್ನು ಆಳಿದ ಬ್ರಿಟಿಷರ ಮತ್ತು ಪೇಶ್ವೆಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ. ಸಂಡೂರು ಎಂಬ ಪದ ಪ್ರಯೋಗವು ಇಲ್ಲಿ ದೊರಕುವ ಅರಸರುಗಳ ಕಾಲದ ಶಾಸನಗಳಲ್ಲಿ ಕಾಣಿಸಿಕೊಂಡಿವೆ. ಶಾಸನಗಳಿಂದ ತಿಳಿದುಬರುವ ಈ ಪರಿಸರದಲ್ಲಿ ಆಳಿದ ಅರಸು ಮನೆತನಗಳು ಅಂದು ಆಳಿ, ಅಳಿದರೂ ಅವರು ಬಿಟ್ಟು ಹೋಗಿರುವ ಗುರುತುಗಳು ಇಂದಿಗೂ ಆಧಾರವಾಗಿ ನಿಂತಿವೆ. ಅವುಗಳಲ್ಲಿ ಮುಖ್ಯವಾಗಿ ಶಾಸನಗಳು ಮತ್ತು ದೇವಾಲಯಗಳು, ಸ್ಮಾರಕ ಶಾಸನಗಳು ಹಾಗೂ ಇತರೆ ಸ್ಮಾರಕಗಳು ಒಳಗೊಳ್ಳುತ್ತವೆ.

ಅಧ್ಯಾಯ ಮೂರರಲ್ಲಿ ಸಂಡೂರು ಪರಿಸರದ ಶಾಸನಗಳ ಬಗ್ಗೆ ಚಿತ್ರಿಸಲಾಗಿದ್ದು, ಈ ಪ್ರದೇಶದಲ್ಲಿಯ ದೇವಾಲಯಗಳಿಗೆ ನೀಡಿದ ದಾನ ಅವುಗಳಲ್ಲಿ ಮುಖ್ಯವಾಗಿ ಶೈವ ದೇವಾಲಯಗಳಿಗೆ, ವೈಷ್ಣವ ದೇವಾಲಯಗಳಿಗೆ, ಬಸದಿಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಅಂದಿನ ಅರಸರುಗಳು ನೀಡಿದ ದಾನದ ಬಗ್ಗೆ ಕುರಿತು ಹೇಳಲಾಗಿದೆ.

ದೇವಾಲಯದ ನಿರ್ಮಾಣ ಕಾರ್ಯಕ್ಕಾಗಿ ಕೆಲಸ ಮಾಡಿದ ವ್ಯಕ್ತಿಗಳಿಗೆ ನೀಡಿದ ದಾನ, ಸಂಸ್ಥೆಗಳಾದ ಮಠ, ಮಾನ್ಯಗಳಿಗೆ ಅರಸರುಗಳು, ಅಧಿಕಾರಿಗಳು, ಮಹಾಮಾಂಡಲಿಕರುಗಳು ನೀಡಿದ ದಾನ, ಸಾಮಾಜಿಕ ಕಾರ್ಯಗಳಾದ ಕೆರೆ, ಬಾವಿ, ಗ್ರಾಮಗಳ ನಿರ್ಮಾಣಕ್ಕಾಗಿ ನೀಡಿದ ದಾನ. ದೇವರ ಪೂಜಾಕಾರ್ಯಕ್ಕಾಗಿ ತೆರಿಗೆ, ಹಣ, ಗದ್ಯಾಣಗಳನ್ನು ಬಿಟ್ಟದಾನ ಮತ್ತು ದೇವಾಲಯದ ನಿರ್ಮಾಣ, ಪೂಜಾಕಾರ್ಯಗಳಿಗಾಗಿ ಮಾಡಿದ ಕೆಲಸಕ್ಕೆ ವ್ಯಕ್ತಿಗಳಿಗೆ ನೀಡಿದ ಭೂದಾನ ಹಾಗೂ ದೇವಾಲಯಗಳಾದ ಶೈವ. ವೈಷ್ಣವ ದೇವಾಲಯಗಳ ಉದ್ಧಾರಕ್ಕಾಗಿ ನೀಡಿದ ದಾನ ಮತ್ತು ಸ್ಮಾರಕ ಶಾಸನ ಶಿಲ್ಪ ಹಾಗೂ ದಾನ ಶಾಸನ ಶಿಲ್ಪಗಳಾದ ಶೈವ, ವೈಷ್ಣವ ಶಾಸನದ ಶಿಲ್ಪಗಳ ಬಗ್ಗೆ ಹಾಗೂ ಸ್ಮಾರಕ ಶಿಲ್ಪಕ್ಕೆ ಸಂಬಂಧಿಸಿದಂತೆ ಅವುಗಳ ವೈವಿಧ್ಯತೆಯನ್ನು ಕುರಿತು ಹೇಳಲಾಗಿದೆ.

ಒಟ್ಟಿನಲ್ಲಿ ಇತಿಹಾಸ ರಚನೆಗೆ ಶಾಸನಗಳು ಬಹಳ ಮಹತ್ವದ ಪಾತ್ರ ವಹಿಸಿವೆ ಎಂಬುದಕ್ಕೆ ಉದಾಹರಣೆಯಾಗಿ ಸಂಡೂರು ಪರಿಸರದಲ್ಲಿ ದೊರೆತಿರುವ ಶಾಸನಗಳು, ಶಾಸನಗಳಲ್ಲಿ ಹಲವಾರು ವಿಧಗಳನ್ನು ಕಾಣುತ್ತೇವೆ. ಅವುಗಳಲ್ಲಿ ಮುಖ್ಯವಾಗಿ ದಾನ ಶಾಸನಗಳು ಹಾಗೂ ಸ್ಮಾರಕ ಶಾಸನಗಳು, ವೀರಗಲ್ಲುಗಳು ಇತ್ಯಾದಿ. ಇವುಗಳು ಶಿಲ್ಪಕಲೆಯ ದೃಷ್ಟಿಯಿಂದ ಹಾಗೂ ಶಾಸನಗಳ ಆಧಾರದಿಂದ ಸಂಡೂರು ಪರಿಸರದ ಅಧ್ಯಯನಕ್ಕೆ ಯಾವ ರೀತಿ ಈ ಅಂಶಗಳು ಸಹಾಯಕಾರಿಯಾಗಬಲ್ಲವು ಎಂಬುದನ್ನು ವಿವರಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಶಾಸನೋಲ್ಲೇಖಿತ ದೇವಾಲಯಗಳ ಬಗ್ಗೆ ಹಾಗೂ ಶಾಸನಗಳಲ್ಲಿ ಉಲ್ಲೇಖಿತ ವಾದಂತಹ ಶೈವ, ವೈಷ್ಣವ, ಜೈನ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ನಿರ್ವಹಣೆ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ಕುಮಾರಸ್ವಾಮಿ ತಪೋವನವು ಈ ಸಂಡೂರು ಕುಮಾರಸ್ವಾಮಿ ಬೆಟ್ಟ ಪ್ರಮುಖ ಕುಮಾರಸ್ವಾಮಿಯ ತಪೋವನಗಳಲ್ಲೊಂದಾಗಿದ್ದು, ಕುಡತಿನಿ ಮತ್ತು ಕೊಳಗಲ್ಲುಗಳೂ ಕುಮಾರಸ್ವಾಮಿಯ ತಪೋವನಗಳಾಗಿದ್ದವೆಂದು ಅಲ್ಲಿಯ ಶಾಸನಗಳು ಉಲ್ಲೇಖಿಸುತ್ತವೆ. ಕುಡತಿನಿಯಂತೂ ಈ ಎಲ್ಲಾ ತಪೋವನಗಳ ರಾಜಧಾನಿ ಪಟ್ಟಣವೆನಿಸಿತ್ತು.

ಹಾಗೂ ಈ ಕುಮಾರಸ್ವಾಮಿಯ ತಪೋವನವಿದ್ದ ಕುಡತಿನಿಯು, ಕುಮಾರಸ್ವಾಮಿಯ ಮೊದಲ ಕ್ಷೇತ್ರವಾಗಿತ್ತೆಂದು ಶಾಸನಗಳು ಉಲ್ಲೇಖಿಸುತ್ತವೆ. ಆದರೆ ಸಂಡೂರು ಕುಮಾರಸ್ವಾಮಿ ಬೆಟ್ಟವು ಪ್ರಸಿದ್ಧ ಕುಮಾರಸ್ವಾಮಿ ಕ್ಷೇತ್ರವಾಗಿದ್ದು, ಈ ಪರಿಸರದಲ್ಲಿ ಕುಮಾರಸ್ವಾಮಿಯ ತಪೋವನ ಪ್ರಮುಖವಾಗಿತ್ತು. ಆದ್ದರಿಂದ ಬೇರೆ ಬೇರೆ ಪ್ರದೇಶದಿಂದ ಋಷಿಗಳು, ಕಪ್ಪಡಿಗಳು ಬರುತ್ತಿದ್ದರೆಂಬುದಕ್ಕೆ ಪ್ರಸ್ತಾಪವಿದೆ. ಬೇರೆ ಪ್ರದೇಶಗಳಲ್ಲಿ ಹೆಂಗಸರು ಕುಮಾರನ ಪೂಜೆ ಮಾಡುತ್ತಿದ್ದರೆ, ಇಲ್ಲಿ ಕುಮಾರಸ್ವಾಮಿಯ ಶಾಪದಿಂದಾಗಿ ಹೆಂಗಸರು ದೇವಾಲಯವನ್ನು ಪ್ರವೇಶಿಸುವಂತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಸಹ ಕುಮಾರಸ್ವಾಮಿಯ ದರ್ಶನವನ್ನು ಪಡೆಯುತ್ತಿದ್ದಾರೆ.

ಒಟ್ಟಿನಲ್ಲಿ ಕುಡತಿನಿ, ಸಂಡೂರು ಈ ಎರಡೂ ಕ್ಷೇತ್ರಗಳು ಆಗಿನ ಕಾಲದಲ್ಲಿ ಪ್ರಮುಖ ಯಾತ್ರಾ ಸ್ಥಳಗಳಾಗಿದ್ದ ಬಗ್ಗೆ ಮಾಹಿತಿಯಿದೆ. ವಿಜಯನಗರ ಹಾಗೂ ನಂತರದ ಕಾಲದಲ್ಲಿ ಕುಡತಿನಿಯ ಕುಮಾರಸ್ವಾಮಿಯ ಪ್ರಚಾರ ಕಡಿಮೆಯಾಗುತ್ತಾ ಬಂದಿತು. ಸಂಡೂರಿನಲ್ಲಿ ಅಧಿಕಾರಕ್ಕೆ ಬಂದ ಘೋರ್ಪಡೆ ಮನೆತನದವರು ಸಂಡೂರು ಕುಮಾರಸ್ವಾಮಿ ಕ್ಷೇತ್ರಾಭಿವೃದ್ಧಿಗೆ ಹೆಚ್ಚು ಗಮನ ಹರಿಸಿದ್ದರಿಂದ ಅದು ಇಂದಿಗೂ ಪ್ರಚಾರದಲ್ಲಿದೆ. ಅಧಿಕ ಮಾಸವು ಬಂದ, ಅಧಿಕ ಶಿವಯೋಗದಲ್ಲಿ, ಕೃತಿಕೆಯರಿಗಿರುವ, ಕಾರ್ತಿಕೇಯ ಶುದ್ಧ ಹುಣ್ಣಿಮೆಯ ದಿನದಂದು ಶಿವನಪುತ್ರನಾದ ಕುಮಾರಸ್ವಾಮಿಯ ಜಾತ್ರೆಯು ನಡೆಯುತ್ತದೆ. ಈ ಜಾತ್ರೆಯು ಐದು ವರ್ಷಗಳಿಗೆ ಎರಡು ಬಾರಿ ನಡೆಯುತ್ತದೆ.

ಇನ್ನೂ ಈ ಪರಿಸರದಲ್ಲಿ ಬಸದಿಗಳು ಇದ್ದ ಬಗ್ಗೆ ಹೇಳುವುದಾದರೆ, ಶಿವಕೋಟ್ಯಾಚಾರ್ಯರ ವಡ್ಡಾರಾಧನೆಯಲ್ಲಿ ಬರುವ ಕಾರ್ತಿಕ ಋಷಿಯ ಕಥೆಯನ್ನು ವಸ್ತುವಾಗಿಟ್ಟುಕೊಂಡು ಕೆಲವರು ಈ ದೇವತೆಯನ್ನು ಜೈನ ಮತದೊಂದಿಗೆ ಸಂಬಂಧ ಕಲ್ಪಿಸಿದ್ದಾರೆ. ಕುಮಾರಸ್ವಾಮಿಯ ಕ್ಷೇತ್ರಗಳಾದ ಕುಡತಿನಿ, ಕೊಳಗಲ್ಲು, ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿ ಜೈನ ಬಸದಿಯನ್ನಾಗಲಿ ಅಥವಾ ತೀರ್ಥಂಕರರನ್ನಾಗಲಿ ಉಲ್ಲೇಖಿಸುವ ಹೆಚ್ಚಿನ ಶಾಸನಗಳು ಕಂಡುಬಂದಿಲ್ಲ. ಈ ಶಾಸನಗಳನ್ನು ಗಮನಿಸಿದರೆ ಕುಮಾರಸ್ವಾಮಿಗೂ, ಜೈನ ಮತದ ಸಂಬಂಧ ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಈ ಪ್ರದೇಶದಲ್ಲಿ ಜೈನ ಮತಾನುಯಾಯಿಗಳು ವಾಸವಾಗಿದ್ದರೆಂಬುದು ಜೈನ ದೇವಾಲಯ ಮತ್ತು ಮೂರ್ತಿ ಶಿಲ್ಪಗಳಿಂದ ತಿಳಿದುಬರುತ್ತದೆ.

ಸಂಡೂರಿನ ಸುತ್ತಮುತ್ತಲೂ ನೋಡಬೇಕಾದ ಸಾಕಷ್ಟು ಪ್ರಾಕೃತಿಕ ಕೇಂದ್ರಗಳು, ನೀರಿನ ಕೊಳ್ಳಗಳು, ಮನ ತಣಿಸುವ ಬೆಟ್ಟಗಳನ್ನು ಒಳಗೊಂಡ ಸುಂದರವಾದ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿದೆ.

ಒಟ್ಟಾರೆಯಾಗಿ ಸಂಡೂರು ಪರಿಸರದ ಶಾಸನೋಲ್ಲೇಖಿತ ದೇವಾಲಯಗಳ ಅಧ್ಯಯನದ ವಿವಿಧ ಮುಖದ ಪರಿಚಯವನ್ನು ಈ ಮುಂದಿನ ಐದು ಅಧ್ಯಯಗಳ ಮೂಲಕ ಮಾಡಲಾಗಿದೆ. ಈ ಅಧ್ಯಯನದ ವೇಳೆಯಲ್ಲಿ ನಾವು ಶಾಸನಗಳು, ಐತಿಹಾಸಿಕ ಸ್ಮಾರಕಗಳು, ಐತಿಹ್ಯಗಳು ಮತ್ತು ಸಾಹಿತ್ಯದ ನೆರವನ್ನು ಬಳಸಿಕೊಂಡಿದ್ದೇವೆ. ದೇವಾಲಯಗಳ ಅಧ್ಯಯನದ ರಚನೆಯ ವೇಳೆಯಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಿದ್ದೇವೆ. ಸಂಡೂರು ಪರಿಸರದ ಅಧ್ಯಾಯನಕ್ಕೆ ಆಕಾರಗಳೇ ಕಡಿಮೆ. ಅಂತದ್ದರಲ್ಲಿ ಇರುವ ಕೆಲವೇ ಆಕರಗಳನ್ನು ಸಮಗ್ರವಾಗಿ ಅಧ್ಯಯನಕ್ಕೊಳಪಡಿಸಿ, ಕ್ಷೇತ್ರಕಾರ್ಯದ ಹಿನ್ನೆಲೆಯೊಂದಿಗೆ ಇಲ್ಲಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

❖❖

೨

ಸಂಡೂರು ಪರಿಸರದ ಇತಿಹಾಸ

೨

ಸಂಡೂರು ಪರಿಸರದ ಇತಿಹಾಸ

ಸಂಡೂರು ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದೆ.[೧] ಈ ಪ್ರದೇಶವು ಇತಿಹಾಸ ಪೂರ್ವಕಾಲ ಹಾಗೂ ಪುರಾಣಕಾಲದಿಂದ ತನ್ನದೇ ಆದ ಇತಿಹಾಸ ಪರಂಪರೆಯನ್ನು ಹೊಂದಿದೆಯಲ್ಲದೆ, ವಿಶೇಷ ಭೌಗೋಳಿಕ ಖನಿಜ ಸಂಪತ್ತು, ಪ್ರಾಕೃತಿಕ ಸಂಪತ್ತು ಮತ್ತು ಹಿತಕರ ಹವಾಗುಣವನ್ನು ಹೊಂದಿದೆ.

ಪುರಾಣಗಳ ಕಾಲದ ಪ್ರಕಾರ ಸ್ಕಂದಪುರಾಣದಲ್ಲಿ ಉಕ್ತವಾಗಿರುವಂತೆ[೨] ಸ್ಕಂದನಿರುವ ಪುರವಾದುದರಿಂದ ಸ್ಕಂದಪುರವೆಂದೆನಿಸಿಕೊಂಡಿತು. ಆದರೆ ಸಂಡೂರು ಸ್ಥಳನಾಮ ಶಬ್ದದ ಮೂಲರೂಪ ಸಂದೂರು ಆಗಿದ್ದು, ಬೆಟ್ಟ - ಗುಡ್ಡಗಳ ಸಂದುಗಳಲ್ಲಿರುವ ಊರು ಎಂಬ ಕಾರಣದಿಂದಲೇ ಇದು ಬಂದಿದೆ. ಸಂದು + ಊರು - ಸಂದರೂ > ಸಂಡೂರು ಆಗಿ ಪರಿಣಮಿಸಿದೆ.

ಈ ಪ್ರದೇಶದ ಸುತ್ತಮುತ್ತಲಿನ ಸ್ಥಳಗಳಲ್ಲಿ ಆದಿ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಕಂಡು ಬಂದಿವೆ. ಅಷ್ಟೇ ಅಲ್ಲದೆ ನವ ಶಿಲಾಯುಗದಿಂದ ಇತಿಹಾಸ ಕಾಲದ ವರೆಗಿನ ಅವಶೇಷಗಳು ಕಂಡುಬರುತ್ತವೆ. ಸಿಡಿಗಲ್ಲು, ಕುಡತಿನಿ ಹಾಗೂ ತೋರಣಗಲ್ಲುಗಳು ಕಬ್ಬಿಣಯುಗದ ಮುಖ್ಯ ತಾಣಗಳಾಗಿದ್ದವು. ಸಂಡೂರಿನ ಸಮೀಪ ಹಿರೇ ಬೆಣಕಲ್, ಹಂಪಿ ಪ್ರದೇಶದಲ್ಲಿಯ ಬೃಹತ್ ಶಿಲಾಗೋರಿಗಳಲ್ಲಿ ಕಬ್ಬಿಣದ ಉಪಕರಣಗಳು ದೊರಕಿವೆ. ಈ ಎಲ್ಲಾ ಆಧಾರಗಳಿಂದ ಈ ಪ್ರದೇಶದಲ್ಲಿ ಕಬ್ಬಿಣದ ಕಾರ್ಯಗಾರವು ಸುಮಾರು ಕ್ರಿ.ಪೂ. ೧೦೦೦ದ ವೇಳೆಗೆ ಪ್ರಾರಂಭವಾಗಿರಬಹುದೆಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ಸಂಡೂರು - ಹೊಸಪೇಟೆ - ಬಳ್ಳಾರಿ ಪ್ರದೇಶದಲ್ಲಿಯ ಕಬ್ಬಿಣದ ಅದಿರು ಉತ್ತಮ ದರ್ಜೆಯದು. ಅಷ್ಟೇ ಅಲ್ಲದೆ ಕುಮಾರಸ್ವಾಮಿಯ ವನವು ಕಬ್ಬಿಣ, ಉಕ್ಕು ತಯಾರಿಕೆಯಿಂದ ಇಡೀ ಭಾರತದಲ್ಲಿ ಪ್ರಸಿದ್ಧಿ ಪಡೆದಿದೆ.[೩]

೨.೧ ಭೌಗೋಳಿಕ ಲಕ್ಷಣಗಳು

ಇತಿಹಾಸ ಪೂರ್ವಕಾಲದಲ್ಲಿ ಮಾನವನ ವಾಸಸ್ಥಾನಕ್ಕೆ ಭೌಗೋಳಿಕ ಲಕ್ಷಣಗಳು ಮುಖ್ಯ ಕಾರಣಗಳಾಗಿದ್ದವು. ಈ ಕಾಲದಲ್ಲಿ ಮಾನವನು ನದಿ, ಹಳ್ಳ, ಕೊಳ್ಳಗಳ, ಅಕ್ಕ, ಪಕ್ಕದಲ್ಲಿ, ಗುಡ್ಡಗಾಡು ಅರಣ್ಯ ಪ್ರದೇಶಗಳಲ್ಲಿ ವಾಸವಾಗಿದ್ದನು. ಇತಿಹಾಸ ಕಾಲದಲ್ಲಿ ಅನೇಕ ರಾಜ ಮನೆತನಗಳು ಹುಟ್ಟಿಕೊಂಡು, ಕಾಲ ಕ್ರಮೇಣ ಅಧಿಕಾರಕ್ಕೆ ಬಂದ ಚಕ್ರವರ್ತಿಗಳು ಈ ಪ್ರದೇಶದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಈ ಇತಿಹಾಸ ಪೂರ್ವ ಹಾಗೂ ಇತಿಹಾಸ ಕಾಲದಲ್ಲಿ ಮಾನವನ ಸಂಸ್ಕೃತಿಯು ಹುಲುಸಾಗಿ ಬೆಳೆದು ಬರಲು ಇಲ್ಲಿಯ ಭೌಗೋಳಿಕ ಅನುಕೂಲತೆಗಳೇ ಕಾರಣವಾದವು.[೪]

ಸಂಡೂರು ತನ್ನದೇ ಆದ ವಿಶೇಷ ಭೌಗೋಳಿಕ ಖನಿಜ ಸಂಪತ್ತು ಹಾಗೂ ಪ್ರಾಕೃತಿಕ ಸೌಂದರ್ಯ, ಹಿತಕರ ಹವಾಗುಣವನ್ನು ಹೊಂದಿದೆ.[೫] ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆ ೧೪°.೩೦ - ೧೫°.೫೦ ಅಕ್ಷಾಂಶ ಮತ್ತು ೭೫°. ೪೦° - ೭೭°. ೧೧° ರೇಖಾಂಶಗಳಿಂದ ಕೂಡಿದೆ. ಈ ಜಿಲ್ಲೆಯ ಪೂರ್ವಭಾಗದಲ್ಲಿ ಆಂಧ್ರಪ್ರದೇಶದ ಅನಂತಪುರ ಹಾಗೂ ಕರ್ನೂಲ್, ಪಶ್ಚಿಮಕ್ಕೆ ಧಾರವಾಡ, ದಕ್ಷಿಣಕ್ಕೆ ಚಿತ್ರದುರ್ಗ ಮತ್ತು ಉತ್ತರಕ್ಕೆ ರಾಯಚೂರು ಜಿಲ್ಲೆಗಳು ಗಡಿಗಳಾಗಿವೆ.

ಈ ಪ್ರದೇಶವು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗಿದ್ದು ಬೆಟ್ಟದಿಂದಾವರಿಸಿದೆ. ಸಂಡೂರು, ಕೂಡ್ಲಿಗಿ, ಹಡಗಲಿ, ಹರಪನಹಳ್ಳಿ, ಗುಡೇಕೋಟೆ, ಹೊಸಪೇಟೆ, ಕಂಪ್ಲಿ, ದರೋಜಿ, ಕುರುಗೋಡು, ಬಳ್ಳಾರಿ ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಬೆಟ್ಟಗಳಿವೆ. ಸಂಡೂರು ಕುಮಾರಸ್ವಾಮಿ ಬೆಟ್ಟ (ಶಿಖರ ೧೦೩೬ ಮೀ.), ರಾಮನಮಲೈ (ಶಿಕರ ೯೯೨ ಮೀ) ಮತ್ತು ಜಂಬುನಾಥ (ಶಿಖರ ೯೦೮ ಮೀ) ಗಳಲ್ಲಿಯೂ ಎತ್ತರವಾದ ಶಿಖರಗಳನ್ನು ಹೊಂದಿದೆ. ಸಂಡೂರಿನ ಬೆಟ್ಟ ಸಾಲುಗಳಲ್ಲಿ ಪೂರ್ವಭಾಗದಲ್ಲಿ, ವಾಯುವ್ಯದಿಂದ ಆಗ್ನೇಯಕ್ಕೆ (ಹಗರಿ ನದಿಯಿಂದ - ದರೋಜಿ ಕೆರೆಯವರೆಗೆ) ಹಬ್ಬಿರುವ ಸುಗ್ಗಲ ದೇವಿ ಬೆಟ್ಟದಲ್ಲಿ ತಾಮ್ರದ ಅದಿರು ಇರುವುದರಿಂದ ತಾಮ್ರ ಪರ್ವತವೆಂದು ಕರೆಯುತ್ತಾರೆ. ಕೂಡ್ಲಿಗಿ ಬೆಟ್ಟಗಳು ಎರಡು ಸಾಲುಗಳಲ್ಲಿವೆ. ಇವುಗಳಲ್ಲಿ ಒಂದು ಶ್ರೇಣಿಯಲ್ಲಿ ಆನೇಕಲ್ಲುದುರ್ಗ (ಶಿಖರ ೭೨೪ ಮೀ) ಜರಿಮಲೆದುರ್ಗ (ಶಿಖರ ೮೩೮ ಮೀ)ಗಳಿವೆ. ಗುಡಿಕೋಟೆಯಿಂದ ಈಶಾನ್ಯಕ್ಕೆ ಹರಡಿರುವ ಗುಡಿಕೋಟೆ ಬೆಟ್ಟ, ಚಿನ್ನಹಗರಿ ನದಿ ದಾಟಿ ಚಿತ್ರದುರ್ಗ ಜಿಲ್ಲೆಯ ಸೆರಗಿನಲ್ಲಿ ಹಾದು ಹೋಗುತ್ತದೆ. ಹಡಗಲಿ, ಹರಪನಹಳ್ಳಿ ತಾಲೂಕುಗಳಲ್ಲಿಯ ಮಲ್ಲಪ್ಪನಗುಡ್ಡ (ಶಿಖರ ೯೭೮ ಮೀ) ತುಂಗಭದ್ರಾ ನದಿ ದಂಡೆಯ ಹೊನ್ನೂರಿನ ಬಳಿ ಪ್ರಾರಂಭವಾಗಿ ಆಗ್ನೇಯ ಕಡೆಗೆ ಹಬ್ಬಿದೆ. ಮಲ್ಲಪ್ಪನ ಗುಡ್ಡದ ನೈಋತ್ಯಕ್ಕಿರುವ ಕಲ್ಲಪ್ಪನ ಗುಡ್ಡ ವಾಯುವ್ಯದಿಂದ ಈಶಾನ್ಯಕ್ಕೆ ಹಬ್ಬಿದ್ದು, ಇದರಲ್ಲಿ ನರಸಿಂಹ ದೇವರಗುಡ್ಡ ಸೇರಿದಂತೆ ಉಚ್ಚಂಗಿಯಲ್ಲಿ ಕೊನೆಗೊಳ್ಳುತ್ತದೆ.

ಈ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪುಮಣ್ಣು ಮತ್ತು ಫಲವತ್ತಾದ ಜೇಡಿಮಣ್ಣು ಹರಡಿದೆ. ಗ್ರೆನಾಯಿಟ್, ಸಿಸ್ಟ, ಸ್ಯಾಂಡ ಸ್ಟೋನ್, ಜಾಸ್ಪರ್ ಮುಂತಾದ ಶಿಲೆಗಳು ಹಾಗೂ ಬೆಟ್ಟಗಳಲ್ಲಿ ಕಬ್ಬಿಣ, ಬಂಗಾರ ಮತ್ತು ತಾಮ್ರದ ಅದಿರಿನಿಂದ ಕೂಡಿದ ಶಿಲೆಗಳಿವೆ. ಸಂಡೂರು - ಕೂಡ್ಲಿಗಿ ಪ್ರದೇಶದಲ್ಲಿ ಅರಣ್ಯ ಹೆಚ್ಚಾಗಿದ್ದು, ಉಳಿದ ಭಾಗಗಳಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಇದರ ಒಟ್ಟು ವಿಸ್ತೀರ್ಣ ೬೦೭.೪೪ ಚ.ಕಿ.ಮೀ. ಇದೆ.[೬]

ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಖನಿಜ ನಿಕ್ಷೇಪಗಳು ದೊರೆಯುತ್ತಿದ್ದರೂ ಒಂದೆರಡು ಖನಿಜ ನಿಕ್ಷೇಪಗಳು ತನ್ನದೇ ಆದ ವೈಶಿಷ್ಟ್ಯಗಳನ್ನು ಪಡೆದಿರುತ್ತವೆ. ಸಂಡೂರು, ಹೊಸಪೇಟೆ, ತಾರಾನಗರ, ದೇವಗಿರಿ ಪ್ರದೇಶಗಳು ಗಿರಿ ಕಂದರಗಳಿಂದ ಕೂಡಿದ್ದು, ಸಮುದ್ರದ ಪಾತಳಿಯಿಂದ ಸುಮಾರು ೩೫೦೦ ಫೂಟ್ ಎತ್ತರದಲ್ಲಿವೆ.

ಭೂವೈಜ್ಞಾನಿಕವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಸಿಗುವ ಶಿಲೆಗಳನ್ನು ಮುಖ್ಯವಾಗಿ ಸಿಸ್ಟೋಸ್ ಮತ್ತು ಗ್ರೆನೈಟಿಕ್ ಗಳೆಂದು ವಿಂಗಡಿಸಲಾಗಿದೆ. ಪ್ರಮುಖವಾಗಿ ಈಗ ಹೆಚ್ಚಿನ ಪ್ರಮಾಣದಲ್ಲಿ ಸಿಗುವ ಕಬ್ಬಿಣ ಹಾಗೂ ಮ್ಯಾಂಗನೀಸ್ ನಿಕ್ಷೇಪಗಳು ಶಿಲೆಗಳಲ್ಲಿ ದೊರೆತರೆ ಉಳಿದವು ಗ್ರಾನೈಟಿಕ್ ಶಿಲೆಗಳಲ್ಲಿ ದೊರೆಯುತ್ತವೆ.[೭]

ಸಂಡೂರು ಸುತ್ತಮುತ್ತ ಹಾಗೂ ನಂದಿಹಳ್ಳಿಯಿಂದ ಹೊಸಪೇಟೆಯವರೆಗೆ ಸುಮಾರು ೪೦ ಕಿ.ಮೀ. ಉದ್ದ ಹಾಗೂ ೧೫-೨೦ ಕಿ.ಮೀ. ಅಗಲವುಳ್ಳ ಹಾಗೂ ಎತ್ತರವಾದ ಪರ್ವತಗಳಲ್ಲಿ ದೊರೆಯುವ ಐರನ್ ಫಾರ್ಮೇಶನ್ ಎಂಬ ಕಲ್ಲಿನಲ್ಲಿ ಕಬ್ಬಿಣದ ನಿಕ್ಷೇಪಗಳು ದೊರೆಯುತ್ತವೆ. ಇಲ್ಲಿ ದೊರೆಯುವ ಅದಿರು ಹೆಮಟೈಟು ರೂಪದಲ್ಲಿದ್ದು ಉತ್ತಮ ದರ್ಜೆಗೆ ಸೇರಿದ ಅದಿರು, ಮ್ಯಾಂಗನೀಸ್ ಅದಿರಿನ ನಿಕ್ಷೇಪಗಳು ಮ್ಯಾಂಗನೀಸ್ ಫೇರಸ್ ಫಿಲೈಟ್ ಎಂಬ ಕಲ್ಲುಗಳಲ್ಲಿ ದೊರೆಯುತ್ತವೆ. ಈ ನಿಕ್ಷೇಪಗಳು ದೇವಗಿರಿ, ಸುಬ್ರಾಯನಹಳ್ಳಿ ಮತ್ತು ರಾಮಘಡ ವ್ಯಾಪ್ತಿಗೆ ಸೇರಿರುತ್ತದೆ. ಈ ಅದಿರಿನ ವಿಶೇಷ ಗುಣ ಎಂದರೆ ನಿಗದಿತ ಅಂಶಕ್ಕಿಂತ ಕಡಿಮೆ ಪ್ರಮಾಣದಲ್ಲಿ ರಂಜಕ ಹಾಗೂ ಗಂಧಕಗಳನ್ನು ಹೊಂದಿರುವುದು. ಈ ಗುಣಕ್ಕಾಗಿಯೇ ಜಗತ್ತಿನ ಮ್ಯಾಂಗನೀಸ್ ಅದಿರಿನ ಮಾರುಕಟ್ಟೆಯಲ್ಲಿ ಸಂಡೂರಿನ ಮ್ಯಾಂಗನೀಸ್ ಅದಿರಿಗೆ ವಿಶೇಷ ಬೇಡಿಕೆ ಇದೆ.[೮]

ಸಂಡೂರು ಬಳ್ಳಾರಿ ಜಿಲ್ಲೆಯ ಮಲೆನಾಡು. ಈ ಜಿಲ್ಲೆಯ ಪುಟ್ಟ, ಕಾಶ್ಮೀರ ಬೆಟ್ಟಗಳಿಂದಾವೃತವಾದ ಸುಂದರ ನಾಡು. ಇದು ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು, ಉತ್ತಮ ನೆಲ, ಜಲ ಪಡೆದುಕೊಂಡಿದೆ. ಇಲ್ಲಿಯ ಗುಡ್ಡಗಳು ಈ ಜಿಲ್ಲೆಯ ಭೌತಿಕ ಲಕ್ಷಣಗಳನ್ನು ಎತ್ತಿ ಹಿಡಿಯುತ್ತವೆ.[೯] ೧೮೮೯ರಲ್ಲಿ ಬ್ರಿಟಿಷ್ ಅಧಿಕಾರಿ ಬ್ರೂಸ್‌ಫೂಟ್ ಸಂಡೂರನ್ನು ಈ ರೀತಿ ವರ್ಣಿಸಿದ್ದಾರೆ. "ಅಗಲ ಕಿರಿದಾದ ಅತಿ ಉದ್ದವಿರುವ ಕಣಿವೆಯಲ್ಲಿ, ಎತ್ತರದ ಬೆಟ್ಟಗಳು ವಾಯುವ್ಯದಿಂದ ಆಗ್ನೇಯ ದಿಕ್ಕಿನವರೆಗೆ ಸಮಾನಾಂತರವಾಗಿವೆ. ಅವುಗಳಿಗೆ ಲಂಬವಾಗಿ ಒಂದು ಸಣ್ಣ ನದಿ (ನಾರೀಹಳ್ಳ), ಮಧ್ಯದಲ್ಲಿ ಒಂದು ಊರು" ಎಂದು ಅಂದಿನ ಸಂಡೂರನ್ನು ಪರಿಚಯಿಸುತ್ತಾರೆ.

ಸಂಡೂರು ಪ್ರದೇಶದ ಅರಣ್ಯ ಮತ್ತು ಬೆಟ್ಟದಾದಿಯಲ್ಲಿ ಚಿರತೆ, ಕಾಡುಹಂದಿ, ನರಿ, ಮೊಲ ಮುಂತಾದ ಕಾಡುಪ್ರಾಣಿಗಳಿವೆ.[೧೦] ನವಿಲು, ಗಿಳಿ, ಪಾರಿವಾಳ ಮುಂತಾದ ಪಕ್ಷಿಗಳು ಕಂಡುಬರುತ್ತವೆ.

ಮುಖ್ಯವಾಗಿ ಸಂಡೂರಿನ ಬೆಟ್ಟಗಳು ಶ್ರೀಮಂತ ಸಂಪನ್ಮೂಲ ಕೇಂದ್ರಗಳು, ಕಣಿವೆ-ಕಂದರಗಳ ಮಧ್ಯೆಯೂ ಈ ನಗರ ತನ್ನ ಸುತ್ತಮುತ್ತಲೂ ಕಪ್ಪು ಬಂಗಾರದ ನಿಕ್ಷೇಪವನ್ನೇ ಹೊಂದಿದೆ. ೩,೨೦೦ ರಿಂದ ೩,೬೦೦ ಅಡಿಗಳೆತ್ತರದವರೆಗಿನ ಈ ನಿಧಿಗರ್ಭದ ಬೆಟ್ಟಗಳು ಸಂಡೂರನ್ನು ಆವರಿಸಿಕೊಂಡಿವೆ.[೧೧] ಪ್ರಮುಖವಾಗಿ ೩,೪೨೧ (ಸಮುದ್ರ ಮಟ್ಟದಿಂದ) ಅಡಿ ಎತ್ತರದ ದೋಣಿಮಲೈ ಮತ್ತು ೩,೬೦೦ ಅಡಿ ಎತ್ತರದ ಕುಮಾರಸ್ವಾಮಿ ಬೆಟ್ಟಗಳು ಸಂಡೂರು ಕೇಂದ್ರದ ಎರಡು ಧ್ರುವಗಳು.

೨.೨ ಪೂರ್ವ ಇತಿಹಾಸ ಕಾಲ

ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಯು ಪೂರ್ವ ಇತಿಹಾಸ ಮತ್ತು ಇತಿಹಾಸ ಕಾಲದ ಚರಿತ್ರೆಗೆ ಉಳಿದ ಪ್ರದೇಶಗಳಿಗಿಂತಲೂ ಉನ್ನತ ಸ್ಥಾನವನ್ನು ಪಡೆದುಕೊಂಡಿದೆ.[೧೨] ಇತಿಹಾಸ ಪೂರ್ವಕಾಲದ ಮಾನವನಿಗೆ ಈ ಪರಿಸರದಲ್ಲಿರುವ ಬೆಟ್ಟಗಳು, ಅರಣ್ಯ, ವಿವಿಧ ಕಾಡುಪ್ರಾಣಿಗಳು, ಜಲ ಮತ್ತು ಆಯುಧ ತಯಾರಿಕೆಗೆ ತಾಮ್ರ, ಕಬ್ಬಿಣದ ಅದಿರು ಮುಂತಾದವುಗಳು ಅನುಕೂಲವಾಗಿದ್ದವು.

ನಮ್ಮ ನಾಗರಿಕತೆ ಶಿಲಾಯುಗ, ಕಂಚಿನಯುಗ ನಂತರ ಕಬ್ಬಿಣ ಯುಗವನ್ನು ಪ್ರವೇಶಿಸಿತು. ಮಾನವನು ಭೂಮಿಯ ಮೇಲೆ ಉದಯವಾಗುವುದಕ್ಕಿಂತ ಮುಂಚೆಯೆ ವಿವಿಧ ಖನಿಜ ನಿಕ್ಷೇಪಗಳು ರೂಪಗೊಂಡಿದ್ದವು. ಮೊದಲು ಹಲವು ಖನಿಜ ಹಾಗೂ ಶಿಲೆಗಳನ್ನು ಬಳಸಲು ಆರಂಭಿಸಿದ ಮಾನವನು ನಂತರ ತಾಮ್ರ, ಚಿನ್ನ ಹಾಗೂ ಕಂಚಿನ ಮಿಶ್ರ ಲೋಹಗಳ ಕಡೆ ಒಲವು ತೋರಿದನು. ತದನಂತರ ಕಬ್ಬಿಣ ಲೋಹ ಬಳಕೆಯನ್ನು ಆರಂಭಿಸಿದನು ಎಂಬುದನ್ನು ಪುರಾತತ್ವ ಶೋಧನೆಗಳು ಸ್ಪಷ್ಟವಾಗಿ ತಿಳಿಸುತ್ತವೆ. ಕಬ್ಬಿಣ ಕುರಿತ ಅತ್ಯಂತ ಪ್ರಾಚೀನ ಪುರಾವೆ ಎಂದರೆ ಕ್ರಿ.ಪೂ. ೨೦೦೦ದ ಕಾಲದವು ಎನ್ನಲಾದ ಕೆಲವು ಕಬ್ಬಿಣದ ಮಣಿಗಳು ಕೈರೋ ನಗರದ ಬಳಿ ಇರುವ ಗೀಜ್ ಎಂಬಲ್ಲಿನ ಸಮಾಧಿಯಲ್ಲಿ ದೊರೆತದ್ದಾಗಿದೆ. ಕ್ರಿ.ಪೂ. ೨೦೦೦ ವರ್ಷದಿಂದ ೧೨೦೦ ವರ್ಷದ ಕಾಲಾವಧಿಯಲ್ಲಿ ಬಳಸಿದ್ದ ಬಗೆ ಬಗೆಯ ಕಬ್ಬಿಣ ವಸ್ತುಗಳು ದೊರೆತಿವೆ. ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ಈ ಲೋಹದ ವರ್ಣನೆ ಇದೆ. ಅಲ್ಲಿ ನಮೂದಿಸಲಾಗಿರುವ ಬಾಣ, ಸಲಾಕೆಗಳೆಲ್ಲವೂ ಕಬ್ಬಿಣದ್ದೇ.

ಕಬ್ಬಿಣ ತಯಾರಿಕೆಯ ಕಾರ್ಯ ಸಂಡೂರು ಪ್ರದೇಶದಲ್ಲಿ ವ್ಯಾಪಕವಾಗಿ ಹರಡಲು ಮುಖ್ಯ ಕಾರಣವೆಂದರೆ ಉತ್ತಮ ದರ್ಜೆಯ ಕಬ್ಬಿಣದ ಅದಿರು ಯಥೇಚ್ಛವಾಗಿ ದೊರೆಯುವುದು. ಅದಿರಿರುವ ಪ್ರದೇಶ ದಟ್ಟವಾದ ಅರಣ್ಯದಿಂದ ಕೂಡಿರುವುದರಿಂದ ಉರುವಲಿನ ಸಮಸ್ಯೆಯೂ ಇರಲಿಲ್ಲ. ಇಲ್ಲಿನ ಸುತ್ತಮುತ್ತಲ ರೈತರ

ಸಾಮಗ್ರಿಗಳ ಅಗತ್ಯತೆಗೆ ಬೇಕಾದ ಕಬ್ಬಿಣ ತಯಾರಿಸಲು ಕುಲಕಸುಬುದಾರರಾದ ಕಮ್ಮಾರರು ಕಬ್ಬಿಣ ತಯಾರಿಸಲು ಆರಂಭಿಸಿದರು. ಇದಕ್ಕೆ ಸಾಕ್ಷಿ ಎಂಬಂತೆ ಯಶವಂತ ನಗರದ ಬಳಿ ದೊರೆಯುವ ಕಿಟ್ಟದ ರಾಶಿಯ ಗುಡ್ಡೆಗಳು ಹಾಗೂ ಕುಲುಮೆಯಲ್ಲಿ ಬಳಸುತ್ತಿದ್ದ ಜೇಡಿಮಣ್ಣಿನ ಕೊಳವೆಗಳು, ಬೂದಿಯ ರಾಶಿಯನ್ನು ಇಂದಿಗೂ ಅಲ್ಲಿ ಕಾಣಬಹುದಾಗಿದೆ.

ಈ 'ಕಾರ್ತಿಕೇಯ ವನ' ಪ್ರದೇಶದಲ್ಲಿ ಲೋಹ ಶಸ್ತ್ರಗಳು ಸಿದ್ಧವಾಗುತ್ತಿದ್ದು, ಇಲ್ಲಿಯ ಶಸ್ತ್ರಗಳು ಗುಣಮಟ್ಟದಿಂದ ಅತ್ಯುತ್ತಮವಾಗಿದ್ದು, ಇಲ್ಲಿಯ ಶಸ್ತ್ರಕಾರ್ಯಗಾರವು ಪ್ರಸಿದ್ಧವಾಗಿರಬೇಕು. ದೇವತೆಗಳ ಮಹಾ ಸೇನಾನಿ ಕಾರ್ತಿಕೇಯನು ಇದ್ದಲ್ಲಿ ಶ್ರೇಷ್ಠ ಶಸ್ತ್ರಕಾರ್ಯಗಾರವೂ ಇರುವುದು ಸಮಂಜಸ. ಈ ಸಂದರ್ಭದಲ್ಲಿ ಇನ್ನೊಂದು ಸಮಯೋಚಿತ ವಿಷಯವನ್ನು ನೆನಪು ಮಾಡಿಕೊಳ್ಳಬಹುದು.

ಸಂಡೂರಿನ ದಕ್ಷಿಣಕ್ಕೆ ಸುಮಾರು ೫೦ ಕಿ.ಮೀ. ದೂರದಲ್ಲಿಯ ಬ್ರಹ್ಮಗಿರಿಯಲ್ಲಿಯ ಬೃಹತ್ ಶಿಲಾ (ಸು.ಕಿ.ಪೂ. ೯೦೦-೨೦೦) ಗೋರಿಗಳ ಉತ್ಖನನದಲ್ಲಿ ಕಬ್ಬಿಣದ ಆಯುಧಗಳಾದ ಈಟಿ, ಭರ್ಚಿ, ಕತ್ತಿ, ಬಾಣದ ಮೊನೆಗಳು ಮುಂತಾದವು ದೊರಕಿವೆ. ಮಸ್ಕಿಯ ಬೃಹತ್ ಶಿಲಾಗೋರಿಗಳಲ್ಲಿ ಈಟಿ ಮತ್ತು ದೇವಗಿರಿ (ಗಂಗಾವತಿ ತಾಲೂಕು)ಯ ಬೃಹತ್ ಶಿಲಾಗೋರಿಗಳಲ್ಲಿ ಕಬ್ಬಿಣದ ಆಯುಧಗಳು ದೊರೆತಿವೆ.

ಸಂಡೂರು ಹೊಸಪೇಟೆ ಪ್ರದೇಶದ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ಅತ್ಯುತ್ತಮ ದರ್ಜೆಯದು. ಈಗಲೂ ಇಲ್ಲಿ ಕರ್ನಾಟಕದಲ್ಲಿಯೇ ದೊಡ್ಡ ಹಾಗೂ ವ್ಯಾಪಕ ಪ್ರಮಾಣದಲ್ಲಿ ಕಬ್ಬಿಣದ ಅದಿರಿನ ಸಂಗ್ರಹ ಕಾರ್ಯ ನಡೆಯುತ್ತಿದೆ. ಇವೆಲ್ಲವನ್ನು ಗಣನೆಗೆ ತೆಗೆದುಕೊಂಡಾಗ 'ಕಾರ್ತಿಕೇಯ ವನ' ಪ್ರದೇಶದಲ್ಲಿ ಒಂದು ಶಸ್ತ್ರ ಕಾರ್ಯಗಾರವಿದ್ದು, ಅದು ತನ್ನ ಸಿದ್ಧ ವಸ್ತುಗಳಿಗೆ ಉತ್ತರ ಭಾರತ ಹಾಗೂ ಇತರ ಪ್ರದೇಶಗಳಲ್ಲಿಯೂ ಕ್ರಿಸ್ತಶಕೆಯ ಆರಂಭದ ಪೂರ್ವದಲ್ಲಿಯೇ ಪ್ರಸಿದ್ಧವಾಗಿರುವ ಸಾಧ್ಯತೆ ಇದೆ. ಉತ್ತರ ಕರ್ನಾಟಕದಲ್ಲಿ ಈ ಸಂಸ್ಕೃತಿಯು ಸುಮಾರು ಕ್ರಿ.ಪೂ. ೧೨೦೦ ರಿಂದ ೨೦೦ರ ವರೆಗೆ ಅಸ್ತಿತ್ವದಲ್ಲಿತ್ತು.[೧೪]

ಸಂಡೂರಿನ ಸಮೀಪ ಹಿರೇಬೆನಕಲ್ , ಹಂಪಿ ಪ್ರದೇಶದಲ್ಲಿಯ ಬೃಹತ್ ಶಿಲಾಗೋರಿಗಳಲ್ಲಿ ಕಬ್ಬಿಣದ ಉಪಕರಣಗಳು ದೊರಕಿವೆ. ಇಲ್ಲಿ ಹೇರಳವಾಗಿರುವ ಗವಿ ವರ್ಣ ಚಿತ್ರಗಳಲ್ಲಿ ಈಟಿ, ಭರ್ಚಿ, ಬಾಣ ಮುಂತಾದವು ಕಂಡು ಬರುವುದರಿಂದ ಕಬ್ಬಿಣದ ಆಯುಧಗಳನ್ನು ತಯಾರಿಸುತ್ತಿದ್ದರೆಂಬುದಕ್ಕೆ ಸಾಕ್ಷಿಯಾಗಿವೆ. ಬೃಹತ್ ಶಿಲಾಗೋರಿಯಲ್ಲಿ ದೊರೆತಿರುವ ಕಬ್ಬಿಣದ ಉಪಕರಣಗಳ ವೈಜ್ಞಾನಿಕ ಅಧ್ಯಾಯನದಿಂದ ಇವು ಈ ಪ್ರದೇಶದವೆಂದು ಹೇಳಬಹುದು.[೧೫] ಇಲ್ಲಿ ಕಬ್ಬಿಣದ ಕಾರ್ಯಾಗಾರವು ಸು.ಕ್ರಿ.ಪೂ. ೮೦೦ - ೫೦೦ರ ಹೊತ್ತಿಗೆ ಪ್ರಾರಂಭವಾಗಿರಬಹುದು.[೧೬] ಈ ಎಲ್ಲ ಹಿನ್ನೆಲೆಯಿಂದ ಕಾರ್ತಿಕೇಯವನದ ಕಬ್ಬಿಣದ ಕಾರ್ಯಾಗಾರವು ಸುಮಾರು ಕ್ರಿ.ಪೂ. ೧೦೦೦ಂದ ವೇಳೆಗೆ ಪ್ರಾರಂಭವಾಗಿರಬಹುದು.[೧೭] ಈ ಪ್ರದೇಶದಲ್ಲಿ ಗವಿ ವರ್ಣ ಚಿತ್ರಗಳು ಸಾಕ್ಷಿಯಾಗಿವೆ. ಹಿರೇ ಬೆನಕಲ್ಲಿನ ವಿಶೇಷವಾಗಿ ೧ ಮತ್ತು ೪ನೇ ಗವಿ ವರ್ಣ ಚಿತ್ರಗಳಲ್ಲಿ ಕತ್ತಿ, ಈಟಿ, ಬಿಲ್ಲು-ಬಾಣಾ ಮೊದಲಾದ ಶಸ್ತ್ರಗಳನ್ನು ಹಿಡಿದ ಕುದುರೆ ಸವಾರರ ಚಿತ್ರಗಳು ಗಣನೀಯ ಸಂಖ್ಯೆಯಲ್ಲಿವೆ.[೧೮]

ಇವಲ್ಲದೆ ಸಮೀಪದಲ್ಲಿ ಈ ಸಂಸ್ಕೃತಿಗೂ ಪೂರ್ವದ ಹಾಗೂ ಅನಂತರ ಕಾಲದ ಶಿಲಾ ತಾಮ್ರಯುಗ ಹಂತದ ನೂತನ ಶಿಲಾಯುಗ ಜನರ ವಾಸ್ತವ್ಯದ ಬೂದಿಗುಡ್ಡೆಯ ಅವಶೇಷವೂ ಮತ್ತು ಆದಿ ಇತಿಹಾಸ ಕಾಲದ ಜನ ವಾಸ್ತವ್ಯದ ನೆಲೆಗಳಿವೆ.

ಈ ಪ್ರದೇಶದ ಸುತ್ತಮುತ್ತಲಿನ ಸ್ಥಳಗಳಾದ ತಾಮ್ರಪರ್ವತ, ಹಳಕುಂಡಿ, ಜೇಡರ ಬೆಳಗಲ್ಲು, ಗಾದಿಗನೂರು, ಜೋಗ, ದರೋಜಿ, ಹಂಪಸಾಗರ, ಬಳ್ಳಾರಿ, ನಿಟ್ಟೂರು ಮುಂತಾದವುಗಳಲ್ಲಿ ಆದಿ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಕಂಡುಬಂದಿವೆ. ಕಪಗಲ್ಲು, ಸಂಗನಕಲ್ಲು, ಬಳ್ಳಾರಿ, ಸಂಡೂರು, ಕುಮತಿ, ಆನೆಗೊಂದಿ, ಮಲ್ಲಾಪುರ, ಹಿರೇ ಬೆನಕಲ್ಲ, ಚಿಕ್ಕ ಬೆನಕಲ್ಲ, ಇಂದುರ್ಗಿ, ಅಗೋಳಿ, ಬಂಡಾರಾಳಗುಡ್ಡಿ, ಕುಡತಿನಿ, ತೆಕ್ಕಲಕೋಟೆ, ಕೊಪ್ಪಳ, ಕುರುಗೋಡು, ಕಲ್ಕಂಬ, ತೋರಣಗಲ್ಲು, ಕೋಸ್ಗಿ, ರಾಂಪುರ, ಬ್ರಹ್ಮಗಿರಿ, ಮಸ್ಕಿ ಮತ್ತು ಗುಡಿಕೋಟೆ ಮುಂತಾದ ಸ್ಥಳಗಳಲ್ಲಿ ನವಶಿಲಾಯುಗದಿಂದ ಇತಿಹಾಸ ಕಾಲದವರೆಗಿನ ಅವಶೇಷಗಳು ಕಂಡುಬರುತ್ತವೆ. ಸಿಡೆಗಲ್ಲು, ಕುಡತಿನಿ ಹಾಗು ತೋರಣಗಲ್ಲುಗಳು ಕಬ್ಬಿಣಯುಗದ ಮುಖ್ಯ ತಾಣಗಳಾಗಿದ್ದವು.

ಕುಪಗಲ್ಲು, ಸಂಗನಕಲ್ಲು, ತೆಕ್ಕಲಕೋಟೆಗಳಲ್ಲಿ ನವಶಿಲಾ ಸಂಸ್ಕೃತಿಯ ಎರಡು ಹಂತಗಳು ಕಂಡುಬಂದಿವೆ. ಈ ಸಂಸ್ಕೃತಿಯ ಎರಡನೇ ಘಟ್ಟದಲ್ಲಿ ಕಲ್ಲಿನ ಕೊಡಲಿ, ಮಡಿಕೆಗಳ ಜೊತೆಗೆ ತಾಮ್ರದ ಕೊಡಲಿ ಹಾಗೂ ಉಪಕರಣಗಳ ಬಳಕೆ ಪ್ರಾರಂಭವಾಯಿತು. ತೆಕ್ಕಲಕೋಟೆಯಲ್ಲಿ ದೊರೆತ ಒಂದು ಮಣ್ಣಿನ ಮುಚ್ಚಳಿಕೆಯ ಮೇಲೆ ಎರಡು ನವಿಲುಗಳು, ಹಾವು, ಗೂಳಿ ಮತ್ತು ಜಿಂಕೆಯ ಚಿತ್ರಗಳನ್ನು ಚುಚ್ಚಿ ಬಿಡಿಸಲಾಗಿದೆ.

ಕುಡತಿನಿ ಮತ್ತು ಕುಪಗಲ್ಲುಗಳಲ್ಲಿರುವ ಶಿಲಾ - ತಾಮ್ರ ಹಾಗೂ ಬೃಹತ್ ಶಿಲಾ - ಕಬ್ಬಿಣಯುಗಕ್ಕೆ ಸಂಬಂಧಿಸಿದ ಬೂದಿ ದಿಬ್ಬಗಳು, ಹಸುಗಳ ಸಗಣಿಯನ್ನು ಸುಟ್ಟದ್ದರಿಂದ ನಿರ್ಮಾಣವಾದವು ಎಂದು ತಿಳಿದುಬಂದಿದೆ. ಈ ಬೂದಿ ದಿಬ್ಬಗಳಲ್ಲಿ ಮನುಷ್ಯ - ಪ್ರಾಣಿಗಳು, ಮೂಳೆಗಳು, ಮಡಿಕೆಗಳು, ತಾಮ್ರ - ಕಬ್ಬಿಣದ ಉಪಕರಣಗಳು ಮಿಶ್ರಿತವಾಗಿವೆ.[೧೯]

ಈ ಪ್ರದೇಶಕ್ಕೆ ಹತ್ತಿರವಿರುವ ಜೇವರಿಗಿ ಆಂದೋಲಾಗಳಲ್ಲಿಯ ಬೃಹತ್ ಶಿಲಾ ಗೋರಿಗಳ ಉತ್ಖನನದಲ್ಲಿ ಕಬ್ಬಿಣದ ಮೂರು ಕಾಲಿನ ಮಣಿ, ಹಿಡಿಕೆಯುಳ್ಳ ದೀಪದ ಹಣತೆ, ಗಜ ಪೃಷ್ಠಾಕಾರದ ಗಂಟೆ ಹಾಗೂ ಈ ಪ್ರದೇಶಕ್ಕೆ ಹೊಂದಿಕೊಂಡು ಆಂಧ್ರಪ್ರದೇಶದ ಭಾಗದಲ್ಲಿ ತ್ರಿಶೂಲಗಳು ದೊರೆತಿದ್ದು, ಇವು ಕ್ರಿ.ಪೂ. ೧೦೦೦-೮೦೦ ಕಾಲದಲ್ಲಿ ನಿರ್ಮಾಣವಾಗಿರುತ್ತವೆ. ಅಲ್ಲದೇ ಬೇರೆ ಬೇರೆ ಸ್ಥಳಗಳಲ್ಲಿ ಭರ್ಚಿ, ತಾಮ್ರದ ಫಲಕಗಳು ಕಂಡುಬಂದಿವೆ.

ತ್ರಿಶೂಲ ಶಿವನ ಆಯುಧವಾಗಿದೆ. ಇದನ್ನೇ ದುರ್ಗಾ, ಕಾಳಿ, ಅಂಬಾ ಕೂಡ ತನ್ನ ಆಯುಧವನ್ನಾಗಿ ಬಳಸಿಕೊಂಡಿದ್ದಾಳೆ. ಭರ್ಚಿ ತಮಿಳುನಾಡಿನಲ್ಲಿಯ ಮುರುಗನ ಕೈಯಲ್ಲಿರುವ ವೇಲಾಯುಧದಂತಿದೆ ಹಾಗೂ

ತಾಮ್ರದಲ್ಲಿ ನಿರ್ಮಿಸಿದ ಫಲಕಗಳು ಕಾರ್ತಿಕೇಯನ ಕೈಯಲ್ಲಿರುವ ಧ್ವಜದಂತಿವೆ. ಆದ್ದರಿಂದ ಇದೇ ವೇಳೆಯಲ್ಲಿ ಈ ದೇವತೆಯ ಆರಾಧನೆಯೂ ಕೂಡ ಇದ್ದಿರಬಹುದು.

ಕ್ರಿ.ಪೂ. ೧೦೦೦ - ೮೦೦ರ ಸುಮಾರಿಗೆ ಶೈವ ಸಂಪ್ರದಾಯದ ಜನರು ಈ ಪ್ರದೇಶದಲ್ಲಿ ವಾಸವಾಗಿದ್ದರು. ಇವರಲ್ಲಿ ಒಂದು ಗುಂಪಿನ ಬುಡಕಟ್ಟು ಜನರು ಶಕ್ತಿ ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದರು. ಈ ಎರಡೂ ಜನ ವರ್ಗದವರಿಂದಲೇ ಕಾರ್ತಿಕೇಯನ ಪ್ರತಿಷ್ಠಾಪನೆ ನಡೆದಿರಬಹುದು.[೨೦]

ದಕ್ಷಿಣ ಭಾರತದ ಇತರೆಡೆಗಳಲ್ಲಿ ವಿದರ್ಭ ಪ್ರದೇಶ ಬಿಟ್ಟು ಉತ್ಖನನ ಮಾಡಿದ ಕಲ್ಗೋರಿಗಳಲ್ಲಿ ಈ ರೀತಿ ಹೆಚ್ಚಿನ ಸಂಖ್ಯೆಯಲ್ಲಿ ಖಡ್ಗ ಮತ್ತು ಈಟಿಗಳು ದೊರೆತಿಲ್ಲ. ಆದ್ದರಿಂದ ಖಡ್ಗ, ಈಟಿ ಆಯುಧೋಪಕರಣಗಳು ದೇವಗಿರಿ-ಬ್ರಹ್ಮಗಿರಿ ಪ್ರದೇಶದ ಕಲ್ಗೋರಿಗಳ ವೈಶಿಷ್ಟ್ಯವೆಂದೇ ಕಾಣುತ್ತದೆ. ಸಂಡೂರು ದೇವಗಿರಿ ಹಳ್ಳಿಯ ಈ ಪ್ರದೇಶದ ಮಧ್ಯದಲ್ಲಿದೆ ಮತ್ತು ಈ ಭಾಗದಲ್ಲಿಯೇ ಅತ್ಯುತ್ತಮ ಗುಣಮಟ್ಟದ ಕಬ್ಬಿಣದ ಅದಿರು ಹೇರಳ ಪ್ರಮಾಣದಲ್ಲಿರುವುದರಿಂದ ಈ ಪ್ರದೇಶದ ಕಲ್ಗೋರಿಗಳಲ್ಲಿ ಕಂಡುಬಂದ ಈಟಿ, ಖಡ್ಗಗಳು ಕಬ್ಬಿಣದ ಅದಿರು ದೊರೆಯುವ ಸ್ಥಳದ ಸಮೀಪದಲ್ಲಿ ಸಿದ್ಧವಾಗಿರುವ ಸಾಧ್ಯತೆ ಹೆಚ್ಚು ಮತ್ತು ಕನಿಷ್ಟ ಕ್ರಿ.ಪೂ. ಮೊದಲನೇ ಸಹಸ್ರಮಾನದ ಮಧ್ಯದ ಹೊತ್ತಿಗೆ ಇದು ಒಂದು ಅತ್ಯುತ್ತಮ ದರ್ಜೆಯ ಶಸ್ತ್ರ ಕಾರ್ಯಾಗಾರವಾಗಿತ್ತೆಂದು ತೋರುತ್ತದೆ.[೨೧]

ಇವುಗಳ ಉಗಮದ ಬಗ್ಗೆ ವಿದ್ವಾಂಸರಲ್ಲಿ ವಿಭಿನ್ನ ಅಭಿಪ್ರಾಯಗಳಿವೆ. ಮೆಕೆಂಜಿಯವರು ಈ ಪ್ರದೇಶದಲ್ಲಿರುವ ಬೂದಿ ದಿಬ್ಬಗಳ ಬಗ್ಗೆ ಅಧ್ಯಯನಮಾಡಿ ಸ್ಥಳೀಯ ಕಥೆಗಳನ್ನು ಸಂಗ್ರಹಿಸಿದರು. ದೊಡ್ಡ ದೊಡ್ಡ ರಾಕ್ಷಸರನ್ನು ಮತ್ತು ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿಯ ವಾಲಿ, ಹಿಡಂಬಾಸುರ ಮುಂತಾದ ಪ್ರಮುಖ ವ್ಯಕ್ತಿಗಳನ್ನು ಸುಟ್ಟದ್ದರಿಂದ ಬೂದಿ ದಿಬ್ಬಗಳು ಉಂಟಾದವೆಂಬ ನಂಬಿಕೆಗಳಿವೆ. ನ್ಯೂಬೋಲ್ಡ್ ಎಂಬುವರು ೧೮೪೩ರಲ್ಲಿ ಮೊದಲು ಕುಪಗಲ್ಲಿನಲ್ಲಿ ಉತ್ಖನನ ನಡೆಸಿ, ಇವು ಮಾನವನ ಔದ್ಯೋಗಿಕ ಕೇಂದ್ರವಾಗಿರದೆ ಪ್ರಾಯಶಃ ಶವಸಂಸ್ಕಾರ ವಿಧಿಗೆ ಸಂಬಂಧಿಸಿರಬೇಕೆಂದು ನಿರ್ಣಯಕ್ಕೆ ಬಂದರು. ಕ್ರಿ.ಶ. ೧೯೩೬ರಲ್ಲಿ ಯಾಜ್ದಾನಿಯವರು ಕುಪಗಲ್ಲಿನಲ್ಲಿರುವ ಬೂದಿ ದಿಬ್ಬಗಳನ್ನು ಪರಿಶೀಲಿಸಿ, ಚಿನ್ನ ಹಾಗೂ ಕಬ್ಬಿಣ ಮುಂತಾದ ಲೋಹಗಳನ್ನು ತಯಾರಿಸುವ ಸಂದರ್ಭದಲ್ಲಿ, ಅದಿರನ್ನು ಕರಗಿಸುವ ಕಾರಣದಿಂದ ಈ ಬಗೆಯ ಕಿಟ್ಟಗಳು ಆಗಿರಬಹುದೆಂದು ಹೇಳುತ್ತಾರೆ. ಈ ಬೂದಿ ದಿಬ್ಬಗಳ ಹತ್ತಿರ ಬೆಟ್ಟದ ಮೇಲೆ ನವಿಲು, ವೃಷಭ, ಆನೆ ಮುಂತಾದ ಪ್ರಾಣಿಗಳ ಚಿತ್ರಗಳನ್ನು ಕೊರೆಯಲಾಗಿದೆ.[೨೨]

ದಕ್ಷಿಣ ಭಾರತದಲ್ಲಿ ಪ್ರಪ್ರಥಮ ಬಾರಿಗೆ ಉಕ್ಕು ಕಾಣಿಸಿಕೊಳ್ಳುವುದು ಬೃಹತ್ ಶಿಲಾ ಸಂಸ್ಕೃತಿಯ ಹಂತದಲ್ಲಿ ಕ್ರಮೇಣವಾಗಿ ಇದರ ಅಭಿವೃದ್ಧಿ ಹೆಚ್ಚಾಗುತ್ತಾ ಬಂದು ಕ್ರಿ.ಶ. ೧-೨ನೇ ಶತಮಾನದ ವೇಳೆಗೆ ಉತ್ತರಭಾರತ ಮತ್ತು ರೋಮ್ ದೇಶಕ್ಕೂ ರಫ್ತಾಗುತ್ತಿತ್ತು. ಭಾರತದ ಉಕ್ಕಿಗೆ ರೋಮ್ ದೇಶದಲ್ಲಿ ಇತರ

ವಸ್ತುಗಳಂತೆ ಬಹು ಬೇಡಿಕೆ ಇದ್ದಿತು. ಹೊಸಪೇಟೆ - ಸಂಡೂರು - ಬಳ್ಳಾರಿ ಪ್ರದೇಶದಲ್ಲಿಯ ಕಬ್ಬಿಣದ ಅದಿರು ಬಹು ಉತ್ತಮ ದರ್ಜೆಯದು. ಕಾರ್ತಿಕೇಯ ವನ ಕಬ್ಬಿಣ ಉಕ್ಕು ತಯಾರಿಕೆಯಿಂದ ಇಡೀ ಭಾರತದಲ್ಲಿ ಪ್ರಸಿದ್ಧಿಯನ್ನು ಪಡೆದಿರಬಹುದು.

ಪುರಾಣಗಳ ಉಲ್ಲೇಖದಂತೆ[೨೪] ಈ ಪರ್ವತಕ್ಕೆ ಕೃತಯುಗದಲ್ಲಿ ದೇವಗಿರಿ ಎಂದೂ, ತ್ರೇತಾಯುಗದಲ್ಲಿ ಸ್ವರ್ಣಗಿರಿಯೆಂದೂ, ದ್ವಾಪರಯುಗದಲ್ಲಿ ದಿವ್ಯಾಚಲವೆಂದೂ, ಕಲಿಯುಗದಲ್ಲಿ ಲೋಹಾಚಲವೆಂದೂ ಕರೆಯಲಾಗುತ್ತಿತ್ತು. ತಾರಕಾದಿ ಅಸುರರ ಸಂಹಾರಕ್ಕಾಗಿ ಶ್ರೀ ಸ್ವಾಮಿ ಕಾರ್ತಿಕೇಯನು ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥನೆ ಮಾಡಿಸಿಕೊಂಡು ದೇವಸೇನಾಧಿಪತ್ಯವನ್ನು ವಹಿಸಿಕೊಂಡು ಬಂದು ಈ ಪರ್ವತದಲ್ಲಿ ನೆಲೆ ನಿಂತನೆಂದು ಪ್ರತೀತಿ.

ಶ್ರೀ ಸ್ಕಂದ ಪುರಾಣದಲ್ಲಿ ಉಕ್ತವಾದಂತೆ ಪೂರ್ವಕಾಲದಲ್ಲಿ ಸಂಡೂರು "ಸ್ಕಂದಪುರ" ಎಂಬ ಕ್ಷೇತ್ರವಾಗಿತ್ತು. ಈ ಸ್ಕಂದಪುರಕ್ಕೆ ಸುತ್ತಲೂ ಲೋಹ ಪರ್ವತಗಳ ಕೋಟೆ ಇದ್ದಿತು. ಈಗಲೂ ಈ ಪರ್ವತಗಳಿವೆ. ಇಲ್ಲಿ ದೇವಾದಿದೇವತೆಗಳು, ಕಿನ್ನರರು, ಕಿಂಪುರುಷರೂ, ಗಂಧರ್ವರೂ ನೆಲೆಸಿದ್ದರು. ಇದರಿಂದ ಇದನ್ನು ಸುವರ್ಣಗಿರಿ ಎಂದು ಸಹ ಕರೆಯಲಾಗುತ್ತಿತ್ತು. ಶಿವಸುತನಿಂದ ಮಾತ್ರ ಹತನಾಗಬೇಕೆಂದು ಶಿವನಿಂದ ವರ ಪಡೆದ ತಾರಕಾಸುರನು ಇಲ್ಲಿನ ದೇವಾನುದೇವತೆಗಳಿಗೆ ತೊಂದರೆ ಕೊಡಲು ಆರಂಭಿಸಿದ. ಈ ರಾಕ್ಷಸನ ಹಿಂಸೆ ತಾಳಲಾರದ ದೇವತೆಗಳು ಶಿವನ ಮೊರೆ ಹೋಗಲು ಶಿವನು ತನ್ನ ಮಗನಾದ ಷಣ್ಮುಖನಿಗೆ ಈ ಲೋಹಾಚಲದಲ್ಲಿಯೇ ದೇವಸೇನಾಧಿಪತಿ ಪಟ್ಟವನ್ನು ಕಟ್ಟಿ ತಾರಕಾಸುರನನ್ನು ಕೊಲ್ಲಲು ಆಜ್ಞೆ ಮಾಡಿದ. ಶಿವನ ಆಜ್ಞೆಯಂತೆ ಕುಮಾರಸ್ವಾಮಿ ತಾರಕಾಸುರನನ್ನು ಕೊಂದನು. ನಂತರ ಲೋಹಾದ್ರಿಯ ಪ್ರಾರ್ಥನೆಯಂತೆ ಹಾಗೂ ದೇವತೆಗಳ ಬೇಡಿಕೆಯಂತೆ ಕುಮಾರಸ್ವಾಮಿ ಕ್ಷೇತ್ರವಾಯಿತು. ಬಲಭಾಗದಲ್ಲಿ ತನ್ನ ತಾಯಿ ಪಾರ್ವತಿ ದೇವಾಲಯವಿದೆ. ಎಡಭಾಗದಲ್ಲಿ ತಂದೆಯ (ಶಿವನ ದೇವಾಲಯ) ನಾಗನಾಥೇಶ್ವರ ದೇವಾಲಯವಿದೆ. ದೇವತೆಗಳು ಸಹ ತಮ್ಮ ತಮ್ಮ ಕ್ಷೇತ್ರಗಳನ್ನು ನಿರ್ಮಿಸಿಕೊಂಡು ನೆಲೆನಿಂತರು.

ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರ ಲಕ್ಷ್ಮಣರು ಕಪಿ ವೀರರನ್ನು ಕೂಡಿಕೊಂಡು ಲಂಕೆಗೆ ಹೋಗುವಾಗ ಮಾರ್ಗದಲ್ಲಿ ಲೋಹಾಚಲಕ್ಕೆ ಬಂದು ಶ್ರೀಕುಮಾರಸ್ವಾಮಿ ದರ್ಶನ ಪಡೆದರು. ಇದಕ್ಕೆ ಸಾಕ್ಷಿಯಾಗಿ ಕುಮಾರಸ್ವಾಮಿ ಮೂರ್ತಿ ಶಿಲ್ಪದ ಕೆಳಭಾಗದಲ್ಲಿ ರಾಮ - ಲಕ್ಷ್ಮಣರ ಉಬ್ಬುಶಿಲ್ಪಗಳಿವೆ. ಸ್ವಾಮಿಯ ಆಜ್ಞೆಯಂತೆ ಶ್ರೀರಾಮ ಇಲ್ಲಿನ ಬೆಟ್ಟದ ಉತ್ಕೃಷ್ಟವಾದ ಕಬ್ಬಿಣದಿಂದ ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಂಡು ಲಂಕೆಗೆ ಸಾಗಿದನೆಂದು ರಘುವಂಶದಲ್ಲಿ ವರ್ಣನೆ ಇದೆ.

ದ್ವಾಪರಯುಗದಲ್ಲಿ ಪಾಂಡವರು ವನವಾಸದಲ್ಲಿದ್ದಾಗ ಲೋಹಾಚಲಕ್ಕೆ ಬಂದು ಸ್ವಾಮಿಯ ದರ್ಶನ ಮಾಡಿಕೊಂಡು ಆತನ ಆಶೀರ್ವಾದವನ್ನು ಪಡೆದು, ಕೆಲಕಾಲ ವಾಸವಾಗಿದ್ದು, ಪಂಚಲಿಂಗಗಳನ್ನು ನಿರ್ಮಿಸಿ ಪೂಜೆಮಾಡಿ ಧನ್ಯರಾದರು. ಇದೇ ಈಗಿನ ಪಂಚಲಿಂಗ ಕ್ಷೇತ್ರ.[೨೫]

ಉತ್ತರ ಕರ್ನಾಟಕದಲ್ಲಿ ಸಂಡೂರಿನ ಕುಮಾರಸ್ವಾಮಿ ಬೆಟ್ಟವು ಒಂದು ಕ್ಷೇತ್ರ. ಶ್ರೀಮದ್ರಾಮಾಯಣದ ಕಿಷ್ಕಿಂಧಾ ಕಾಂಡದಲ್ಲಿ ಉಲ್ಲೇಖಿತವಾದ 'ಕಾರ್ತಿಕೇಯವನ'ವೂ ಈ ಕ್ಷೇತ್ರವೇ ಎಂದು ನಂಬಿಕೆ. ಇಲ್ಲಿಯ ಬೆಟ್ಟದ ಮೇಲಿರುವ ಶ್ರೀ ಪಾರ್ವತಿ ಮತ್ತು ಶ್ರೀಕುಮಾರಸ್ವಾಮಿಯ ದೇವಾಲಯಗಳು ಈ ಭಾಗದಲ್ಲೆಲ್ಲ ಸುಪ್ರಸಿದ್ಧ, ಗರ್ಭಗುಡಿಯೊಳಗಿನ ಪೂಜೆಗೊಳ್ಳುತ್ತಿರುವ ಪಾರ್ವತಿದೇವಿ ಮತ್ತು ಕಾರ್ತಿಕೇಯ ಪ್ರತಿಮೆಗಳು ದೇವಾಲಯಗಳೊಳಗಿನ ಮತ್ತು ಹೊರಗಿನ ಬೇರೆ ಬೇರೆ ಕಾಲದ ಅಪರೂಪ ಮಾದರಿಯ ಇತರ ಬಿಡಿ ಶಿಲ್ಪಗಳು ಮತ್ತು ಕ್ಷೇತ್ರ ಮಹಿಮೆಯ ಬೆಳವಣಿಗೆ ಬಗ್ಗೆ ಕೆಲವು ಐತಿಹಾಸಿಕ ಅಂಶಗಳನ್ನು ಸೂಚಿಸುತ್ತವೆ.[೨೬]

ರಾಮಾಯಣ ಮಹಾಕಾವ್ಯದಲ್ಲಿ ಉಲ್ಲೇಖವಾದ 'ಕಿಷ್ಕಿಂಧ'ವೆಂಬ ಸ್ಥಳ ಯಾವುದೆಂದು ಸ್ಪಷ್ಟವಾಗಿ ಹೇಳುವಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಈಗ ಗುರುತಿಸಲ್ಪಟ್ಟ ಹಂಪಿ - ಆನೆಗೊಂದಿ ಪ್ರದೇಶ ಪ್ರಾಚೀನ 'ಕಿಷ್ಕಿಂಧಪುರ' ಎಂಬುದಾಗಿ ಕರೆಯುತ್ತಿರುವುದುಂಟು.

ಈ ಕಿಷ್ಕಿಂಧಪುರದಲ್ಲಿ ಹನುಮಂತ, ವಾಲಿ, ಸುಗ್ರೀವ ವಾಸವಾಗಿದ್ದರೆಂದೂ, ರಾಮನು ದರ್ಶನವಿತ್ತ ಸ್ಥಳವೆಂದೂ ನಂಬಿಕೆ ಇದೆ. ಕೆಲವು ಪರಾತತ್ವ ಅವಶೇಷಗಳು, ಶಾಸನಗಳು ಮತ್ತು ಜನಪದ ನಂಬಿಕೆಗಳನ್ನು ಗಮನಿಸಿದಾಗ ಹಂಪಿ - ಆನೆಗೊಂದಿ ಪ್ರದೇಶ ರಾಮಾಯಣದ ಕಿಷ್ಕಿಂಧವಾಗಿತ್ತೆ? ಎಂಬ ಅನುಮಾನ ಉಂಟಾಗುತ್ತದೆ.[೨೭] ಹಂಪಿ, ಆನೆಗೊಂದಿ, ಮಲ್ಲಾಪುರ, ಹಿರೇಬೆನಕಲ್ಲ ಪ್ರದೇಶಗಳಲ್ಲಿ ಬಂಡೆಗಲ್ಲುಗಳ ಮೇಲೆ ಕೊರೆದ ಪ್ರಾಗಿತಿಹಾಸಕಾಲದ (ಸು.ಕ್ರಿ.ಪೂ. ೨೦೦೦ - ೧೦೦೦) ಉದ್ದನೆಯ ಬಾಲವಿರುವ ಮನುಷ್ಯರ ಚಿತ್ರಗಳು ರಾಮಾಯಣದ ವಾನರರನ್ನು ನೆನಪಿಗೆ ತರುತ್ತವೆ. ಅಲ್ಲದೆ ಇಲ್ಲಿ ಹೇರಳವಾಗಿ ನಿರ್ಮಾಣವಾದ ಆಂಜನೇಯ ಮೂರ್ತಿಶಿಲ್ಪಗಳು ಇದ್ದು, ಹನುಮನ ವಾಸಸ್ಥಾನವಾಗಿತ್ತೆನ್ನುವುದಕ್ಕೆ ಪುಷ್ಟಿ ನೀಡುತ್ತವೆ.[೨೮]

ಶ್ರೀರಾಮ - ಲಕ್ಷ್ಮಣರು ಪಂಚವಟಿಯಿಂದ ಕಿಷ್ಕಿಂಧೆಗೆ ಹೋಗುವಾಗ ಇಲ್ಲಿ ಶ್ರೀ ಕಾರ್ತಿಕೇಯನ ದರ್ಶನ ಮಾಡಿ, ಈ ದೇವರ ಸೂಚನೆಯಂತೆ ಇಲ್ಲಿ 'ಲೋಹಾಚಲ'ದ ಲೋಹದಿಂದ ವಾಲಿ, ರಾವಣಾದಿಗಳನ್ನು ಸಂಹರಿಸಲು ಪ್ರಬಲವಾದ ಬಾಣಗಳನ್ನು ಮಾಡಿಸಿಕೊಂಡನಂತೆ ಈ ವಿಷಯವು ರಾಮಾಯಣದಲ್ಲಿಯೂ ಇರುವುದು. ಕಿಷ್ಕಿಂಧಾ ಕಾಂಡದ ಅಷ್ಟಮ ಸರ್ಗದಲ್ಲಿ ೨೨ ಮತ್ತು ೨೩ನೇ ಶ್ಲೋಕಗಳು ಹೀಗಿವೆ.

"ಇಮೇಹಿ ಮೇ ಮಹಾ ವೇಗಾಃ ಪತ್ರಿಣಸ್ತಿಗ್ಮ ತೇಜಸಃ
ಕಾರ್ತಿಕೇಯ ವನೋದ್ಭೂತಾಃ ಶರಾ ಹೇಮ ವಿಭೂಷಿತಾಃ | (೨೨)

ಕಂಕಪತ್ರ ಪ್ರತಿಚ್ಛನ್ನಾ ಮಹೇಂದ್ರಾಶನಿಸಂನಿಭಾಃ |
ಸುಪರ್ವಣಃ ಸುತೀಕ್ಷ್ಣಾಗ್ರಾಃ ಸರೋಷ ಇವ ಪನ್ನಗಾಃ" || (೨೩)

ಈ ಶ್ಲೋಕಗಳಲ್ಲಿಯ ಕಾರ್ತಿಕೇಯವನ ಎಂಬ ಪದ ಸಮುಚ್ಚಯ ಗಮನಾರ್ಹ.[೨೯]

ಸಂಡೂರಿನ ಕಾರ್ತಿಕೇಯ ದೇವಾಲಯದ ಗರ್ಭಗೃಹದಲ್ಲಿರುವ ಕುಮಾರಸ್ವಾಮಿ ಮೂರ್ತಿಯು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದು, ಈ ವಿಗ್ರಹದ ಪಾದದ ಬಳಿ ರಾಮನು ಅಂಜಲಿ ಮುದ್ರೆಯಲ್ಲಿ ಕುಳಿತಿರುವನು. ಅವನ ಪಕ್ಕದಲ್ಲಿ ಲಕ್ಷ್ಮಣನು ನಿಂತಿದ್ದಾನೆ. ಕುಡತಿನಿಯ ಕುಮಾರಸ್ವಾಮಿ ದೇವಾಲಯದಲ್ಲಿಯೂ ಶ್ರೀರಾಮನ ಮೂರ್ತಿಯಿದೆ. ಕುಡತಿನಿ, ತೋರಣಗಲ್ಲುಗಳ ಮಧ್ಯದಲ್ಲಿರುವ ಬೂದಿ ದಿಬ್ಬದ ಬಗ್ಗೆ ಅಲ್ಲಿಯ ಜನರು ಶ್ರೀರಾಮನು ಕಾರ್ತಿಕೇಯವನಕ್ಕೆ ಬಂದು, ಕಿಷ್ಕಿಂಧೆಗೆ ಹೋಗುವಾಗ ರಾಕ್ಷಸ ತಡೆಯುತ್ತಾನೆ. ರಾಮನ ಬಾಣದಿಂದ ಆ ರಾಕ್ಷಸ ಸುಟ್ಟು ಭಸ್ಮವಾಗಿದ್ದರಿಂದ 'ಬೂದಿಕಣಮೆ' ಉಂಟಾಯಿತೆಂದು ಹೇಳುತ್ತಾರೆ. ಹಂಪಿ - ಆನೆಗೊಂದಿ ಪ್ರದೇಶಕ್ಕೆ ಕಿಷ್ಕಿಂಧ ಎಂಬ ಹೆಸರು ಸುಮಾರು ಕ್ರಿ.ಶ. ೧-೨ನೇ ಶತಮಾನದಲ್ಲಿಯೇ ಇತ್ತು ಎಂಬುದು ಶಾಸನ ಮತ್ತು ಪುರಾತತ್ವ ಆಧಾರಗಳಿಂದ ತಿಳಿದುಬರುತ್ತದೆ. ಇದರ ಹತ್ತಿರದಲ್ಲಿಯೇ ಇದ್ದ ಕಾರ್ತಿಕೇಯ ವನವೂ ಕೂಡ ಅಷ್ಟೇ ಪ್ರಾಚೀನವಾಗಿತ್ತು.[೨೦]

ದ್ವಾಪರಯುಗದಲ್ಲಿ ಪಾಂಡವರು ವನವಾಸದಲ್ಲಿದ್ದಾಗ ಲೋಹಾಚಲಕ್ಕೆ ಬಂದು ಸ್ವಾಮಿ ದರ್ಶನ ಪಡೆದು ಕೆಲವು ಕಾಲ ಇಲ್ಲಿ ವಾಸವಾಗಿದ್ದು ಶ್ರೀ ಸ್ವಾಮಿಯ ದೇವಾಲಯದ ಮುಂದೆ ಆರು ಲಿಂಗಗಳನ್ನು ಸ್ಥಾಪಿಸಿದರು ಮತ್ತು ಅಲ್ಲಿಯ ಬೆಟ್ಟದಲ್ಲಿರುವ ಭೀಮ ತೀರ್ಥ ಭೀಮನ ಗದೆಯಿಂದ ನಿರ್ಮಾಣವಾಯಿತೆಂದು ಪ್ರತೀತಿ.[೨೧] "ವೇದ ಸಾಹಿತ್ಯವು ಗ್ರಂಥಸ್ಥವಾಗುವ ಕಾಲಕ್ಕೆ ಮೊದಲೇ ಸ್ಕಂದಾರಾಧನೆ ರೂಢಿಯಲ್ಲಿದ್ದಿತು." ಎಂಬುದಕ್ಕೆ ಅಥರ್ವವೇದದ ಪರಿಶಿಷ್ಟವೆನಿಸಿದ 'ಸ್ಕಂದಯಾಗ' ಮತ್ತು 'ಬೋಧಾಯನ ಧರ್ಮಶಾಸ್ತ್ರ' ಎಂಬ ಗ್ರಂಥಗಳೇ ಆಧಾರವೆಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಈ ಗ್ರಂಥಗಳ ಕಾಲ ಕ್ರಿ.ಪೂ. ೬೦೦ ರಿಂದ ೭೦೦ರ ಅವಧಿಯೆಂದು ನಿರ್ಣಯಿಸಲಾಗಿದೆ. ಆ ಕಾಲದಿಂದಲೂ ಸ್ಕಂದನು ತನ್ನ ಗುಣಾದಿಗಳಿಂದ ಸನತ್ಕುಮಾರ, ಸ್ಕಂದ, ಷಣ್ಮುಖ, ವಿಶಾಖ, ಮಹಾಸೇನ, ಸುಬ್ರಹ್ಮಣ್ಯ ಮೊದಲಾದ ನಾಮಾವಳಿಯನ್ನು ಪಡೆದು ಪ್ರಸಿದ್ಧನಾಗುತ್ತಾ ಬಂದಿದ್ದಾನೆ. ಈ ಪ್ರಸಿದ್ಧಿಯೇ ಮುಂದೆ ಮಹಾಕಾವ್ಯಗಳಲ್ಲೂ ವಿವಿಧ ಕಥೆಗಳ ರೂಪದಲ್ಲಿ ಮುಂದುವರೆದಿದೆ ಎಂದರೆ ತಪ್ಪಾಗಲಾರದು. ರಾಮಾಯಣದ ಬಾಲಕಾಂಡದಲ್ಲಿ ಕಾರ್ತಿಕೇಯ ಜನ್ಮ ಹಾಗೂ ಸಾಹಸ ಕೃತಿಗಳು ಇವುಗಳ ಬಗ್ಗೆ ಎರಡು ಪ್ರಕರಣಗಳು ಮೀಸಲಿರಿಸಲ್ಪಟ್ಟಿವೆ. ಮಹಾಭಾರತದ ವನಪರ್ವ, ಶಲ್ಯಪರ್ವ, ಅನುಶಾಸನ ಪರ್ವಗಳಲ್ಲೂ ಸ್ಕಂದವೃತ್ತಾಂತವು ಸವಿಸ್ತಾರವಾಗಿ ವರ್ಣಿತವಾಗಿದೆ.[೨೨]

ಪುರಾಣಗಳ ಕಾಲದಲ್ಲಿ ಈ ಪಟ್ಟಣವನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಸ್ಕಂದಪುರಾಣದಲ್ಲಿ ಉಕ್ತವಾಗಿರುವಂತೆ[೨೩] ಸ್ಕಂದನಿರುವ ಪುರವಾದುದರಿಂದ "ಸ್ಕಂದಪುರ"ವೆಂದೆನಿಸಿಕೊಂಡಿದೆ. ಇದರ ಜೊತೆಗೆ "ಸುಂದರಪುರ"ವೆಂಬ ಹೆಸರೂ ಇದರ ಪ್ರಾಚೀನ ಸರಣಿಯಲ್ಲಿ ಬರುತ್ತದೆ. ಆದರೆ "ಸಂಡೂರು" ಶಬ್ದದ ಮೂಲರೂಪ 'ಸಂದೂರು' ಆಗಿದ್ದು, ಬೆಟ್ಟ - ಗುಡ್ಡಗಳ ಸಂದುಗಳಲ್ಲಿರುವ ಊರು ಎಂಬ ಕಾರಣದಿಂದಲೇ ಈ ಹೆಸರು ಬಂದಿದೆ. ಸಂದು + ಊರು = ಸಂದೂರು > ಸಂಡೂರು ಆಗಿ ಪರಿಣಮಿಸಿದೆ. ಭೂಗೋಳಶಾಸ್ತ್ರಜ್ಞ ಮೆಕಾಲೆ ಹೇಳುವಂತೆ ಸಂಡೂರು ಸಂದು (ಕಂಡಿ, ಗಂಡಿ, ಕಣಿವೆ) ಊರು ಎಂಬುದಾಗಿತ್ತು

ಎಂದು ತಿಳಿದುಬರುತ್ತದೆ. ಈ ಸಂದೂರು > ಸಂಡೂರು > ಸ್ವಂಡೂರು > ಸೊಂಡೂರು ಎಂದು ಗ್ರಾಮೀಣ ಜನರ ಉಚ್ಚಾರಣೆಯ ಸೌಲಭ್ಯಾಕಾಂಕ್ಷೆಯನ್ನು ಪಡೆದು ಈಗ ಸಂಡೂರು ಮತ್ತು ಸೊಂಡೂರು ಆಗಿ ಮಾತ್ರ ಬಳಕೆಯಾಗುತ್ತಿದೆ.

೨.೩ ಇತಿಹಾಸ ಕಾಲ

ನಮ್ಮ ಇತಿಹಾಸವನ್ನು ರಚಿಸಲು ಶಾಸನಗಳು ನಿಶ್ಚಿತ ತಳಹದಿಯಾಗಿವೆ ಎಂಬುದನ್ನು ಒಪ್ಪಲಾಗಿದೆ. ಇವು ವಿವಿಧ ಕಾಲಮಾನಗಳಿಗೆ, ವಿಶೇಷ ಘಟನೆಗಳಿಗೆ, ಪ್ರದೇಶಗಳಿಗೆ ಮತ್ತು ವ್ಯಕ್ತಿಗಳಿಗೆ ಸಂಬಂಧಪಟ್ಟ ಅನೇಕ ವಿವರಗಳನ್ನು ನಮಗೆ ನೀಡುತ್ತವೆ.

ಬಳ್ಳಾರಿ ಜಿಲ್ಲೆಯು ಕನ್ನಡ ನಾಡಿನ ಪ್ರಸಿದ್ಧ ರಾಜಮನೆತನಗಳಾದ ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಹೊಯ್ಸಳ, ಕಲಚೂರಿ, ಸೇವುಣ ಇವರ ಆಳ್ವಿಕೆಯ ಪರಿಧಿಯ ಒಳಗೆ ಇತ್ತು. ಮುಂದೆ ವಿಜಯನಗರ ಸಾಮ್ರಾಜ್ಯದೊಳಗೆ ಬಂದಿತು. ಈ ಎಲ್ಲಾ ರಾಜಮನೆತನಗಳ ಒಂದಿಲ್ಲೊಂದು ರೀತಿಯ ಪ್ರಭಾವಕ್ಕೆ ಒಳಗಾಗಿದ್ದ ಸಂಡೂರು ತನ್ನ ಸ್ಥಾನ ಸೌಂದರ್ಯದಿಂದ ಒಂದು ಮಹತ್ವದ ಸ್ಥಾನವನ್ನು ಕಂಡುಕೊಂಡಿತ್ತು. ಈ ಅಧ್ಯಾಯದಲ್ಲಿ ಆಯಾ ರಾಜಮನೆತನಗಳ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳಲು ಪ್ರಯತ್ನಿಸಲಾಗಿದೆ.

೨.೩.೧ ಚಾಲುಕ್ಯ ಪೂರ್ವಯುಗ (ಕ್ರಿ.ಶ.ಸು. ೫ನೆಯ ಶತಮಾನದವರೆಗೆ)

ಮೌರ್ಯರು

ಕ್ರಿ.ಪೂ. ೩ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ ಅಧಿಕಾರಕ್ಕೆ ಬಂದ ಮೌರ್ಯರು, ದಕ್ಷಿಣ ಭಾರತದ ಕೆಲವು ಪ್ರದೇಶಗಳ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದರು. ಇವರ ಕಾಲದ ಅಶೋಕನ ಶಾಸನಗಳು ಸಂಡೂರು ನೆರೆಯ ಸೀಮೆಗಳಾದ ಕೊಪ್ಪಳ, ಗವಿಮಠ, ಮಸ್ಕಿ, ನಿಟ್ಟೂರು, ಅಶೋಕ ಸಿದ್ಧಾಪುರ ಜಟ್ಟಿಂಗ ರಾಮೇಶ್ವರ, ಬ್ರಹ್ಮಗಿರಿಗಳಲ್ಲಿ ದೊರಕಿರುವುದರಿಂದ ಸಂಡೂರು ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿದುಬರುವುದು.[೩೪] ಬ್ರಹ್ಮಗಿರಿ ಶಾಸನದ ಉಲ್ಲೇಖದಂತೆ ಇದು (ಇಸಿಲಾ) ಸಾಮ್ರಾಜ್ಯದ ದಕ್ಷಿಣ ಗಡಿಯಾಗಿದ್ದು, ಇಸಿಲಾವನ್ನು ಆಡಳಿತದ ಕೇಂದ್ರವನ್ನಾಗಿ ಮಾಡಿಕೊಂಡು ಮಹಾಮಾತ್ರರನ್ನು ಅಲ್ಲಿ ನೇಮಿಸಿದ್ದನು.[೩೫]

ಮೌರ್ಯರ ಕಾಲದಲ್ಲಿ ಸಂಡೂರಿನ ಕುಮಾರಸ್ವಾಮಿಯ ಆರಾಧನೆಯ ಅಭಿವೃದ್ಧಿ ಹೊಂದುತ್ತಾ ಬಂದಂತೆ ಕಾಣುತ್ತದೆ. ಭಾರತಕ್ಕೆ ದಂಡೆತ್ತಿ ಬಂದಿದ್ದ ಅಲೆಕ್ಸಾಂಡರ್ ಹಲವಾರು ರಾಷ್ಟ್ರಗಳಲ್ಲಿ ವಿಖ್ಯಾತನಾದ

ಈತನು "ದೇವಕುಮಾರ"ನೆಂದು ಗ್ರೀಸ್ ಮತ್ತು ಪರ್ಶಿಯಾಗಳಲ್ಲಿ ಪ್ರತೀತಿ ಇತ್ತು. ಪರ್ಶಿಯನ್ ಮತ್ತು ಅರೇಬಿಯನ್ ಜನ ಈತನನ್ನು 'ಇಸ್ಕಂದರ'ನೆಂದು ಕರೆದಿದ್ದು, ಭಾರತದಲ್ಲಿ 'ಸ್ಕಂದ'ನೆಂದು ಸಂಸ್ಕೃತ ರೂಪ ತಳೆಯಿತು. ಚಂದ್ರಗುಪ್ತ ಮೌರ್ಯ ಹುಡುಗನಾಗಿದ್ದಾಗ ಅಲೆಕ್ಸಾಂಡರ್ ನನ್ನು ಕಂಡು ಅವನ ಬಗ್ಗೆ ಭಕ್ತಿ ಭಾವನೆ ತಳೆದಿದ್ದರಲ್ಲಿ ಆಶ್ಚರ್ಯವೇನಿಲ್ಲ. ಪತಂಜಲಿ 'ಶಿವ ಸ್ಕಂದೋ ವಿಶಾಖ ಇತಿ ..... ಮೌಯೆ ಶ್ವರ್ಹಿಕಣ್ಯಾರ್ಥಿ ಭಿರರ್ಚಾ ಕಲ್ಪಿತಾ" ಎಂದು ಹೇಳುತ್ತಾನೆ. ಮೌರ್ಯರಿಗೂ ನವಿಲಿಗೂ (ಮೋರಿಯ) ಗೋತ್ರ ಸಂಬಂಧವಿದ್ದಿತು. ಹೀಗಾಗಿ ಅವರ ದೇವತೆ ಸ್ಕಂದ ಮಯೂರ ವಾಹನನಾದ.[೨೬]

ಶಾತವಾಹನರು

ಶಾತವಾಹನರ ಆಡಳಿತಕ್ಕೆ ಈ ಪ್ರದೇಶ ಸೇರಿದ್ದಿರಬಹುದಾದರೂ ಅವರು ಹಾಕಿಸಿರುವ ಶಾಸನಗಳಾವುವು ಇದುವರೆಗೆ ಈ ಭಾಗದಲ್ಲಿ ದೊರೆತಿಲ್ಲ. ಮೌರ್ಯರ ನಂತರ ಅಧಿಕಾರಕ್ಕೆ ಬಂದ ಇವರು ಇಲ್ಲಿ ಕುಮಾರಸ್ವಾಮಿಗಾಗಿ ದೇವಾಲಯವನ್ನು ನಿರ್ಮಿಸಿರಬಹುದು. ಇವರ ಕಾಲದಲ್ಲಿ ಇದೊಂದು ಒಳನಾಡಿನ ಒಂದು ಮುಖ್ಯ ಕೇಂದ್ರವಾಗಿತ್ತು. ಕುಮಾರಸ್ವಾಮಿ ಬೆಟ್ಟ, ಶಕ್ತಿ ಕೇಂದ್ರವಾಗಿತ್ತು.[೨೭] ಈಗಿರುವ ಪಾರ್ವತಿ ದೇವಾಲಯ ಶಾತವಾಹನರ ಕಾಲದಿಂದಲೇ ಅಭಿವೃದ್ಧಿ ಹೊಂದುತ್ತ ಬಂತೆಂದು ಅಭಿಪ್ರಾಯ. ಶಾತವಾಹನರ ಎರಡು ಶಾಸನಗಳು ಈ ಪ್ರದೇಶದ ಹತ್ತಿರ ಹಿರೆಹಡಗಲಿ ಮತ್ತು ಮೆಕೆಡೋಣಿಗಳಲ್ಲಿ ದೊರಕಿವೆ. ಇವುಗಳಲ್ಲಿ 'ಶಾತವಾನಿಹಾರ', 'ಶಾತವಾನಿರಟ' ಎಂದು ಉಲ್ಲೇಖಗಳಿವೆ. ಇವರ ಕಾಲಕ್ಕೆ ಸೇರಬಹುದಾದ ದೇವಗಿರಿ, ಚೋರನೂರು, ಅಗ್ರಹಾರ (ಗಣಿತಿಕಟ್ಟೆ), ಕೂಡ್ಲಿಗಿ, ಹಾಳು ದೇವಲಾಪುರ, ಕೊಟ್ಟೂರು, ಹೆಗ್ಗಡೆಹಾಳು, ಶಿವಪುರ, ಹಂಪಿ, ಕುರುಗೋಡು, ಎಮ್ಮಿಗನೂರು, ಕಂಪ್ಲಿ, ಬಳ್ಳಾರಿ, ಸಿದ್ಧಾಪುರ, ಬ್ರಹ್ಮಗಿರಿ, ಕೋಗಳಿ, ಕುಡತಿನಿ ಮುಂತಾದ ಗ್ರಾಮಗಳಲ್ಲಿ ಶಾತವಾಹನರ ಕಾಲದ ಅವಶೇಷಗಳು ದೊರೆಯುತ್ತವೆ. ಈ ಪರಿಸರದಲ್ಲಿರುವ ಸಂಡೂರು ಸಹ ಶಾತವಾಹನರ ಕಾಲದ ಪ್ರಮುಖ ಪಟ್ಟಣವಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ.[೨೮]

ಕದಂಬರು

ಬನವಾಸಿ ಕದಂಬರ ಕಾಲದಲ್ಲಿ ಸಂಡೂರು ಪ್ರದೇಶವು ಕದಂಬರ ಸಾಮಂತರಾದ ಉಚ್ಚಂಗಿದುರ್ಗದ ನೊಳಂಬರ ಆಡಳಿತಕ್ಕೊಳಪಟ್ಟ ಒಂದು ಪ್ರಮುಖ ಕೇಂದ್ರವಾಗಿತ್ತು. ಇವರ ಕಾಲದಲ್ಲಿ ನಿರ್ಮಿತವಾದ ಕೆಲವು ದೇವಾಲಯದ ಅವಶೇಷಗಳಿವೆ. ಅಲ್ಲದೆ ಕೆಲವು ಮೂರ್ತಿಶಿಲ್ಪಗಳು ಸಿಕ್ಕಿವೆ. ಕದಂಬರು ಸಪ್ತಮಾತೃಕೆಯರ ಮತ್ತು ಕುಮಾರಸ್ವಾಮಿಯ ಆರಾಧಕರಾಗಿದ್ದರು. [೨೯]

[illegible]

[illegible]

[illegible]

[illegible]

೨.೩.೨ ಚಾಲುಕ್ಯಯುಗ (ಕ್ರಿ.ಶ. ೬ ರಿಂದ ೧೧ನೆಯ ಶತಮಾನದವರೆಗೆ)

ಬಾದಾಮಿ ಚಾಲುಕ್ಯರು

ಬಾದಾಮಿ ಚಾಲುಕ್ಯರ ಕಾಲದಲ್ಲಿ ಕುಮಾರಸ್ವಾಮಿಯ ಆರಾಧನೆ ವಿಶೇಷವಾದ ಮಹತ್ವ ಪಡೆದುಕೊಂಡಿತು ಎಂಬುದಕ್ಕೆ ಸಂಡೂರಿನ ಕುಮಾರಸ್ವಾಮಿ ದೇವಾಲಯ ಸಮುಚ್ಚಯದ ಪಾರ್ವತಿ ದೇವಾಲಯದ ಶಾಸನ, ಲಿಪಿ ಹಾಗೂ ಶಿಲ್ಪಗಳ ಆಧಾರದ ಮೇಲೆ ಹೇಳಬಹುದಾಗಿದೆ. ಕುಮಾರಸ್ವಾಮಿಯು ಚಾಲುಕ್ಯರ ಯುದ್ಧ ದೇವತೆಯಾಗಿದ್ದ.[೪೦] ಇವರ ಕಾಲದ ಕೊನೆಯ ಕಾಲದಲ್ಲಿ ಕಟ್ಟಿರಬಹುದಾದ ಪಾರ್ವತಿ ದೇವಸ್ಥಾನ ಕುಮಾರಸ್ವಾಮಿ ಬೆಟ್ಟದ ಕುಮಾರಸ್ವಾಮಿ ದೇವಾಲಯದ ಪಕ್ಕದಲ್ಲಿದೆ. ಇದು ಇವರ ಶೈಲಿಯ ವಾಸ್ತುಶಿಲ್ಪ ವಿಮಾನ ಶೈಲಿಯಲ್ಲಿದೆ. ದ್ವಾರಬಾಗಿಲ ಇಕ್ಕೆಲಗಳಲ್ಲಿ ಶಂಖಲಿಪಿಯ ಶಿಲಾ ಶಾಸನಗಳಿವೆ. ಬಳ್ಳಾರಿ ಜಿಲ್ಲೆಯಲ್ಲಿಯೇ ಪ್ರಾಚೀನವಾದ ಸುಂದರ ವಾಸ್ತುಶಿಲ್ಪವುಳ್ಳ ದೇವಾಲಯ ಇದಾಗಿದೆ. ಸುತ್ತಮುತ್ತಲಿನ ಸೀಮೆಗಳು, ನೊಳಂಬವಾಡಿಯ ಭಾಗಗಳಾಗಿ ಬಾದಾಮಿ ಚಾಲುಕ್ಯರ ಆಡಳಿತಕ್ಕೊಳಪಟ್ಟಿದ್ದವು.[೪೧] ಇವರ ಕಾಲದ ಬಾದಾಮಿಯ ಮೊದಲನೆಯ ಗುಹೆಯ ಪ್ರವೇಶದಲ್ಲಿ ಕುಮಾರಸ್ವಾಮಿಯ ಉಬ್ಬುಶಿಲ್ಪ ಮತ್ತು ಐಹೊಳೆಯ ಹುಚ್ಚ ಮಲ್ಲಿ ದೇವಾಲಯದ ಮುಖಮಂಟಪದ ಭುವನೇಶ್ವರಿಯ ಭಾಗದಲ್ಲಿ ನವಿಲು ವಾಹನನಾದ ಕುಮಾರಸ್ವಾಮಿಯ ಶತ್ರುಗಳನ್ನು ಸಂಹರಿಸುತ್ತಿರುವ ಶಿಲ್ಪವಿದೆ. ಅಲ್ಲದೇ ಅವರು ಸಂಡೂರು ಕುಮಾರಸ್ವಾಮಿ ಕ್ಷೇತ್ರಕ್ಕೆ ಹೆಚ್ಚು ಗಮನ ಹರಿಸಿದರು.[೪೨] ಹಾಗೂ ಕರ್ನಾಟಕದ ದೇವಾಲಯಗಳ ಹಲವು ಬಗೆಯ ಪ್ರಯೋಗಗಳು ಇವರ ಕಾಲದಲ್ಲಿ ನಡೆದವು. ಅಲ್ಲದೆ ಮುಂದಿನ ವಾಸ್ತುಶೈಲಿಗೆ ಒಂದು ಮಾದರಿಯನ್ನು ಹಾಕಿಕೊಟ್ಟರು. ಇವರ ಕಾಲದ ಧಾರ್ಮಿಕ ವಾಸ್ತುಶಿಲ್ಪಗಳಲ್ಲಿ ಗುಹೆಗಳು ಮತ್ತು ಕಟ್ಟಡಗಳೆಂದು ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಇವು ಹೆಚ್ಚಾಗಿ ಬಾದಾಮಿ, ಐಹೊಳೆ ಹಾಗೂ ಪಟ್ಟದಕಲ್ಲುಗಳಲ್ಲಿ ಕೇಂದ್ರಿಕೃತವಾಗಿವೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳ ಲಕ್ಷಣಗಳಲ್ಲಿ ಚೌಕಾಕಾರದ ಗರ್ಭಗೃಹ ಮತ್ತು ಚಿಕ್ಕ ಮುಖಮಂಟಪ, ಅದಕ್ಕೆ ಪ್ರದಕ್ಷಿಣಾಪಥವನ್ನೊಳಗೊಂಡಿರುವಂಥವು. ಗಜಪುಷ್ಠಾಕಾರ, ತ್ರಿಕೂಟಾಚಲದ ತಲವಿನ್ಯಾಸದಲ್ಲಿರುವ ಇನ್ನೊಂದು ಪ್ರಕಾರದವು.

ಚಾಲುಕ್ಯರು ಈ ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಿದ್ದರೂ, ಅವರ ಕಾಲದ ವಾಸ್ತುಶಿಲ್ಪ ಇಲ್ಲಿ ವಿರಳ. ವಿನಯಾದಿತ್ಯನ ಕ್ರಿ.ಶ. ೬೮೬ರ ತಾಮ್ರಪಟದಲ್ಲಿ ''ಪಂಪಾತಟ ಮಧಿವಸಾತಿ ವಿಜಯ ಸ್ಕಂದಾವರೆ'' ಎಂದಿದೆ. ಇದರಿಂದ ವಿಜಯ ಬೀಡಾರವನ್ನು ಪಂಪಾನದಿಯ ದಡದ ಮೇಲೆ ಬಿಟ್ಟಿದ್ದಾಗಿ ತಿಳಿಯುತ್ತದೆ. ಕುರುಗೋಡಿನ ಶಾಸನವೊಂದು ಸತ್ಯಾಶ್ರಯನನ್ನು ಹೆಸರಿಸುತ್ತದೆ ಹಾಗೂ ಉತ್ತಂಗಿಯ ವಿಷ್ಣುಶಿಲ್ಪ, ಕುಮಾರಸ್ವಾಮಿ ಬೆಟ್ಟದ ಪಾರ್ವತಿ ದೇವಾಲಯಗಳು ಇಲ್ಲಿ ಕಂಡುಬರುವ ಇವರ ಕಾಲದ ಗುರುತುಗಳಾಗಿವೆ.[೪೩]

ರಾಷ್ಟ್ರಕೂಟರು

ರಾಷ್ಟ್ರಕೂಟರು ತಮ್ಮ ಪ್ರಭುತ್ವವನ್ನು ಈ ಪ್ರದೇಶದ ಮೇಲೆ ಸ್ಥಾಪಿಸಿದ ನಂತರ ಕುಮಾರಸ್ವಾಮಿಯ ಸರ್ವತೋಮುಖ ಅಭಿವೃದ್ಧಿ ಪ್ರಾರಂಭವಾಯಿತು.[೪೪] ಇವರು ಈ ಪ್ರದೇಶದ ಮೇಲೆ ವಿಶೇಷ ಗಮನಹರಿಸಿ ಇಲ್ಲಿನ ಪಾರ್ವತಿ ದೇವಸ್ಥಾನಕ್ಕೆ ಹಾಗೂ ಪಕ್ಕದ ಕುಮಾರಸ್ವಾಮಿ ದೇವಾಲಯಗಳಿಗೆ ಸಂಬಂಧಿಸಿದಂತೆ ಅನೇಕ ದಾನ - ದತ್ತಿಗಳನ್ನು ನೀಡಿರುವರು. ಸಂಡೂರಿನ ಕುಮಾರಸ್ವಾಮಿ ಬೆಟ್ಟದಲ್ಲಿಯ ಹೊಯ್ಸಳ ಎರಡನೆಯ ವೀರಬಲ್ಲಾಳನ ಕಾಲದ ಶಾಸನದಲ್ಲಿ ರಾಷ್ಟ್ರಕೂಟರ ಅರಸ ಮೂರನೆಯ ಕೃಷ್ಣನ ಕಾಲದಲ್ಲಿ, ಕೆರೆಯಪಳ್ಳಿ ಗ್ರಾಮವನ್ನು ಷಣ್ಮುಖನಿಗೆ ದತ್ತಿ ಬಿಡಲಾಗಿತ್ತು. ಕ್ರಮೇಣ ಈ ದತ್ತಿ ನಿಂತು ಹೋಗಲು ಕ್ರಿ.ಶ. ೧೨೦೭ರಲ್ಲಿ ವೀರಬಲ್ಲಾಳನ ಆಜ್ಞೆಯಂತೆ ಪ್ರಧಾನಮಂತ್ರಿ ಮಹದೇವ ದಂಡನಾಯಕನು ಅದರ ಸ್ಥಾನಿಕ ವಿಷ್ಣುಕರ ಬ್ರಹ್ಮಚಾರಿಗೆ ಪುನಃ ದತ್ತಿ ಬಿಡುತ್ತಾನೆ. ಮತ್ತು ಇವರ ಶಾಸನಗಳು ಕೊಳಗಲ್ಲು, ಕುಡತಿನಿಗಳಲ್ಲಿ ಕಂಡುಬರುತ್ತವೆ. ರಾಷ್ಟ್ರಕೂಟರ ಅರಸ ಮೂರನೆ ಕೃಷ್ಣನ ಹಾಗೂ ಕೊಟ್ಟಿಗನ ಕಾಲದ ಕುಡತಿನಿ ಮತ್ತು ಕೊಳಗಲ್ಲಿನ ಶಾಸನಗಳಲ್ಲಿ 'ಕೊಳಗಲ್ಲಿನ ಪ್ರಭು ಗದಾಧರನು ಕಾರ್ತಿಕೇಯ ತಪೋವನದ ಅಧಿಕಾರಿಯಾಗಿದ್ದನು.' ಆತನು ಕೊಳಗಲ್ಲು ಮತ್ತು ಕುಡತಿನಿಗಳಲ್ಲಿ ಸ್ಕಂದದೇವನ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುತ್ತಾನೆ.[೪೫] ಇವರು ದೇವ ಕಾರ್ಯಗಳಿಗೆ ದತ್ತಿ ದಾನಗಳನ್ನು ಮಾಡಿದರೆಂದು ಈ ಶಾಸನಗಳಿಂದ ತಿಳಿದುಬರುತ್ತದೆ. ಇದರಿಂದ ರಾಷ್ಟ್ರಕೂಟರು ಈ ಪ್ರದೇಶವನ್ನು ಆಳಿದರಲ್ಲದೆ ಧರ್ಮ ಕಾರ್ಯಗಳಿಗೆ ಸಾಹಿತ್ಯ ಕಲೆಗೆ ವಿಶೇಷ ಗಮನ ಕೊಟ್ಟಿದ್ದಾರೆ.[೪೬]

ಕಲ್ಯಾಣ ಚಾಲುಕ್ಯರು

ರಾಷ್ಟ್ರಕೂಟರ ನಂತರ ಅಧಿಕಾರಕ್ಕೆ ಬಂದ ಕಲ್ಯಾಣ ಚಾಲುಕ್ಯರ ಆಡಳಿತಕ್ಕೆ ಈ ಪ್ರದೇಶ ಸಂಪೂರ್ಣವಾಗಿ ಸೇರಿತ್ತು. ಇವರ ಸಾಮಂತರಾದ ಪಾಂಡ್ಯರು ಮಹಾಮಂಡಳೇಶ್ವರರಾಗಿ ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗದಿಂದ ನೊಳಂಬವಾಡಿ ೩೨,೦೦೦ವನ್ನು ಆಳಿದರು. ಸಂಡೂರು ನೊಳಂಬವಾಡಿಯಲ್ಲಿ ಸೇರಲಾಗಿತ್ತು. ತುಂಗಭದ್ರ ನದಿಯ ಉತ್ತರಕ್ಕೆ ಕುರುಗೋಡು ಸಿಂಧರು ಆಡಳಿತ ಮಾಡುತ್ತಿದ್ದರು.[೪೭]

ಕಲ್ಯಾಣ ಚಾಲುಕ್ಯರು ಕುಮಾರಸ್ವಾಮಿಯ ಆರಾಧನೆಯನ್ನು ಮುಂದುವರಿಸಿಕೊಂಡು ಬಂದರು. ಇವರ ಕಾಲದಲ್ಲಿ ಕುಡತಿನಿಯ ಕುಮಾರಸ್ವಾಮಿ, ಸಂಡೂರಿನ ಕುಮಾರಸ್ವಾಮಿ ದೇವಾಲಯಗಳನ್ನು ಪುನಃ ನಿರ್ಮಾಣ ಮಾಡಲಾಯಿತು. ಕ್ರಿ.ಶ. ೧೦೯೯ರ ಮುದನೂರು (ಸುರಪುರ ತಾಲೂಕು, ಗುಲ್ಬರ್ಗ ಜಿಲ್ಲೆ) ಗ್ರಾಮದ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯ ಮುದನೂರು ಊರೊಡೆಯ ಪ್ರಮುಖವಾಗಿ ಐನೂರು ಮಹಾಜನರು ಕುಮಾರಸ್ವಾಮಿ ದಂಡನಾಯಕ ಪ್ರತಿಷ್ಠಾಪಿಸಿದ ಕುಮಾರಸ್ವಾಮಿ ದೇವರಿಗೆ ಅಂಗಭೋಗ, ರಂಗಭೋಗ, ನೈವೇದ್ಯ, ನಂದಾದೀವಿಗೆ ಹಾಗೂ ಜೀರ್ಣೋದ್ಧಾರ ಕಾರ್ಯಗಳು ನಿರಂತರವಾಗಿ ನಡೆಯಲು

ದಾನ ಬಿಟ್ಟ ಉಲ್ಲೇಖವಿದೆ. ಈ ಗ್ರಾಮದ (ಕ್ರಿ.ಶ. ೧೦೯೮) ಶಾಸನದಲ್ಲಿ ಕಲ್ಯಾಣ ಚಾಲುಕ್ಯರ ಅರಸ ತ್ರಿಭುವನಮಲ್ಲದೇವರ ಆಳ್ವಿಕೆಯ ಕಾಲದಲ್ಲಿ ಲೋಕ್ಕಿಪೊನ್ನದ ಬದಲಾಗಿ ಅದರ ಸಮತೂಕದ ನವಿಲಚ್ಚಿನ ಪೊನ್ನವೆಂಬ ಬಂಗಾರದ ನಾಣ್ಯಗಳನ್ನು ಅಚ್ಚು ಹಾಕಲು ಪ್ರಾರಂಭಿಸಿದರು. ಮತ್ತು ಶ್ರೀಸ್ವಾಮಿಗೆ ವರ್ಷಕ್ಕೆ ೧೨ ಪೊನ್ನುಗಳನ್ನು ಕೊಡುತ್ತಾರೆ. ಕುರುಗೋಡು, ಕುಡತಿನಿ ಗ್ರಾಮಗಳಲ್ಲಿ ನವಿಲು ಪೊನ್ನ ಎಂಬ ನಾಣ್ಯ ಹಾಗೂ ನವಿಲ ಕೋಲು ಎಂಬ ಅಳತೆ ಬಳಕೆಯಲ್ಲಿದ್ದವು.

ಚಾಲುಕ್ಯರ ಕಾಲದಲ್ಲಿ ಕೆಲವು ಶೈವ ದೇವಾಲಯಗಳಲ್ಲಿ ಕುಮಾರಸ್ವಾಮಿಯ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಈ ಅವಧಿಯಲ್ಲಿ ಕುಮಾರಸ್ವಾಮಿಯ ಆರಾಧನೆ ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿತು. ಸಂಡೂರು, ಕುಡತಿನಿಗಳಲ್ಲಿಯ ಕುಮಾರಸ್ವಾಮಿಯ ಕ್ಷೇತ್ರಗಳು ಪ್ರಮುಖ ಯಾತ್ರಾಸ್ಥಳಗಳಾಗಿದ್ದವು.[೪೮]

ಇವರ ಕಾಲದಲ್ಲಿ ಕುಮಾರಸ್ವಾಮಿ ದೇವಾಲಯವನ್ನು ವೇಸರ ಶೈಲಿಯಲ್ಲಿ ಕಟ್ಟಲಾಗಿದೆ. ಕುಮಾರಸ್ವಾಮಿ ದೇವಾಲಯ ಕಲ್ಯಾಣ ಚಾಲುಕ್ಯರ ಶೈಲಿಯ ೧೧ನೇ ಶತಮಾನದ ಶೈಲಿಯಲ್ಲಿ ಕಟ್ಟಲಾಗಿದೆ. ಇದರಿಂದ ಇವರ ಕಾಲದಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಅಲ್ಲದೆ ಕುಮಾರಸ್ವಾಮಿ ಮೂರ್ತಿಶಿಲ್ಪ ಸಹ ಕಲ್ಯಾಣ ಚಾಲುಕ್ಯರ ಕಾಲದ ಶೈಲಿಯಲ್ಲಿದೆ. ಇದರಿಂದ ಈ ಪ್ರದೇಶ ಕಲ್ಯಾಣ ಚಾಲುಕ್ಯರ ಆಡಳಿತಕ್ಕೆ ಸೇರಿದ್ದು, ಇಲ್ಲಿನ ಕಲೆ, ಸಾಹಿತ್ಯ, ಧರ್ಮ, ಸಾಂಸ್ಕೃತಿಕ ಬೆಳವಣಿಗೆಗೆ ಕಲ್ಯಾಣ ಚಾಲುಕ್ಯರು ಪ್ರೋತ್ಸಾಹ ನೀಡಿದ್ದಾರೆಂದು ಹೇಳಬಹುದು.[೪೯]

೨.೩.೩ ಹೊಯ್ಸಳ ಯುಗ (ಕ್ರಿ.ಶ. ೧೧ರಿಂದ ಕ್ರಿ.ಶ. ೧೩ನೆಯ ಶತಮಾನದವರೆಗೆ)

ಕಲ್ಯಾಣ ಚಾಲುಕ್ಯರ ನಂತರ ಕ್ರಿ.ಶ. ೧೧೦೮ರಲ್ಲಿ ಅಧಿಕಾರಕ್ಕೆ ಬಂದ ಹೊಯ್ಸಳರು ೧೩೪೨ರವರೆಗೆ ಆಳ್ವಿಕೆ ಮಾಡಿದರು.[೫೦] ಕ್ರಿ.ಶ. ೧೧೩೫ರಲ್ಲಿ ಉಚ್ಚಂಗಿದುರ್ಗವನ್ನು ಮುತ್ತಿ ನೊಳಂಬವಾಡಿ ೩೨೦೦೦ ವಶಪಡಿಸಿಕೊಂಡು, ತುಂಗಭದ್ರಾ ನದಿ ದಂಡೆಯವರೆಗೆ ಪೂರ್ಣ ಪ್ರದೇಶವನ್ನು ವಶಪಡಿಸಿಕೊಂಡರು. ಇವರ ಕಾಲದಲ್ಲಿ ಕುಮಾರಸ್ವಾಮಿಗೆ ಸಂಬಂಧಪಟ್ಟ ಇವರ ಕಾಲದ ಶಾಸನಗಳಲ್ಲಿ, ಒಂದು ಕುಮಾರಸ್ವಾಮಿ ಬೆಟ್ಟದ ಪಾರ್ವತಿ ದೇವಾಲಯದಲ್ಲಿಯೂ ಮತ್ತು ಮೂರು ಕುಡತಿನಿಗಳಲ್ಲಿಯೂ ಇವೆ.[೫೧] ಪಾರ್ವತಿ ದೇವಾಲಯದಲ್ಲಿಯ ಎರಡನೆಯ ವೀರಬಲ್ಲಾಳನ ಕ್ರಿ.ಶ. ೧೨೦೬ರ ಶಾಸನದಲ್ಲಿ ಕುಮಾರಸ್ವಾಮಿ ದೇವಾಲಯದ ದಾನವನ್ನು ಮಹಾದೇವ ದಂಡನಾಯಕನು ನವೀಕರಿಸುತ್ತಾನೆ.[೫೨] ರಾಷ್ಟ್ರಕೂಟರ ಮೂರನೇ ಕೃಷ್ಣನು ಕುಮಾರಸ್ವಾಮಿಗೆ ಕೆರೆಯಪಳ್ಳಿ ಗ್ರಾಮವನ್ನು ದಾನ ಬಿಟ್ಟಿದ್ದನ್ನು ಗಮನಿಸಿದರೆ, ಗದಾಧರನು ಇದೇ ಅವಧಿಯಲ್ಲಿ ಅಲ್ಲೂ ಕುಮಾರಸ್ವಾಮಿಯ ದೇವಾಲಯವನ್ನು ಕಟ್ಟಿಸಿದಂತೆ ಕಾಣುತ್ತದೆ. ಸಂಡೂರು ಕುಮಾರಸ್ವಾಮಿ ದೇವರಿಗೆ ಈ ಹಿಂದೆ ೩ನೇ ಕೃಷ್ಣನ ಕಾಲದಲ್ಲಿ ಬಿಟ್ಟ ಕೆರೆಯಪಳ್ಳಿ ಗ್ರಾಮದತ್ತಿ ನಿಂತು ಹೋಗಲು, ವೀರಬಲ್ಲಾಳನ ಆಜ್ಞೆಯಂತೆ ಪ್ರಧಾನಮಂತ್ರಿ ಮಹಾದೇವ ದಂಡನಾಯಕನು ಅದರ ಸ್ಥಾನಿಕ ವಿಷ್ಣುಕರ ಬ್ರಹ್ಮಚಾರಿಗೆ ಪುನಃ ದತ್ತಿ ಬಿಡುತ್ತಾನೆ.

ಕ್ರಿ.ಶ. ೧೨೧೮ರಲ್ಲಿ ತಲರ (ತಾಳೂರು)ದಲ್ಲಿ ಯಗವಟ್ಟೆಯ ಬೊಮ್ಮಗವುಡನು ಈಶ್ವರ ದೇವಾಲಯವನ್ನು ಕಟ್ಟಿಸುತ್ತಾನೆ. ಈ ದೇವಾಲಯವನ್ನು ಕಟ್ಟಿಸಿದ ಬೊಮ್ಮುಜನಿಗೆ ಭೂದಾನ ನೀಡಿದನು. ಇದು ಸಂಡೂರಿನ ಸಮೀಪದಲ್ಲಿದೆ.[೫೩]

ಕ್ರಿ.ಶ. ೧೨೨೪ರಲ್ಲಿ ವೀರಬಲ್ಲಾಳನ ದಂಡನಾಯಕ ಅಮಿತಯ್ಯನೆಂಬುವನು ಶ್ರೀಪುರದಲ್ಲಿ (ನಾರಿಹಳ್ಳಿ) ತ್ರಿಕೂಟ ದೇವಾಲಯವನ್ನು ಕಟ್ಟಿಸಿ, ಅದರಲ್ಲಿ ಅಮೃತೇಶ್ವರ, ವಾಮೇಶ್ವರ, ಲಕ್ಷ್ಮಿನಾರಾಯಣ ದೇವರುಗಳನ್ನು ಪ್ರತಿಷ್ಠಾಪಿಸುತ್ತಾನೆ. ಅಲ್ಲದೆ ಈ ದೇವಾಲಯದ ಪೂಜಾಕಾರ್ಯಕ್ಕಾಗಿ ಕೊಂಡಕಸಿಪುರವೆಂಬ ಗ್ರಾಮದಾನ ನೀಡುತ್ತಾನೆ.[೫೪]

ಕಾರ್ತಿಕೇಯ ತಪೋವನಾಧಿಪತಿ ವಿಷ್ಣುಕರ ಬ್ರಹ್ಮಚಾರಿಯ ಉಲ್ಲೇಖ ಕುಡತಿನಿ ಶಾಸನದಲ್ಲಿಯೂ ಇದೆ. ಇವರ ಕಾಲದಲ್ಲಿ ಕಾರ್ತಿಕೇಯನ ಕ್ಷೇತ್ರ ಮತ್ತಷ್ಟು ಪ್ರಚಾರಕ್ಕೆ ಬಂತು.[೫೫] ಈ ಆಧಾರಗಳಿಂದ ಹೊಯ್ಸಳರು ಸಂಡೂರು ಪ್ರದೇಶದಲ್ಲಿ ಸಾಂಸ್ಕೃತಿಕ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದಾರೆಂದು ತಿಳಿದುಬರುತ್ತದೆ.[೫೬]

೨.೩.೪ ವಿಜಯನಗರ ಯುಗ (ಕ್ರಿ.ಶ. ೧೪ನೆಯ ಶತಮಾನದಿಂದ ಈಚೆಗೆ)

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಸಂಡೂರು ವಿಶೇಷ ಪಾತ್ರ ವಹಿಸಿತ್ತು.[೫೬] ಇವರ ಕಾಲದಲ್ಲಿ ಸಂಡೂರು ಒಂದು ಪ್ರಮುಖ ಪಟ್ಟಣವಾಗಿತ್ತು. ಕುಡತಿನಿ ಸಂಡೂರು ಸುತ್ತಮುತ್ತಲಿನ ಕೆಲವು ಗ್ರಾಮಗಳಲ್ಲಿ ಅವರ ಕಾಲದ ಶಾಸನಗಳು ಕಂಡುಬರುತ್ತವೆ.[೫೭] ಸಂಡೂರು ಪಟ್ಟಣದ ಮಧ್ಯದಲ್ಲಿ ತಾರಕೇಶ್ವರ ದೇವಸ್ಥಾನದ ಸಮೀಪದಲ್ಲಿ ಕೃಷ್ಣದೇವರಾಯನ ಕ್ರಿ.ಶ. ೧೫೨೪ರ ಶಿಲಾಶಾಸನವಿದೆ.[೫೮] ರಾಮಘಡದಲ್ಲಿಯೂ ಕೃಷ್ಣದೇವರಾಯನ ಶಾಸನವಿದೆ. ಕುಮಾರರಾಮನ ಸ್ಮರಣೆಗಾಗಿ ಬೈಚಪ್ಪನಾಯಕ ಕಟ್ಟಿಸಿದ ಕುಮಾರರಾಮನ ದೇವಸ್ಥಾನವನ್ನು ಶ್ರೀಕೃಷ್ಣದೇವರಾಯ ದುರಸ್ತಿ ಮಾಡಿಸಿದನೆಂದು ತಿಳಿದುಬರುತ್ತದೆ. ಕುಡತಿನಿ ಶಾಸನದಲ್ಲಿ ವೀರಭದ್ರ ದೇವಾಲಯಕ್ಕೆ ದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಹಂಪಿ ಇವರ ರಾಜಧಾನಿಯಾಗಿದ್ದರಿಂದ ಈ ಪರ್ವತದ ಅರಣ್ಯಗಳಿಂದ ಕಟ್ಟಿಗೆ, ಗಣಿಗಳಿಂದ ಕಬ್ಬಿಣ ಸಿಗುತ್ತಿದ್ದುದರಿಂದ ಆಯುಧ ತಯಾರಿಕೆ ಮತ್ತು ಸೇನೆ ವಿಶ್ರಾಂತಿಗೆ ಯೋಗ್ಯ ಸ್ಥಳಗಳಾದವು.[೬೦]

ಕ್ರಿ.ಶ. ೧೫೨೩ರ ಕುರಿಕುಪ್ಪೆಯ ಸಂಸ್ಕೃತ ಶಾಸನ ಮತ್ತು ಇನ್ನೊಂದು ಕನ್ನಡ ಶಾಸನಗಳಲ್ಲಿ ಕೃಷ್ಣರಾಯನ ಉಲ್ಲೇಖವಿದ್ದು, ಹೆಗ್ಗರಸನ ಮಗ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ ಊರಿಗೆ ಅನಂತಸೇತು ಎಂದು ಹೆಸರಿಸಿದ್ದುದನ್ನು ಉಲ್ಲೇಖಿಸಿದೆ. ಹಾಗೂ ಕುರಿಕುಪ್ಪೆ ಗ್ರಾಮದ ಬೆನಕರಸನು ವಿರೂಪಾಕ್ಷ ದೇವಾಲಯ ಕಟ್ಟಿಸಿ ಬಸವಾದೀಕ್ಷಿತರ ಭೂಮಿಯನ್ನು ಕ್ರಮವಾಗಿ ಪಡೆದು ದೇವರ ಕಾರ್ಯಕ್ಕೆ ದತ್ತಿ ಬಿಡುತ್ತಾನೆ.[೬೧]

ಕ್ರಿ.ಶ. ೧೫೭೯ರ ಅನೇಕ ಶಾಸನಗಳು ಗಮನಾರ್ಹವಾದವು. ಚಿಕ್ಕಕೆರೆ ಯಾಗಿನಹಳ್ಳಿ, ತಿಮ್ಮಲಾಪುರ, ಸಂಡೂರು, ಪೋತಲಕಟ್ಟೆ, ಮಗಿಮಾವಿನಹಳ್ಳಿ ಚಿಲಕನಹಟ್ಟಿ, ಹಾರುವನಹಳ್ಳಿ (ಸೂಂಡೂರು ೩೩, ಹೊಸಪೇಟೆ

[illegible]

೫೦ - ೬೨) ಮುಂತಾದ ಗ್ರಾಮಗಳಲ್ಲಿನ ಶಾಸನಗಳು ತಿಳಿಸುವಂತೆ ಅಚ್ಯುತರಾಯನ ಕೈಕೆಳಗೆ ಅಧಿಕಾರಿಯಾಗಿದ್ದ ಬಯಕಾರ ರಾಮಪ್ಪಯ್ಯನು ತನ್ನ ತಂದೆ ತಿಮ್ಮರಸಯ್ಯ, ತಾಯಿ ಹಿರಿಯ ಲಕ್ಕರಸಮ್ಮ, ತನ್ನ ಚಿಕ್ಕಪ್ಪ ಬಾಚರಸಯ್ಯ, ಚಿಕ್ಕಮ್ಮ ಅಂಮಾಜಮ್ಮ, ತನ್ನ ತಮ್ಮ ಕೃಷ್ಣಪ್ಪ, ತನ್ನ ಮಗ ಶಿಂಗಾಲಯ್ಯ ಮುಂತಾದವರಿಗೆ ಪುಣ್ಯವಾಗಬೇಕೆಂದು ಗೋಪಿನಾಥ ದೇವಾಲಯ, ಬಾಚೇಶ್ವರ, ಅಂಮೇಶ್ವರ, ಕೃಷ್ಣೇಶ್ವರ ಮೊದಲಾದ ದೇವಾಲಯಗಳನ್ನು ಶಿಂಗಾಲಯ್ಯನ ಹೆಸರಿನಲ್ಲಿ ಶಿಂಗಾಲಯ್ಯನ ಬಾವಿಯನ್ನು ತೋಡಿಸುತ್ತಾನೆ. ಇವರೆಲ್ಲರ ಹೆಸರಿನಲ್ಲಿ ಸುಮಾರು ೧೬ ಕೆರೆಗಳನ್ನು ಕಟ್ಟಿಸುತ್ತಾನೆ. ಇವನ ಕೈಕೆಳಗೆ ಅಧಿಕಾರಿ ನಮಶ್ಶಿವಾಯ ಎಂಬುವವನು ತಿಂಮಲಾಪುರದಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟಿಸುತ್ತಾನೆ. ಈ ಬಯಕಾರ ರಾಮಪ್ಪ ಸದಾಶಿವದೇವರಾಯನ ಕಾಲದಲ್ಲೂ ಇದ್ದು ಅನೇಕ ಕೆರೆಗಳನ್ನು ಕಟ್ಟಿಸುತ್ತಾನೆ. ತನ್ನ ಹೆಸರಿನಲ್ಲಿ ತನ್ನ ಹೆಂಡತಿ ಹೆಸರಿನಲ್ಲಿ ನೆಡು ತೋಪುಗಳನ್ನು ಹಾಕಿಸುತ್ತಾನೆ. ಹೀಗೆ ಈ ಜಿಲ್ಲೆಯ ಈಗಿನ ಸಂಡೂರು ತಾಲೂಕು, ಹಗರಿಬೊಮ್ಮನಹಳ್ಳಿ ತಾಲೂಕು, ಹೊಸಪೇಟೆ ತಾಲೂಕುಗಳ ವ್ಯಾಪ್ತಿಯಲ್ಲಿ ಇಂದಿಗೂ ಇವನು ಕಟ್ಟಿಸಿದ ಕೆರೆ ಹಾಗೂ ದೇವಾಲಯಗಳನ್ನು ಕಾಣಬಹುದಾಗಿದೆ. ಕ್ರಿ.ಶ. ೧೫೪೦ರಲ್ಲಿ (ಹೊಸಪೇಟೆ ೧೭) ಅಚ್ಯುತನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಜಂಬುನಾಥ ದೇವರಿಗೆ ತಿರುಮಲಾದೇವಿ ಪಟ್ಟಣಕ್ಕೆ ಸಲ್ಲುವ ಕಲುಹಳ್ಳಿ ಗ್ರಾಮವನ್ನು ದಾನ ನೀಡುತ್ತಾನೆ. ಇತನು ಹೊಸಪೇಟೆಯ ಸುತ್ತಮುತ್ತಲಿನ ಪ್ರದೇಶವನ್ನು ನೋಡಿಕೊಳ್ಳುತ್ತಿದ್ದ. ಈತನ ಕಾರ್ಯ ಚಟುವಟಿಕೆಗಳನ್ನು ಉಲ್ಲೇಖಿಸುವ ಅನೇಕ ಶಾಸನಗಳು ಹೊಸಪೇಟೆ, ಕೂಡ್ಲಿಗಿ ಮತ್ತು ಸಂಡೂರು ತಾಲೂಕುಗಳಲ್ಲಿವೆ. ಈ ರಾಮಪ್ಪಯ್ಯನು ಸದಾಶಿವರಾಯನ ಕಾಲದಲ್ಲೂ ಅಧಿಕಾರದಲ್ಲಿ ಮುಂದುವರೆಯುತ್ತಾನೆ.[೬೨]

ಬಯಕಾರ ರಾಮಪ್ಪಯ್ಯನ ವಂಶಾವಳಿ

ಬಯಕಾರ ರಾಮಪ್ಪಯ್ಯ

ಸಿಂಗಯ

ಭಾವಯ ಮಂತ್ರಿ

ರಾಮಮಂತ್ರಿ ಹೆಂಡತಿ ತೆಲುಗಮಾಂಬ

ಹಿರಿಯ ತಿಮ್ಮರಸಯ್ಯ ಹೆಂಡತಿ ಲಕ್ಕಾಂಬಿಕೆ | ಬಾಚರಸ ಹೆಂಡತಿ ಅಂಮಾಜಮ್ಮ | ಸುರೀಂದ್ರ | ಭಾಸ್ಕರ | ಭಾವಯ

ಬಯಕಾರ ರಾಮಪ್ಪಯ್ಯ ಹೆಂಡತಿ ವೀರಮ್ಮ | ಕೃಷ್ಣಪ್ಪ

ಸಿಂಗಾಲಯ್ಯ | ಅಕ್ಕಪ್ಪ | ಲಕ್ಕರಸಮ್ಮ | ಅಚುತಮ್ಮ

[illegible]

ಕ್ರಿ.ಶ. ೧೫೪೪ರ ಯಳಪೆ, ಸಂಡೂರು (ಬಳ್ಳಾರಿ ೬೮, ಸಂಡೂರು ೧೧) ಶಾಸನಗಳಲ್ಲಿ ನಾಯಿಂದರಿಗೆ ತೆರಿಗೆ ವಿನಾಯ್ತಿ ನೀಡಿದ ಉಲ್ಲೇಖವಿದೆ.[೬೩]

ಇವರ ಕಾಲದಲ್ಲಿ ಸಂಡೂರು ಒಂದು ಪ್ರಮುಖ ವ್ಯಾಪಾರ ಕೇಂದ್ರವೆಂದು ವರ್ಣಿಸಲಾಗಿದೆ. ಬಹುಶಃ ಯುದ್ಧ ಸಾಮಾಗ್ರಿಗಳಾದ ಆಯುಧಗಳ ತಯಾರಿಕೆ ಮತ್ತು ಮಾರಾಟವಿರಬಹುದು. ಏಕೆಂದರೆ ಇಲ್ಲಿನ ಅನೇಕ ಪ್ರದೇಶಗಳಲ್ಲಿ ಕುಲುಮೆಗಳಿದ್ದು, ಬೆಟ್ಟಗಳೋಪಾದಿಯಲ್ಲಿ ಬೂದಿ ತುಂಬಿದ ತಾಣಗಳಿವೆ. ಇವು ಕಬ್ಬಿಣ ತಯಾರಿಸುವ ಕೇಂದ್ರಗಳಾಗಿರಬಹುದು. ಈ ಪ್ರದೇಶ ವಿಜಯನಗರದ ರಾಜಧಾನಿಗೆ ಸಮೀಪದಲ್ಲಿದ್ದು ಭಯಾನಕ ಬೆಟ್ಟ, ಗುಡ್ಡ, ಕಣಿವೆಗಳು ರಾಜಧಾನಿಗೆ ರಕ್ಷಣೆ ಒದಗಿಸಿತ್ತು. ಯುದ್ಧ ಸಾಮಾಗ್ರಿಗಳನ್ನು ತಯಾರಿಸುವ ರಹಸ್ಯ ಕೇಂದ್ರಗಳಾಗಿದ್ದವು. ಇಲ್ಲಿ ಹೆಚ್ಚು ಹುಲ್ಲುಗಾವಲಿದ್ದುದರಿಂದ ಕುದುರೆ, ಆನೆಗಳ ಸೈನ್ಯದ ವಿಶ್ರಾಂತಿ ತಾಣಗಳಿರಬಹುದು. ಅರಣ್ಯದಿಂದ ಕಟ್ಟಿಗೆ, ಗಣಿಗಳಲ್ಲಿ ಕಬ್ಬಿಣ ಸಿಗುತ್ತಿದ್ದರಿಂದ ಆಯುಧ ತಯಾರಿಕೆ ಕೇಂದ್ರಗಳು ಸೇನೆ ವಿಶ್ರಾಂತಿಗೆ ಯೋಗ್ಯ ಸ್ಥಳಗಳಾದವು.

ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯದ ಒಂದು ಪ್ರಮುಖ ಪಟ್ಟಣವಾಗಿ ವ್ಯಾಪಾರ ಕೇಂದ್ರವಾಗಿತ್ತು. ೧೩೩೬ ರಿಂದ ೧೫೫೬ರ ವರೆಗೆ ವಿಜಯನಗರ ಅರಸರ ಆಡಳಿತಕ್ಕೊಳಪಟ್ಟಿತ್ತು. ಕ್ರಿ.ಶ. ೧೫೫೬ರ ತಾಳಿಕೋಟೆ ಯುದ್ಧದ ನಂತರ ಈ ಸಾಮ್ರಾಜ್ಯ ಪತನ ಹೊಂದಿತು. ನಂತರ ಸೇನಾನಿಗಳು ಸಾಮಂತರು ಬೇರೆ ಬೇರೆ ಭಾಗಗಳನ್ನು ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದರು.[೬೪] ಕೂಡ್ಲಿಗಿ, ಉಜ್ಜನಿ ಮತ್ತು ಸಂಡೂರು ಜರಿಮಲೆ ಪಾಳೆಗಾರರ ಆಳ್ವಿಕೆಗೆ ಒಳಪಟ್ಟವು. ಕ್ರಿ.ಶ. ೧೬೭೮ರಲ್ಲಿ ಬಳ್ಳಾರಿ ಸುತ್ತಮುತ್ತಲಿನ ಪ್ರದೇಶ ವಿಜಾಪುರ ಸುಲ್ತಾನನಿಂದ ಶಿವಾಜಿ ವಶಪಡಿಸಿಕೊಂಡನು. ಮರಾಠ ಮನೆತನದ ದಾಯಾದಿಗಳಾದ ಘೋರ್ಪಡೆಯವರು ೧೭೨೮ರಲ್ಲಿ ಸಂಡೂರನ್ನು ಜರಿಮಲೆ ಪಾಳೆಗಾರರಿಂದ ವಶಪಡಿಸಿಕೊಂಡು ಕ್ರಿ.ಶ. ೧೯೫೬ರ ವರೆಗೆ ರಾಜಪ್ರಭುತ್ವ ಮಾಡಿದರು.[೬೫]

೨.೪ ಪಾಳೆಯಗಾರರ ಕಾಲ

೨.೪.೧ ಕುಮ್ಮಟದ ಪಾಳೆಯಗಾರರು

ಕುಮ್ಮಟದ ಪಾಳೆಗಾರರು ಸುಮಾರು ಅರ್ಧ ಶತಮಾನಗಳವರೆಗೆ ಬಾಳಿ, ಬದುಕಿದ ಕಂಪಿಲಿ ಅಥವಾ ಕುಮ್ಮಟ ರಾಜ್ಯದ ಘಟನೆಯು ತುಂಬ ಕುತೂಹಲಕಾರಿಯೂ, ಆಶ್ಚರ್ಯಕರವೂ ಆಗಿದೆ. ಈಗಿನ ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ಅಭೇದ್ಯವಾದ ಬೆಟ್ಟಗುಡ್ಡಗಳ ಮಧ್ಯೆ, ತುಂಗಭದ್ರೆಯ ಉತ್ತರಕ್ಕೆ ಭದ್ರವಾದ ಕೋಟೆಯುಳ್ಳ ಕಮ್ಮಟ ಇವರ ರಾಜಧಾನಿಯಾಗಿದೆ.

ತುಂಗಭದ್ರೆಯ ದಕ್ಷಿಣಕ್ಕೆ ಈಗಿನ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಕಂಪಿಲಿ ಅದರ ವಶದಲ್ಲಿದ್ದ ಒಂದು ಮುಖ್ಯ ಸ್ಥಳವಾಗಿತ್ತು. ಆದರೆ ಅದು ಎಂದೂ ಇದರ ರಾಜಧಾನಿಯಾಗಿರಲಿಲ್ಲ. ಆದರೆ

ಕರ್ನಾಟಕದ ದಕ್ಷಿಣೋತ್ತರ ಭಾಗಗಳನ್ನು ಕೂಡಿಸುವ ಹಂಪೆಯ ಪರಿಸರದ ಈ ಕಂಪಿಲಿಗೆ ಹಿರಿದಾದ ಹಿನ್ನೆಲೆ ಇದೆ.

೧೧ನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಒಂದು ಪ್ರಾಂತೀಯ ರಾಜಧಾನಿಯಾದ ಕಂಪಿಲಿ ಒಂದು ಪರಂಪರೆಯನ್ನು, ಪ್ರಸಿದ್ಧಿಯನ್ನು ಪಡೆದಿತ್ತು. ಆದ್ದರಿಂದ ಚಾಲುಕ್ಯರು ಆಳಿದ ಅನೇಕ ದಶಕಗಳ ನಂತರ ತುಂಗಭದ್ರೆಯ ದಕ್ಷಿಣೋತ್ತರದ ಈ ಪ್ರದೇಶದ ಮೇಲೆ ಈ ಮನೆತನದವರ ಅಧಿಕಾರ ಸ್ಥಾಪಿತವಾದರೂ, ಇವರದು ಕಂಪಿಲಿಯ ರಾಜ್ಯವೆಂದು ಕರೆಯಲ್ಪಟ್ಟಿರುವುದು. ಇವರ ಎರಡನೆಯ ನಾಯಕನಿಗೆ ಕಂಪಿಲರಾಯನೆಂಬ ಹೆಸರೂ ಇದ್ದಿತು.

ಸೇವುಣರು, ಕಾಕತೀಯರು ಹಾಗೂ ಹೊಯ್ಸಳರು ಇವರ ಪೈಪೋಟಿಯ ತ್ರಿಕೋಣದ ಮಧ್ಯೆ ತಡೆ - ರಾಜ್ಯ (Buffer State) ಆಗಿತ್ತು. ಇದು ತನ್ನದೇ ಆದ ಸ್ವಂತಿಕೆಯನ್ನು, ಪ್ರತ್ಯೇಕತೆಯನ್ನು ಉಳಿಸಿ, ಬೆಳೆಸಿಕೊಳ್ಳುವಲ್ಲಿ ಸಮರ್ಥವಾಗಿ ಹೋರಾಟ ನಡೆಸಿದ್ದು ಒಂದು ಅಸಾಮಾನ್ಯ ಸಂಗತಿಯಾಗಿದೆ. ಈ ಹೋರಾಟದಲ್ಲಿ ಈ ನಾಯಕರು ಧೈರ್ಯದಿಂದ ವ್ಯವಹರಿಸುತ್ತಿದ್ದರು. ಪರರ ಪಾದ ಪದ್ಮೋಪ ಜೀವಿಗಳಾಗಿರಲಿಲ್ಲ.

ಸೇವುಣ ಮತ್ತು ಹೊಯ್ಸಳರ ನಡುವೆ ಹೊಯ್ಸಳರ ರಾಜಧಾನಿಯ ಬಳಿಯ ಬೆಳವಡಿಯಲ್ಲಿ ನಡೆದ ೧೨೭೬ರ ಘೋರ ಯುದ್ಧದಲ್ಲಿ ಇವರು ಹೊಯ್ಸಳರ ಪರವಾಗಿ ಹೋರಾಡಿರುವುದು ತಿಳಿಯುತ್ತದೆ. ಈ ಮೂಲಕ ಮೊಟ್ಟಮೊದಲ ಬಾರಿಗೆ ಇವರ ಪರಿಚಯ ನಮಗಾಗುತ್ತದೆ.

ಕುಮ್ಮಟದುರ್ಗದ ಮುಮ್ಮಡಿ ಸಿಂಗೇಯನಾಯಕನ ಮಗ ಖಂಡೇರಾಯ (ಕಂಪಿಲರಾಯ) ಹೊಯ್ಸಳರಿಗೆ ಬಂದೊದಗಿದ್ದ ಈ ದೊಡ್ಡ ವಿಪತ್ತಿನ ಕಾಲದಲ್ಲಿ ಅವರಿಗೆ ಸಹಾಯಕನಾಗಿ ಸೇವುಣರ ಸೈನ್ಯವನ್ನು ಬೆನ್ನಟ್ಟಿದ. ಹೊಯ್ಸಳರ ಪಕ್ಷಪಾತಿಯಾಗಿದ್ದ ಈತನು ಸೇವುಣರ ವಿರೋಧಿಯಾಗಿದ್ದ. ಮುಮ್ಮಡಿ ಸಿಂಗೇಯ ನಾಯಕನ ಮೇಲೆ ೧೨೮೦ರಲ್ಲಿ ಸೇವುಣರು ದಾಳಿ ಮಾಡಿದಾಗ ಕುರುಗೋಡಿನಲ್ಲಿ ನಡೆದ ಯುದ್ಧದಲ್ಲಿ ಸೇವುಣರ ಸೇನಾಪತಿ ಚಾವುಂಡರಸನು ಕೊಲ್ಲಲ್ಪಟ್ಟನು. ಕುಮ್ಮಟದವರನ್ನು ಸೋಲಿಸಲು ಸೇವುಣರು ಆನಂತರವೂ ಎರಡು ಬಾರಿ ಪ್ರಯತ್ನ ಮಾಡಿ ವಿಫಲರಾದರು. ಸುಮಾರು ೧೨೮೮ ರಿಂದ ಈ ವಿರೋಧಿಗಳ ನಡುವೆ ಸ್ನೇಹ ಕುದುರಿತು. ೧೩೦೩ರಲ್ಲಿ ಹೊಳಲ್ಕೆರೆಯಲ್ಲಿ ಸೇವುಣರಿಗೂ, ಹೊಯ್ಸಳರಿಗೂ ನಡೆದ ಕದನದಲ್ಲಿ ಕಂಪಿಲರಾಯನು ಸೇವುಣರ ಪಕ್ಷದಲ್ಲಿ ಸೇನಾಪತಿತ್ವ ವಹಿಸಿದ್ದ. ಈ ಕದನದಲ್ಲಿ ಮೂರನೇ ಬಲ್ಲಾಳನಿಗೆ ಸಂಬಂಧಿಯಾದ ಸೇನಾನಿ ಸೋಮೆಯ ದಂಡನಾಯಕ ಮೃತನಾದ. ಕುಮ್ಮಟರು ಮತ್ತು ಹೊಯ್ಸಳರ ಮಧ್ಯೆ ಉಂಟಾದ ದ್ವೇಷ ಮುಂದುವರಿದು, ಮೂರನೇ ಬಲ್ಲಾಳ ೧೩೨೦ರಲ್ಲಿ ದೊರವಡಿಯಲ್ಲಿ ಕಂಪಿಲರಾಯನನ್ನು ದಂಡಿಸಲು ಪ್ರಯತ್ನಿಸಿದರೂ, ಈ ಕದನ ನಿರ್ಣಾಯಕವಾದಂತೆ ಕಾಣಲಿಲ್ಲ. ಕಾಕತೀಯ ಪ್ರತಾಪರುದ್ರನ ಆಕ್ರಮಣವನ್ನು

ಕಂಪಿಲರು ಎದುರಿಸಿದರು. ಈ ಮಧ್ಯೆ ೧೩೧೫ರಲ್ಲಿ ಕುಮ್ಮಟದುರ್ಗಕ್ಕೆ ಮುತ್ತಿಗೆ ಹಾಕಿದ ಅಲ್ಲಾವುದ್ದೀನ್ ಖಿಲ್ಜಿಯ ಪ್ರಬಲ ಸೇನಾನಿ ಮಲಿಕ್ ನಾಯಿಬ್ ಕಾಫೂರನೂ ಹತಾಶನಾಗಿ ಹಿಂತಿರುಗಬೇಕಾಯಿತು.

ಮೇಲ್ಕಂಡ ಮುಮ್ಮಡಿ ಸಿಂಗೇಯನಾಯಕನ ಪೂರ್ವಜರು ಯಾರು ಎನ್ನುವುದರ ಬಗ್ಗೆ ಸ್ಪಷ್ಟವಾದ ಮಾಹಿತಿ ತಿಳಿದುಬಂದಿಲ್ಲ. ಸುಮಾರು ೨೫೦ ವರ್ಷಗಳ ನಂತರ ನಂಜುಂಡು ಕವಿ ವಿರಚಿತ 'ರಾಮನಾಥ ಚರಿತ ಸಾಂಗತ್ಯ'ದಲ್ಲಿ ಅವರ ಮೂಲದ ಬಗ್ಗೆ ಒಂದು ಐತಿಹ್ಯ ಬಂದಿದೆ. ಅದರ ಪ್ರಕಾರ ಸೇವುಣ ರಾಜಕುಮಾರನೊಬ್ಬ 'ಪುಳಿಂದ' ಯುವತಿಯನ್ನು ಮದುವೆಯಾಗಿದ್ದರಿಂದ ಬಹಿಷ್ಕರಿಸಲ್ಪಟ್ಟು 'ಚಿತ್ರಕೂಟ ದುರ್ಗ'ದ ದೊರೆಯನ್ನು ಆಶ್ರಯಿಸಿದ ಮತ್ತು ಈ (ಅರೆ ಸೇವುಣರ) ವಂಶದಲ್ಲಿ ಮುಮ್ಮಡಿ ಸಿಂಗೇಯನಾಯಕನ ಜನನವಾಯಿತು. ಇದಕ್ಕೆ ಐತಿಹಾಸಿಕ ಆಧಾರ ಕಂಡುಬಂದಿಲ್ಲವಾದ್ದರಿಂದ ಈ ಹೇಳಿಕೆ ಕಾಲ್ಪನಿಕವಾಗಿರಬಹುದು.

ಕುಮ್ಮಟದುರ್ಗದಲ್ಲಿ ಇತ್ತೀಚೆಗೆ ಕಂಡುಬಂದ ಕ್ರಿ.ಶ. ೧೩೧೫ರ ಮೇ ೧೪ರ ವೀರಗಲ್ಲಿನ ಶಾಸನದ ಆಧಾರದ ಮೇಲೆ ಕಂಪಿಲದೇವನು ಹೊಯ್ಸಳ ವಂಶದ ಒಂದು ಶಾಖೆಗೆ ಸಂಬಂಧಪಟ್ಟವನೆಂದು ತಿಳಿದುಬರುತ್ತದೆ. "ಯಾದವ ನಾರಾಯಣ ಬುಜಬಳಪ (ರಾ)ಕ್ರಮ ಪ್ರತಾಪ ಚಕ್ರವರ್ತಿ ಶ್ರೀಮನು ಮಹಾಮಂ (ಡಲಿಕ) ಹೊಯ್ಯಸ(ಣ) ವೀರ ಕಂಪಿಲದೇವನು ಕುಮ್ಮಟದಲ್ಲಿ ರಾಜ್ಯಂಗೆಯುತಿರೆ ....." ಎಂಬ ಅದರ ಒಕ್ಕಣಿಕೆ ಗಮನಾರ್ಹವಾಗಿದೆ. ಮಹಾ ಮಂ (ಡಲಿಕ) ಎಂಬುದು ಅದರಲ್ಲಿದೆ ಎಂಬುದನ್ನು ಗಮನಿಸಬೇಕು.

ಎಂಟು ವರ್ಷಗಳ ನಂತರ (ಕ್ರಿ.ಶ. ೧೩೨೩ರ) ಇನ್ನೊಂದು ವೀರಗಲ್ಲು ಶಾಸನ ರಾಮಘಡದ ರಾಮ ದೇವಾಲಯದಲ್ಲಿ ಜಿ. ವರದರಾಜರಾವ್ ಅವರು ಶಾಸನತಜ್ಞ ಜಿ.ಎಸ್. ಗಾಯಿ ಅವರ ಸಹಾಯದಿಂದ ಉಲ್ಲೇಖಿಸಿದ್ದನ್ನು ಸೀತಾರಾಮ ಜಾಗೀರ್‌ದಾರ್‌ರು ವಿದ್ವಾಂಸರ ಗಮನಕ್ಕೆ ತಂದಿದ್ದಾರೆ. ಇದರಲ್ಲಿ "ಶ್ರೀ ವೀರ ಕಂಪಿಲದೇವನ ಮೇಲೆ ಬಲ್ಲಾಳರಾಯನು (ದಂಡೆತ್ತಿ) ಬಂದಲಿ ಯಿಬ್ಬರು ದಾಯದ ದಂಡಿನೊಳಗೆ ದಂಡಿನ ಬಯಿಚಯ್ಯನು ....." ಎಂಬ ಉಲ್ಲೇಖ ಬಂದಿದೆ. ಇವೆರಡನ್ನೂ ಒಟ್ಟಿಗೆ ಸೇರಿಸಿದರೆ, ಅವು ಪರಸ್ಪರ ಪೂರಕವಾಗಿ ಮುಮ್ಮಡಿ ಸಿಂಗೇಯನಾಯಕನ ಮೂಲವು ಹೊಯ್ಸಳ ವಂಶದ ಒಂದು ಶಾಖೆಯಲ್ಲಿ ಇದ್ದಿರಬಹುದೆಂದು ಕಾಣುತ್ತದೆ. ಆದರೆ ಇವರು ಎಲ್ಲಿಂಗ, ಯಾವಾಗ ಬಂದು ಇಲ್ಲಿ ನೆಲೆಸಿದರು ಎನ್ನುವ ಬಗ್ಗೆ ಸರಿಯಾದ ಮಾಹಿತಿ ಇಲ್ಲ.

ಸುಮಾರು ೧೨೩೫ರಲ್ಲಿ ಪಟ್ಟಕ್ಕೆ ಬಂದ ಹೊಯ್ಸಳ ವೀರ ಸೋಮೇಶ್ವರನು ಹೊಯ್ಸಳ ಚಕ್ರಾಧಿಪತ್ಯವನ್ನು ತನ್ನ ಇಬ್ಬರು ಮಕ್ಕಳಾದ ನರಸಿಂಹ ಮತ್ತು ರಾಮನಾಥರಿಗೆ ಇಬ್ಭಾಗ ಮಾಡಿ ಚಿಕ್ಕವನಾದ ರಾಮನಾಥನಿಗೆ ತಮಿಳುನಾಡಿನ ಭಾಗವನ್ನು ವಹಿಸಿಕೊಟ್ಟದ್ದನ್ನೂ, ಈ ಅಣ್ಣ - ತಮ್ಮಂದಿರಲ್ಲಿ ಘರ್ಷಣೆ ನಡೆಯುತ್ತಿದ್ದುದನ್ನೂ, ಕಂಪಿಲರಾಯನ ಮಗನ ಹೆಸರು ಕುಮಾರ ರಾಮನಾಥ ಎನ್ನುವುದನ್ನೂ ಗಮನಿಸಿ, ಹೊಯ್ಸಳ ರಾಮನಾಥನ ಶಾಖೆಯ ಸಂತತಿ ಇದು ಎಂದು ಮೇಲ್ಕಂಡ ಮೂವರು ವಿದ್ವಾಂಸರು ತರ್ಕಿಸಿದ್ದಾರೆ.

ಪ್ರಬಲ ರಾಜರಾಗಿದ್ದ ಸೇವುಣರು, ಕಾಕತೀಯರು, ಪಾಂಡ್ಯರು ನಾಶವಾಗಿ ಮುಮ್ಮಡಿ ಬಲ್ಲಾಳನೂ ಬಗ್ಗಿದರೂ, ಕಂಪಿಲಿ ಪುಟ್ಟ ರಾಜ್ಯವಾದರೂ ಇನ್ನೂ ತಲೆ ಎತ್ತಿ ನಿಂತಿತ್ತು. ಕಂಪಿಲರು ಸುಲ್ತಾನ್ ಮಹಮ್ಮದ್ ಬಿನ್ ತುಘಲಕ್‌ನ ಅಧಿಕಾರಿಗಳಿಗೆ ಕಪ್ಪಕಾಣಿಕೆಗಳನ್ನು ಕೊಡಲು ನಿರಾಕರಿಸಿದರಲ್ಲದೆ, ಅವನ ವಿರುದ್ಧ ಬಂಡೆದ್ದ ಅವನ ಸೋದರ ಸಂಬಂಧಿ ಬಹಾ-ಉದ್-ದೀನ್ ಗುರ್ ಶಪ್ಪನಿಗೂ ಅವನ ಸಂಸಾರಕ್ಕೂ ಆಶ್ರಯ ನೀಡಿದ್ದು, ಶರಣಾಗತರಿಗೆ ರಕ್ಷಣೆ ನೀಡುವ ಪುರಾತನ ಸತ್ ಸಂಪ್ರದಾಯಕ್ಕೆ ಅನುಗುಣವಾಗಿತ್ತು.

ಸುಲ್ತಾನನು ದೇವಗಿರಿಯಲ್ಲಿ ಠಾಣ್ಯ ಹಾಕಿ, ಕಳುಹಿಸಿದ ಪಡೆ ಎರಡು ಬಾರಿ ದಾಳಿಯಲ್ಲಿ ಸೋತು ಹಿಂತಿರುಗಲು, ಸೇನಾನಿ ಮಲಿಕ್ ಝೂದಾನ ಮುಂದಾಳತ್ವದಲ್ಲಿ ಮೂರನೆಯ ಬಾರಿ ಮತ್ತಷ್ಟು ಪ್ರಬಲವಾಗಿ ಮುತ್ತಿಗೆ ಹಾಕಿದಾಗ ಕುಮ್ಮಟದ ಘೋರ ಪ್ರತಿಭಟನೆ, ಶೌರ್ಯ - ಸಾಹಸ, ಬಲಿದಾನ ದಂಗು ಬಡಿಸುವಂಥದು, ಚಿರಸ್ಮರಣೀಯವಾದದ್ದು. ಕಂಪಿಲರಾಯ ಮತ್ತು ಕುಮಾರ ರಾಮನಾಥ ಅನೇಕ ಸೈನ್ಯಾಧಿಕಾರಿಗಳು, ಸೈನಿಕರು ಕೋಟೆಯಿಂದ ಹೊರಬಂದು ರಣರಂಗದಲ್ಲಿ ವೀರತನದಿಂದ ಹೋರಾಡಿ ಮಡಿಯುವರು. ಅವರ ಮಡದಿಯರು ಮಾನಭಂಗಕ್ಕಿಂತ ಮರಣವೇ ಲೇಸೆಂದು ಸಾಮೂಹಿಕವಾಗಿ ಅಗ್ನಿಗೆ ಆಹುತಿಯಾಗುತ್ತಾರೆ.

ಇನ್ನೊಂದು ಆಶ್ಚರ್ಯದ ಸಂಗತಿಯೆಂದರೆ ಇಂತಹ ದುರಂತದ ಸನ್ನಿವೇಶದಲ್ಲಿಯೂ ಪ್ರಜೆಗಳು ಎದೆಗುಂದದೆ ಬಲಿಷ್ಠ ವಿಜಯಿ ಸುಲ್ತಾನನಿಂದ ನೇಮಿಸಲ್ಪಟ್ಟ ರಾಜ್ಯಪಾಲ ಮಲಿಕ್ ನಾಯಿಬ್ ಮಹಮ್ಮದನಿಗೆ ಸಹಕಾರ ನೀಡದೆ, ಸರಕುಗಳನ್ನು ಒದಗಿಸದೆ, ತೆರಿಗೆಗಳನ್ನು ಕೊಡದೆ, ಇಲ್ಲಿ ಅವನ ಆಳ್ವಿಕೆಯನ್ನು ಅಸಾಧ್ಯ ಮಾಡಿದರು. ಸುಲ್ತಾನನ ಪ್ರಾಂತಾಧಿಕಾರಿ ಪಲಾಯನ ಮಾಡಬೇಕಾಯಿತು. ಗೆದ್ದವರಿಗೆ ಸೋತವರಿಂದ ಇಂಥ ಅಸಹಕಾರ ಅತಿ ವಿರಳ. ಕಂಪಿಲರ ಮಹಾಬಲಿದಾನದಿಂದ ಜನರಲ್ಲಿ ಹೊಸ ಜಾಗೃತಿ, ಚೈತನ್ಯ, ಆತ್ಮವಿಶ್ವಾಸ, ಧೈರ್ಯ ಉಂಟಾಗಲು ಕಾರಣವಾಗಿ ಹೊಸ ಐತಿಹಾಸಿಕ ಅಧ್ಯಾಯಕ್ಕೆ ನಾಂದಿಯಾಯಿತು.

ವಿದೇಶಿಯರು ಹಾಗೂ ದೇಶಿಯ ಜಾನಪದರು, ಕಾವ್ಯಕಾರರು ಈ ಅತ್ಯಂತ ಅಸಾಧಾರಣ ಘಟನೆಗಳನ್ನು ಚಿತ್ರವತ್ತಾಗಿ ವಿವರಿಸಿದ್ದಾರೆ. ಇಲ್ಲಿ ಕುಮಾರರಾಮನ ಶುದ್ಧ ಚಾರಿತ್ರ್ಯ, ಶೀಲ, ಶೌರ್ಯ, ಸಾಹಸ, ವ್ಯಕ್ತಿತ್ವ, ವರ್ಚಸ್ಸು ಕರ್ನಾಟಕದ ತುಂಬ ಜನ ಜನಿತವಾಗಿ ಕಾವ್ಯಗಳಿಗೆ, ಜಾನಪದ ಹಾಡುಗಳಿಗೆ, ಯಕ್ಷಗಾನಗಳಿಗೆ, ನಾಟಕಗಳಿಗೆ ಕಥಾವಸ್ತುಗಳನ್ನು ಒದಗಿಸಿವೆ. ಜನರ ದೃಷ್ಟಿಯಲ್ಲಿ ಮಹಿಮಾಪುರುಷನಾಗಿ, ಪುರಾಣ ಪುರುಷನಾಗಿ ಕಂಗೊಳಿಸಿದ್ದಾನೆ. ಅವನ ಹೆಸರಿನಲ್ಲಿ ಅವನಿಗೆ ಸ್ಮಾರಕವಾಗಿ ದೇವಾಲಯಗಳೂ ನಿರ್ಮಾಣವಾಗಿವೆ.

ಕವಿಗಳಾದ ನಂಜುಂಡ, ಪಾಂಚಾಳಗಂಗ, ಮಹಾಲಿಂಗಸ್ವಾಮಿ ಅನುಕ್ರಮವಾಗಿ ಸುಮಾರು ೧೬, ೧೭, ೧೮ನೆಯ ಶತಮಾನಗಳಲ್ಲಿ ಕುಮಾರರಾಮ ಚರಿತೆ, ಚೆನ್ನರಾಮ ಸಾಂಗತ್ಯ ಮತ್ತು ಬಾಲರಾಮ ಸಾಂಗತ್ಯಗಳನ್ನು ರಚಿಸಿದರು. ಈ ಸಾಂಗತ್ಯಕಾರರು ತಾವು ಬರೆದದ್ದು ಬರಿ ನರಕೃತಿಗಳಲ್ಲ, ದೈವಾಂಶ ಸಂಭೂತ ಮಹಾಪುರುಷನ ಪುಣ್ಯ ಪ್ರದವಾದ ಕಥೆಯ ನಿರೂಪಣೆ ಎಂದು ಹೇಳಿಕೊಂಡಿದ್ದಾರೆ.

ಕಥಾನಾಯಕ ಕುಮಾರ ರಾಮನಾಥನು ಬೇಡ ಜನಾಂಗದವನು. ಈತನನ್ನು ಬೇಡ ಜನಾಂಗದವರು ತಮ್ಮ ಆರಾಧ್ಯ ಪುರುಷ, ದೇವತೆಯೆಂದು ಗೌರವಿಸುತ್ತಾರೆ, ಪೂಜಿಸುತ್ತಾರೆ.

ಒಟ್ಟಾರೆ ಹೇಳಬೇಕಾದರೆ ಕೇವಲ ಅರ್ಧ ಶತಮಾನ ಬಾಳಿದ ಕಂಪಿಲಿ / ಕುಮ್ಮಟ ಈ ಸಣ್ಣ ರಾಜ್ಯದ ಪಾತ್ರ ದೊಡ್ಡದು. ವಿಜಯನಗರದ ಉದಯಕ್ಕೆ ಹಲವು ಸೂತ್ರಗಳಿಂದ ಪ್ರೇರಣೆಗಳು ದೊರಕಿದವಲ್ಲದೆ, ಈ ಪ್ರದೇಶದಲ್ಲಿಯೇ ಈ ಅಪೂರ್ವ ಮಹಾರಾಜ್ಯ ಹುಟ್ಟಿದುದಕ್ಕೆ ಕೆಲವು ಕಾರಣಗಳಿವೆಯಷ್ಟೇ. ಧೀರೋದಾತ್ತ ನಿಲುವು, ಶೌರ್ಯ - ಸಾಹಸ, ಬಲಿದಾನ ಮತ್ತು ಶೀಲಗಳಿಂದ ಸ್ಫೂರ್ತಿಯ ಸೆಲೆಯಾಯಿತಲ್ಲದೆ, ಚಿರಕಾಲ ಬಾಳುವ ಕೆಲವು ಮೌಲ್ಯಗಳನ್ನು ನೀಡಿತು.

ಕುಮ್ಮಟದುರ್ಗದಲ್ಲಿ ಕಂಡುಬಂದ ವೀರಗಲ್ಲುಗಳ ಮೇಲೆ ಎರಡು ಶಾಸನಗಳು ಬೆಳಕಿಗೆ ಬಂದಿವೆ. ಸುಲ್ತಾನನ ಎರಡು ದಾಳಿಗಳಲ್ಲಿ ರಾಮನಾಯಕ ಮತ್ತು ಸಿಂಗನಾಯಕ ಎಂಬ ಇಬ್ಬರು ವೀರರು ಆ ಯುದ್ಧಗಳಲ್ಲಿ ಹೋರಾಡುತ್ತ ಮಡಿದರೆಂದು ಅವುಗಳಿಂದ ತಿಳಿದುಬರುತ್ತದೆ.

೨.೪.೨ ಹಂಡೆ ಪಾಳೆಯಗಾರರು

ಬಳ್ಳಾರಿ ಜಿಲ್ಲೆಯಲ್ಲಿ ಆಡಳಿತ ಮಾಡಿದ ಪಾಳೆಗಾರರಲ್ಲಿ ಹಂಡೆ ಪಾಳೆಗಾರರದೂ ಒಂದು ಮನೆತನ. ಅನಂತಪುರದಿಂದ ಆಳ್ವಿಕೆ ಆರಂಭಿಸಿ ಬಳ್ಳಾರಿ ಪ್ರದೇಶಕ್ಕೂ ತಮ್ಮ ಆಳ್ವಿಕೆ ವಿಸ್ತರಿಸಿರುತ್ತಾರೆ. ಇವರ ಕಾಲದ ಶಾಸನಗಳಲ್ಲದೆ, ಹೊಸಪೇಟೆ, ಕೊಟ್ಟೂರುಸ್ವಾಮಿ ಮಠದಲ್ಲಿದ್ದ ಕಾಗದದ ದಾಖಲೆಗಳು ಕೆಲವು ಲಭ್ಯವಿದ್ದೂ ಇವರ ಬಗ್ಗೆ ಮಾಹಿತಿ ನೀಡುತ್ತವೆ.

ಸಿಂಧನೂರು ತಾಲೂಕಿನ ಮುಕ್ಕುಂದಿ ಗ್ರಾಮದ ಸಮೀಪದಲ್ಲಿರುವ ಅರಳೀಹಳ್ಳಿಯೆಂಬ ಬೇಚಿರಾಕ್ ಗ್ರಾಮದ ಶಾಸನದಲ್ಲಿ (ಬಳ್ಳಾರಿ ಜಿಲ್ಲಾ ಶಾಸನ ಸಂಪುಟ - ಸಂಡೂರು - ಪುಟ xxxvi) ಸಿಂಧನೂರು ತಾಲೂಕಿನ ಮುಕ್ಕುಂದಿ ಗ್ರಾಮದ ಸಮೀಪದ ಅರಳೀಹಳ್ಳಿಯೆಂಬ ಬೇಛಿರಾಕ್ ಗ್ರಾಮದ ಶಾಸನದಲ್ಲಿ ಈ ಮನೆತನದ ಉಲ್ಲೇಖವಿದೆ. ಈ ಶಾಸನದ ಮಾಹಿತಿಯನ್ನು ಈ ಪ್ರಬಂಧದಲ್ಲಿ ಸೇರಿಸಲು ಅನುಮತಿ ಕೊಟ್ಟ ಶಾಸನಶಾಸ್ತ್ರ ವಿಭಾಗಕ್ಕೆ ನನ್ನ ಕೃತಜ್ಞತೆಗಳು. ಹಂಡೆ ಮಲುಕಪ್ಪನಾಯಕನ ಉಲ್ಲೇಖ ಬರುತ್ತದೆ. ಕ್ರಿ.ಶ. ೧೬೦೩ರ ಈ ಶಾಸನದಲ್ಲಿ ಹಂಡೆ ಮಲುಕಪ್ಪನಾಯಕನು ಶಿವಾಚಾರ ಸಂಪನ್ನರಾದ ಆಚಾರದ ಅಗ್ರಗಣ್ಯರಾದಂತಹ ಬೆಂಡೆಗೆರೆಯ ಸಿದ್ಧವೀರಣ್ಣ ದೇವರ ಶಿಷ್ಯನಾದ ಭಂಡಾರಿ ಸಿದ್ಧರಾಮ ದೇವನಿಗೆ ಅರೆಯಹಳ್ಳಿಯ ಗ್ರಾಮವನ್ನು ಪುರವರ್ಗವಾಗಿ ದಾನ ನೀಡುತ್ತಾನೆ. ತನ್ನ ಗುರುಹಿರಿಯರಾದ ತಂದೆ ತಾಯಿಗಳಿಗೆ ಪುಣ್ಯವಾಗಬೇಕೆಂದು ನೀಡಿದ ಈ ಗ್ರಾಮಕ್ಕೆ ಚತುಸ್ಸೀಮೆಗಳಾದ ಉತ್ತರದ ಮುಕುಂದಿಯ ಮೇರೆ, ಪೂರ್ವದ ನದಿ ತಟಾಕದ ಮೇರೆ, ದಕ್ಷಿಣದ ಸಿಂಗಾಪುರ ಮೇರೆ, ಪಶ್ಚಿಮ ಮುಕುಂದಿ ಹೊಲದ ಮೇರೆಯ ಬಗ್ಗೆ ಹೇಳಿದೆ. ಈ ಶಾಸನದ ಪಕ್ಕದಲ್ಲಿ

[illegible]

[illegible]

[illegible]

[illegible]

[illegible]

ಮುಂದುವರಿಸಲಾದ ಭಾಗದಲ್ಲಿ ಈ ಶಾಸನವು ಸೂರ್ಯ, ಚಂದ್ರ, ತಾರೆ, ಅಂಬರ, ಸಮುದ್ರಗಳು ಇರುವವರೆಗೆ ಇರಬೇಕೆಂದು ಹಾಗೂ ಈ ಶಾಸನವನ್ನು ಹಾಳು ಮಾಡಿದವರು ಅರವತ್ತು ವರ್ಷಗಳು ಕ್ರಿಮಿಯಾಗಿ ಹುಟ್ಟುವರು ಎಂಬ ಶಾಪಾಶಯವನ್ನು ಈ ಭಾಗದಲ್ಲಿ ಹೇಳಲಾಗಿದೆ.

ಶಿರುಗುಪ್ಪ ತಾಲೂಕಿನ ಚಲ್ಲಿಕೂಡಲೂರು ಶಾಸನದಲ್ಲಿ (ಶಿರುಗುಪ್ಪ ೨೦) ಅಂಕುಸರಾಯ ವೊಡೆಯರ ಪೌತ್ರ ಸಂಣಮಾಯಿ ದೇಶಾಯಿಯ ಉಲ್ಲೇಖ ಬರುತ್ತದೆ. ಈ ಅಂಕುಸರಾಯ ಎಂಬ ವಿಶೇಷಣವನ್ನು ಹಂಡೆಪಾಳೆಗಾರರು ಬಳಸಿರುವುದು ಮಣೂರು ಶಾಸನದಿಂದ ತಿಳಿಯುತ್ತದೆ. ಇದಾದ ಮೇಲೆ ಇನ್ನೊಂದು ಉಲ್ಲೇಖ ಮಣೂರು ಶಾಸನದಲ್ಲಿ (ಶಿರುಗುಪ್ಪ ೬೩) ಬಂದಿದ್ದು, ಇದರಲ್ಲಿ ಹಂಡೆ ಹನುಮಿನಾಯಕ ಅಂಕುಸರಾಯನು ಪೆನಗೊಂಡೆಯ ವೆಂಕಟಪತಿ ದೇವರಾಯನ ಸಾಮಂತನಾಗಿದ್ದಂತೆ ಹಾಗೂ ಈ ಹನುಮಿನಾಯಕನಿಗೆ ರಾಮಪ್ಪ ಎಂಬ ಮಗನಿದ್ದಂತೆ ಉಲ್ಲೇಖಿಸಿದೆ. ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠದ ಸನ್ನದುಗಳಲ್ಲಿ ಎರಡು ಕ್ರಿ.ಶ. ೧೭೨೬ಕ್ಕೆ ಸೇರಿದ್ದು ಅದರಲ್ಲಿ ಹಂಡೆ ಹಿರೇರಾಮಪ್ಪ ನಾಯಕನು ಬಳ್ಳಾರಿಯ ವಿರಕ್ತಮಠಕ್ಕೆ ಕೆಲವು ದಾನಗಳನ್ನು ನೀಡಿದ ಉಲ್ಲೇಖವಿದೆ. ಇನ್ನೊಂದು ಸನ್ನದು ಕ್ರಿ.ಶ. ೧೭೩೩ಕ್ಕೆ ಸೇರಿದ್ದು ಅದರಲ್ಲಿ ಹಂಡೆ ನೀಲಮ್ಮನ ಮಠದ ದಾಸೋಹ ಧರ್ಮಕ್ಕೆ ವೂಳೇನೂರು ಗ್ರಾಮವನ್ನು ದಾನವಾಗಿ ನೀಡಿರುತ್ತಾಳೆ.

ತಾಮ್ರ ಶಾಸನದಲ್ಲಿ ಹಂಡೆ ಪಾಳೇಗಾರರು ಎಂಬ ಲೇಖನ ಬರೆದ ಟಿ.ಶಂಭುಲಿಂಗಪ್ಪ ಅವರು ಹಂಡೆ ಪಾಳೇಗಾರರ ಮನೆತನ ಕೇವಲ ವಿಜಯನಗರ ಅರಸರ ಕಾಲದ್ದಲ್ಲ. ಅದಕ್ಕಿಂತ ಪೂರ್ವದಲ್ಲಿ ಅಂದರೆ ಹೊಯ್ಸಳರ ಕಾಲದಲ್ಲಿಯೇ ಅಸ್ತಿತ್ವದಲ್ಲಿದ್ದರು. ಹೊಯ್ಸಳರ ನಿಷ್ಠಾವಂತ ಸೇವಕರಾಗಿದ್ದರು. ಹಾಗೂ ಹೊಯ್ಸಳರ ಪರವಾಗಿ ಯುದ್ಧಗಳಲ್ಲಿ ಗೆದ್ದು ಬಿರುದು ಬಾವಲಿಗಳನ್ನು ಪಡೆಯುತ್ತಿದ್ದರು ಎಂದು ಹೇಳುತ್ತ ಅದಕ್ಕೆ ನಿದರ್ಶನವಾಗಿ ಒಂದು ಶಾಸನದಲ್ಲಿಯ ವಿಷಯ ವಿವರಿಸಿರುವರು. ಮುಮ್ಮಡಿ ದಳವಾಯಿ ರಂಗರಾವುತನೆಂಬುವನು ಬಾರಕೂರ ಯುದ್ಧವೊಂದರಲ್ಲಿ ಗೆದ್ದುಬಂದ ಎರಡನೆಯ ವೀರ ಬಲ್ಲಾಳನಿಂದ ಬಿರುದು ಬಾವಲಿಗಳನ್ನು ಪಡೆದುದರ ನಿಜಾಂಶಕ್ಕೆ ಇಂಬು ದೊರೆಯುತ್ತದೆ. ಅಷ್ಟೇ ಅಲ್ಲ ಇವರ ಮೂಲ ನಿವಾಸ ವಿಜಯನಗರ ಅರಸರ ಕಾಲದ್ದಾಗಲಿ ಇಲ್ಲವೆ ವಿಜಾಪುರ ಜಿಲ್ಲೆಯ ಮುತ್ತಗಿ ಗ್ರಾಮವಾಗಲಿ ಅಲ್ಲ, ಅದಕ್ಕೆ ಸಾಕ್ಷಿಯಾಗಿ ದೊರೆತ ಈ ತಾಮ್ರಶಾಸನ ೧೧೯೪ಕ್ಕೆ ಸಂಬಂಧಿಸಿದ್ದು, ರಂಗರಾವುತ ಬಾರಕೂರು ಯುದ್ಧದಲ್ಲಿ ಬಂದುದರಿಂದ ಅವನ ಪರಾಕ್ರಮಕ್ಕೆ ಮೆಚ್ಚಿ ಅವನ ಇಚ್ಛೆಯಂತೆ ಒಂದು ದೇವಾಲಯ ಹಾಗೂ ನಾಲ್ಕು ಹಳ್ಳಿಗಳನ್ನು ಅವನಿಗೆ ಉಂಬಳಿಯಾಗಿ ಕೊಟ್ಟಿರುವ ದತ್ತಿ ಶಾಸನವಿದು ಎಂದು ತಿಳಿಸಿರುವರು. ಶಾಸನದಲ್ಲಿ ಉಕ್ತವಾದ ಶ್ರೀರಂಗನಾಥ ದೇವಾಲಯ ಬೆಟ್ಟದ ಮೇಲೆ ಪೂರ್ವಕ್ಕೆ ಅಭಿಮುಖವಾಗಿ ಗುಡದಳ್ಳಿಯ ಸಮೀಪದಲ್ಲಿ ಈಗಲೂ ರಾರಾಜಿಸುತ್ತದೆ. ಈಗಲೂ ಶ್ರೀರಂಗನಾಥ ಸ್ವಾಮಿಯ ಪೂಜಾರಿಗಳು ದೇವರ ಜಾತ್ರೆಯಲ್ಲಿ ಶಾಸನದಲ್ಲಿ ಉಕ್ತವಾದ ಗಂಟೆ, ಸರ್ಪಿಣಿ ವಂಟಿ, ಮುಂತಾದವುಗಳ ಉಪಯೋಗವಾಗುತ್ತಿರುವುದು ಇಂದಿಗೂ ಕಾಣಬಹುದು.

[illegible]

[illegible]

[illegible]

ಈಗಲೂ ಉದ್ದವಾದ ಈಟಿ, ಭರ್ಚಿ, ಖಡ್ಗ ಇತ್ಯಾದಿ ಉಪಕರಣಗಳನ್ನು ಕಾಣಬಹುದು. ಈ ಪಾಳೆಯಗಾರರ ವಂಶಾವಳಿ ಬಗ್ಗೆ ಇನ್ನೂ ಬಹಳ ಅನುಮಾನಗಳಿವೆ. ಕೈಫಿಯತ್ತುಗಳ ಪ್ರಕಾರ ವಂಶಾವಳಿಗೂ ಶಾಸನಗಳಿಗೂ ತಾಳೆಯಾಗುವುದಿಲ್ಲ.

೨.೪.೩ ಹರಪನಹಳ್ಳಿ ಪಾಳೇಗಾರರು

ಶಾಲಿವಾಹನ ಶಕೆ ೧೪೮೮ ರಿಂದ ೧೭೦೪ರ ವರೆಗೂ ಅನಧಿಕೃತ ಮತ್ತು ಅಧಿಕೃತವಾಗಿ ಸುಮಾರು ೨೧೬ ವರ್ಷಕ್ಕೂ ಹೆಚ್ಚು ಕಾಲ ರಾಜ್ಯವಾಳಿದ ಹರಪನಹಳ್ಳಿ ಪಾಳೇಗಾರರು ಬಳ್ಳಾರಿ ಜಿಲ್ಲೆಯಲ್ಲಿ ಅತ್ಯಂತ ಪ್ರಬಲರಾಗಿದ್ದರು. ಸುಮಾರು ಕ್ರಿ.ಶ. ೧೫೬೫ರಲ್ಲಿ[೬೬] ಹರಪನಹಳ್ಳಿ ಪಾಳೇಗಾರಿಕೆಯನ್ನು ದಾದೇ ನಾಯಕ ಎಂಬುವನು ಸ್ಥಾಪಿಸಿದನು.

ಈ ಅರಸರು ಅನೇಕ ಸೇನಾನಿಗಳನ್ನು ಸಾಮಂತರನ್ನು ಹೊಂದಿದ್ದರಲ್ಲದೇ ನೆರೆಹೊರೆಯ ಅರಸರುಗಳ ಸ್ನೇಹ ಸಂಬಂಧವನ್ನು ಇಟ್ಟುಕೊಂಡಿದ್ದರು. ಹೀಗಿರುವುದರಿಂದ ಅವರಿಗೂ ಅವರ ಸಾಮಂತರಿಗೂ ಇತರ ಅರಸರ ಮಧ್ಯೆ ಪತ್ರ ವ್ಯವಹಾರ ಜರುಗಿದ್ದು ತಿಳಿದುಬರುತ್ತದೆ. ಈಗ ಸಿಕ್ಕಂತಹ ಕೆಲವು ಪತ್ರಗಳನ್ನು ಇಲ್ಲಿ ಕಾಣಬಹುದು.

- ಸೋದೆ ಸಂಸ್ಥಾನದ ಸವಾಯಿ ಬಸವಲಿಂಗ ರಾಜೇಂದ್ರರ ಪತ್ರ ಅಪೂರ್ಣ ದೊರೆತಿದೆ. ಅದರಲ್ಲಿ ಕಾಲ ಉಲ್ಲೇಖವಿಲ್ಲ. ಹರಪನಹಳ್ಳಿ ಅರಸನನ್ನು ಸಕಲಗುಣ ಸಂಪನ್ನ ಮಿತ್ರಜನ ಮನಃಕುಮುದ ಪೂರ್ಣಖಡ್ಗ ಪ್ರವೀಣ ಎಂಬುದಾಗಿ ಸಂಬೋಧಿಸಿದೆ.
- ಕಲಕೇರಿ ದೇಸಾಯಿ ಮಲ್ಲಪ್ಪನ ಪತ್ರದಲ್ಲಿ ಕಾಲದ ಉಲ್ಲೇಖವಿಲ್ಲ. 'ಥೈಲಿಬಂಡಿ' ಮತ್ತು ಸ್ವಾರಿ (ಸವಾರಿ)ಗಳನ್ನು ಹರಪನಹಳ್ಳಿ ನಾಯಕರಿಗೆ ಕಳಿಸಿಕೊಟ್ಟ ವಿಷಯವಿದೆ.
- ಕುರದಗಡ್ಡಿ ಭರಮಗೌಡನ ಒಂದು ಟಿಪ್ಪಣಿ ಮತ್ತು ಎರಡು ಪತ್ರಗಳಲ್ಲಿ ಅವನನ್ನು ಕೆಲಸದಿಂದ ಅರಸ ವಜಾ ಮಾಡಿದ ಮೇಲೆ ಹಿಂದೆ ಸಂಸ್ಥಾನಕ್ಕೆ ತಾನೂ ಸೇವೆ ಸಲ್ಲಿಸಿದ್ದನ್ನು ಅರಸರ ಗಮನಕ್ಕೆ ತಂದು ತಾನು ನಿರಪರಾಧಿ ಎಂದು ಪ್ರಾರ್ಥಿಸಿಕೊಂಡಿರುವನು.
- ಭರಮನಗೌಡನು ಕುರದಗಡ್ಡಿ ಜಲದುರ್ಗವನ್ನು ಅರಸರ ಆದೇಶದ ಮೇರೆಗೆ ಕಟ್ಟಿಸಿದ್ದು ಅದರ ನಕ್ಷೆಯನ್ನು ಕೊಡುವನು. ಕಂಚಿನ ಪತ್ರದ ಸಾರಾಂಶವನ್ನು ನೀಡಿರುವನು.
- ಹರಪನಹಳ್ಳಿ ಗೌಡರು ದತ್ತು ಪಡೆದ ಪತ್ರದಲ್ಲಿ ಹರಪನಹಳ್ಳಿ ಅರಸ ಬೆಟ್ಟನ ಗೌಡರಿಗೆ ದತ್ತು ಸ್ವೀಕರಿಸಲು ಒಪ್ಪಿಗೆ ಕೊಟ್ಟ ನಿರೂಪ.
- ಹರಪನಹಳ್ಳಿ ಅರಸ ತನ್ನ ತಪ್ಪನ್ನು ಒಪ್ಪಿಕೊಂಡು ಮರಳಿ ಭರಮನಗೌಡನನ್ನು ಕುರದಗಡ್ಡಿ ಜಲದುರ್ಗಕ್ಕೆ ಸಾಮಂತನನ್ನಾಗಿ ನೇಮಿಸಿ ಆದೇಶ ಹೊರಡಿಸಿದ ವಿವರ.

- ಅರಸನು ತಾನು ತಪ್ಪು ಮಾಡಿದರೂ ಇತರರೆದುರು ತನ್ನ ತಪ್ಪನ್ನು ಒಪ್ಪಿಕೊಳ್ಳುವುದು ಕಡಿಮೆ. ಆದರೆ ಈ ಅರಸ ತನ್ನ ಸಾಮಂತ ಅರಸನಲ್ಲಿ ತಾನೂ ಮಾಡಿದ ತಪ್ಪು ಒಪ್ಪಿಕೊಂಡು ಕ್ಷಮೆ ಕೋರಿದನು.
- ಭರಮನ ಗೌಡನ ಪತ್ರಗಳು ಉರ್ದು ಮಿಶ್ರಿತ ಪದಗಳ ಕನ್ನಡ ಭಾಷೆಯಲ್ಲಿವೆ.
- ಹರಪನಹಳ್ಳಿ ಹದಿನೈದುನೂರು ನಾಣ್ಯಗಳನ್ನು ಕುರದಗಡ್ಡಿ ಜಲದುರ್ಗ ನಿರ್ಮಾಣಕ್ಕೆ ಬಳಸಿದ್ದು ಗೊತ್ತಾಗುವುದು. ಹರಪನಹಳ್ಳಿಯಲ್ಲಿ ಟಂಕಸಾಲೆ ಇದ್ದು ಹತ್ತುವರೆ ಆಣೆ ಬಂಗಾರದ ನಾಣ್ಯ ಚಲಾವಣೆಯಲ್ಲಿದ್ದಿತ್ತು.
- ಹರಪನಹಳ್ಳಿ ನಾಯಕರ ಬಿರುದುಗಳು ಅವರ ಮೊಹರುಗಳಿಂದ ತಿಳಿದುಬರುವವು.
- ಪತ್ರಗಳಿಂದ ಅರಸರ ಸೇನೆ ಎಷ್ಟಿತ್ತು? ಹೇಗಿತ್ತು? ಎಂಬುದು ಗೊತ್ತಾಗುವುದು.
- ಈ ಪತ್ರಗಳಿಂದ ಟಿಪ್ಪುಸುಲ್ತಾನನ ಸೇನಾನಿಗಳ ಹೆಸರು ಗೊತ್ತಾಗುವುದು.
- ಈ ಅರಸರು ಶಾಲಿವಾಹನ ಶಕೆ ಫಸಲಿ ಕಾಲಮಾನಗಳನ್ನು ಬಳಸಿರುವುದು ತಿಳಿಯುವುದು.
- ಪತ್ರದ ಕೊನೆಯಲ್ಲಿ 'ಬಸವ ಮೊಹರು ಮತ್ತು ಜಾಣಿಜ' ಎಂಬ ಶಬ್ದವು ಕಂಡು ಬರುವವು. ಬಸವ ಮೊಹರಿನಿಂದ ಈ ಅರಸರು ಕೊಟ್ಟೂರಿನ ಶ್ರೀಗುರು ಬಸವರಾಜ ಸ್ವಾಮಿಗಳ ಶಿಷ್ಯರೆಂಬುದು ಈ ಪತ್ರಗಳನ್ನು ಬರೆಯುವ 'ಜಾಣಿಜ'ರು ಹರಪನಹಳ್ಳಿಯ ರಾಯಸ ಮನೆತನದವರೆಂದು ತಿಳಿದುಬಂದಿದೆ.
- 'ಭೈಲಿಬಂಡಿ' ರಾಜರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗು ಮೇಣಿಯಂತೆ (ಪಲ್ಲಕ್ಕಿ) ಇದ್ದಿತು. ಇದರ ಮುರಿದ ಭಾಗಗಳನ್ನು ಹರಪನಹಳ್ಳಿ ಗೌಡರ ಮನೆಯಲ್ಲಿ ಸುಮಾರು ೫೦ ವರ್ಷಗಳ ಹಿಂದೆ ಜನರು ಕಂಡಿರುವುದಾಗಿ ಹೇಳುವರು. ಅದನ್ನು ಗೌಡರ ವಂಶಜರೂ ಒಪ್ಪುವರು.
- ಹರಪನಹಳ್ಳಿಯಲ್ಲಿ ಈಗಲೂ ಒಂದು ಮನೆತನವಿದೆ. ಅವರಿಗೆ ಈಗಲೂ ಕಾಲೇರು ಎಂದು ಕರೆಯುವರು. ನಾಯಕರ ಪತ್ರಗಳನ್ನು ಕಾಲುನಡಿಗೆಯಲ್ಲಿ ಕೊಂಡೊಯ್ದು ನೆರೆಯ ಅರಸರಿಗೆ ತಲುಪಿಸುತ್ತಿದ್ದರು.

೧೩ನೆಯ ಶತಮಾನದಲ್ಲಿ ಹರಪನಹಳ್ಳಿ ಮೂವತ್ತರ ಮುತ್ತಿಗೆ ರಾಜ್ಯದಿಂದ ಬಾಗಳಿ ರಾಜ್ಯಕ್ಕೆ ಸೇರಿದ್ದು ಎಂದು ಒಂದು ಕಂಚಿನ ಪತ್ರದಿಂದ ತಿಳಿದು ಬರುತ್ತದೆ. 'ಹರಿಯಪ್ಪನಹಳ್ಳಿ' ಶ್ರೀ ಸಾಮಾನ್ಯರ ಆಡುಮಾತಿನಲ್ಲಿ 'ಹರಿಯಪನಹಳ್ಳಿ' ಕಾಲಾಂತರದಲ್ಲಿ 'ಹರಪನಹಳ್ಳಿ' ಎಂದು ಕರೆಯಿಸಿಕೊಂಡಿದೆ. ಇಂದಿಗೂ ಈ ಹರಪನಹಳ್ಳಿಯು ತನ್ನ ಮೂಲರೂಪ 'ಹಳ್ಳಿ' ಎಂಬುದನ್ನು ಉಳಿಸಿಕೊಂಡು ಬಂದಿದೆ.

ಹರಪನಹಳ್ಳಿ ಆಳಿದ ಪಾಳೆಗಾರರು ಒಟ್ಟು (ಹರಪನಹಳ್ಳಿ ಪಾಳೆಯಗಾರುರು, ಕುಂ.ಬಾ.ಸ. ಕೃತಿಯನ್ನು ಆಕಾರವಾಗಿ ಬಳಸಿಕೊಳ್ಳಲಾಗಿದೆ) ೧೬ ಜನರು, ೧೫ ಜನ ಪುರುಷರು ಒಬ್ಬಳು ಸ್ತ್ರೀ ಹರಿಯಮ್ಮಾಜಿ. ಇವಳು ಗಂಡನ ಹೆಸರಿನಲ್ಲಿಯೇ ಐದು ವರ್ಷಗಳ ಕಾಲ ರಾಜ್ಯವನ್ನು ಆಳಿದಳು. ಆಂಗ್ಲರು ಗೆಜಿಟೆಯರ್‌ದಲ್ಲಿ ಇವಳ ಹೆಸರು, ಇವಳ ಆಡಳಿತದ ಅವಧಿಯನ್ನು (ಗಂಡನ ಆಡಳಿತದ ಅವಧಿಯನ್ನು ಸೇರಿಸಿ) ಆರು ವರ್ಷಗಳೆಂದು ದಾಖಲಿಸಿರುವುದು ಕಂಡುಬರುತ್ತದೆ.

ಈ ರಾಜ್ಯವನ್ನು ಸ್ಥಾಪಿಸಿದ ಮೂಲಪುರುಷ ದಾದಯ್ಯನಾಯಕ, ತಾನು ಪಟ್ಟಾಭೀಷೇಕ ಆಗುವ ಮೊದಲೇ ೧೦ ವರ್ಷ ಪಟ್ಟಾಭೀಷೇಕ ಆದ ನಂತರ ೨೬ ವರ್ಷ, ಒಟ್ಟು ೩೬ ವರ್ಷಗಳ ಕಾಲ ರಾಜ್ಯ ಆಳಿದನು. ಇವನು ಚಿತ್ರದುರ್ಗ, ಗುಡೇಕೋಟೆ, ಜರಿಮಲೆ, ತರೀಕೆರೆ ಅರಸರಲ್ಲಿ ವೈವಾಹಿಕ ಸಂಬಂಧವನ್ನು ಬೆಳೆಯಿಸಿ ಯುದ್ಧಗಳಲ್ಲಿ ಅವರಿಗೆ ನೆರವನ್ನು ನೀಡಿ ತನ್ನ ರಾಜ್ಯವನ್ನು ರಕ್ಷಿಸಿದನು. ಕ್ರಿ.ಶ. ೧೭೬೬ರಲ್ಲಿ ಹರಪನಹಳ್ಳಿ ಪಾಳೆಗಾರಿಕೆ ಆಂಗ್ಲರ ವಶವಾಗುವ ಕಾಲದಲ್ಲಿ ಅವರಿಗೆ (ಕಾಮಭಟ್ಟರಿಗೆ) ಬರೆದು ಕೊಟ್ಟ ಕೈಫಿಯತ್ತಿನಲ್ಲಿ ದಾದಯ್ಯ ನಾಯಕನಿಗೆ ಪಟ್ಟಾಭಿಷೇಕವಾದಂತೆ ಉಲ್ಲೇಖವಿದೆ. ಈ ೧೬ ಜನರು ಸೇರಿ ಕ್ರಿ.ಶ. ೧೫೬೬ ರಿಂದ ೧೭೯೯ರ ವರೆಗೆ ಅಂದರೆ ಸುಮಾರು ೨೩೩ ವರ್ಷಗಳ ದೀರ್ಘಕಾಲ ರಾಜ್ಯ ಆಳಿದರು.

ಮುದ್ದಾನಾಯಕನ ಜೇಷ್ಠ ಪುತ್ರನೇ ದಾದೇನಾಯಕ ಅಥವಾ ದಾದಯ್ಯನಾಯಕ. ಈ ವಂಶದವರು ಹೊಂಗಲ ತಾಲೂಕು ತುಂಬರಗುದಿ ಗ್ರಾಮದ ಮುದಿಗೊಡಲ ವಂಶದವರು. ಇವರ ವಂಶಕ್ಕೆ ಪುವ್ವಲ ವಂಶೀಯರೆಂದು ಕರೆಯಲಾಗಿದೆ. ಇವರ ಸೋದರ ತಮ್ಮ ನಾಯಕನು ಬೆಳವಳ್ಳಿ ಎಂದು ಹೆಸರಾದ ತರುವಾಯ ಸಂಡೂರು ಎಂಬ ಹೆಸರಿನ ಗ್ರಾಮವಾಗಿರುವ ರಾಜ್ಯವನ್ನು ಸ್ಥಾಪಿಸಿದಂತೆ ಕಂಡುಬರುತ್ತದೆ. ದಾದೇನಾಯಕನು ಪಟ್ಟಾಭಿಷೇಕವಿಲ್ಲದೇ ಹತ್ತು ವರ್ಷ ಪಟ್ಟಾಭೀಷೇಕವಾದ ಮೇಲೆ ಇಪ್ಪತ್ತಾರು ವರ್ಷ ಒಟ್ಟಿಗೆ ಮೂವತ್ತಾರು ವರ್ಷಗಳ ಕಾಲ ರಾಜ್ಯವಾಳಿದನು. ಇದರ ಕೆಲವು ಮಾಹಿತಿ ದೋನಾಂಗಡಿ ಶಿಲಾಶಾಸನದಲ್ಲಿ ಮತ್ತು ಹರಪನಹಳ್ಳಿ ಶ್ರೀ ಬೆಟ್ಟನಗೌಡರ ಮನೆಯ ಹಳೇ ದಾಖಲೆಗಳಲ್ಲಿ ದೊರಕುವುದು.

ಇನ್ನೊಬ್ಬ ಸಮರ್ಥ ಪಾಳೆಗಾರ ಬಸಪ್ಪನಾಯಕ. ಇವನು ಪಟ್ಟಕ್ಕೆ ಬಂದ ಮೇಲೆ ಹಲವಾರು ಯುದ್ಧಗಳನ್ನು ಮಾಡಿ ಜಯಶಾಲಿಯಾದನು. ತುಂಗಭದ್ರ ನದಿಯ ಆಚೆಗೆ ಇರುವ ಈಗಿನ ಧಾರವಾಡ ಜಿಲ್ಲೆಗೆ ಸೇರಿದ ಲಕ್ಷ್ಮೀಶ್ವರ ನಾಡನ್ನು ಗೆದ್ದು ಪುನಃ ಶಾನಪ್ಪಗೌಡ ದೇಸಾಯಿಗೆ ಬಿಟ್ಟು ಅವನಿಂದ ಹಣ ಪಡೆದನು. ಹರಪನಹಳ್ಳಿಯ ಈಶಾನ್ಯ ದಿಕ್ಕಿಗಿರುವ ಹುಲಗಿ, ಹೊಸೂರು ಕೋಟೆಗಳನ್ನು, ನೈರುತ್ಯ ದಿಕ್ಕಿಗಿರುವ ಸೋಮಲಾಪುರ ಕೋಟೆಗಳನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದನು.

ಟಿಪ್ಪುಸುಲ್ತಾನನ ವಶದಲ್ಲಿ ಕೊಪ್ಪಳ ಕೋಟೆಯನ್ನು ಜಯಿಸುವುದು ಸಾಧ್ಯವಾಗಲಿಲ್ಲ. ಆಗ ಇವನು ಅದಕ್ಕೆ ಮುತ್ತಿಗೆ ಹಾಕಿ ಹಗಲು ರಾತ್ರಿಗಳೆನ್ನದೆ ನಿರಂತರ ಯುದ್ಧ ಮಾಡಿ ಅದನ್ನು ಸುಲ್ತಾನನಿಗೆ ಗೆದ್ದುಕೊಟ್ಟನು.

[illegible]

[illegible]

[illegible]

[illegible]

[illegible]

ಇವನ ಕಾಲದಲ್ಲಿ ಬಾವಿ ಕೆರೆಗಳು ಹಾಗೂ ದೇವರ ಉತ್ಸವಗಳಿಗೆ ಬೇಕಾದ ತೇರುಗಳು ತಯಾರಿಸಲ್ಪಟ್ಟವು. ನಾರಾಯಣ ದೇವರ ಕೆರೆಗೆ ಕಾಲುವೆಗಳನ್ನು ದುರಸ್ತಿಗೊಳಿಸಿದನು. ಇವನು ಪರಾಕ್ರಮಿಯು, ಆಪ್ತರ - ಗುರು, ಹಿರಿಯರ ಮಾತಿನಲ್ಲಿ ನಂಬಿಕೆಯುಳ್ಳವನಾಗಿದ್ದನು. ಟಿಪ್ಪು ಮೋಸ ಮಾಡಬಹುದೆಂದು ದಿವಾನ ಹೇಳಿದರೂ ಅವನ ಮಾತು ಕೇಳದೆ ತನ್ನ ಪರಿವಾರವನ್ನು ಕರೆದುಕೊಂಡು ಹಗರಿಬೊಮ್ಮನಹಳ್ಳಿಗೆ ಹೋಗಿ ಅಲ್ಲಿ ಟಿಪ್ಪುವಿನ ಮೋಸಕ್ಕೆ ಒಳಗಾಗಿ ಸೆರೆಸಿಕ್ಕು ಕಬ್ಬಾಳದುರ್ಗ ಅಲ್ಲಿಂದ ಶ್ರೀರಂಗಪಟ್ಟಣ ಕಾರಾಗೃಹ ಸೇರಿ ಅಲ್ಲಿಯೇ ನಿಧನನಾದನು.

ಇವನ ನಂತರ ಕಾಣಿಸುವ ಮತ್ತೊಬ್ಬ ಸಮರ್ಥ ಅರಸನೆಂದರೆ ಮೊದಲ ಬಸವಂತನಾಯಕನು. ಈತನು ಮುಮ್ಮಡಿ ನಾಯಕನ ಚಿಕ್ಕ ಸೋದರನು. ಈತನಿಗೆ ಶ್ರೀಕರ ಬಸಪ್ಪನಾಯಕನೆಂತಲೂ ಕರೆದಿರುವರು. ಇಕ್ಕಡಿ ಬಸಪ್ಪನಾಯಕನೆಂತಲೂ ಕರೆದಿರುವರು. ಈತನು ಸುಂದರ ಸ್ತ್ರೀಯರ ಹವ್ಯಾಸಗಳಿಗೆ ಗಂಟು ಬಿದ್ದದ್ದೇ ಇವನ ವ್ಯಕ್ತಿತ್ವಕ್ಕೆ ಇಟ್ಟ ಕಪ್ಪು ಚುಕ್ಕೆಯಾಗಿತ್ತು. ಒಮ್ಮೆ ಬಾಗಳಿ ಗೌಡನ ಸೋದರಿಯರ ಮೇಲೆ ಮನಸ್ಸು ಮಾಡಿ ಜೂಜಾಡಿ, ಜೂಜಿನಲ್ಲಿ ತಾನೇ ಗೆಲ್ಲುವನು. ಆಗ ಗೌಡನಿಗೆ ತನ್ನ ಸೋದರಿಯರನ್ನು ಅರಸನಿಗೆ ಕೊಟ್ಟು ವಿವಾಹ ಜರುಗಿಸಬೇಕಾಗಿ ತಿಳಿಸಿದನು. ಆದರೆ ಬೇಡ ಕುಲದ ರಾಜನಿಗೆ ವೀರಶೈವ ಮತದ ಕನ್ಯೆಯರನ್ನು ಕೊಟ್ಟು ವಿವಾಹ ಜರುಗಿಸುವುದು ಗೌಡನ ಕುಟುಂಬಕ್ಕೆ ಸಮಸ್ಯೆಯಾಯಿತು. ಹಾಗೂ ಬಸವಂತನಾಯಕನು ವೀರಶೈವ ಧರ್ಮಕ್ಕೆ ಮತಾಂತರಗೊಳ್ಳುವನು. ಜೂಜಿನಲ್ಲಿ ಗೆದ್ದಾಗ ಗೌಡನ ಸೋದರಿಯರನ್ನು ವಿವಾಹವಾಗುವುದಾಗಿ ಹೇಳಿದ್ದಂತೆ, ವೀರಶೈವ ಮತಕ್ಕೆ ಮತಾಂತರಗೊಂಡನಂತರ ಅರಸನು ಗೌಡನಿಗೆ ಒತ್ತಾಯ ಮಾಡುತ್ತಾನೆ. ತನಗೆ ತಮ್ಮ (ಗೌಡನ) ಸೋದರಿಯರನ್ನು ಕೊಟ್ಟು ವಿವಾಹ ಮಾಡಬೇಕೆಂದು, ಇದರಿಂದ ಬೇಸತ್ತ ಗೌಡನು ಒಂದು ದಿನ ಬಸವಂತ ನಾಯಕನನ್ನು ಅವರ ಮನೆಗೆ ಊಟಕ್ಕೆ ಆಹ್ವಾನ ಮಾಡುತ್ತಾನೆ. ಅವರ ಮನೆಗೆ ಊಟಕ್ಕೆಂದು ಹೋಗಿ ಅವರ ಮನೆ ಒಳಗಿನ ಜೋಳ ಹಾಕುವ ಹಗೇಯ ಮೇಲೆ ಊಟಕ್ಕೆ ಕುಳಿತು ಅವರ ಮೋಸಕ್ಕೆ ಒಳಗಾಗಿ ಹಗೇಯಲ್ಲಿ ಬಿದ್ದು ತನ್ನ ಪ್ರಾಣ ಕಳೆದುಕೊಂಡನು. ಹರಿಯಮ್ಮಾಜಿನಾಗತಿ ತನ್ನ ಗಂಡ ಮಡಿದ ಮೇಲೆ ಬೇರೊಬ್ಬರನ್ನು ಕರೆತಂದು ಪಟ್ಟಾಭಿಷೇಕ ಮಾಡುವವರೆಗೆ ಗಂಡನ ಹೆಸರಿನಲ್ಲಿಯೇ ಅತ್ಯಂತ ದಕ್ಷತೆಯಿಂದ ಐದು ವರ್ಷ ರಾಜ್ಯವಾಳಿದಳು. ಈಕೆ ತನ್ನ ಹೆಸರನ್ನು ಬಾಗುಳಿ ಹರಿಯಮ್ಮಾಜಿ ಎಂದು ಕರೆದುಕೊಂಡಿದ್ದಾಳೆ. ಶಾಸನಗಳಲ್ಲಿ ಇದೇ ಉಲ್ಲೇಖ ಇರುವುದು. ಈಕೆ ಉತ್ತಮ ಆಡಳಿತಗಾರಳಾಗಿದ್ದಳು. ದಾನ ಧರ್ಮಕಾರ್ಯಗಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟಳು. ನೆರೆಹೊರೆಯ ಅರಸು ಮನೆತನಗಳ ಕೂಡ ಉತ್ತಮ ಸಂಬಂಧವನ್ನು ಇಟ್ಟುಕೊಂಡಿದ್ದಳು. ಅರಸು ಮನೆತನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಮಂತ್ರಿಗಳ ಅಧಿಕಾರಿಗಳ ಸಲಹೆ, ಆಲೋಚನೆಯ ಮೂಲಕ ಬಗೆಹರಿಸುತ್ತಿದ್ದಳು. ಹರಪನಹಳ್ಳಿ ತಾಲೂಕಿಗೆ ಸೇರಿದ ಉಚ್ಚಂಗಿದುರ್ಗಕ್ಕೆ ಹೋಗುವ ಮಾರ್ಗದಲ್ಲಿ ಒಂದು ಹಳ್ಳಿ ಇದೆ. ಇದಕ್ಕೆ ಹರೇನಹಳ್ಳಿ > ಹರಿಯಮ್ಮನಹಳ್ಳಿ ಎಂದು ಕರೆಯುವರು. ಈ ಹಳ್ಳಿ ಹರಿಯಮ್ಮಾಜಿ ಹೆಸರಿನಲ್ಲಿ ಸ್ಥಾಪನೆಯಾಗಿದೆ. ಸಂದರ್ಭ ಬಂದರೆ ತಾನೇ ಕೈಗಳಲ್ಲಿ ಖಡ್ಗ ಹಿಡಿದು ಯುದ್ಧ ಮಾಡುತ್ತಿದ್ದಳು. ಹರಪನಹಳ್ಳಿ ಪಾಳೆಗಾರ ಬಸವಂತನಾಯಕನ ಮಡದಿ

ಬಾಗುಳಿ ಹರಿಯಮ್ಮಾಜಿ ಉದ್ಗಟ್ಟೆಯಲ್ಲಿ ಒಂದು ಮಠವನ್ನು ಶಾ.ಶ.(ಶಾಸನಶಕ) ೧೬೧೫ - ೧೬೪೮ರಲ್ಲಿ ಕಟ್ಟಿಸಿದಳು. ಗಂಡನ ಕಾಲದಲ್ಲಿ ಪ್ರಾರಂಭವಾಗಿದ್ದುದು ಈ ರಾಣಿಯ ಕಾಲದಲ್ಲಿ ಪೂರ್ಣಗೊಂಡಿತು. ಆದರೆ, ಅದರ ಪ್ರಾರಂಭೋತ್ಸವ ಕಾಲಕ್ಕೆ ಪೂರ್ವದಲ್ಲಿಯೇ ರಾಣಿ ಮೃತಳಾಗಿದ್ದಳು.

ಪತಿ ನಿಧನ ನಂತರ ಐದು ವರ್ಷಗಳ ಕಾಲ ರಾಜ್ಯಭಾರ ಮಾಡಿದಳು. ಬ್ರಿಟಿಷ್ ಗೆಜಿಟಿಯರ್ ನಲ್ಲಿ ಗಂಡನ ಆಳ್ವಿಕೆ ಕಾಲಕ್ಕೆ ಹರಿಯಮ್ಮಾಜಿ ಕಾಲವನ್ನು ಕೂಡಿಸಿ ಗಂಡನ ಹೆಸರಿನಲ್ಲಿ ಆರು ವರ್ಷಗಳ ಒಟ್ಟು ಆಳ್ವಿಕೆ ಅವಧಿ ಎಂದು ತೋರಿಸಿ ಹರಿಯಮ್ಮಾಜಿ ಹೆಸರು ಬಿಡಲಾಗಿದೆ. ಅವಳ ಆಳ್ವಿಕೆಯನ್ನು ಶಾಸನಗಳು ದೃಢೀಕರಿಸಿವೆ.

ಈಕೆಯ ನಂತರ ಬಂದ ಮತ್ತೊಬ್ಬ ನಾಗತಿ ಮೊದಲ ಸೋಮಶೇಖರ ನಾಯಕನ ಮಡದಿ ಸೋಮಮ್ಮಾಜಿ. ಈಕೆಯು ಖಡ್ಗ ಯುದ್ಧದಲ್ಲಿ ಪರಿಣಿತಳಾಗಿದ್ದಳು. ತನ್ನ ವಂಶದ ಬೇರೆಯವರನ್ನು ತಂದು ಪಟ್ಟಕ್ಕೆ ಕೂಡಿಸಿ ರಾಜ್ಯವನ್ನು ಕಾಪಾಡುತ್ತಿದ್ದಳು. ತನ್ನ ರಾಜ್ಯದ ವಿರುದ್ಧ ಒಳಗಿನವರು ಯಾರಾದರೂ ಪಿತೂರಿ ಮಾಡಿದರೆ ಅವರ ಕೂಡ ಯುದ್ಧ ಮಾಡಿ ಅವರನ್ನು ಸಂಹರಿಸುತ್ತಿದ್ದಳೆಂದು ತಿಳಿಯುತ್ತದೆ.

ಹೊಳಲು ಕೋಟೆಯನ್ನು ಮತ್ತು ಹರಪನಹಳ್ಳಿಯ ಪಶ್ಚಿಮ ಗಡಿಯನ್ನು ಸೈನ್ಯದೊಂದಿಗೆ ಕಾವಲು ಮಾಡುತ್ತಿದ್ದ ಸಾಮಂತ ಅರಸ (ಕಂಚೂರಿನವನು) ಹೊಳಲು ಗ್ರಾಮದವರಿಗೆ ತೊಂದರೆ ಕೊಟ್ಟದ್ದು ಕೇಳಿ ಆತನಿಗೆ ಹರಪನಹಳ್ಳಿಗೆ ಬಂದು ತನ್ನನ್ನು ಕಾಣಲು ನಿರೂಪ ಕಳಿಸಿದಳು. ಅದಕ್ಕೆ ಅವನು ಹರಪನಹಳ್ಳಿಗೆ ಬಾರದೇ ಎದುರು ಬಿದ್ದ ಪ್ರಸಂಗದಲ್ಲಿ ಸೋಮಮ್ಮಾಜಿ ಸೈನ್ಯದೊಂದಿಗೆ ತಾನೇ ಅಲ್ಲಿಗೆ ಹೋಗಿ ಅವನ ಜೊತೆ ಖಡ್ಗ ಯುದ್ಧ ಮಾಡಿ ಅವನನ್ನು ಸಂಹರಿಸಿದಳು. ರಾಜಮಾತೆ ಸೋಮಮ್ಮಾಜಿ ಯುದ್ಧಗಳಲ್ಲಿ ಅನೇಕ ಶತ್ರು ಸೈನಿಕರನ್ನು ಹಾಗೂ ಸಂಸ್ಥಾನದ ಒಳಗೇ ಇದ್ದು ಪಿತೂರಿ ನಡೆಸಿದವರನ್ನೂ ಸಂಹರಿಸಿದ್ದಳು. ಈ ಹತ್ಯೆಗಳ ಪಾಪ ಪರಿಹರಿಸಿಕೊಳ್ಳುವ ಸಲುವಾಗಿ ಹಂಪಿಯ ವಿರೂಪಾಕ್ಷಸ್ವಾಮಿ ಮತ್ತು ನಾರಾಯಣ ದೇವರ ಕೆರೆ ಭೂನಾರಾಯಣ ಸ್ವಾಮಿಗೆ ಜೋಡು ರಥಗಳನ್ನು ಮಾಡಿಸಿ ಕೊಡಬೇಕೆಂದು ಯೋಚಿಸಿ, ಅವುಗಳನ್ನು ನಿರ್ಮಿಸಲು ಆದೇಶ ಕೊಡುವಳು. ಅವುಗಳನ್ನು ನಿರ್ಮಿಸಲು ಕೊಟ್ಟ ಅವಧಿಯಲ್ಲಿ ಅವುಗಳ ಕೆಲಸದ ಪ್ರಗತಿಯ ವರದಿಯನ್ನು ಮಾಡುವ ಸಲುವಾಗಿ ಒಬ್ಬ ಸರದಾರನನ್ನು ನೇಮಿಸಿದ್ದಳು. ರಥಗಳು ಶಾ.ಶ. ೧೬೯೯ರಲ್ಲಿ ಪೂರ್ಣ ರಚನೆಗೊಂಡವು. ಈ ಪೂರ್ಣಗೊಂಡ ರಥಗಳನ್ನು ವಿರೂಪಾಕ್ಷ ದೇವರಿಗೆ ಒಪ್ಪಿಸಿದಳು.

ಎರಡನೆಯ ಸೋಮಶೇಖರನು ಹರಪನಹಳ್ಳಿ ಪಾಳೆಗಾರರಲ್ಲಿ ೧೬ ವರುಷಕ್ಕೆ ಪಟ್ಟಕ್ಕೆ ಬಂದವನು. ಇವನು ಬಸಪ್ಪನಾಯಕನ ದತ್ತುಪುತ್ರ. ಅಣ್ಣ ಅಯ್ಯಪ್ಪನಾಯಕನ ಹಿರಿಯ ಪುತ್ರ. ಇವನು ಚಿಕ್ಕವನಾದ ಕಾರಣ ಮಂತ್ರಿ ಹಂಪರಸಪ್ಪನು ಇವನಿಗೆ ಪಟ್ಟಕಟ್ಟಿ ರಾಜ್ಯಾಡಳಿತವನ್ನು ತಾನೇ ಸ್ವಯಂ ನೋಡಿಕೊಳ್ಳುತ್ತಿದ್ದನು. ಟಿಪ್ಪುಸುಲ್ತಾನನು ಬಸಪ್ಪನಾಯಕನನ್ನು ಸೆರೆ ಹಿಡಿದುದನ್ನು ಕಂಡು ಹೆದರಿ ಬಸಮ್ಮಾಜಿ ಅವನನ್ನು ಪೂನಾಕ್ಕೆ

ಕರೆದುಕೊಂಡು ಹೋಗಿ ಪರುಶುರಾಂ ಭಾವೆ ಪೇಶ್ವೆಯಲ್ಲಿ ಕೆಲಕಾಲ ಆಶ್ರಯ ಪಡೆದರು. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಮಡಿದ ವಾರ್ತೆ ಕೇಳಿ ಪುನಃ ಹರಪನಹಳ್ಳಿಗೆ ಬಂದು ರಾಜ್ಯವಾಳುತ್ತಿದ್ದಳು. ಇವನು ಚಿಕ್ಕವನಾಗಿದ್ದು ರಾಣೀವಾಸ ಮತ್ತು ಚಾಡಿಕೋರರ ಮಾತು ಕೇಳಿ ಸಂಸ್ಥಾನಕ್ಕೆ ನಿಷ್ಠೆಯುಳ್ಳವರಿಗೆ ಶಿಕ್ಷೆ ವಿಧಿಸಿದನು. ಹೀಗಾಗಿ ಸಂಸ್ಥಾನದಲ್ಲಿ ಪಿತೂರಿಗಳು ನಡೆಯ ಹತ್ತಿದವು. ಅಷ್ಟರಲ್ಲಿ ಆಂಗ್ಲ ಅಧಿಕಾರಿ ಪೂರ್ಣಯ್ಯನವರನ್ನು ಕೂಡಿ ಹರಿಹರಕ್ಕೆ ಬಂದನು. ಅಲ್ಲಿಗೆ ಎರಡನೆಯ ಸೋಮಶೇಖರನಾಯಕ ಮತ್ತು ದಿವಾನ ವಿರೂಪಾಕ್ಷನನ್ನು ಕರೆಸಿದರು. ಜಹಗೀರು ಹಣ ಅವರು ಕೇಳಿದಷ್ಟು ಕೊಟ್ಟು ತನ್ನ ಸೈನ್ಯವನ್ನು ಬಿಟ್ಟುಕೊಟ್ಟು ಶ್ರೀರಂಗ ಪಟ್ಟಣದಲ್ಲಿಯೇ ಇರಬೇಕು. ತಿಂಗಳಿಗೆ ಒಮ್ಮೆ ಹರಪನಹಳ್ಳಿಗೆ ಬಂದು ಹೋಗಬೇಕು. ಹೀಗೆ ಕರಾರು ಮಾಡಿದರು. ಆದರೆ ಅದಕ್ಕೆ ಅರಸ ಒಪ್ಪಲಿಲ್ಲ. ಆಗ ಅರಸ ಮತ್ತು ದಿವಾನರನ್ನು ಒಟ್ಟಿಗೆ ಶ್ರೀರಂಗ ಪಟ್ಟಣಕ್ಕೆ ಕರೆದೊಯ್ದು ಸೆರೆಯಲ್ಲಿಟ್ಟರು. ಈ ವಿಚಾರದಲ್ಲಿ ಅರಸ ಆಂಗ್ಲರ ಕೂಡ ಹೊಂದಾಣಿಕೆ ಮಾಡಿಕೊಂಡಿದ್ದರೆ, ಸಂಡೂರು ಅರಸರಂತೆ ಕೆಲಕಾಲ ರಾಜ್ಯ ಆಳಬಹುದಿತ್ತು. ದಿವಾನನನ್ನು ಮಧುರವಾಗಿ ನೋಡಿಕೊಳ್ಳಲಿಲ್ಲ. ಸೆರೆಯಲ್ಲಿಯೇ ಅವನನ್ನು ಅರಸ ಕೊಲ್ಲಲು ಯತ್ನಿಸಿದನು. ಇದು ಅರಸ ಮಾಡಿದ ಮತ್ತೊಂದು ತಪ್ಪು. ಹೀಗಾಗಿ ಹರಪನಹಳ್ಳಿ ಸಂಸ್ಥಾನ ಹಾಳಾಯಿತು. ಆಂಗ್ಲರ ಆಳ್ವಿಕೆಗೆ ಒಳಗಾಗಿ ಇದು ಒಂದು ತಾಲೂಕು ಪಟ್ಟಣವಾಗಿ ಉಳಿಯಿತು.

ಹರಪನಹಳ್ಳಿ ಪಾಳೆಯಗಾರರ ವಂಶಾವಳಿ*

ದಾದಾಯ್ಯನಾಯಕ (ದಾದೇನಾಯಕ)
೧೪೮೮ - ೧೫೧೪

೧ ಹೊನ್ನಾನಾಗತಿ | ೨ ಜಂಪಾನಾಗತಿ | ೩ ಧರ್ಮಾನಾಗತಿ | ೪ ಹನುಮನಾಗತಿ

ಧರ್ಮಾನಾಗತಿ

ರಂಗಣ್ಣನಾಯಕ (ರಂಗನಾಯಕ)
(೧೫೧೪ - ೧೫೩೮) (ಪಟ್ಟದರಾಣಿ)

ಜಂಪಾನಾಗತಿ
(ಧರ್ಮಪತ್ನಿ)

ಧರ್ಮಣ್ಣನಾಯಕ (೧೫೩೮ - ೧೫೭೦)

ಹೊಂಬಣ್ಣನಾಯಕ (ಓಬಣ್ಣನಾಯಕ) (೧೫೭೨ - ೧೫೭೭)
ವೀರಮುಮ್ಮಡಿ ನಾಯಕ ೧೫೭೭ - ೧೫೮೯

ಮುಮ್ಮಡಿನಾಯಕ
೧೫೮೬ - ೧೬೦೯

ಬಸವಂತನಾಯಕ (ಕೊಟ್ರಪ್ಪನಾಯಕ)
೧೬೦೯ - ೧೬೨೭

ಮರಿಕೊಟ್ಟಪ್ಪನಾಯಕ (೧೬೨೭ - ೧೬೩೭)

ಎರಡನೇ ಬಸವಂತನಾಯಕ (ಬಾಗಳಿ ಬಸಪ್ಪನಾಯಕ) (೧೬೩೭ - ೧೬೩೮)

ಮಡದಿ ಹರಿಯಮ್ಮಾಜಿ ನಾಗತಿ (೧೬೩೮ - ೧೬೪೩)

(ದತ್ತುಪುತ್ರ) ಮುದಿಬಸಪ್ಪನಾಯಕ (ಗೋಟೆಪ್ಪನಾಯಕ) (೧೬೪೩ - ೧೬೬೩)

ಮೊದಲ ವೀರಬಸಪ್ಪ ನಾಯಕ (೧೬೬೩ - ೧೬೬೪)

ಪುತ್ರ ಹೆಸರು - ಜಂಬಣ್ಣ
ಪ್ರೀತಿ ಹೆಸರು - ಪುಟ್ಟರಸ
ಹೆಂಡತಿ ಹೆಸರು - ರೇವಕ್ಕ
ಪ್ರಾಯ ೧೬ರಲ್ಲಿ ಮೈಲಿಬೇನೆಯಿಂದ
ಮೃತನಾದನು.

೧ನೇ ಸೋಮಶೇಖರನಾಯಕ
೧೬೬೪ - ೧೬೮೮

ಪತ್ನಿ ಸೋಮಮ್ಮಾಜಿ
(ಪಟ್ಟದ ರಾಣಿ)

೨ನೇ ವೀರಬಸಪ್ಪನಾಯಕ (ಅಡವಿ ಬೊಮ್ಮಣ್ಣನಾಯಕ) (೧೬೮೮ - ೧೬೯೦)

೨ನೇ (ದತ್ತುಪುತ್ರ) ಬಸಪ್ಪನಾಯಕ (೧೬೯೦ - ೧೭೦೯)

ಅಯ್ಯಪ್ಪನಾಯಕ (೧೭೦೯ - ೧೭೧೨)

ಎರಡನೇ ಸೋಮಶೇಖರನಾಯಕ (೧೭೦೯ - ೧೭೨೧)

೧ ಪತ್ನಿ ಬಸಮ್ಮಾಜಿ | ೨ ನೀಲಮ್ಮಾಜಿ | ೩ ಹಿರಿಬಸಮ್ಮಾಜಿ | ೪ ಸೋಮಮ್ಮಾಜಿ

* ಹರಪನಹಳ್ಳಿ ಪಾಳೆಗಾರರು, ಕುಂಬಾ.ಸ, ಪು. ೮೬-೮೭ , ೧೯೯೬.

೨.೪.೪ ಗುಡೇಕೋಟೆ ಪಾಳೆಯಗಾರರು

ಸುತ್ತಲೂ ಗುಡ್ಡಗಳು ಇರುವುದರಿಂದ ಗುಡ್ಡದ ಮೇಲೆ ಕೋಟೆ ಇರುವುದರಿಂದ ಸ್ಥಳೀಯರು ಗುಡೇಕೋಟೆ ಎಂದು ಕರೆಯುತ್ತಾರೆ. ಇದರ ಬಗ್ಗೆ ಒಮ್ಮತಾಭಿಪ್ರಾಯವಿಲ್ಲ. ಗುಡಿಯಕೋಟೆ - ಗುಡಿಗಳ ಕೋಟೆ - ಗುಡೇಕೋಟೆ ಎಂದು, ಗುಡಿ ಗೋಪುರಗಳು ಹೆಚ್ಚಾಗಿರುವುದರಿಂದಲೂ ಗುಡ್ಡದ ಮೇಲೆ ಕೋಟೆ ನಿರ್ಮಿಸಿರುವುದರಿಂದಲೂ ಇದಕ್ಕೆ ಗುಡೇಕೋಟೆ ಎಂಬ ಹೆಸರು ಬಂದಿರಬಹುದು.

ಜಟ್ಟಂಗಿ ರಾಮೇಶ್ವರ ಗುಡೇಕೋಟೆಯ ಪಾಳೆಯಗಾರರ ಕುಲದೇವರು. ಸಂಡೂರಿನ ಸ್ವಾಮಿಮಲೆಯ ಕಾರ್ತಿಕೇಯನ ಉಲ್ಲೇಖವು ಮಯೂರವರ್ಮನ ಚಂದ್ರವಳ್ಳಿ ಶಾಸನದಲ್ಲಿ ಕಂಡುಬರುತ್ತದೆ. ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಗುಡೇಕೋಟೆ ಪಾಳೆಗಾರರ ಮನೆತನದ ಶಾಸನಗಳು ಸಿಕ್ಕಿವೆ. (ಬಳ್ಳಾರಿ, ಚಿತ್ರದುರ್ಗ) ಸಂಡೂರಿನ ಕುಮಾರಸ್ವಾಮಿ ದೇವಾಲಯವು ೧ನೇ ಕೃಷ್ಣನ ಕಾಲದಲ್ಲಿ ಕಟ್ಟಲ್ಪಟ್ಟಿದ್ದು, ಈ ದೇವಾಲಯವು ರಾಷ್ಟ್ರಕೂಟರ ಶೈಲಿಯಲ್ಲಿದೆ. ಈ ಕಾಲದಲ್ಲಿ ನೊಳಂಬವಾಡಿಯು ಇವರ ಆಧೀನದಲ್ಲಿರುವುದು ಕಂಡುಬರುತ್ತದೆ. ಈ ಆಧಾರದ ಮೇಲೆ ಈ ಗ್ರಾಮವು ಇವರ ಆಳ್ವಿಕೆಗೊಳಪಟ್ಟಿತ್ತೆಂದು ತಿಳಿಯುತ್ತದೆ. ಪ್ರಸ್ತುತ ಗುಡೇಕೋಟೆಯ ಪ್ರದೇಶವು ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳ ಗಡಿಭಾಗದಲ್ಲಿದ್ದು, ಇವೆರಡೂ ಜಿಲ್ಲೆಗಳಲ್ಲಿ ಹೊಯ್ಸಳರ ಕಾಲಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ಸಿಕ್ಕಿವೆ. (ಎಂ.ಎಚ್.ಬಸವರಾಜ್, ಎಂ.ಫಿಲ್. ಪ್ರಬಂಧವನ್ನು ಆಕಾರವಾಗಿ ಬಳಸಿಕೊಳ್ಳಲಾಗಿದೆ) ಗುಡೇಕೋಟೆಗೆ ಹತ್ತಿರದಲ್ಲಿರುವ ಸಿದ್ಧಾಪುರ (ಮೊಳಕಾಲ್ಮೂರು ತಾಲೂಕು)ದಲ್ಲಿ ಹೊಯ್ಸಳರ ಕಾಲಕ್ಕೆ ಸಂಬಂಧಿಸಿದ (೧೨೧೫) ವೀರಗಲ್ಲು ಆ ಕಾಲದ ಸಾಮಾಜಿಕ ಪದ್ಧತಿಯನ್ನು ಸಾರುತ್ತದೆ. ಆಗಿನ ಕಾಲದಲ್ಲಿ ಕಂಪ್ಲಿಯು ನೊಳಂಬವಾಡಿಯ ಪ್ರಾಂತ್ಯದ ರಾಜಧಾನಿಯಾಗಿತ್ತು. ೨ನೇ ಬಲ್ಲಾಳನು ನೊಳಂಬವಾಡಿಯನ್ನು ಹಲವು ಬಾರಿ ವಶಪಡಿಸಿಕೊಂಡಿದ್ದನಲ್ಲದೆ ತುಂಗಭದ್ರ ನದಿಯನ್ನು ಉತ್ತರದ ಗಡಿಯಾಗಿ ಮಾಡಿಕೊಂಡಿದ್ದನು. ಈ ಮೇಲಿನ ಅಂಶಗಳನ್ನು ನೋಡುವುದರಿಂದ ಗುಡೇಕೋಟೆಯ ಪ್ರದೇಶವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಂತೆ ಕಂಡುಬರುತ್ತದೆ.

ಹೊಸಮಲೆ ದುರ್ಗದ ಅರಸ (ನಾಯಕ) ಕಂಪಿಲರಾಯನು ಕ್ರಿ.ಶ. ೧೩೨೦ರಲ್ಲಿ ಸ್ವತಂತ್ರನಾದನು ದೇವಗಿರಿಯ, ಸೇವುಣರು ರಾಜ್ಯವು ಮಲ್ಲಿಕಾಫರನ ದಾಳಿಗೆ ತುತ್ತಾಗಿ ನಾಶವಾಗಲು, ಮಲ್ಲಿಕಾಫರನು ದ್ವಾರಸಮುದ್ರ ಮತ್ತು ದೇವಗಿರಿಯನ್ನು ಕೊಳ್ಳೆ ಹೊಡೆದುಕೊಂಡು ಹೋದನು. ಸೇವುಣರ ಸಾಮಂತ ಅರಸನಾಗಿದ್ದ ಕಂಪಿಲರಾಯ ಮಲ್ಲಿಕಾಫರನು ಅತ್ತ ಹೋಗುತ್ತಲೇ ಇತ್ತ ಸ್ವತಂತ್ರನೆಂದು ಸಾರಿಕೊಂಡನು. ಈತನ ರಾಜಧಾನಿಗಳಲ್ಲಿ ಒಂದಾದ ಹೊಸಮಲೆದುರ್ಗವು ಸಂಡೂರು ಸೀಮೆಯಾಗಿದ್ದು, ಗುಡೇಕೋಟೆ ಪ್ರದೇಶವು ಈ ಸೀಮೆಯ ಹತ್ತಿರದಲ್ಲಿದೆ. ಅಷ್ಟೇ ಅಲ್ಲದೆ ಗುಡೇಕೋಟೆ ಗಡಿಯಾಂಕ ಭೀಮನು ಕುಮಾರರಾಮನ ಸ್ನೇಹಿತನಾಗಿದ್ದು, ಗುಡೇಕೋಟೆ ಪಾಳೆಗಾರರು ಕುಮಾರರಾಮನ ವಂಶಸ್ಥರೆಂದು ಹೇಳಿಕೊಂಡಿರುವರು. ಇದನ್ನು ಗಮನಿಸಿದಾಗ, ಗುಡೇಕೋಟೆ ಪ್ರದೇಶವು ಕುಮ್ಮಟದುರ್ಗದ ಅರಸರ ಅಧೀನದಲ್ಲಿದ್ದು, ಅವರ ಆಡಳಿತಕ್ಕೆ

ಒಳಪಟ್ಟಿರಬಹುದೆಂದು ಗುರುತಿಸಬಹುದು. ಈ ಗುಡೇಕೋಟೆ ಪ್ರದೇಶವು ಕೋಗಳಿ ನಾಡಿಗೆ ಸೇರಿದ್ದು, ಮುಂದೆ ವಿಜಯನಗರ ಸಾಮ್ರಾಜ್ಯದಲ್ಲಿ ಒಂದು ಕಿರು ಪ್ರಾಂತವಾಗಿತ್ತಲ್ಲದೆ, ಅರಸರಿಂದ ನಿಯೋಜಿತನಾದ ಪ್ರತಿನಿಧಿ ಇಲ್ಲಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದನು. ಅಲ್ಲದೆ ಈ ಪ್ರದೇಶವನ್ನು ಕೃಷ್ಣದೇವರಾಯನ ಕಾಲದಲ್ಲಿ ಗುಡೇಕೋಟೆ ಸೀಮೆಗೆ ಕೊಟ್ಟ ವಿಚಾರವು ಕೈಫಿಯತ್ತುಗಳಿಂದ ತಿಳಿದುಬರುತ್ತದೆ. ನಂತರ ೧೫೬೫ರಲ್ಲಿ ಜರುಗಿದ ತಾಳಿಕೋಟೆ ಯುದ್ಧನಂತರ ಈ ಭಾಗವು ಬಿಜಾಪುರದ ೧ನೆಯ ಅಲಿ ಆದಿಲ್ ಷಾ (೧೫೬೮)ಗೆ ವಶವಾಗುತ್ತದೆ. ಆನಂತರ ಇಲ್ಲಿಯ ಪಾಳೆಯಗಾರರು ರಾಜಕೀಯ ಪ್ರಾಬಲ್ಯವನ್ನು ಬೆಳೆಸಿಕೊಂಡು ಆದಿಲ್ ಷಾಗಳಿಗೆ ಅಧೀನರಾಗಿ ಈ ಭಾಗದ ಆಡಳಿತ ನಡೆಸುತ್ತಾರೆ. ಬಿಜಾಪುರ ಸುಲ್ತಾನನು ಕ್ರಿ.ಶ. ೧೬೪೦ರಲ್ಲಿ ಈ ಪ್ರದೇಶವನ್ನು ಶಿವಾಜಿಗೆ ಬಳುವಳಿಯಾಗಿ ನೀಡಿದನೆಂಬುದು ಚರಿತ್ರೆಯಿಂದ ತಿಳಿದುಬರುತ್ತದೆ.

ಚೂರನೂರಿನಲ್ಲಿ ದೊರೆತ ಈ ಶಾಸನವು ವಿರಕ್ತಮಠದ ವರಾಂಡದಲ್ಲಿದೆ. ಕ್ರಿ.ಶ. ೧೭ನೇ ಶತಮಾನದ ಈ ಶಾಸನದಲ್ಲಿ ಗುಡೇಕೋಟೆ ಸಂಡೂರು ಭಾಗದ ಜನರಿಗೆ ರಾಜಪ್ಪನಾಯಕನ ಆಜ್ಞೆಯ ಮೇರೆಗೆ ಬಮ್ಮಿನಾಯಕನು ಆ ಭಾಗದಲ್ಲಿ ಹೊಸದಾಗಿ ಹುಟ್ಟಿದ ಮಕ್ಕಳ (ಬಾಲತೆರಿಗೆ) ಮತ್ತು ಸತ್ತವರ ಮೇಲೆ ತೆರಿಗೆ ವಿಧಿಸಬಾರದೆಂದು ತಿಳಿಸುತ್ತಾನೆ.

ಶಿವಾಜಿ ಮರಣ ನಂತರ ಕ್ರಿ.ಶ. ೧೬೮೦ರಲ್ಲಿ ಇಡೀ ದಕ್ಷಿಣಭಾರತವು ಔರಂಗಜೇಬನ ವಶವಾಯಿತು. ಆದರೆ ಈತನಿಗೆ ದಕ್ಷಿಣಭಾರತದ ಪ್ರದೇಶದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಲು ಔರಂಗಜೇಬನಿಗೆ ಸಾಧ್ಯವಾಗಲಿಲ್ಲ. ಇವನ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶದ ಪಾಳೆಗಾರರು ಹೆಚ್ಚು ಪ್ರಬಲರಾದರು. ಈ ಗುಡೇಕೋಟೆಯ ಪಾಳೇಗಾರರು ಸುಮಾರು ೨೦೦ ವರ್ಷಗಳ ಕಾಲ ತಮ್ಮ ಆಡಳಿತ ನಡೆಸಿದ್ದಾರೆ.

ಚೂರನೂರಿನ ಹನುಮಂತ ದೇವಾಲಯದ ಮುಂದಿರುವ ಕ್ರಿ.ಶ. ೧೬೯೦ರ ಶಾಸನವು ಗುಡೇಕೋಟೆ ಮತ್ತು ಸಂಡೂರಿನ ಇಮ್ಮಡಿ ರಾಜಪ್ಪನಾಯಕ ಹೊರಮಲೆ ಸೀಮೆಯ ಜನರಿಗೆ ಒಂದು ಪ್ರಕಟಣೆ ಹೊರಡಿಸಿ ಅದರ ಪ್ರಕಾರ ಗುಡೇಕೋಟೆಯ ಆಡಳಿತದ ಸಮಯದಲ್ಲಿದ್ದಂತೆ ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದನ್ನು ತಿಳಿಸುತ್ತದೆ.

ಒಟ್ಟಿನಲ್ಲಿ ಗುಡೇಕೋಟೆಯ ಪಾಳೆಗಾರನಾದ ಇಮ್ಮಡಿ ರಾಜಪ್ಪನಾಯಕನು ಆ ಭಾಗದ ಜನತೆಗೆ ನೀಡಿದ ಆಶ್ವಾಸನೆಯನ್ನು ಈ ಶಾಸನಗಳು ತಿಳಿಸುತ್ತವೆ.

ಮುಂದೆ ಮೈಸೂರಿನ ಹೈದರಾಲಿಯು ಗುಡೇಕೋಟೆ ಮೇಲೆ ದಾಳಿ ನಡೆಸಿ ತನ್ನ ವಶಕ್ಕೆ ತೆಗೆದುಕೊಂಡನು. ಮುಂದೆ ಅವನ ಮಗನಾದ ಟಿಪ್ಪುಸುಲ್ತಾನ್ ೧೭೮೬ರಲ್ಲಿ ಆದವಾನಿ, ರಾಯದುರ್ಗ, ಹರಪನಹಳ್ಳಿ ಮುಂತಾದ ಪಾಳೆಯಗಾರರನ್ನು ಸೋಲಿಸಿ ತನ್ನ ಅಧಿಪತ್ಯದೊಳಗೆ ಸೇರಿಸಿಕೊಂಡನು. ಒಟ್ಟಿನಲ್ಲಿ ಗುಡೇಕೋಟೆ ಪ್ರದೇಶವು ೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಹೈದರಾಲಿ ಟಿಪ್ಪುಸುಲ್ತಾನರ ವಶದಲ್ಲಿತ್ತು.

[illegible]

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಹೈದರಾಬಾದಿನ ನಿಜಾಮ್ ಮತ್ತು ಮರಾಠರು ಒಪ್ಪಂದ ಮಾಡಿಕೊಂಡು ಒಟ್ಟಾಗಿ ಟಿಪ್ಪುಸುಲ್ತಾನನ ಮೇಲೆ ಕ್ರಿ.ಶ. ೧೭೯೨ರಲ್ಲಿ ಆಕ್ರಮಣ ನಡೆಸಿದರು. ಯುದ್ಧದಲ್ಲಿ ಟಿಪ್ಪುಸುಲ್ತಾನ್ ಸೋತನು. ಇದರಿಂದಾಗಿ ಹರಪನಹಳ್ಳಿ ಸಂಡೂರು ರಾಯದುರ್ಗ ಆಯಾ ಪಾಳೆಯಗಾರರಿಗೆ ಇಂತಿರುಗಿಸಲ್ಪಟ್ಟವು. ಉಳಿದ ಪ್ರದೇಶವು ನಿಜಾಮನ ವಶವಾಯಿತು. ಮುಂದೆ ೧೭೯೯ರಲ್ಲಿ ಟಿಪ್ಪುಸುಲ್ತಾನನ ಮೇಲೆ ಬ್ರಿಟಿಷರು ಆಕ್ರಮಣ ನಡೆಸಿದರು. ಈ ಯುದ್ಧದಲ್ಲಿ ಹೋರಾಟ ಮಾಡುತ್ತಾ ಟಿಪ್ಪು ಶ್ರೀರಂಗಪಟ್ಟಣದಲ್ಲಿ ಹತನಾದನು. ಯುದ್ಧ ನಂತರ ಒಪ್ಪಂದದಂತೆ ಗುಡೇಕೋಟೆ ಪ್ರದೇಶವು ಹೈದರಾಬಾದಿನ ನಿಜಾಮನ ವಶವಾಯಿತು.

೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಗುಡೇಕೋಟೆ ಪ್ರದೇಶವು ಹೈದರಾಬಾದ್ ನಿಜಾಮನ ಅಧಿಪತ್ಯಕ್ಕೆ ಒಳಪಟ್ಟಿದ್ದು, ಕ್ರಿ.ಶ. ೧೮೦೦ರಲ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ಹೈದರಾಬಾದ್ ನಿಜಾಮನು ಈ ಪ್ರದೇಶವನ್ನು ಸಂಭಾವನೆ ಬಾಬ್ತು ಬ್ರಿಟಿಷರಿಗೆ ಕಾಣಿಕೆ ನೀಡಿದನು. ನಂತರ ಬ್ರಿಟಿಷರು ಗುಡೇಕೋಟೆ ಪ್ರದೇಶವನ್ನು ಬಳ್ಳಾರಿ ಜಿಲ್ಲೆಗೆ ಸೇರ್ಪಡಿಸಿಕೊಂಡು, ಕೂಡ್ಲಿಗೆ ತಾಲೂಕಿಗೆ ಸೇರಿಸಿದರು. ಬ್ರಿಟಿಷರು ಬಳ್ಳಾರಿ ಜಿಲ್ಲೆಯನ್ನು ಮದ್ರಾಸ್ ಪ್ರಾಂತಕ್ಕೆ ಸೇರಿಸಿಕೊಂಡರು. ಬಳ್ಳಾರಿ ಜಿಲ್ಲೆಯು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಾಗ ಅದರ ಪ್ರಥಮ ಕಲೆಕ್ಟರ್ ಆಗಿ ಥಾಮಸ್ ಮನ್ರೊ ಅಧಿಕಾರ ವಹಿಸಿಕೊಂಡನು. ಈ ಪ್ರದೇಶದಲ್ಲಿ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಬಂಡಾಯಗಳನ್ನೆಲ್ಲಾ ಇವನು ಹತ್ತಿಕ್ಕಿದನು. ಇವನು ಏಕರೂಪ ಆಡಳಿತವನ್ನು ಜಾರಿಗೆ ತಂದನು. ಹೀಗೆ ಬ್ರಿಟಿಷರು ಬಳ್ಳಾರಿ ಜಿಲ್ಲೆಯನ್ನು ಸುಮಾರು ೧೪೭ ವರ್ಷಗಳ ಕಾಲ ಆಳಿದರು. ಕ್ರಿ.ಶ. ೧೮೦೦-೧೮೫೮ರ ವರೆಗೆ ಈಸ್ಟ್ ಇಂಡಿಯಾ ಕಂಪನಿಯೂ ತದನಂತರ ಬ್ರಿಟಿಷ್ ಚಕ್ರಾಧಿಪತ್ಯವು ಬಳ್ಳಾರಿ ಜಿಲ್ಲೆಯನ್ನು ಆಳಿತು. ೧೯೪೭ರಲ್ಲಿ ಸ್ವಾತಂತ್ರ್ಯ ಬಂದ ನಂತರ ಬಳ್ಳಾರಿ ಪ್ರದೇಶವು ಮೈಸೂರು ರಾಜ್ಯಕ್ಕೆ ಸೇರಿತ್ತು. ೧೯೫೩ಕ್ಕೆ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯ್ತಿಗಳ ಅಧಿಕರ ವಿಕೇಂದ್ರಿಕರಣಗಳಿಂದ ಫಲಿತಾಂಶ ಕಂಡುಕೊಂಡ ಗುಡೇಕೋಟೆ ಪ್ರದೇಶವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತನ್ನನ್ನು ತಾನು ಗುರುತಿಸಿಕೊಂಡಿದೆ.

ಕೈಫಿಯತ್ತುಗಳು

ಶ್ರೀ ಕೊಮಾರ ದೇವರ ಕ್ಷೇತ್ರದ ಕೈಫಿಯತ್ತು, ಹಿರೇಹಾಳು ಕೈಫಿಯತ್ತು, ದರೋಜಿ ಗ್ರಾಮದ ಕೈಫಿಯತ್ತು ಮತ್ತು ಅಂತಾಪುರ ಕೈಫಿಯತ್ತು ಇವುಗಳಲ್ಲಿ ಗುಡೇಕೋಟೆ ಪಾಳೆಯಗಾರರ ಬಗ್ಗೆ ಕೆಲವು ಮಾಹಿತಿಗಳು ಸಿಕ್ಕಿವೆ.

ಈ ಪಾಳೆಯಗಾರರ ಮೂಲ ಕಂಪಲಿಯ ಕುಮಾರರಾಮನ ವಂಶಜರೆಂದು ತಿಳಿದುಬರುವುದು. ತಮ್ಮನ್ನು ಮರಳಿನವರೆಂದು ಕರೆದುಕೊಂಡಿದ್ದಾರೆ. ಗುಡೇಕೋಟೆಯ 'ಗಡಿಯಾಂಕ ಭೀಮ' ಈ ವಂಶದಲ್ಲಿ ಪ್ರಬಲವಾಗಿಯೂ ಮತ್ತು ಮೂಲ ಪುರುಷನೆಂಬಂತೆ ಕಂಡುಬರುತ್ತಾನೆ.

ಶಕವರ್ಷ ೧೫೫೪ (ಕ್ರಿ.ಶ. ೧೬೩೨) ನೆಯ ನಂದನ ಸಂವತ್ಸರದಲ್ಲಿ ಗುಡೇಕೋಟೆ, ಸಂಡೂರು, ಬಾಂಡ್ರವಿಗಳನ್ನು ದೊರೆಗಳಾದ ಬೊಮ್ಮಂತ ರಾಜ, ಜಟಂಗರಾಜು ಕೋಟೆ ಕಟ್ಟಿ ರಾಜ್ಯ ಸ್ಥಾಪಿಸಿ ಆಳ್ವಿಕೆ ನಡೆಸಿದ್ದರು.

ವಿಜಯನಗರದ ಅರವೀಡು ವಂಶದ ೨ನೇ ವೆಂಕಟಪತಿ ದೇವರಾಯ ಆಳ್ವಿಕೆ ನಡೆಸುತ್ತಿದ್ದ. (ಹೀಗಾಗಿ ಈ ಬಗ್ಗೆ ಇನ್ನಷ್ಟು ಆಧಾರಗಳ ಅಗತ್ಯವಿದೆ) ಜಾಗಿರುಕೊಟ್ಟ ಗ್ರಾಮಗಳೆಂದರೆ ಉಜ್ಜನಿ, ಜರಿಮಲೆ, ಗುಡೇಕೋಟೆ, ಬಾಂಡ್ರಾವಿ, ಸಂಡೂರು, ಕುಡತಿನಿ.

ಹೀಗೆ ಹಿರೇ ಬೊಮ್ಮಂತ ರಾಜನಿಗೆ ಮಕ್ಕಳು ಇಲ್ಲದ ಕಾರಣ ತಮ್ಮ ಮನೆಯ ದೇವರಾದ ಜೇಟಂಗಿರಾಮೇಶ್ವರನ ಸೇವೆಯನ್ನು ಮಾಡುತ್ತಾನೆ. ಆಗ ದೇವರು ಸ್ವಪ್ನದಲ್ಲಿ ಬಂದು ನಿನಗೆ ಅಷ್ಟ ಪುತ್ರರಾಗುತ್ತಾರೆ ಎಂದು ಹೇಳುತ್ತಾನೆ. ಹಾಗೆ ಏಳು ಮಂದಿ ಪುತ್ರರು ಹುಟ್ಟಿದರು. ಅವರಿಗೆ ನಾಮಕರಣ ಮಾಡಿದನು. ಹೀಗೆ ಇರುತ್ತಿರಲು ಬೊಮ್ಮಂತ ರಾಜನ ಮಕ್ಕಳು ಪ್ರಾಪ್ತ ವಯಸ್ಸಿಗೆ ಬರಲು ಆತನು ''ಯೀ ಮಕ್ಕಳು ಯೇಳು ಮಂದಿ ದೇವರ ವರಸಿಂದ ಹುಟ್ಟಿದವರು. ಯಿವರೊಳಗೆ ವಬ್ಬಗ್ಗೆ ಪಟ್ಟ ಕಟ್ಟ್ಲೆಕ್ಕೆ ಬಾರದು'' ಎಂದು ತಿಳಿದು ಏಳು ಮಂದಿಗೂ ಒಬ್ಬೊಬ್ಬರ ಹೆಸರಿನಲ್ಲಿ ಏಳು ತಾಲೂಕು ನೇಮಕಾ ಮಾಡಿದನು. ಅದರ ವಿವರವು ಹೀಗಿದೆ.

೧. ಹಿರೇ ಬೊಮ್ಮಂತ ರಾಜ - ಕುಡತಿನಿ (ಕುತ್ತಾನ)
೨. ಬಿಸಳ ರಾಜ - ಸಂಡೂರು
೩. ರಾಜಪ್ಪನಾಯಕನಿಗೆ - ಬಾಂಡ್ರಾವಿ
೪. ಮಲ್ಲಿಕಾರ್ಜುನ ನಾಯಕನಿಗೆ - ಜರಿಮಲೆ
೫. ವೀರಪ್ಪನಾಯಕನಿಗೆ - ಉಜ್ಜನಿ
೬. ಇಮ್ಮಡಿರಾಜ ನಾಯಕನಿಗೆ - ಗುಡೇಕೋಟೆ
೭. ಚೆನ್ನ ರಾಜನಿಗೆ - ವಡ್ಡು, ದರೋಜಿ ಪ್ರದೇಶಗಳನ್ನು ಬಿಟ್ಟುಕೊಡಲಾಯಿತು.

[illegible]

[illegible]

[illegible]

[illegible]

ದೊರೆತ ಆಧಾರದ ಮೇಲೆ ಗುಡೇಕೋಟೆ ಪಾಳೆಯಗಾರರ ವಂಶಾವಳಿ

ರಾಮಪ್ಪನಾಯ್ಕ

|

ಇಮ್ಮಡಿ ಬೊಮ್ಮಂತ ರಾಜರು (ಅಮ್ಮ ಹಿರಿಯಮ್ಮ)

|

ವೆಂಕಟರಾಜರು ಪೊಂಪಪತಿ ರಾಜರು

|

ಸಿದ್ಧಯಾಜಿ ಗೌರಯಾಜಿ

|

ಬೊಮ್ಮಂತರಾಜರು (ಭಂಗಾರಮ್ಮನವರು) — ನೀಲಮ್ಮಾಜಿ (ಭಂಗಾರನಾಯ್ಕರು ಹೊಸಕೋಟೆ) — ಕಾತಯ್ಯ ರಾಜರು (ಶಿದ್ಧಮ್ಮಾಜಿ) — ಚೆನ್ನಯ್ಯ ರಾಜರು (ವಿರುಪಾಕ್ಷಮ್ಮನವರು)

|

ಪಂಪಾಪತಿ ರಾಜರು

|

ನೀಲಮ್ಮಾಜಿ — ಇಮ್ಮಡಿ ಸದಾಶಿವರಾಯರು (ಜಂಪಣ್ಣನಾಯ್ಕರು) — ಗೌರಮ್ಮಾಜಿ (ಲಕ್ಷ್ಮಮ್ಮ ಅಮ್ಮಾಜಿ) — ಜಟಂಗ ರಾಜರು

|

ಚಿತ್ರದುರ್ಗ

ಗುಡೇಕೋಟೆ ಪಾಳೆಗಾರರ ಆಳ್ವಿಕೆಯ ಕ್ರಮಬದ್ಧತೆಯಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. (ಇದರ ಸ್ಥಾಪಕ ಮರುಳೆ ಬೊಮ್ಮಂತರಾಜ - ಸ್ಪಷ್ಟ)

೨.೪.೫ ಜರಿಮಲೆ ಪಾಳೆಗಾರರು

ಜರಿಮಲೆ ಪಾಳೆಗಾರಿಕೆಯನ್ನು ಪೆನ್ನಪ್ಪನೆಂಬುವನು ಸ್ಥಾಪನೆ ಮಾಡಿದನು. ವಿಜಯನಗರದ ಅಚ್ಯುತರಾಯನು ತನ್ನಲ್ಲಿ ನಿಷ್ಠೆಯಿಂದ ಕೆಲಸ ಮಾಡಿದುದಕ್ಕಾಗಿ ಪೆನ್ನಪ್ಪನಿಗೆ ಜರಿಮಲೆ ರಾಜ್ಯವನ್ನು ಬಹುಮಾನವಾಗಿ ಕೊಟ್ಟನು. ವಿಜಯನಗರ ಪತನಾನಂತರ ಈ ಅರಸ ಸ್ವತಂತ್ರನಾದನು.[೭]

ಜರಿಮಲೆ ಬೂಪರು ಮೊದಲು ಕಂಚಿ ದೇಶದ ನಿವಾಸಿಗಳು. (ಪಲ್ಲವರ ರಾಜಧಾನಿ) ಸುಮಾರು ೬೦೦ - ೭೦೦ ವರ್ಷಗಳ ಹಿಂದೆ ಉತ್ತರದ ಕಡೆ ಹೊರಟರು. ಮುಂದಿನ ರಾಜ್ಯವೇ ಮೈಸೂರು. ದಾರಿಯಲ್ಲಿ ಅವರಿಗೆ ಇದ್ದಕ್ಕಿದ್ದ ಹಾಗೆ ಒಂದು ಆಕಳು ಕಾಣಿಸಿಕೊಂಡು ಮಾಯವಾಯ್ತು. ಆ ಆಕಳಿನ ಹೆಜ್ಜೆಯನ್ನು ಅನುಸರಿಸಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಗಂಗಮ್ಮನ ಹಳ್ಳಿ ದೋಣಿ ಗುಡ್ಡದವರೆಗೆ ಬಂದರು. ಆ ಗುಡ್ಡವನ್ನು ಹತ್ತಿ ನೋಡುತ್ತಿರೆ ಸುತ್ತಮುತ್ತ ಹಾಸಿನ ಮರಗಳ ಕಾಡು ಕಂಗೊಳಿಸುತಿತ್ತು. ಅಲ್ಲಿಂದ ಶಬ್ದ ಜಾಗಟೆಯ ನಾದ ಕೇಳಿಬರುತ್ತಿತ್ತು. ಆ ನಾದವನ್ನು ಅನುಸರಿಸಿ ಈ ಭೂಪರು ಅಲ್ಲಿಗೆ ಹೋಗಿ ನೋಡಲು, ಮಹಾಯೋಗಿ ವರೇಣ್ಯರ ಶಿಬಿರ ಕಾಣಿಸಿತು. ಒಳಗೆ ಸ್ವಾಮಿಗಳು ಪೂಜೆ ಮಾಡುತ್ತಿದ್ದರು. ಭೂಪರು ಹೊರಗೆ ಸ್ವಾಮಿಗಳ ಆಜ್ಞೆಗಾಗಿ ಕಾದು ನಿಂತರು. ಪೂಜಾ ನಂತರ ಸ್ವಾಮಿಗಳ ದರ್ಶನವಾಯ್ತು. ಗುರುಗಳೊಂದಿಗೆ

ಮಾತನ್ನಾಡುತ್ತಿರುವಾಗ ಪಕ್ಕದಲ್ಲಿ ನಿಂತ ಸುರಭಿ (ಆಕಳು, ಕಾಮಧೇನು) ಕೆಚ್ಚಲಿನಿಂದ ಹಾಲು ತನ್ನಷ್ಟಕ್ಕೆ ತಾನೇ ಸುರಿಯಲಾರಂಭಿಸಿತು, ಇದರಿಂದ ಆ ಸ್ಥಳಕ್ಕೆ ಸುರಭಿ - ಸಿರಬಿ - ಚಿರಬಿ ಎಂಬ ಅಬಿದಾನವಾಯ್ತು. ಇಂದು ಈ ಗ್ರಾಮ ಕೂಡ್ಲಿಗಿ ತಾಲೂಕಿನಲ್ಲಿದೆ.

ಸ್ವಾಮಿಗಳ ಆದೇಶದ ಮೇರೆಗೆ ಆ ಏಳು ಮಂದಿ ವೀರರು ಚಳ್ಳಕೆರೆ ತಾಲೂಕಿನ ಗ್ರಾಮವಾದ ಮಳೆಭೂಪ ಸಮುದ್ರಕ್ಕೆ ಬಂದು, ಅಲ್ಲಿ ನೆಲೆಸಿದರು. ಆ ಗ್ರಾಮದ ಕಾಡಿನಲ್ಲಿ ಬಿಳಿಹಂದಿ ದಾರಿಯಲ್ಲಿ ಹೋಗುವವರಿಗೆ ತುಂಬಾ ಉಪದ್ರವ ಕೊಡುತ್ತಿತ್ತು. ಬೇಸತ್ತ ಜನ ಆ ಊರಿನ ಮುಖಂಡನಾದ ಭೈಯಪ್ಪನಿಗೆ ಮೊರೆಯಿಟ್ಟರು. ಭೈಯಪ್ಪ ಅಂಥ ಪ್ರಬಲವಾದ ಹಂದಿಯನ್ನು ಎದುರಿಸಲು ಕಂಚೀ ದೇಶದ ವೀರರೇ ಸಮರ್ಥರೆಂದು ತಿಳಿಸಿದನು.

ಊರಿನ ಪ್ರಮುಖರೆಲ್ಲಾ ಸೇರಿ ಆ ವೀರರಲ್ಲಿ ಬೇಡಿಕೊಂಡರು. ಶಿವತತ್ವ ಬೋದನಾರ್ಥವಾಗಿ ಪ್ರವಾಸದಲ್ಲಿದ್ದ ಶ್ರೀಮರುಳ ಸಿದ್ಧಾರ್ಯರನ್ನು ಪುನಃ ಸಂದರ್ಶಿಸಿ, ಅವರ ಆರ್ಶೀವಾದ ಪಡೆದರು. ಶ್ರೀಗುರು ವರೇಣ್ಯರು ಅಪ್ಪಣೆ ಕೊಡಿಸಿದಂತೆ ೭ ಮಂದಿ ವೀರರು ಬೇಟೆಗೆ ಹೊರಟರು. ಆ ಏಳು ಮಂದಿ ಪಾಳೆಗಾರರ ಹೆಸರು ಹೀಗಿವೆ.

೧. ಸಿದ್ದಪ್ಪನಾಯ್ಕ

೨. ಲಿಂಗಳನಾಯ್ಕ

೩. ಓಬಳನಾಯ್ಕ

೪. ಮಲ್ಲಿಕಾರ್ಜುನ ನಾಯ್ಕ

೫, ೬, ೭, ನಾಯ್ಕರ ಹೆಸರು ತಿಳಿದುಬಂದಿಲ್ಲ.

ಮಳೆ ಭೂಪ ಸಮುದ್ರದಿಂದ ಈ ಏಳುಮಂದಿ ನಾಯಕರು ಏಳು ನಾಯಿಗಳೊಂದಿಗೆ ಬಿಳಿಹಂದಿಯನ್ನು ಬೆನ್ನಟ್ಟಿ ಹೋದರು. ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ 'ನೀರ್ಕಲ್ ಕೆರೆಹಳ್ಳಿ' (ಚಿಕ್ಕಕೆರೆನಳ್ಳಿ) ಎನ್ನುವ ಗ್ರಾಮದವರೆಗೆ ಆ ಬಿಳಿಹಂದಿ ಓಡಿಬಂದಿತು. ಅಲ್ಲೊಂದು ಗುಡ್ಡ ಪಕ್ಕದಲ್ಲಿ ಒಂದು ಹಳ್ಳ ಆ ಹಳ್ಳದಲ್ಲಿ ಹಂದಿ ಸ್ನಾನ ಮಾಡಿ ಗುಡ್ಡದ ದೊಡ್ಡ ಗುಂಡಿನ ಬದಿ ಮಲಗಿತು.

ಏಳು ಮಂದಿ ನಾಯ್ಕರ ಪೈಕಿ ಭೂಮರಾಜು ಎಂಬುವನು ಆ ಹಂದಿಗೆ ಭರ್ಚಿ ಹಾಕಿದ. ಹಂದಿ ಸಿಂಹದಂತಹ ಗರ್ಜನೆ ಮಾಡಿತು. ಪಕ್ಕದಲ್ಲಿದ್ದ ಗುಂಡು ಆ ಭಯಂಕರವಾದ ಗರ್ಜನೆಗೆ ಸಿಡಿದುಹೋಯಿತು. ಇಂದಿಗೂ ಆ ಗುಂಡನ್ನು ಹಂದಿವಡೆದ ಕಲ್ಲು ಎಂದು ಕರೆಯುತ್ತಾರೆ.

ಆ ಹಂದಿ ಅಲ್ಲಿಂದ ಮುಂದೆ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ ಎಂಬ ಗ್ರಾಮದ ಕಡೆ ಓಡಹತ್ತಿತ್ತು. ನಾಯಕರೂ ಅದನ್ನು ಬೆನ್ನಟ್ಟಿ ಹೋದರು. ಬೇಟೆಯಾಟದಲ್ಲಿ ಅವರು ಬೆಂದು ಬಸವಳಿದರು. ಹೆಚ್ಚು

ಬಾಯಾರಿಕೆಯಾಯಿತು. ಉಜ್ಜಯಿನಿ ಈಗಿನ ದೇವಾಲಯದ ಸ್ಥಳದಲ್ಲಿ ಬಾರಿ ಪೆಳೆ ಬೆಳೆದಿತ್ತು. ಹಂದಿ ಆ ಪೊದೆಯಲ್ಲಿ ಹೊಕ್ಕು ಬಯಲಾಯ್ತು, ಬಸವಳಿದ ನಾಯಕರು ಅಲ್ಲಿಯೇ ಮರದ ನೆರಳಿನಲ್ಲಿ ತಂಗಿದರು.

ಭೂಮರಾಜುವಿನ ನಾಯಿ ಆ ಪೆಳೆಯಲ್ಲಿ ಹೊಕ್ಕು ಬಂದಿತು. ನಾಯಿ ಮೈರಾಡಿಯಾಗಿದ್ದನ್ನು ಭೂಮರಾಜು ಪರಿಶೀಲಿಸಿದ. ನಾಯಿ ಮೈ ಮೇಲಿನ ರಾಡಿಯನ್ನು ನೋಡಿ, ಭೂಮರಾಜು ಈ ಪೊದೆಯಲ್ಲಿ ನೀರಿರಬೇಕೆಂದು ಊಹಿಸಿ ದಟ್ಟವಾಗಿ ಬೆಳೆದ ಪೊದೆಯನ್ನು ಕಡಿದು ದಾರಿಮಾಡಿ ಒಳಹೊಕ್ಕ. ಅಲ್ಲೊಂದು ಜಲಸ್ಥಾನ ಕಂಡಿತು. ಅದೇ ಇಂದಿನ ಮರುಳ ಸಿದ್ದೇಶ್ವರ ಲಿಂಗದ ಮೂಲ ಪೀಠ. ಮೊದಲೇ ಬಾಯಾರಿಕೆಯಿಂದ ಬಳಲಿದ ಭೂಮರಾಜ ಸಂತೋಷದಿಂದ ಅಲ್ಲಿಯ ಗುಣಿಯಿಂದ ನೀರನ್ನು ಬೊಗಸೆ ಕೈಗಳಿಂದ ಬೇಗ ಬೇಗನೆ ಕುಡಿದು ದಾಹ ಪರಿಹಾರವಾಗಿ ಅವನಿಗೆ ಅದೆಷ್ಟೋ ಆಪ್ಯಾಯಮಾನವಾಯ್ತು. ತಲೆ ಎತ್ತಿ ನೋಡಲು ಎದುರಿಗೆ ವಟವೃಕ್ಷ ಟೊಂಗೆಯಲ್ಲಿ ತೊಟ್ಟಿಲೊಂದು ನೇತಾಡುವುದು. ಆ ತೊಟ್ಟಿಲಿನಲ್ಲಿ ತೇಜಸ್ವಿಯಾದ ಮಹಾಸ್ವಾಮಿಗಳು ಕೈಯಲ್ಲಿ ಮಾವಿನಹಣ್ಣನ್ನು ತಿನ್ನುತ್ತಿರುತ್ತಾರೆ. ಹಣ್ಣು ಪೂರ್ತಿಯಾಗಿ ಕೈಯಲ್ಲಿ ಗೊಟ್ಟ - ಗೊರಟ (ಚತುಷ್ಕ ಬೀಜ) ಮಾತ್ರ ಉಳಿದಿದೆ. ಭೂಮರಾಜು ಆ ದಿವ್ಯ ಪುರುಷನಿಗೆ ದೀರ್ಘದಂಡ ನಮಸ್ಕಾರ ಮಾಡಿದ. ಗುರುಗಳು ಕೈಯಲ್ಲಿದ್ದ ಆ ಮಾವಿನ ಬೀಜವನ್ನೇ ಅವನ ಸೆರಗಿನಲ್ಲಿಟ್ಟು ರಾಜನಾಗು ಎಂದು ಆಶೀರ್ವದಿಸಿದರು.

ಅಲ್ಲಿಯೇ ಭೂಗತವಾಗಿದ್ದ ತಮ್ಮ ಮಠವನ್ನು ಜೀರ್ಣೋದ್ಧಾರ ಮಾಡು ಎಂದು ಆಜ್ಞೆ ಮಾಡಿದರು. ಅಂದು ಗುರುಗಳು ಆಶೀರ್ವದಿಸಿ ಕೊಟ್ಟ ಮಾವಿನ ಗೊಟ್ಟಕ್ಕೆ ಬಂಗಾರದ ಕವಚ ಹಾಕಿ ವಂಶಪಾರಂಪರೆಯಾಗಿ ಈ ಪಾಳೆಗಾರರ ಮನೆತನದಲ್ಲಿ ಉಳಿಸಿಕೊಂಡು ಬಂದಿರುತ್ತಾರೆ.

ಭೂಮರಾಜನ ಸಮೇತ ಗುರುಗಳು ಮುಂದೆ ಹಾಗೆಯೇ ದಯಮಾಡಿಸಿದರು. ಅವರು ಬಂದದ್ದು ಇಂದಿನ ಜರಿಮಲೆ ಗುಡ್ಡಕ್ಕೆ. ಇದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿದೆ. ಕೂಡ್ಲಿಗಿಗೆ ೧೦ ಮೈಲು ಅಂತರದಲ್ಲಿದೆ.

ಸ್ವಾಮಿಗಳ ಇಷ್ಟದಂತೆ ಆ ಸ್ಥಳಕ್ಕೆ ಜರಿಮಲೆ ಎಂದೇ ಹೆಸರಿಟ್ಟು, ಪಾಳೆಪಟ್ಟನ್ನು ನಿರ್ಮಿಸಿ, ಭೂಮರಾಜನೇ ಪಾಳೇಗಾರನಾದ. ಜರಿಮಲೆ ನಾಯಕರು ಹೆಸರಾಂತ ವೀರರೆನಿಸಿ, ವಿಜಯ ವೈಜಯಂತಿಯನ್ನು ಮೆರೆದರು. ಸ್ವಾಮಿಗಳು ಅಂದು ಸೂಚಿಸಿದಂತೆ ದೇವಾಲಯದ ಜೀರ್ಣೋದ್ಧಾರವನ್ನು ಮಾಡಿದರು.

ಶ್ರೀರಂಗ ಪಟ್ಟಣದ ಹೈದರಾಲಿ ಚಿತ್ರದುರ್ಗದ ಮೇಲೆ ಯುದ್ಧ ಸಾರಿದ. ದೂರದರ್ಶಿ ಹಾಗೂ ಚಾಣಾಕ್ಷನಾದ ದಿವಾನ್ ಪೂರ್ಣಯ್ಯನು ಯುದ್ಧದಲ್ಲಿ ಜಯಗಳಿಸಲು ಜರಿಮಲೆ ದೊರೆಗಳ ಸಹಾಯ ಪಡೆಯಿರಿ ಎಂದು ಸಲಹೆ ಕೊಟ್ಟನಂತೆ. ಹೈದರಾಲಿಗೇ ಈ ಸೂಚನೆ ಸರಿಕಂಡದ್ದರಿಂದ ಜರಿಮಲೆ ದೊರೆಗಳ ಸಹಾಯಕ್ಕಾಗಿ ಬಂದ ಬಂದವನೇ ಅರೂದಿ ದಿಬ್ಬದ ಹಳ್ಳಿಯ ಹತ್ತಿರ ಠಾಣ್ಯ ಹೂಡಿದ. ಈತನ ಅಭಿಮತವನ್ನು ಪರಿಚಾರಕರು ಓಲೆಗಳ ಮೂಲಕ ದೊರೆಗಳಿಗೆ ತಿಳಿಸಿದರು. ದೊರೆಗಳು ಯುದ್ಧದಲ್ಲಿ ಸಹಾಯ ಮಾಡಲು ಒಪ್ಪಿದರು.

[illegible]

ಈ ವೀರರ ಬಲದಿಂದ ಹೈದರಾಲಿ ಚಿತ್ರದುರ್ಗವನ್ನು ವಶಪಡಿಸಿಕೊಂಡ. ಇಂಥ ವೀರರನ್ನು ಹಾಗೆ ಬಿಟ್ಟರೆ ಪಾಳೇಗಾರರೆಂಬ ಅಭಿಮಾನದಿಂದ ತನಗೇ ತೊಂದರೆ ತಂದಾರೆಂದು ಬಗೆದು ಹೈದರಾಲಿ ಶ್ರೀರಂಗಪಟ್ಟಣದ ಸೆರೆಮನೆಯಲ್ಲಿ ೭ ಮಂದಿ ನಾಯಕರನ್ನು ಸೆರೆಯಿಟ್ಟ. ಅಂದಿನ ಕರಾರಿನಂತೆ ಇಂದಿನವರೆಗೂ ಹೈದರಾಲಿ ಆದಿಯಾಗಿ ಈ ಮನೆತನದವರಿಗೆ ಮಾಸಾಶನ ರೂ. ೧೩೩.೩ ಪೈಸೆ ಬರುತ್ತದೆ. ಇದಕ್ಕೆ ಆಧಾರ ಅವರಲ್ಲಿರುವ ತಾಮ್ರ ಶಾಸನಗಳೇ ಮುಖ್ಯವಾಗಿದೆ. ಆನೆಗೊಂದಿ ರಾಜರು ಈ ನಾಯಕರಿಗೆ ಸಂಬಂಧಿಗಳಾಗಿದ್ದಂತೆ ತಿಳಿದುಬರುತ್ತದೆ.

ಜರಿಮಲೆಯ ಪತನಕ್ಕೆ ಕಾರಣ

ಜರಿಮಲೆ ಪಾಳೆಯಪಟ್ಟು ವಿನಾಶವಾಗಲಿಕ್ಕೆ ಕಾರಣಗಳನ್ನು ಆ ಮನೆತನದ ಸಿದ್ದಪ್ಪನಾಯಕ (ಈಗಿನ ಅರಸ) ಈ ರೀತಿ ತಿಳಿಸುತ್ತಾರೆ.

ಹೈದರಾಲಿ, ಜರಿಮಲೆ ಪಾಳೆಗಾರರಿಂದಲೇ ಚಿತ್ರದುರ್ಗವನ್ನು ವಶಪಡಿಸಿಕೊಂಡನು. ಅದರ ಸವಿನೆನಪಿಗಾಗಿ ಜರಿಮಲೆಯ ನಾಲ್ಕು ಮಂದಿ ಭೂಪರಿಗೆ ಮೈಸೂರು ಸಂಸ್ಥಾನದ ೧೩೩ ಹಳ್ಳಿಗಳನ್ನು ಜಹಗೀರಾಗಿ ಹಂಚಿದನೆಂದು ತಿಳಿದುಬರುತ್ತದೆ. ಅವುಗಳಲ್ಲಿ ಮುಖ್ಯ ಪಾಳೆಯಪಟ್ಟಗಳೆಂದರೆ : ಸಂಡೂರು, ಗುಡೇಕೋಟೆ, ವೀರನದುರ್ಗ (ಕೂಡ್ಲಿಗಿ ತಾಲೂಕು) ಭೈರದೇವರ ಗುಡ್ಡ (ಉಜ್ಜಯಿನಿ ಸಮೀಪ) ಗೂಡ ಗೂಪಾಲನೆಂಬ ಸಿಪಾಯಿ ಜರಿಮಲೆಗೆ ನಿತ್ಯ ಆನಿಗೊಂದಿ ರಾಜ್ಯದಿಂದ ಕಮಲವನ್ನು ಪೂಜೆಗಾಗಿ ತಂದುಕೊಡುತ್ತಿದ್ದನು. ಅರಸರಿಗೆ ಈತನ ಕೆಲಸ ಬಹಳ ಮೆಚ್ಚುಗೆಯಾಗಿ, ನಿನಗೆ ಏನಾದರೂ ವರ ಬೇಕೆಂದರೆ ಕೇಳಿಕೋ ಎಂದು ಹೇಳಿದ, ಆ ಸಿಪಾಯಿ ಮೊದಲಿಗೆ ಬೇಡವೆಂದು, ನಂತರ ಕೆಲಮಂದಿ ಕುತಂತ್ರಿಗಳು ಕಿವಿಯೂದಿದ್ದರಿಂದ ಮೂರು ಮುಕ್ಕಾಲುಗಳಿಗೆ ನಿಮ್ಮ ದರಬಾರಿನ ಅಧಿಪತ್ಯವನ್ನು ನನಗೆ ಕೊಡಿರಿ ಎಂದು ಕೇಳಿದನಂತೆ. ಅರಸರು ಆಗಲಿ ಎಂದರು. ಆ ವೇಳೆಯಲ್ಲಿ ಅವನ ಹುಚ್ಚು ಕಾರಭಾರ ನಡೆದು ಸಂಸ್ಥಾನ ವಿಧ್ವಾಂಸವಾಯ್ತು ಎಂದು ಈಗಿನ ಪಾಳೇಗಾರರು ಹೇಳುತ್ತಾರೆ.

ಇಂದು ಇವರ ಮನೆಯ ಐಶ್ವರ್ಯವೆಂದರೆ ಮಾವಿನ ಗೊರಟಕ್ಕೆ ಮಾಡಿಸಿದ ಚಿನ್ನದ ಹೊದಿಗೆ, ಸುರಗಿ, ರುದ್ರಾಕ್ಷಿ, ವಿಚಿತ್ರ ಆಯುಧಗಳು ಹಾಗೂ ಮರುಳ ಸಿದ್ದೇಶ್ವರ ಲಿಂಗಮೂರ್ತಿ.

೨.೫ ನಂತರದ ಅವಧಿ

೨.೫.೧ ಬ್ರಿಟಿಷರು

ಕರ್ನಾಟಕದ ಏಕೀಕರಣ ಮತ್ತು ಸಂಡೂರು ತಾಲೂಕು

ಕ್ರಿ.ಶ. ೧೭೬೮ರಲ್ಲಿ ಹೈದರಾಲಿ ಬಳ್ಳಾರಿಯನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಂಡನು. ೧೭೮೬ರಲ್ಲಿ ಈತನ ಮಗ ಟಿಪ್ಪುಸುಲ್ತಾನನು ಈ ರಾಜ್ಯವನ್ನು ವಿಸ್ತರಿಸಿದನು. ೧೭೯೦ರಲ್ಲಿ ಬ್ರಿಟಿಷರ ಪ್ರವೇಶ ಸಂಡೂರಿಗೆ ಸಂಬಂಧಿಸಿದಂತೆ ಪ್ರಥಮಬಾರಿಗೆ ಆಯಿತು. ಭಾರತದ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಕಾರ್ನ್‌ವಾಲಿಸ್, ಮರಾಠರು ಮತ್ತು ನಿಜಾಮರೊಡನೆ ಸೇರಿ ಟಿಪ್ಪುಸುಲ್ತಾನನ ವಿರುದ್ಧ ಕರಾರು ಒಪ್ಪಂದ ಮಾಡಿಕೊಂಡನು. ಆ ಕರಾರು ಏನೆಂದರೆ, ಟಿಪ್ಪು ಸಂಪಾದಿಸಿದ ರಾಜ್ಯದ ಮೇಲೆ ಈ ಮೂವರೂ ಸೇರಿ ಹೋರಾಟ ಮಾಡಿ ಗೆದ್ದ ಭಾಗವನ್ನು ಸಮನಾಗಿ ಹಂಚಿಕೊಳ್ಳಬೇಕಾಗಿತ್ತು ಎಂಬುದು. ಅದೇ ರೀತಿಯಾಗಿ ೧೭೯೨ರಲ್ಲಿ ಟಿಪ್ಪುಸುಲ್ತಾನನು ಸೋತಾಗ ಒಪ್ಪಂದದಂತೆ ಸಂಡೂರಿನ ಸೇನಾಪತಿ ಸಂಡೂರಿಗೆ ಒಡೆಯನಾದ. ಕ್ರಿ.ಶ. ೧೮೧೭ರಲ್ಲಿ ಬೆಸ್ಸಿನ್ ಒಪ್ಪಂದದ ಪ್ರಕಾರ ಸಂಡೂರು ಬ್ರಿಟಿಷರ ವಶವಾಗಿದ್ದು ಕ್ರಿ.ಶ. ೧೮೧೮ರಲ್ಲಿ ಪುನ: ಸಂಡೂರಿನ ಅಧಿಕಾರವನ್ನು ಘೋರ್ಪಡೆ ವಂಶದವರಿಗೇ ವಹಿಸಿಕೊಡಲಾಯಿತು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಸಮಯದಲ್ಲಿ ಸಂಡೂರು ಕ್ಷೇತ್ರ ಸುಮಾರು ೧೫೮ ಚದರ ಮೈಲಿಗಳ ವಿಸ್ತೀರ್ಣ ಹೊಂದಿತ್ತು. ಸ್ವತಂತ್ರ ಭಾರತಕ್ಕೆ ಸೇರಬೇಕಾಗಿದ್ದ ಸುಮಾರು ೫೦೦ ಸಣ್ಣ ದೊಡ್ಡ ರಾಜಮನೆತನಗಳಲ್ಲಿ ಸಂಡೂರು ಸಹ ಒಂದು ಪುಟ್ಟ ರಾಜ್ಯವಾಗಿತ್ತು. ಸುಮಾರು ೧೬,೦೦೦ ಜನಸಂಖ್ಯೆಯನ್ನು (೧೯೫೧ರ ಜನಗಣತಿ) ಸಣ್ಣ ವಿಸ್ತೀರ್ಣವನ್ನು, ೬ ಲಕ್ಷ ವಾರ್ಷಿಕ ವರಮಾನವನ್ನು ಪಡೆದ ಈ ರಾಜ್ಯದ ಸ್ವಾತಂತ್ರ್ಯ ಅನಾನುಕೂಲವೇ ಎಂಬ ಕಾರಣದಿಂದ ಮದ್ರಾಸ್ ರಾಜ್ಯಕ್ಕೆ ಒಳಪಡಬಹುದಾದ ಈ ಪ್ರದೇಶ ಸ್ವತಂತ್ರ ಭಾರತದ ಕೇಂದ್ರ ಸರಕಾರ ಒಪ್ಪಂದದ ಮೇರೆಗೆ ಕರ್ನಾಟಕ ರಾಜ್ಯಕ್ಕೆ ಸೇರಿತು. ಮರುವರ್ಷವೇ ಬಳ್ಳಾರಿ ಜಿಲ್ಲೆಯ ತಾಲೂಕು ಆಯಿತು.

ಸಂಡೂರಿಗೆ ಗಾಂಧಿ ಭೇಟಿ

ರಾಷ್ಟ್ರಪ್ರೇಮ, ರಾಷ್ಟ್ರೀಯ ಸ್ಫೂರ್ತಿಯನ್ನು ನೀಡಲು ದೇಶದ ನಾನಾ ಭಾಗಗಳಲ್ಲೂ ಸಂಚರಿಸುತ್ತಿದ್ದ ಮಹಾತ್ಮಗಾಂಧಿಯವರು ಸಂಡೂರಿಗೂ ಬಂದಿದ್ದರು. ೧೯೩೨ರ ಫೆಬ್ರವರಿಯಲ್ಲಿ ಬಳ್ಳಾರಿಯ ರಾಜಕೀಯ ಗಣ್ಯರು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಘೋಷಣೆ ಕೂಗಿದ್ದರಿಂದ ಆದ ಲಾಠಿಪ್ರಹಾರ ಮತ್ತು ಬಂಧನದಿಂದ ಉಂಟಾಗಿದ್ದ ಉದ್ರಿಕ್ತ ವಾತಾವರಣವನ್ನು ಶಾಂತಗೊಳಿಸಲು ಗಾಂಧೀಜಿಯವರು ಬಂದಿದ್ದರು. ಪುನಃ ೧೯೩೪ರಲ್ಲಿ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು, ಕೂಡ್ಲಿಗಿ ಮೂಲಕ ಸಂಡೂರನ್ನು ಪ್ರವೇಶಿಸಿದರು. ನಿಸರ್ಗಾಭರಣಗಳಿಂದ ಅಲಂಕಾರಗೊಂಡಿದ್ದ ಸಂಡೂರು ಅವರ ಮನ ತಣಿಸಿತು. ಇಲ್ಲಿದ್ದ ಪರಿಶುದ್ಧ, ಪ್ರಶಾಂತ

ವಾತಾವರಣ ಅವರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತು. ಅದರ ಫಲವಾಗಿಯೇ ಅವರು "SEE SANDUR IN SEPTEMBER" ಎಂದು ಸೆಪ್ಟಂಬರ್‌ನಲ್ಲಿ ಅವರು ಕಂಡ ಸಂಡೂರನ್ನು ಬಿರುದಿಸಿದರು. ಇಲ್ಲಿಯೇ ತಂಗಿದ್ದ ಗಾಂಧಿಯವರು ಸಮಾನತೆಯ ಬಗ್ಗೆ ಭಾಷಣ ನೀಡಿದ್ದರು.

೨.೫.೨ ಸುಲ್ತಾನರು

ಹೈದರಾಲಿ ಮತ್ತು ಟಿಪ್ಪುಸುಲ್ತಾನ

ಕ್ರಿ.ಶ. ೧೬೭೮ರಲ್ಲಿ ಬಳ್ಳಾರಿ ಸುತ್ತಮುತ್ತ ಪ್ರದೇಶ ಬಿಜಾಪುರ ಸುಲ್ತಾನನಿಂದ ಶಿವಾಜಿಯ ಆಳ್ವಿಕೆಗೆ ಒಳಗೊಂಡಿತು. ಈ ಪ್ರದೇಶದ ಸುತ್ತಮುತ್ತ ಇದ್ದ ಪಾಳೆಗಾರರ ಸಹಾಯದಿಂದ ಬಿಜಾಪುರ ಸುಲ್ತಾನನ ವಶದಲ್ಲಿದ್ದ ಈ ಪ್ರದೇಶವನ್ನು ಶಿವಾಜಿ ವಶಪಡಿಸಿಕೊಂಡು ತನ್ನ ವಿಸ್ತರಣಾ ಮಾರ್ಗವನ್ನು ಸ್ವಚ್ಛ ಮಾಡಿಕೊಂಡ. ಆದರೂ ಕೆಲವು ಭಾಗ ಸುಲ್ತಾನನ ಅಧೀನದಲ್ಲಿತ್ತು. ಮುಂದೆ ೧೬೮೭ರಲ್ಲಿ ಔರಂಗಜೇಬನ ಕಾಲದಲ್ಲಿ ಈ ಭಾಗ ಮರಾಠರ ವಶವಾಯಿತು.

ಮುಂದೆ ಕ್ರಿ.ಶ. ೧೭೬೮ರಲ್ಲಿ ಹೈದರಾಲಿ ಜಸಂತ್ ಜಂಗ್‌ನನ್ನು ಸೋಲಿಸಿ, ಬಳ್ಳಾರಿಯನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಂಡನು.[೭೦] ೧೭೮೬ರಲ್ಲಿ ಈತನ ಮಗ ಟಿಪ್ಪುಸುಲ್ತಾನನು ರಾಜ್ಯವನ್ನು ವಿಸ್ತರಿಸುತ್ತಾ ಆದವಾನಿಯನ್ನು ವಶಪಡಿಸಿಕೊಂಡನು. ನಂತರ ಮೈಸೂರು ದುರ್ಬಲಗೊಂಡಾಗ ಅದನ್ನು ಕಾಪಾಡಲು ಬಂದ ಹೈದರಾಲಿ ಮತ್ತು ಆತನ ಮಗ ಟಿಪ್ಪುಸುಲ್ತಾನರ ರಾಜ್ಯದಲ್ಲಿ ಸಂಡೂರು ಇತ್ತು ಎಂಬುದಕ್ಕೆ ಕ್ರಿ.ಶ. ೧೭೬೮ರಲ್ಲಿ ಬಳ್ಳಾರಿಯನ್ನು ಪ್ರವೇಶಿಸಿದ, ಆಗ ಹೈದರಾಲಿಯಿಂದ ನಿರ್ಮಾಣ ಕಾರ್ಯ ಪ್ರಾರಂಭವಾಗಿ ಟಿಪ್ಪುಸುಲ್ತಾನನಿಂದ ಸಂಪೂರ್ಣಗೊಂಡ ಸಣ್ಣ ಕೋಟೆ (ಕೃಷ್ಣ ನಗರದಲ್ಲಿ) ಯೊಂದು ಇಂದಿಗೂ ಭದ್ರವಾಗಿ ನಿಂತು ಸಾಕ್ಷಿ ಹೇಳುತ್ತದೆ.

೨.೫.೩ ಪೇಶ್ವೆಗಳು

ಘೋರ್ಪಡೆ ರಾಜಮನೆತನ

ಮರಾಠರ ಶ್ರೇಷ್ಠ ದೊರೆಯಾದ ಶಿವಾಜಿ ವಂಶದ ಭೋಂಸ್ಲೆ ಮನೆತನದ ದಾಯಾದಿಗಳು ಈ ಘೋರ್ಪಡೆಯವರು. ಕ್ರಿ.ಶ. ೧೪೮೯ರಲ್ಲಿ ದುರ್ಗದ ಕೋಟೆಯೊಂದನ್ನು ಗೆಲ್ಲುವಲ್ಲಿ ಸಫಲರಾದ ಶಿವಾಜಿ ಸೈನ್ಯದಲ್ಲಿ 'ಘೋರ್ಪಡ್' ಎಂಬ ದೊಡ್ಡ 'ಉಡ'ವೊಂದು ಮಹತ್ವದ ಪಾತ್ರವಹಿಸಿತ್ತು. ತಮಗೆ ಗೆಲುವು ತಂದುಕೊಟ್ಟ ಸವಿ ನೆನಪಿಗಾಗಿ ಶಿವಾಜಿ ವಂಶದ ದಾಯಾದಿಗಳಾದ ಈ ಮನೆತನದವರು 'ಘೋರ್ಪಡ್'ನ್ನು ತಮ್ಮ ಉಪನಾಮವನ್ನಾಗಿ ಮಾಡಿಕೊಂಡರು.

೧೮ನೆಯ ಶತಮಾನದಲ್ಲಿ ಜರಿಮಲೆ ಪಾಳೆಗಾರರು ವಶದಲ್ಲಿದ್ದ ಸಂಡೂರನ್ನು ವಶಪಡಿಸಿಕೊಳ್ಳುವುದರ ಮೂಲಕ ಸಿದ್ದೋಜಿರಾವ್ ಘೋರ್ಪಡೆ ಈ ಮನೆತನದ ಮೂಲ ಪುರುಷನಾಗಿ ಸಂಡೂರಿನಲ್ಲಿ ಅಧಿಕಾರ ಪಡೆದ.[೭೯] ಸಿದ್ದೋಜಿರಾವ್ ತನ್ನ ಹಿರಿಯ ಮಗನಾದ ಮುರಾರಿರಾವ್‌ಗೆ ಅಧಿಕಾರ ಹಸ್ತಾಂತರ ಮಾಡಿದ. ಮುಂದೆ ಈತನಿಗಿದ್ದ ಇಬ್ಬರೂ ಮಕ್ಕಳು ಅಕಾಲ ಮೃತ್ಯುವಿಗೀಡಾದಾಗ ತನ್ನ ಸಂಬಂಧಿ ಯಶವಂತರಾವ್ ಅವರ ಮಗ ಶಿವರಾವ್ ನನ್ನು ದತ್ತು ತೆಗೆದುಕೊಂಡು ಅಧಿಕಾರ ನೀಡಿದ. ೧೮೪೦ರಲ್ಲಿ ನಿಧನನಾದ ಶಿವರಾವ್‌ಗೆ ಗಂಡು ಸಂತತಿ ಇಲ್ಲದ ಕಾರಣ ತನ್ನ ಸಹೋದರ ಭುಜಂಗರಾವ್‌ನ ಮಗ ವೆಂಕಟರಾವ್‌ನನ್ನು ಉತ್ತರಾಧಿಕಾರಿಯಾಗಿ ಮಾಡಿದ. ಮುಂದೆ ೧೮೬೧ರಲ್ಲಿ ವೆಂಕಟರಾವ್‌ನಿಂದ ತೆರನಾದ ಅಧಿಕಾರವನ್ನು ಶಿವ ಷಣ್ಮುಖರಾವ್ ಸ್ವೀಕರಿಸಿದ. ಈತನು ೧೮೭೮ರವರೆಗೆ ಸಮರ್ಥ ಆಡಳಿತ ನಡೆಸಿದ ಅನಂತರ ತನ್ನ ಸಹೋದರ ವಿಠಲರಾವ್‌ನಿಗೆ ಅಧಿಕಾರ ಹಸ್ತಾಂತರ ಮಾಡಿದ. ೧೮೯೨ರಲ್ಲಿ ವಿಠಲರಾವ್‌ನ ನಿಧನದಿಂದಾಗಿ ಆತನ ಒಬ್ಬನೇ ಮಗ ವೆಂಕಟರಾವ್ ಚಿಕ್ಕವಯಸ್ಸಿಯನಲ್ಲಿಯೇ ರಾಜನೆನಿಸಿಕೊಂಡ. ನಂತರ ಅಧಿಕಾರ ವಹಿಸಿಕೊಂಡವರೇ ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರು. ಬೆಂಗಳೂರಿನ ಯುರೋಪಿಯನ್ ಪಬ್ಲಿಕ್ ಸ್ಕೂಲ್‌ನಲ್ಲಿ ನಂತರ ಇಂದೂರಿನ ಹೋಳ್ಕರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿದ ಇವರ ಅಧಿಕಾರದ ಅವಧಿಯಲ್ಲಿ ಸಂಡೂರು ರಾಜ್ಯಕ್ಕೆ ವಿಶೇಷ ಭೌಗೋಳಿಕ ಮನ್ನಣೆ ದೊರೆಯಿತು. ೧೯೨೮ರಲ್ಲಿ ರಾಜ್ಯದ ಗಡಿ ನಿರ್ಮಾಣವಾಯಿತು. ೧೯೩೦ ರಷ್ಟರಲ್ಲಿ ಸಂಡೂರಿನ ಸಂಪೂರ್ಣ ಅಧಿಕಾರ ಪಡೆದು ಅದರ ಏಳಿಗೆಗೆ ಶ್ರಮಿಸಿದರು. ತಮ್ಮ ಸಂಸ್ಥಾನದ ಶ್ರೇಯಸ್ಸಿಗೆ ಶ್ರಮಿಸಿ ಹಲವಾರು ಸುಧಾರಣಾತ್ಮಕ ಕ್ರಮಗಳನ್ನು ಕೈಗೊಂಡರು. ಪ್ರಜೆಗಳಿಂದ ಆರಿಸಲ್ಪಟ್ಟ 'ಪ್ರಜಾಮಂಡಲಿ'ಯನ್ನು ಪ್ರಥಮವಾಗಿ ಪ್ರಾರಂಭಿಸಿದ ಶ್ರೇಯಸ್ಸು ಯಶವಂತರಾವ್ ಘೋರ್ಪಡೆಗೆ ಸಲ್ಲುತ್ತದೆ. ಮೇಲು ಕೀಳು ಎನ್ನದೆ ಎಲ್ಲಾ ಜಾತಿಯವರಿಗೆ ದೇವಾಲಯಗಳಿಗೆ ಪ್ರವೇಶ ಕಲ್ಪಿಸಿಕೊಟ್ಟು, ಶರಣ ತತ್ವವನ್ನು ಜಾರಿಗೆ ತಂದು, ಮಹಾತ್ಮಗಾಂಧಿಯವರಿಂದ ಹೊಗಳಿಸಿಕೊಂಡ ಕೀರ್ತಿ ಇವರದಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಹಲವಾರು ಜನ ಕಲ್ಯಾಣ ಕಾರ್ಯಗಳನ್ನು ಕೈಗೊಂಡು ಜನಪ್ರಿಯ ಅರಸರಾಗಿ ಮೆರೆದರು. ಇವರ ನಂತರ ಅಧಿಕಾರಕ್ಕೆ ಬಂದವರು ಇವರ ಜೇಷ್ಠ ಪುತ್ರನಾದ ಎಂ.ವೈ.ಘೋರ್ಪಡೆ ಯವರು ಅಧಿಕಾರಕ್ಕೆ ಬಂದರು. ಇವರು ಕರ್ನಾಟಕ ರಾಜ್ಯದ ಮಾಜಿ ಅರ್ಥ ಸಚಿವರೂ ಜಗತ್ಪ್ರಸಿದ್ಧ ವನ್ಯಜೀವಿ ಛಾಯಾ ಚಿತ್ರಕಾರರೂ ಆಗಿದ್ದಾರೆ.

ಶ್ರೀ ಶಿವವಿಲಾಸ ರಾಜಮಹಲ್ (ಅರಮನೆ)

ಹೊಸಪೇಟೆಯಿಂದ ಸಂಡೂರನ್ನು ಪ್ರವೇಶಿಸುವ ಮಾರ್ಗದಲ್ಲಿ ಊರಿಗೆ ಅಂಟಿಕೊಂಡೇ ಹೊರಮೈಯಲ್ಲಿರುವ ಅರಮನೆ ಕ್ರಿ.ಶ. ೧೯೪೦ರಲ್ಲಿ ನಿರ್ಮಾಣಗೊಂಡಿದೆ. ಇದು ಅಂದಿನ ರಾಜರಾದ ಶ್ರೀ ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರ ಅಧಿಕಾರವಧಿಯಲ್ಲಿ ನಿರ್ಮಾಣಗೊಂಡ ಈ ಅರಮನೆ ಸುಂದರವಾದ ದರ್ಬಾರ್ ಹಾಲ್, ದೇವಸ್ಥಾನಗಳನ್ನು ಒಳಗೊಂಡಿದ್ದು ವಿಶಾಲವಾದ ಪ್ರಾಕಾರವನ್ನು ಹೊಂದಿದೆ.

ಘೋರ್ಪಡೆ ರಾಜರ ವಂಶಾವಳಿ[೩೫]

ಬೈರ್ ಜಿ (ಹಿಂದೂರಾವ್)
(ಗುತ್ತಿ ಸಂಸ್ಥಾನ ಸ್ಥಾಪಕ - ಗಜೇಂದ್ರಗಡದ ಮನೆ)

ಮುರಾರಿರಾವ್
(ರಣರಂಗದಲ್ಲಿ ಮಡಿದನು)

ಸಿದ್ದೋಜಿರಾವ್
(ಸಂಡೂರನ್ನು ಗೆದ್ದುಕೊಂಡವನು)

ಮುರಾರಿರಾವ್
(ಇವನನ್ನು ಗುತ್ತಿಯ ಮುಖ್ಯಸ್ಥನೆಂದು ನಾಮಕರಣ ಮಾಡಲಾಯಿತು)

ಶಿವರಾವ್

ಸಿದ್ದೋಜಿರಾವ್

ಶಿವರಾವ್

ವೆಂಕಟರಾವ್

ಶಿವಷಣ್ಮುಖರಾವ್
(ಗಂಡು ಸಂತಾನವಿಲ್ಲದೆ ಮರಣ)

ವಿಠ್ಠಲ್ ರಾವ್
(೧೮೭೮ ಅಣ್ಣನ ನಿಧನ ನಂತರ ಪಟ್ಟಕ್ಕೆ ಬಂದನು)

ವೆಂಕಟರಾವ್
(೧೮೯೨ - ೧೯೨೭)

ಯಶವಂತ್ ರಾವ್
(೧೩-೧೧-೧೯೧೮ರಂದು ಜನನ, ೧೯೨೮ ಜೂನ್
ವೆಂಕಟರಾವ್‌ನ ನಿಧನ ನಂತರ ಪಟ್ಟಕ್ಕೆ ಬಂದನು)

ಅಡಿಟಿಪ್ಪಣಿಗಳು

೧. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ, ಪು. ೧೭೬

೨. ಸಂಡೂರು: ಒಂದು ಪರಿಚಯ, ಸ್ಮರಣ ಸಂಚಿಕೆ, ಸ್ಕಂದ - ಶ್ರೀಗಂಧ, ಪು. ೪

೩. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೩, ೪, ೫

೪. ಅದೇ, ಚಾರಿತ್ರಿಕ ಅಧ್ಯಯನ, ಪು. ೧

೫. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೬

೬. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧, ೨

೭. ಸ್ಕಂಧ - ಶ್ರೀಗಂಧ, ಸ್ಮರಣ ಸಂಚಿಕೆ, ಪು. ೬೬

೮. ಅದೇ, ಪು. ೬೬, ೬೭

೯. ಅದೇ, ಪು. ೪

೧೦. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೨

೧೧. ಸ್ಕಂಧ - ಶ್ರೀಗಂಧ, ಸ್ಮರಣ ಸಂಚಿಕೆ, ಪು. ೭, ೮

೧೨. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೨, ೩

೧೩. ಸಂಡೂರು ಪ್ರದೇಶದ ಕಬ್ಬಿಣ ತಯಾರಿಕೆ ಒಂದು ಐತಿಹಾಸಿಕ ನೋಟ, ಕ.ಇ.ದ. ಪು. ೩೭, ೩೮

೧೪. ಶ್ರೀ ಮದ್ರಾಮಾಯಣದ 'ಕಾರ್ತಿಕೇಯ ವನ'ವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ? ಕ.ಇ.ದ. ಪು. ೧೭೧, ೧೭೨

೧೫. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೪

೧೬. ಶ್ರೀ ಮದ್ರಾಮಾಯಣದ ಕಾರ್ತಿಕೇಯ ವನವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ? ಕ.ಇ.ದ. ಪು. ೧೭೨

೧೭. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೪

೧೮. ಶ್ರೀ ಮದ್ರಾಮಾಯಣದ 'ಕಾರ್ತಿಕೇಯ ವನ'ವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ? ಕ.ಇ.ದ. ಪು. ೧೭೨

೧೯. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೩

೨೦. ಅದೇ. ಪು. ೫

೨೧. ಶ್ರೀ ಮದ್ರಾಮಾಯಣದ ಕಾರ್ತಿಕೇಯ ವನವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ? ಕ.ಇ.ದ. ಪು೧೭೩, ೧೭೪

೨೨. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೩, ೪

೨೩. ಅದೇ,ಪು. ೫

೨೪. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೬

೨೫. ಅದೇ, ಪು. ೧೭೯, ೧೮೦

೨೬. ಶ್ರೀ ಮದ್ರಾಮಾಯಣದ ಕಾರ್ತಿಕೇಯ ವನವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ? ಕ.ಇ.ದ. ಪು. ೧೬೫

೨೭. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೬

೨೮. ಅದೇ.ಚಾರಿತ್ರಿಕ ಅಧ್ಯಯನ, ಪು. ೭

೨೯. ಶ್ರೀ ಮದ್ರಾಮಾಯಣದ ಕಾರ್ತಿಕೇಯ ವನವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ? ಕ.ಇ.ದ. ಪು. ೧೬೬, ೧೬೭

೩೦. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೮

೩೧. ಅದೇ. ಪು. ೯

೩೨. ಸ್ಕಂದ - ಶ್ರೀಗಂಧ, ಸ್ಮರಣ ಸಂಚಿಕೆ, ಪು. ೧

೩೩. ಅದೇ, ಪು. ೪

೩೪. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೨೩

೩೫. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೯

೩೬. ಅದೇ, ಪು. ೯

೩೭. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೭

೩೮. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೯, ೧೦

೩೯. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೭

೪೦. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೦

೪೧. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೭

೪೨. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೦

೪೩. ಕರ್ನಾಟಕ ದೇವಾಲಯಗಳ ಕೋಶ, ಬಳ್ಳಾರಿ ಜಿಲ್ಲೆ, ಪು. xviii, xix

೪೪. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೦

೪೫. ಅದೇ, ಪು. ೧೦

೪೬. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೭

೪೭. ಅದೇ, ಪು. ೧೭೭

೪೮. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೧

೪೯. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೭, ೧೭೮

೫೦. ಕರ್ನಾಟಕ ದೇವಾಲಯಗಳ ಕೋಶ, ಬಳ್ಳಾರಿ ಜಿಲ್ಲೆ, ಪು. xxxi

೫೧. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೨

೫೨. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೮

೫೩. ಕರ್ನಾಟಕ ದೇವಾಲಯಗಳ ಕೋಶ, ಬಳ್ಳಾರಿ ಜಿಲ್ಲೆ, ಪು. xxxiii

೫೪. ಅದೇ, ಪು. xxxiii

೫೫. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೨

೫೬. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೮

೫೭. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೮

೫೮. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೨

೫೯. ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೨ ೧೭೮

೬೦. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೨

೬೧. ಕರ್ನಾಟಕದ ದೇವಾಲಯಗಳ ಕೋಶ, ಬಳ್ಳಾರಿ ಜಿಲ್ಲೆ, ಪು. xxviii

೬೨. ಬಳ್ಳಾರಿ ಜಿಲ್ಲೆ ಶಾಸನ ಸಂಪುಟ ೧, ಸಂಡೂರು ತಾಲೂಕು, ಪು. ೨೧೫, ೨೧೬

೬೩. ಅದೇ, ಪು. ೨೦೧

೬೪. ಸಂಡೂರು ಇತಿಹಾಸ ಸಾಂಸ್ಕೃತಿಕ ಪರಂಪರೆ, ಕ.ಇ.ದ. ಪು. ೧೭೮

೬೫. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೨

೬೬. ಹರಪನಹಳ್ಳಿ ಪಾಳೆಗಾರರಿಗೆ ಸಂಬಂಧಿಸಿದ ನಕ್ಷೆ ಮತ್ತು ಪತ್ರಗಳ ಪರಿಶೀಲನೆ, ಕ.ಇ.ದ. ಪು, ೫೨, ೫೩

೬೭. ಜರಿಮಲೆ ಪಾಳೆಗಾರರು (ಸಮಗ್ರ ಕೂಡ್ಲಿಗಿ ದರ್ಶನ), ಪು. ೨೬, ೩೧

೬೮. ಸ್ಕಂಧ - ಶ್ರೀಗಂಧ, ಸ್ಮರಣ ಸಂಚಿಕೆ, ಪು. ೬, ೮

೬೯. ಅದೇ, ಪು. ೭

೭೦. ಅದೇ, ಪು. ೬, ೭

೭೧. ಅದೇ, ಪು. ೭, ೧೦

೭೨. ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಬಳ್ಳಾರಿ ಜಿಲ್ಲೆ, ಪುಟ. ೮೭

❖ ❖

೩

ಸಂಡೂರು ಪರಿಸರದ ಶಾಸನಗಳು

೩

ಸಂಡೂರು ಪರಿಸರದ ಶಾಸನಗಳು

೩.೧. ದಾನಶಾಸನಗಳು

ಕನ್ನಡ ಶಾಸನಗಳಲ್ಲಿ ದಾನ ಶಾಸನಗಳ ಸಂಖ್ಯೆಯೇ ಅತ್ಯಧಿಕ. ದಾನ ಧರ್ಮಗಳೇ ಶಾಸನಗಳಿಗೆ ಪ್ರೇರಕಶಕ್ತಿ. ದಾನ ಶಾಸನಗಳಲ್ಲಿ ಅತಿಮುಖ್ಯವಾದವು ದೇವಾಲಯಗಳಿಗೆ ಕೊಟ್ಟ ದತ್ತಿಗಳು. ದೇವಾಲಯ ನಿರ್ಮಾಣ, ಕಟ್ಟಿಸಿದ ದೇವಾಲಯಗಳ ಜೀರ್ಣೋದ್ಧಾರ ಮುಂತಾದ ಧರ್ಮಕಾರ್ಯಗಳು ಕರ್ನಾಟಕದ ಅರಸರ, ಅಧಿಕಾರಿಗಳ ಮತ್ತು ಶ್ರೀಮಂತರ ಮುಖ್ಯ ಕರ್ತವ್ಯಗಳಲ್ಲೊಂದಾಗಿತ್ತು. ಇಂಥ ದಾನಿಗಳು ತಾವು ನಿರ್ಮಿಸಿದ ದೇವಾಲಯದ ವಿಷಯವನ್ನು ತಿಳಿಸುವ ಸಲುವಾಗಿ ದೇವಾಲಯದಲ್ಲಿ ಶಾಸನಗಳನ್ನು ಬರೆಯಿಸಿದ್ದಾರೆ.[೧]

ಈ ದಾನ ಶಾಸನಗಳು ಕರ್ನಾಟಕ ಸಂಸ್ಕೃತಿಯ ಒಂದು ಪ್ರಧಾನವಾದ ಅಂಶಗಳನ್ನು ಎತ್ತಿ ತೋರಿಸುತ್ತವೆ. ಜೀವನದ ಮೌಲ್ಯಗಳಲ್ಲಿ ಧರ್ಮಕ್ಕೆ ಪ್ರಥಮ ಸ್ಥಾನವನ್ನಿತ್ತ ಧಾರ್ಮಿಕ ಸಂಸ್ಕೃತಿಯ ಸ್ವರೂಪ ಈ ಶಾಸನಗಳಲ್ಲಿ ಪ್ರತಿಬಿಂಬಿತವಾಗಿದೆ. ಶಾಸನಗಳ ಉಗಮಕ್ಕೆ ಇಂತಹ ಮನೋಧರ್ಮವೇ ಪ್ರೇರಣೆಯಾಗಿರಬಹುದು.[೨] ದೇವಾಲಯಗಳನ್ನು ಕಟ್ಟಿಸುವುದರ ಜೊತೆಗೆ ಅವುಗಳ ವ್ಯವಸ್ಥೆಗಾಗಿ, ಧರ್ಮಕಾರ್ಯಗಳಿಗಾಗಿ ದಾನ ದತ್ತಿಗಳನ್ನು ಕೊಡುತ್ತಿದ್ದರು. ಅದರ ಫಲವಾಗಿ ಊರೂರಿಗೂ ದೇವಾಲಯಗಳು ತಲೆ ಎತ್ತಿದವು. ದಾನಧರ್ಮಗಳು ಜೀವನದ ತಳಹದಿಯಾದವು. ಇದನ್ನು ದಾನ ಶಾಸನಗಳಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳುತ್ತೇವೆ.

೧೧ನೆಯ ಶತಮಾನದಿಂದೀಚೆಗೆ ದಾನಶಾಸನಗಳ ರಚನೆಯ ಪದ್ಧತಿಯಲ್ಲಿ ಒಂದು ಅಚ್ಚುಕಟ್ಟಾದ ಕ್ರಮ ಏರ್ಪಟ್ಟಂತೆ ತೋರುತ್ತದೆ. ಅತ್ಯಂತ ಪ್ರಾಚೀನ ಶಾಸನಗಳ ಶಿಲಾಫಲಕಗಳ ಮೇಲೆ ನಿರ್ದಿಷ್ಟವಾದ ಯಾವ ಶಿಲ್ಪಾಕೃತಿಯೂ ಕಂಡು ಬರುವುದಿಲ್ಲ. ಆದರೆ ಅನಂತರದ

ಲಿಪಿಕಲ್ಲುಗಳ ಮೇಲೆ ಶಿವ, ನಂದಿ, ಗರುಡ, ವಿಷ್ಣು ಈ ಮೊದಲಾದ ಶಿಲ್ಪಗಳು ಕಾಣಿಸಿಕೊಳ್ಳುತ್ತವೆ. ಶೈವ, ವೈಷ್ಣವ ಧರ್ಮಗಳು ಪ್ರಬಲವಾಗಿ ಅದರ ಪ್ರಭಾವ ಶಾಸನಗಳ ಮೇಲೂ ಮೂಡಿದಂತೆ ತೋರುತ್ತದೆ. ಲಿಪಿ ಕಲ್ಲಿನ ಮೇಲಿರುವ ಶಿಲ್ಪಗಳನ್ನು ನೋಡಿದೊಡನೆಯೇ ಇದು ಶೈವ ಶಾಸನವೋ, ವೈಷ್ಣವ ಶಾಸನವೋ ಎಂಬುದನ್ನು ಹೇಳಬಹುದು. ಅನಂತರ ಪ್ರಾರಂಭದ ಶ್ಲೋಕವನ್ನು ಓದುತ್ತಿದ್ದಂತೆಯೇ ಆ ಅಂಶ ಇನ್ನೂ ಸ್ಪಷ್ಟವಾಗುತ್ತದೆ. ಶಿವನನ್ನೋ, ವಿಷ್ಣುವನ್ನೋ ಅಥವಾ ಜಿನನನ್ನೋ ಕುರಿತ ಸ್ತುತಿರೂಪ ಸಂಸ್ಕೃತ ಶ್ಲೋಕದಿಂದ ಶಾಸನ ಪ್ರಾರಂಭವಾಗುವುದನ್ನು ಕಾಣುತ್ತೇವೆ.

ಅನಂತರದ ಶಾಸನಗಳಲ್ಲಿ ಕಾಲ ಉಕ್ತವಾಗಿರುತ್ತದೆ. ಇದು ಶಕವರ್ಷಗಳಲ್ಲಿರುತ್ತದೆ. ಹೆಚ್ಚಾಗಿ ಶಾಲಿವಾಹನ ಶಕವೇ ಬಳಕೆಯಾಗಿರುತ್ತದೆ. ವರುಷ, ತಿಂಗಳು, ದಿನಗಳನ್ನು ಹೇಳುವಂತೆ ನಿಖರವಾದ ರೀತಿಯಲ್ಲಿ ಕಾಲವನ್ನು ಕೊಡುತ್ತವೆ. ಇದಾದ ನಂತರ ಕೊಡಬೇಕಾದ ದಾನವನ್ನು ನಿರ್ದೇಶಿಸುವ ಭಾಗ ಬರುತ್ತದೆ. ಕೊಡುವ ದಾನ ಗ್ರಾಮವಾಗಿದ್ದರೆ ಅದರ ಸೀಮೆಗಳನ್ನು ನಿರ್ದೇಶಿಸುವುದು, ಭೂಮಿಯಾಗಿದ್ದರೆ ಅದರ ಗಡಿಯನ್ನು ಹೇಳುವುದು, ತೆರಿಗೆಯಾಗಿದ್ದರೆ ಅದರ ವಿವರವನ್ನು ಕೊಡುವುದು. ಹೀಗೆ ದಾನದ ಅನೇಕ ಬಗೆಗಳನ್ನು ಕಾಣುತ್ತೇವೆ. ಹಾಗೂ ಶಾಸನದ ಕೊನೆಯ ಭಾಗವು ಕೊಟ್ಟ ದಾನವನ್ನು ಮುಂದಿನವರು ಕಾಪಾಡಬೇಕಾದ ಹೊಣೆಗಾರಿಕೆ ಬಗ್ಗೆ ಹೇಳುತ್ತದೆ. ಅಂದರೆ ತಾವು ಕೊಟ್ಟಿದ್ದನ್ನಾಗಲೀ ಇಲ್ಲವೇ ಪರರು ಕೊಟ್ಟಿದ್ದನ್ನಾಗಲೀ ಕೊಟ್ಟ ದಾನವನ್ನು ಯಾರು ಅಪಹರಿಸುತ್ತಾರೋ ಅವರು ಅರವತ್ತು ಸಾವಿರ ವರ್ಷಗಳು ಕ್ರಿಮಿಗಳಾಗಿ ಹುಟ್ಟುತ್ತಾರೆ ಎಂದು ಶಾಸನದ ಕೊನೆಯ ಭಾಗವಾದ ಶಾಪಾಶಯದಲ್ಲಿ ಹೇಳಲಾಗಿರುತ್ತದೆ.

ಒಟ್ಟಿನಲ್ಲಿ ದಾನಶಾಸನಗಳ ಬಗ್ಗೆ ವಿವರಿಸುವಾಗ, ಸಂಡೂರು ಪರಿಸರಕ್ಕೆ ಸಂಬಂಧಿಸಿದ ಶಾಸನಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಿದಾಗ ನಮಗೆ ಕಾಣಸಿಗುವವು ದಾನ ಶಾಸನಗಳೇ ಅಧಿಕ. ಅವುಗಳಲ್ಲಿ ದೇವಾಲಯಗಳ ಜೀರ್ಣೋದ್ಧಾರ, ನಿರ್ಮಾಣ ಕಾರ್ಯ, ನಿತ್ಯದ ಪೂಜಾಕಾರ್ಯಕ್ಕಾಗಿ ಗ್ರಾಮ, ಭೂಮಿ, ಕಾಸು, ಗದ್ಯಾಣ ಮತ್ತು ತೆರಿಗೆಗಳನ್ನು ದಾನವಾಗಿ ನೀಡಿರುವರು. ಹಾಗೆಯೇ ಮಠ, ಅಗ್ರಹಾರ ಮತ್ತು ಸಾಮಾಜಿಕ ಕಾರ್ಯಗಳಿಗಾಗಿ ದಾನ ನೀಡಿರುವ ವಿವರಗಳೂ ಇವೆ. ಬಾವಿ, ಕೆರೆ, ಹೊಂಡ ಇತ್ಯಾದಿಗಳನ್ನು ನಿರ್ಮಿಸುವುದಕ್ಕೂ ದಾನಗಳನ್ನು ನೀಡಿರುವರು. ಹೀಗೆ ಅನೇಕ ಉದ್ದೇಶಗಳಿಗಾಗಿ ಕೊಟ್ಟ ದಾನಗಳ ಬಗ್ಗೆ ಈ ಶಾಸನಗಳಲ್ಲಿ ವಿವರಗಳಿರುತ್ತವೆ ಹಾಗೂ ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸ್ಮರಣೆಗಾಗಿ ನಿಲ್ಲಿಸಿದ ಸ್ಮಾರಕ ಶಾಸನಗಳಾದ ವೀರಗಲ್ಲುಗಳನ್ನೂ ಕಾಣುತ್ತೇವೆ.

೩.೧.೧ ಶೈವ ಶಾಸನಗಳು

ಸಂಡೂರು ಪರಿಸರದಲ್ಲಿ ಇಲ್ಲಿಯವರೆಗೂ ಒಟ್ಟು ೨೭ ಶಾಸನಗಳು ದೊರಕಿವೆ. ಹಾಗೂ ಕ್ಷೇತ್ರಕಾರ್ಯ ಕೈಗೊಂಡ ನಂತರ ೧೦ ಶಾಸನವು Inscriptions of Bellary District- Vol. II ದಿಂದ ಬಳ್ಳಾರಿ ಜಿಲ್ಲಾ

ಶಾಸನ ಸಂಪುಟದಲ್ಲಿ ಬಿಟ್ಟಿದ್ದ ಈ ಶಾಸನಗಳನ್ನು ಇಲ್ಲಿ ಸೇರಿಸಲಾಗಿದೆ. ಇಲ್ಲಿ ದಾನ ಶಾಸನಗಳ ಸಂಖ್ಯೆಯೇ ಅಧಿಕ. ಇದರಲ್ಲಿ ದೊರೆತಿರುವ ತಾಮ್ರ ಶಾಸನಗಳ ಸಂಖ್ಯೆ ಕೇವಲ ೩. ಈ ಭಾಗದ ಶಾಸನಗಳಲ್ಲಿ ಅಷ್ಟೇನೂ ವೈವಿಧ್ಯತೆಯಿಲ್ಲ. ಬಹುತೇಕ ಶಾಸನಗಳು ಕುಮಾರಸ್ವಾಮಿಗೆ ಸಂಬಂಧಪಟ್ಟವೇ ಆಗಿವೆ. ಈ ಭಾಗದಲ್ಲಿ ಶಾಸನಗಳು ಅಧಿಕವಾಗಿ ದೊರೆಯದೆ ಇದ್ದರೂ ಇಲ್ಲಿನ ಭೌಗೋಳಿಕ ಪರಿಸರವೇ ಕಾರಣವಿರಬಹುದು. ಇಲ್ಲಿ ಜನವಸತಿ ಕಡಿಮೆಯಿತ್ತು ಮತ್ತು ದಟ್ಟವಾದ ಅರಣ್ಯದಿಂದ ಕೂಡಿತ್ತು.

ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿರುವ ಪಾರ್ವತಿ ದೇವಾಲಯದ ಮಂಟಪದಲ್ಲಿಯ ಕ್ರಿ.ಶ. ೧೨೦೬ರ ಶಾಸನದಲ್ಲಿ[೩] ಹೊಯ್ಸಳ ದೊರೆ ವೀರ ಬಲ್ಲಾಳನ ಆಜ್ಞೆಯಂತೆ ಅವನ ದಂಡನಾಯಕನಾದ ಮಹದೇವ ದಂಡನಾಯಕನು ಹಿಂದೆ ರಾಷ್ಟ್ರಕೂಟ ವಂಶದ ಕೃಷ್ಣರಾಜನು ಸ್ವಾಮಿದೇವರಿಗೆ ನೀಡಿದ್ದ ಕೆರೆಯಪಳ್ಳಿ (ಈಗಿನ ಕೆರ್ನಳ್ಳಿ) ಗ್ರಾಮವನ್ನು ಪುನರ್ದತ್ತಿಯಾಗಿ ನೀಡುತ್ತಾನೆ. ಹಾಗೂ ಈ ದತ್ತಿಯನ್ನು ಆ ಸ್ಥಳದ ವಿಷ್ಣುಕರ ಬ್ರಹ್ಮಚಾರಿ ಸ್ವೀಕರಿಸಿದಂತೆ ಉಲ್ಲೇಖವಿದೆ.

ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿರುವ, ಕುಮಾರಸ್ವಾಮಿ ದೇವಾಲಯದ ಪೂರ್ವಭಾಗದ ಗೋಡೆಗೆ ಬರೆಸಿದ ಶಾಸನದಲ್ಲಿ[೪] ಚಾಗನಕೇರಿಯ ಹಂಪಮಯ್ಯನ ಮಗನಾದ ಕಚ್ಚಯ್ಯ ದೇಶಿಗನು ಮೆಟ್ಟಿಲನ್ನು ಕಟ್ಟಿಸಿದಂತೆ ತಿಳಿದುಬರುತ್ತದೆ.

ಕುಡತಿನಿ ಗ್ರಾಮದ ಕ್ರಿ.ಶ. ೧೨೧೦ರ[೫] ಶಾಸನದಲ್ಲಿ ಕಾರ್ತಿಕೇಯ ತಪೋವನಾಧಿಪತಿ ವಿಷ್ಣುಕರದೇವ, ಸ್ಥಾನದಯ್ದುವರ್ಗದವರು ಏಳ್ಕೋಟಿ ತಪೋಧನರು, ಬಣಜಿಗರು ಮತ್ತು ಭಕ್ತರು ಸೇರಿ ಕುಡತಿನಿ ನಾಗೇಶ್ವರ ದೇವರಿಗೆ ಭೂದಾನ ಕೊಡುತ್ತಾರೆ. ಅಲ್ಲದೆ ಅದರ ಜೊತೆಗೆ ನಂದಾದೀವಿಗೆಗಾಗಿ ಒಂದು ಗಾಣವನ್ನು ದಾನ ಬಿಟ್ಟ ವಿಷಯವಿದೆ.

ತಾಳೂರಿನ ಕ್ರಿ.ಶ. ೧೨೧೪ರ ಶಾಸನದಲ್ಲಿ ವೀರಬಲ್ಲಾಳನ ಆಳ್ವಿಕೆಯಲ್ಲಿ ತಲರದ ಈಶ್ವರ ದೇವಾಲಯವನ್ನು ಕಟ್ಟಿಸಿದ ಯಗವಟ್ಟಿಯ ಬೊಮ್ಮಗವುಡನು ದೇವಾಲಯವನ್ನು ಕಟ್ಟಿದ ಬೊಮ್ಮೋಜನಿಗೆ ಭೂದಾನ ನೀಡಿದ ಉಲ್ಲೇಖವಿದೆ.[೬]

ಅಂತಾಪುರದ ೧೬ನೆ ಶತಮಾನದ ಶಾಸನದ ಪ್ರಕಾರ ಈ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ತಿಮ್ಮರಸಯ್ಯನವರು ನಂದಾದೀಪಕ್ಕೆ ಎರಡು ಹಣವನ್ನು ನೀಡಿದಂತೆ ತಿಳಿಯುತ್ತದೆ.[೭]

ಅದೇ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಹತ್ತಿರವಿರುವ ತ್ರುಟಿತವಾದ ಕ್ರಿ.ಶ. ೧೫೪೭ರ ಶಾಸನವು[೮] ಆವಿನ ಮಡುವು ಸೀಮೆಯಲ್ಲಿದ್ದ ಅನಂತಪುರದ (ಅಂತಾಪುರ) ಮಲ್ಲಿಕಾರ್ಜುನ ದೇವಾಲಯವು ಹಾಳಾಗಿದ್ದಾಗ ಆ ಊರಿನ ಹರಪಣ್ಣನು, ಗೌಡ, ಶೇನಭೋವ ಮತ್ತು ಆ ಗ್ರಾಮದ ಜನರ ಒಪ್ಪಿಗೆಯ

ಮೇರೆಗೆ ದೇವಾಲಯವನ್ನು ದುರಸ್ತಿ ಮಾಡಿಸಿದಂತೆ ತಿಳಿದುಬರುತ್ತದೆ. ಹಾಗೂ ತಿಮ್ಮದಾಸರಿ ಎಂಬುವನ ಉಲ್ಲೇಖವಿದೆ.

ಅದೇ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಹತ್ತಿರವಿರುವ ಕ್ರಿ.ಶ. ೧೫೫೧ರ ಶಾಸನವು[೭೮] ಮಹಾಮಂಡಲೇಶ್ವರ ರಾಮರಾಜ ತಿರುಮಲರಾಜನ ಮಗನಾದ ತಿಮ್ಮರಾಜನು ಆವಿನ ಮಡುವಿನ ಬಳಿಯಿರುವ ಕೆರೆಯ ಕೆಳಗೆ ಇರುವಂತಹ ಉದ್ಯಾನವನವನ್ನು ಹಿರಿಯ ಅನಂತಪುರ (ಅಂತಾಪುರ)ದ ಮಲ್ಲಿಕಾರ್ಜುನ ದೇವನಿಗೆ ದಾನ ನೀಡಿದಂತೆ ತಿಳಿಯುತ್ತದೆ.

ಕುರಿಕುಪ್ಪೆ ಗ್ರಾಮದ ಈಶ್ವರ ದೇವಾಲಯದ ಮಂಟಪದ ಕಂಬದಲ್ಲಿರುವ ಕ್ರಿ.ಶ. ೧೫೨೩ರ ಶಾಸನದ ಪ್ರಕಾರ ಈ ಗ್ರಾಮದ ಬೆನಕರಸನು ವಿರೂಪಾಕ್ಷ ದೇವಾಲಯ ಕಟ್ಟಿಸಿ ಬಸವಾದೀಕ್ಷಿತರ ಭೂಮಿಯನ್ನು ಕ್ರಮವಾಗಿ ಪಡೆದು ದೇವರ ಕಾರ್ಯಕ್ಕೆ ದತ್ತಿ ಬಿಡುತ್ತಾನೆ.[೭೯] ಹಾಗೂ ಶಾಸನದಲ್ಲಿ ಕುರಿಕುಪ್ಪೆಗೆ ಅನಂತಸೇತು ಎಂಬ ಪ್ರತಿನಾಮವಿತ್ತೆಂದು ತಿಳಿದುಬರುತ್ತದೆ. ಬೆನಕರಸನು ದಾನ ನೀಡುವಾಗ ಆ ಜಾಗದಲ್ಲಿ ಮಾವು, ಹಲಸು, ನೇರಿಲೆ, ಸಂಪಿಗೆ ಮುಂತಾದ ಮರಗಳನ್ನು ನೆಡಿಸಿ ತೋಟವಾಗಿ ಮಾರ್ಪಡಿಸಿ ದಾನ ನೀಡಿರುವುದು ಮಹತ್ವದ ವಿಷಯವಾಗಿದೆ.

ಸಂಡೂರಿನ ಕುಮಾರಸ್ವಾಮಿ ಬೆಟ್ಟದಲ್ಲಿನ, ಕುಮಾರಸ್ವಾಮಿ ದೇವಾಲಯದ ಜಾಗಟೆಯ ಮೇಲಿನ ಕ್ರಿ.ಶ. ೧೮೫೪ರ ಶಾಸನವು[೮೦] ಕುಮಾರಸ್ವಾಮಿ ದೇವರಿಗೆ ಗುಹೇಶ್ವರ ದುರ್ಗದ ಅಭುವನ ಗೋತ್ರದ ಕಂಚುಗಾರ ಬಟ್ಲಬಸವನ ಪೌತ್ರ ಸಿಂಗಪ್ಪನು (ಗಡಿಯಾರ) ಶೇ. ೫೬ ತೂಕದ ಜಾಗಟೆಯನ್ನು ನೀಡಿದನು. ಹಾಗೂ ಸಣ್ಣ ಬಸಪ್ಪನ ಪುತ್ರ ಸಕ್ರಪ್ಪ, ಕುಮಾರಪ್ಪನವರು ಅದಕ್ಕೆ ಸಲಾಕಿ (ಸರಪಳಿ) ಮಾಡಿಸಿ ಕೊಟ್ಟಿರುತ್ತಾರೆ. ಇದರ ತೂಕ ೮೧ ಸೇರು. ಕಾಲದ ದೃಷ್ಟಿಯಿಂದ ಈ ಪರಿಸರದ ಕೊನೆಯ ಶಾಸನ ಇದಾಗಿದೆ.

ಹಿರೇಹಾಳುವಿನ ಗ್ರಾಮದ ಪಶ್ಚಿಮದ ಕೆರೆಯ ಕಡೆಗೆ ಇರುವ ಶಾಸನದಲ್ಲಿ[೮೧] ಅಮಿತಯ್ಯ ದಣ್ಣನಾಯಕ ಕಾಲೆಯ್ಯ ನಾಯಕಣ್ಣ ಸಾವಿದೇವ ಹಿರಿಯ ಸಾವಿದೇವ ಮತ್ತು ಇತರ ನಾಯಕರುಗಳು ಹಿರೇಹಾಳುವಿನ ಸ್ವಾಮಿದೇವ ದೇವರಿಗೆ ಭೂದಾನ ನೀಡಿದಂತೆ ತಿಳಿದುಬರುತ್ತದೆ.

ಸಂಡೂರಿನ ಪಿ.ಡಬ್ಲ್ಯೂ.ಡಿ. ಕಛೇರಿಯ ಬಳಿಯಿರುವ ೧೮ನೇ ಶತಮಾನದ ಶಾಸನವು,[೮೨] ಮೂಲಸ್ಥಾನ ಮಲ್ಲಿಕಾರ್ಜುನ ದೇವನಿಗೆ ಪ್ರಜೆಗಳು ತಲೆಗೊಂದರಂತೆ ಒಂದು ವೀಸವನ್ನು ನೀಡಿದಂತೆ ತಿಳಿದುಬರುತ್ತದೆ.

ತುಂಬರಗುದ್ದಿಯ ಗ್ರಾಮದ ಶಿವದೇವಾಲಯದ ಬಳಿಯಿರುವ ಶಾಸನದಲ್ಲಿ[೮೩] ದುರಬಿ ನರಸಪ್ಪನು ಮಾನ್ಯರೂಪದಲ್ಲಿ ಪ್ರತಿದಿನ ೩ ಕಾಸನ್ನು ಮತ್ತು ತೆರಿಗೆಯೊಂದನ್ನು ತುಂಬರಗುದ್ದಿಯ ಕಲ್ಲಯ್ಯ ದೇವರ ದೀಪಾರಾಧನೆಗೆ ದಾನ ಬಿಟ್ಟಂತೆ ತಿಳಿದುಬರುತ್ತದೆ.

೩.೧.೨ ವೈಷ್ಣವ ಶಾಸನಗಳು

ಕ್ರಿ.ಶ. ೧೫೨೭ರಲ್ಲಿ[೯] ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಹೊಸಮಲೆದುರ್ಗದ ಮುಮ್ಮಡಿ ಸಿಂಗನ ಮೊಮ್ಮಗನೂ ಕಂಪಿಲರಾಯ ಮತ್ತು ಹರಿಹರ ದೇವಿಯರ ಮಗನೂ ಆದ ರಾಮನಾಥನ ಗುಡಿಯನ್ನು ಗೋಪಾಯಿ ಮತ್ತು ಆಕೆಯ ತಮ್ಮ ರಾಮಣನು ಕಟ್ಟಿಸಿ ಆ ಗುಡಿಯ ಜೀರ್ಣೋದ್ಧಾರಕ್ಕೆ ಗಂಟೆ, ಜಾಗಟೆ, ಹರಿವಾಣ, ಚೆಂಬು ಮೇಲೆ ಹೊನ್ನನು ಪೂಜಾ ಸಾಮಗ್ರಿಗಳನ್ನು ದಾನ ನೀಡಿದ ಉಲ್ಲೇಖವಿದೆ. ಇದರ ನಂತರ ಕಾಲದ ದೃಷ್ಟಿಯಿಂದ ತುಂಬರಗುದ್ದಿಯಲ್ಲಿ ದೊರೆತ ಶಾಸನ ಮುಖ್ಯವಾಗುತ್ತದೆ.[೧೦] ಇದರಲ್ಲಿ ತುಂಬರಗುದ್ದಿಯ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ ಈ ಶಾಸನದಲ್ಲಿ ದುರಬಿ ನರಸಪ್ಪನವರು ತುಂಬರಗುತ್ತಿಯ ವಿವರವಿದೆ. ಹನುಮಂತ ದೇವರ ದೀಪರಾಧನೆಗೆ ಮತ್ತು ನೈವೇದ್ಯಕ್ಕೆ ಮೂರು ಕಾಸನ್ನು ದಾನ ನೀಡಿದ ಉಲ್ಲೇಖವಿದೆ.

೩.೨ ಬಸದಿಗಳಿಗೆ ದಾನ

೩.೨.೧ ನಿರ್ಮಾಣ

ಡಾ. ಡಿ.ಎಲ್.ಎನ್.ಅವರು ವಡ್ಡಾರಾಧನೆ ಕಥೆಯಲ್ಲಿ ಉಲ್ಲೇಖವಾದ ಪರ್ವತ ಸಂಡೂರು ಬೆಟ್ಟದ ಕಾರ್ತಿಕ ಋಷಿ ಕುಮಾರಸ್ವಾಮಿಯಾಗಿ ಆ ಬಸದಿ ಈಗಿನ ದೇವಾಲಯವಾಗಿ ಪರಿವರ್ತನೆಗೊಂಡಿರಬೇಕೆಂದು ಹೇಳುತ್ತಾರೆ.[೧೧] ಈ ಕೃತಿಯಲ್ಲಿ ಬರುವ ಕಾರ್ತಿಕ ಋಷಿಯ ಕಥೆಯ ಪ್ರಕಾರ ಕೋಗಳಿಯ ದೊರೆ ಕ್ರೌಂಚನಿಂದ* ಗಾಯಗೊಂಡ ಕಾರ್ತಿಕನೆಂಬ ಋಷಿ ಅಲ್ಲಿಂದ ಹೊರಟು ಬಂದು ಸಂಡೂರಿನ ಕುಮಾರಸ್ವಾಮಿಯ ಬೆಟ್ಟದ ಇನ್ನೊಂದು ಬದಿಯಲ್ಲಿ ಅಂದರೆ ಆಗಿನ ಕಿಷ್ಕಿಂಧೆಯಲ್ಲಿ ನೆಲೆನಿಂತು ಉಗ್ರ ತಪಸ್ಸು ಮಾಡಿದನೆಂದೂ, ಅವನ ಅಜ್ಜಿಯಾದ ವೀರಮತಿಯು ನವಿಲಿನ ರೂಪದಲ್ಲಿ ಬಂದು ಅವನನ್ನು ಉಪಚರಿಸಿದಳೆಂದೂ ಮುಂದೆ ಆತ ಅಲ್ಲಿಯೇ ನಿಧನ ಹೊಂದಿದನೆಂದೂ ಆತನ ನೆನಪಿಗಾಗಿ ಆತನ ತಂಗಿ ವೀರಶ್ರೀಯು ಆ ಸ್ಥಳದಲ್ಲಿ ಒಂದು ಜೈನ ದೇವಾಲಯ ಕಟ್ಟಿಸಿದಂತೆಯೂ ಅದೇ ನವಿಲು ತೀರ್ಥವೆಂದು ಹಾಗೂ ಕಾರ್ತಿಕ ಋಷಿಯೇ ನವಿಲುಸ್ವಾಮಿಯೆಂದು ಪ್ರಖ್ಯಾತಿ ಪಡೆದನೆಂದೂ ಈ ಕಥೆ ತಿಳಿಸುತ್ತದೆ.**

*ಸಂಡೂರಿನ ಕುಮಾರಸ್ವಾಮಿ ದೇವಾಲಯದಲ್ಲಿ ಸ್ವಾಮಿಯ ಪ್ರತಿಮೆಯ ಎಡಗೈಯೊಂದರ ಮೇಲೆ ಕುಳಿತಿರುವ ಪಕ್ಷಿಯ ಪ್ರತಿಮೆಯೊಂದಿದ್ದು ಅದು ಕ್ರೌಂಚನೆಂಬ ರಾಕ್ಷಸನಾಗಿದ್ದಿತೆಂದೂ ಕುಮಾರಸ್ವಾಮಿ ಸನ್ನಿಧಿಯಲ್ಲಿ ಮಾತ್ರ ತನಗೆ ಮುಕ್ತಿಯೆಂದು ತಿಳಿದು ಆತನ ಅಪ್ಪಣೆ ಪಡೆದು ಅಲ್ಲಿ ನೆಲೆಗೊಂಡಿದೆ ಎಂದು ನಂಬಲಾಗಿದೆ.

**ಕಲ್ಲಿನಲ್ಲಿ ಕೆತ್ತಲಾದ ನವಿಲಿನ ಹಿಂದಿನ ಅರ್ಧಭಾಗದ ತುಣುಕು ಇಂದಿಗೂ ದೇವಾಲಯದ ಮುಂದಿದೆ.

ಡಾ.ಎಚ್.ದೇವಿರಪ್ಪನವರ ಹೇಳಿಕೆಯಂತೆ[೧೨] ವೀರಶ್ರೀ ಕಟ್ಟಿಸಿದ ಬಸದಿಯ ಸ್ಥಳವು ಈಗಿನ ಸುಬ್ಬರಾಯನಹಳ್ಳಿಗೆ ಸಮೀಪವಿರುವ ನವಿಲುಸ್ವಾಮಿ ದೇವಾಲಯವೆಂದು ಹೇಳುತ್ತಾರೆ. ಆದರೆ ಈ ದೇವಾಲಯವು ವಿಜಯನಗರದ ಅರಸರು ಕಟ್ಟಿಸಿರುವ ದೇವಾಲಯಗಳಂತೆ ಇದೆ. ಅಲ್ಲದೆ ಇದರ ಮುಂದಿರುವ ಹೊಂಡವನ್ನು ಬುಕ್ಕರಾಯನು ಮಾಡಿಸಿದನೆಂದೂ ಅಲ್ಲಿಯ ಶಾಸನ ಸ್ಪಷ್ಟವಾಗಿ ತಿಳಿಸುತ್ತದೆ. ಅಲ್ಲದೆ ಇಲ್ಲೂ ಜೈನ ಧರ್ಮದ ಚಿಹ್ನೆಗಳಾವುವೂ ಗೋಚರಿಸುವುದಿಲ್ಲ. ಹೀಗಾಗಿ ಈ ದೇವಾಲಯವೂ ಇತ್ತೀಚಿನದು.

ಕುಡತಿನಿಯ ಗ್ರಾಮದಲ್ಲಿರುವ ರಾಮಲಿಂಗೇಶ್ವರ ಮಠವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಜೈನ ಬಸದಿಯಾಗಿ ನಿರ್ಮಾಣಗೊಂಡ ಇದು ನಂತರದ ಕಾಲದಲ್ಲಿ ಶೈವ ದೇವಾಲಯವಾಗಿ ಪರಿವರ್ತನೆಗೊಂಡಿದೆ. ದೇವಾಲಯದ ಮುಂದಿರುವ ತೀರ್ಥಂಕರರ ಮತ್ತು ಯಕ್ಷಿಯ ವಿಗ್ರಹಗಳು ಗೋಡೆಯ ಮೇಲೆ ಇರುವ ತೀರ್ಥಂಕರ ವಿಗ್ರಹ ಹಾಗೂ ಅಲ್ಲಿಯ ಸಿಂಹ ಪೀಠಗಳಿಂದ ಇದು ಜೈನ ಬಸದಿಯಾಗಿತ್ತೇನ್ನುವುದಕ್ಕೆ ಪುಷ್ಠಿ ನೀಡುತ್ತದೆ.[೧೩]

ದುರ್ವಿನಿತನು ಕೊಳಗಲ್ಲಿನಲ್ಲಿ ಕಟ್ಟಿಸಿದ ಬಸದಿಗೆ ಕ್ರಿ.ಶ. ೧೦೫೫ರಲ್ಲಿ ಇಂದ್ರಕೀರ್ತಿ ಮುನಿಂದ್ರನು ಭೂದಾನ ನೀಡುತ್ತಾನೆ. ಮುಂದೆ ಈ ಪಾರ್ಶ್ವನಾಥ ದೇವರ ನಿತ್ಯಾಭಿಷೇಕಕ್ಕೆ ಕ್ರಿ.ಶ. ೧೨೬೬ರಲ್ಲಿ ಜಿನಭಕ್ತರು ದತ್ತಿ ನೀಡುತ್ತಾರೆ. ಕ್ರಿ.ಶ. ೧೨೯೨ರಲ್ಲಿ ಕೇಶವ ಪಂಡಿತನು ಮೊಸಳೆವಾಡದ ಪಾರ್ಶ್ವನಾಥ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿದಾಗ, ವೈಷ್ಣವ ಭಕ್ತ ಭೈರವರಸ ಮತ್ತು ಗೌಡರು ಎಂಟು ಹಿಟ್ಟು, ಗ್ರಾಮದ ಜನರು ಸೇರಿ ಆ ಬಸದಿಯ ಧರ್ಮಕಾರ್ಯಕ್ಕೆ ಪುಸ್ತಕ ಗಚ್, ದೇಶಿಗಣ, ಮೂಲ ಸಂಘದ ನೇಮಿಚಂದ್ರ ರಾವುಟನ ಶಿಷ್ಯ ವಿನಯಚಂದ್ರ ದೇವನಿಗೆ ದಾನ ಕೊಡುತ್ತಾರೆ.[೧೪]

ವಡ್ಡಾರಾಧನೆಯು ಕೋಗಳಿಯಲ್ಲಿ ಒಂದು ಬಸದಿಯಿದ್ದಂತೆಯೂ, ಕಾರ್ತಿಕ ಋಷಿ ಅಲ್ಲಿ ಬಂದು ವಂದಿಸಿದಂತೆಯೂ ತಿಳಿಸುತ್ತದೆ. ಶಾಸನಗಳು[೧೪a] ಹೇಳವಂತೆ ಗಂಗರಾಜ ದುರ್ವಿನೀತ ನಿರ್ಮಿತ ಬಸದಿಯೇ ಬಹುಶಃ ಇದಾಗಿರಬಹುದು. ಅಲ್ಲದೆ ಅಷ್ಟೊತ್ತಿಗಾಗಲೇ ಅದು ಸಾಕಷ್ಟು ಪ್ರಚಾರವನ್ನು ಪಡೆದಿರಲೂಬಹುದು. ಹೀಗೆ ನೋಡಿದಾಗ ಐತಿಹಾಸಿಕವಾದ ಈ ಬಸದಿಯ ನಿರ್ಮಾಣ ಕ್ಷಿಪ್ರದಲ್ಲಿಯೇ ವಡ್ಡಾರಾಧನೆ ರಚನೆಯಾಗಾರುವಂತೆ ತೋರುತ್ತದೆ.*

ಡಾ.ಜೆ.ಎಮ್.ನಾಗಯ್ಯನವರ ಪ್ರಕಾರ[೧೫] ಕುಮಾರಸ್ವಾಮಿ ಬೆಟ್ಟದ ಕೆಳಭಾಗದಲ್ಲಿ ನಂದಿಹಳ್ಳಿಗೆ ಪಶ್ಚಿಮಕ್ಕೆ ಇವರು ಜೋಗಿಕೊಳ್ಳವೇ ಕಥೆಯಲ್ಲಿ ಬರುವ ಬಸದಿಯ ಪ್ರದೇಶವಾಗಿರಬೇಕು. ಇಲ್ಲಿ ಜೋಗಪ್ಪನ ಮೂರ್ತಿ ಇತ್ತು. ಆದರೆ ಈಗ ಆ ಮೂರ್ತಿ ಅಲ್ಲಿಲ್ಲ. ಇಪ್ಪತ್ತು ವರ್ಷಗಳ ಹಿಂದೆ ಅದನ್ನು ಯಾರೋ ಅಪಹರಿಸಿಕೊಂಡು ಹೋಗಿದ್ದಾರೆ.

---

* ಅಥವಾ ತರುವಾಯದಲ್ಲಿ ಒಂದು ಪ್ರಸಂಗಕ್ಕೆ ಅಥವಾ ಕಲ್ಪನೆಗೆ ಕಥೆಯ ರೂಪುಕೊಟ್ಟು ತನ್ಮೂಲಕ ಕೋಗಳಿ ಸುತ್ತಲಿನ ಜೈನ ಪರಿಸರವನ್ನು ಪ್ರತಿಪಾದಿಸುವ ಸಲುವಾಗಿಯೂ ಕವಿ ಕೋಗಳಿಯ ಬಸದಿಯನ್ನು ಬಳಸಿಕೊಂಡಿರಬಹುದು.

ಕಥೆಯಲ್ಲಿ ನಿರೂಪಿಸಿದಂತೆ ಕೋಗಳಿಯ ಪೂರ್ವಕ್ಕೆ ಇದೆ. ಅಲ್ಲದೆ ಇದು ಪರ್ವತದ ಕೊಳದ ತುದಿಯ ಪ್ರದೇಶವೂ ಆಗಿದೆ. ಹಾಗೂ ಕಾರ್ತಿಕ ಋಷಿಯ ಕಥೆಯಲ್ಲಿ ವರ್ಣಿಸಿರುವಂತೆಯೇ ಈ ಸ್ಥಳವಿದೆ. ಜೋಗಿಕೊಳ್ಳದ ಜೋಗಪ್ಪನ ಮೂರ್ತಿಯಿದ್ದ ಪ್ರದೇಶದಲ್ಲಿ ಇಟ್ಟಿಗೆಗಳಿಂದ ಕಟ್ಟಲ್ಪಟ್ಟ ದೇವಾಲಯದ ಅವಶೇಷಗಳು, ಕಲ್ಲಿನ ಕಂಬಗಳು ಇತ್ತೀಚೆಗೆ ಕಂಡುಬಂದಿವೆ. ಇಲ್ಲಿ ದೊರೆತ ಇಟ್ಟಿಗೆಗಳು ಪ್ರಾಚೀನ ಕಾಲದಲ್ಲಿ ಬಳಸುತ್ತಿದ್ದ ಇಟ್ಟಿಗೆಗಳನ್ನು ಹೋಲುತ್ತದೆ. ಇಲ್ಲಿ ನಿರ್ಮಿಸಲ್ಪಟ್ಟ ದೇವಾಲಯ ಕ್ರಿ.ಶ. ೧-೨ನೆಯ ಶತಮಾನಕ್ಕೆ ಸಂಬಂಧಪಟ್ಟಿರಬೇಕು. ಹಾಗೂ ಕಲ್ಲಿನಿಂದ ಕೆತ್ತಲ್ಪಟ್ಟ ದೇವಾಲಯಗಳಿಗಿಂತ ಇಟ್ಟಿಗೆಯಿಂದ ಕಟ್ಟಲ್ಪಟ್ಟ ದೇವಾಲಯಗಳು ಪ್ರಾಚೀನ, ಪಾರ್ವತಿ ಮತ್ತು ಕುಮಾರಸ್ವಾಮಿ ದೇವಾಲಯಗಳಿಗೆ ಪೂರ್ವದಲ್ಲಿಯೇ ಈ ಬಸದಿ ನಿರ್ಮಾಣವಾಗಿರಬೇಕು. ಇಲ್ಲೊಂದು ದಿಗಂಬರ ಮೂರ್ತಿ ಇದ್ದುದನ್ನು ಸ್ಥಳೀಯರು ಹೇಳುತ್ತಿರುವುದರಿಂದ ಇದು ಕಾರ್ತಿಕ ಋಷಿಯ ಕಥೆಯಲ್ಲಿ ಬರುವ ಬಸದಿ ಇದೇ ಆಗಿರಬೇಕು.

ಜೋಗಿಕೊಳ್ಳವೆಂಬ ಶಬ್ದವೂ ಜಿನಧರ್ಮದತ್ತ ಬೆರಳು ತೋರುತ್ತದೆ. ಜೈನಧರ್ಮದ ಪಾರಿಭಾಷಿಕ ಪದವಾದ 'ಯಕ್ಷ' ಎಂಬುದು 'ಜಕ್ಕ' ಎಂದೂ 'ಯಕ್ಷಿ' ಎಂಬುದು 'ಜಕ್ಕಿ' ಎಂದು 'ಯಕ್ಷಿಣಿ' ಎಂಬುದು 'ಜಕ್ಕಿಣಿ' ಎಂದೂ ಪ್ರಾಕೃತದಲ್ಲೂ ತನ್ಮೂಲಕ ಕನ್ನಡದಲ್ಲೂ ವ್ಯತ್ಯಾಸ ಪಡೆದಿವೆ. ಕನ್ನಡದಲ್ಲಿ ಜಕ್ಕಲೆ, ಜಕ್ಕಿಯಬ್ಬೆ, ಜಕ್ಕಣಬ್ಬೆ ಎಂಬ ನಾಮವಾಚಕಗಳು ಪ್ರಚಾರದಲ್ಲಿವೆ. ಜೋಗಿ ಮತ್ತು ಜೋಗಪ್ಪ ಎಂಬಿವು (ಯಕ್ಷ > ಜಕ್ಕಿ > ಜೋಗಿ ಮತ್ತು ಯಕ್ಷ > ಜಕ್ಕ > (ಜೋಗಪ್ಪ) ಜಕ್ಕಿ ಮತ್ತು ಜಕ್ಕಗಳನ್ನು ನಿರ್ದೇಶಿಸುತ್ತಿರಬೇಕು.

೩.೩ ವ್ಯಕ್ತಿಗಳಿಗೆ ದಾನ

೩.೩.೧ ಗೌಡ

ನಾರಿಹಳ್ಳದ ದಡದಲ್ಲಿರುವ ತಾಳೂರಿನ ಪಾಳು ಶಿವಾಲಯದ ಮಂಟಪದ ಕಂಬದಲ್ಲಿನ ಶಾಸನವು[೧೬] ಈ ರೀತಿ ಇದೆ. ಕ್ರಿ.ಶ. ೧೨೧೮ರಲ್ಲಿ ತಲರ (ತಾಳೂರು)ದಲ್ಲಿ ಯಗವಟ್ಟಿಯ ಬೊಮ್ಮಗವುಡನು ಈಶ್ವರ ದೇವಾಲಯವನ್ನು ಕಟ್ಟಿಸುತ್ತಾನೆ. ಈ ದೇವಾಲಯವನ್ನು ಕಟ್ಟಿಸಿದ ಬೊಮ್ಮುಜನಿಗೆ ಭೂದಾನ ನೀಡಿದನು ಹಾಗೂ (ಈ ದೇವಾಲಯದ ಆವಣರದಲ್ಲಿ ವೀರಗಲ್ಲುಗಳು ಇವೆ. ಅವು ತುಂಡಾಗಿವೆ)

ಸಂಡೂರಿನ ಸ್ಥಳೀಯ ಕೋರ್ಟಿನ ಕಾಂಪೌಂಡಿನಲ್ಲಿರುವ ಕ್ರಿ.ಶ. ೧೭೪೮ರ ಶಾಸನವು[೧೬೩] ಸಂಡೂರನ್ನು ಜಮುನಗಿರಿ ಸ್ವಾಮಿಗೆ ಉಂಬಳಿಯಾಗಿ ಕೊಟ್ಟಿದ್ದು, ಈ ಸ್ವಾಮಿಯ ಸಮಾಧಿಯನ್ನು ಗಿರಿಯಮ್ಮನಿಂದ ಕಟ್ಟಿಸಲ್ಪಟ್ಟಂತೆ, ಹಾಗೂ ಆಕೆಯ ಮಕ್ಕಳಾದ ಹಿಂಚಗಿರಿ, ಬಸುವಂತಗಿರಿ ಮತ್ತು ಸಂತೋಜಿಗಿರಿಯ ಉಲ್ಲೇಖವಿದೆ.

[illegible]

ಸಂಡೂರಿನ ಕೋರ್ಟಿನ ಅದೇ ಕಾಂಪೌಂಡಿನಲ್ಲಿರುವ ಕ್ರಿ.ಶ. ೧೨೦೮ರ ಶಾಸನದಲ್ಲಿ[೧೫] ಜಾಮುನಗಿರಿ ಭಾವನಿಗೆ ಚಿಕ್ಕ ಸಂಡೂರಿನಲ್ಲಿ ಹಿರೆ ಹಿಂದೂರಾಯನು ಭೂಮಿದಾನ ನೀಡಿದಂತೆ ತಿಳಿದುಬರುತ್ತದೆ.

ಸಂಡೂರಿನ ಪಿ.ಡಬ್ಲ್ಯೂ.ಡಿ.ಕಛೇರಿಯ ಹತ್ತಿರವಿರುವ ಕ್ರಿ.ಶ. ೧೨೦೩ರ ಶಾಸನದಲ್ಲಿ[೧೬] ಹಿಂದೂರಾಯನ ಗುರುವಾದ ಜಾಮನಗಿರಿ ಭಾವ ಒಂದು ವ್ರಿತ್ತಿ ಭೂಮಿಯನ್ನು ಸರ್ವಮಾನ್ಯ ರೂಪದಲ್ಲಿ ರಾಗಪ್ಪನ ಮಗನಾದ ಸರುಭಾಯ್‌ಗೆ ಕೊಟ್ಟ ಉಲ್ಲೇಖವಿದೆ.

೩.೩.೨ ಶಾನುಭೋಗ

ಚೋರಮನೂರು ಗವುಡ ಶ್ಯಾನಭೋವರು ಬಡಗಿ ಕಂಮಾರರಿಗೆ ವರ್ಷಕ್ಕೆ ಮೂರು ಗದ್ಯಾಣಗಳನ್ನು ಬಿಟ್ಟ ಉಲ್ಲೇಖವಿದೆ.

ಈ ಶಾಸನವು[೧೭] ಚೋರನೂರು ವೀರಭದ್ರ ದೇವಸ್ಥಾನದ ಒಳಗೆ ಇದ್ದು, ಶಾಸನವು ತ್ರುಟಿತವಾಗಿದೆ. ಇದನ್ನು ಸದಾಶಿವರಾಯನ ಕಾಲದಲ್ಲಿ ಬರೆಸಲ್ಪಟ್ಟಿದೆ. ಹಾಗೂ ವೀರಭದ್ರ ದೇವಸ್ಥಾನದ ಒಳಗೆ ಇದ್ದ ಹಳೆಯ ಮೂರ್ತಿಯನ್ನು ಪಕ್ಕಕ್ಕೆ ಇಡಲಾಗಿದೆ. ಈಗ ಅಲ್ಲಿ ಹೊಸ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

೩.೩.೩ ಕಲ್ಕುಟಿಗ

ಕ್ರಿ.ಶ. ೧೦೨೪ರ ಕುಮಾರಸ್ವಾಮಿ ದೇವಾಲಯ ಪ್ರವೇಶದ ಎಡಹಸ್ತಿಹಸ್ತದಲ್ಲಿನ ಶಾಸನದಲ್ಲಿ[೧೮] ಶ್ರೀಸ್ವಾಮಿದೇವರ ತಪೋವನಾಧಿಪತಿಗಳಾದ ಗಧಾದರರಸರು ಕಲ್ಕುಟಿಗರಾದ ಬಿಯಳಚಟ್ಟಿ, ಬೆನಗಬೋವ, ಕುಮ್ಮಾರನಾಯಕರಿಗೆ ಭೂದಾನ ನೀಡಿದ ಉಲ್ಲೇಖವಿದೆ.

೩.೩.೪ ದರುಬಿ

ತುಂಬರಗುದ್ದಿಯ ಆಂಜನೇಯ ದೇವಸ್ಥಾನದ ಎದುರು ಇರುವ ಶಾಸನದಲ್ಲಿ[೧೯] ದರುಬಿ ನರಸಪ್ಪನವರು ತುಂಬರಗುತ್ತಿಯ ಹನುಮಂತ ದೇವರ ದೀಪಾರಾಧನೆಗೆ ೩ ಕಾಸನ್ನು ದಾನ ನೀಡುತ್ತಾನೆ.

೩.೪. ಸಂಸ್ಥೆಗಳಿಗೆ ದಾನ

೩.೪.೧ ಮಠಗಳು

ಕುಡತಿನಿ ಗ್ರಾಮದಲ್ಲಿ ಚಂಪನಕರೆ, ಗಂಜಿಕೆರೆ ..... ಮಯ್ಯನಕೆರೆ, ಸೆಟ್ಟಿಕೆರೆ, ಕಾಟಿಮಕೆರೆ ಪಂಚಮಠಗಳಿದ್ದ ಬಗ್ಗೆ ಶಾಸನಗಳು[೨೦] ಉಲ್ಲೇಖಿಸುತ್ತವೆ. ಅವುಗಳಿಗೆ ಅರಸರು, ಮಹಾಮಾಂಡಳಿಕರು, ಅಧಿಕಾರಿಗಳು, ತಪೋಧನರು ದಾನ ದತ್ತಿಗಳನ್ನು ಬಿಟ್ಟಿದ್ದರು.

ಹರಪನಹಳ್ಳಿ ಪಾಳೇಗಾರರ ಅರಸ ಮೊದಲ ವೀರಬಸಪ್ಪನಾಯಕನಿಗೆ ಪುಟ್ಟರಸ ಎಂಬ ಮಗನಿದ್ದು, ಆತನು ಆರು ವರ್ಷ ಪ್ರಾಯದಲ್ಲಿ ಮೈಲಿ ಬೇನೆಯಿಂದ ಮೃತನಾದನು. ಅವನ ಸಮಾಧಿ ಮೇಲೆ ಸಣ್ಣದೊಂದು ಮಠ ಕಟ್ಟಿಸಿದನು. ಅದು ಸಂಡೂರು ಕೇರಿಯಲ್ಲಿ ಪ್ರವೇಶಿಸುವ ಸ್ಥಳದಲ್ಲಿಯೇ ಇದೆ. ಅದಕ್ಕೆ ಪುಟ್ಟರಸನ ಮಠವೆಂದು ಈಗಲೂ ಕರೆಯುವರು.[೨೧]

ಸಂಡೂರಿನ ವಿರಕ್ತ ಮಠಕ್ಕೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ಐತಿಹಾಸಿಕ ದಾಖಲೆಗಳಿಲ್ಲ. ಈ ಮಠದ ಸ್ಥಾಪನೆಯ ಹಿನ್ನೆಲೆ ಮಾತ್ರ ನಮಗೆ ಲಭ್ಯವಾಗುತ್ತದೆ. ಸಂಡೂರಿನ ವಿರಕ್ತ ಮಠವು ೧೬೭೫ ರಿಂದ ೧೭೨೫ ರೊಳಗೆ ಸ್ಥಾಪಿತವಾಗಿದೆ ಎಂಬುದು ಸ್ಪಷ್ಟವಾಗಿದೆ. ಅಂದರೆ ಈ ಮಠಕ್ಕೆ ಸುಮಾರು ಮುನ್ನೂರು ವರ್ಷಗಳ ಇತಿಹಾಸವಿದೆ. ಹಿಂದಿನ ಕಾಲದಿಂದಲೂ ಈ ಮಠವನ್ನು 'ಪ್ರಭುದೇವರ' ವಿರಕ್ತಮಠ ಎಂದೇ ಕರೆದುಕೊಂಡು ಬಂದಿದ್ದಾರೆ. ಬಹುಶಃ ಸ್ಥಾಪಿತ ವಿರಕ್ತರ ಹೆಸರು ಪ್ರಭುಸ್ವಾಮಿ ಅಥವಾ ಪ್ರಭುದೇವರು ಎಂದಿರಬೇಕು. ಆದಕಾರಣ ಈ ಮಠಕ್ಕೆ ನಂತರ ಬಂದ ಎಲ್ಲಾ ಶ್ರೀಗಳನ್ನು ಪ್ರಭುಸ್ವಾಮಿ ಎಂಬ ಉತ್ತರ ವಿಶೇಷಣ ಪದದಿಂದಲೇ ಕರೆಯಲಾಗಿದೆ.[೨೨] ಸಂಡೂರಿನಲ್ಲಿಯೇ ಮಠದ ಸ್ಥಾಪನೆಗೆ ಕಾರಣ ಇಲ್ಲಿಯ ನಿಸರ್ಗ ಸಂಪತ್ತೇ ಕಾರಣವಾಗಿರಬೇಕು. ಧಾರ್ಮಿಕವಾಗಿ ಈ ಭಾಗವನ್ನು ಸಮೃದ್ಧಿಗೊಳಿಸಬೇಕೆಂಬ ಉದ್ದೇಶವೂ ಇರಬೇಕು.

೩.೪.೨ ಅಗ್ರಹಾರಗಳು

ನಾರಿಹಳ್ಳದ (ತಾರಾನಗರ) ಭೂಮಿಯಲ್ಲಿ ದೊರೆತ ಶಾಸನದಲ್ಲಿ[೨೩] ವೇಹೂರ ಅಗ್ರಹಾರವನ್ನು ವಸಿಷ್ಟಗೋತ್ರದ ಸಾಯಿಮಾರ್ಯನ ಮೊಮ್ಮಗನೂ, ಕೇಸಿಮಾರ್ಯನ ಮಗನೂ ಆದ ಮುದ್ದಿಮಾರ್ಯನಿಗೆ ವೇಹೂರಿನ ತ್ರೈಪುರುಷ ದೇವಾಲಯದ ಪೂಜಾಕಾರ್ಯಗಳಿಗಾಗಿ ಹಾಗೂ ನಿರ್ವಹಣೆಗಾಗಿ ದಾನ ನೀಡಿದ ಉಲ್ಲೇಖವಿದೆ. ಈ ವೇಹೂರ ಗ್ರಾಮವೂ ವೆಳ್ವಲ ವಿಷಯನ್ತರ್ಗತ ಪೊನಗುಂದೆ - ೩೦೦ ರಲ್ಲಿತ್ತು. ಈ ಶಾಸನವು ಚಾಳುಕ್ಯರ ವಂಶಾವಳಿಯ ಬಗ್ಗೆ ವಿವರವಾದ ವಿಷಯವನ್ನು ತಿಳಿಸುತ್ತದೆ.

ಚಿಕ್ಕಕೆರೆಯಾಗಿನ ಹಳ್ಳಿಯ ಕೆರೆಕಟ್ಟೆಯ ಬಳಿ ಇರುವ ೧೫೩೯ರ ಶಾಸನವು[೨೪] ಅಚ್ಯುತ ದೇವರಾಯನ ಆಳ್ವಿಕೆಯಲ್ಲಿ ಇದ್ದ ಬಯಕಾರ ರಾಮಪ್ಪಯ್ಯನು ತಿಮ್ಮಪುರ, ಚಿನ್ನತಿಮ್ಮಾಪುರ, ಮಗಿಮಾವಿನಹಳ್ಳಿ ಅಗ್ರಹಾರಗಳನ್ನೂ ಪೆದ ತಿಮ್ಮಾಪುರದಲ್ಲಿ ಗೋಪಿನಾಥ, ಬಾಚೇಶ್ವರ, ಕೃಷ್ಣೇಶ, ಅಮ್ಮೇಶ, ಮಲ್ಲಿಕಾರ್ಜುನ, ವೀರಭದ್ರ ಮತ್ತು ವಿಶ್ವನಾಥ ದೇವಾಲಯಗಳನ್ನು ಈ ದೇವಾಲಯಗಳ ಪೂಜೆಪುನಸ್ಕಾರಕ್ಕಾಗಿ ಹೊಳಗುಂದಿಯನ್ನು ದಾನ ನೀಡಿದಂತೆ ತಿಳಿದುಬರುವುದು.

[illegible]

೩.೫. ಸಾಮಾಜಿಕ ಕಾರ್ಯಗಳಿಗೆ ದಾನ

೩.೫.೧ ಕೆರೆ ನಿರ್ಮಾಣ

ಕ್ರಿ.ಶ. ೧೫೩೯ರ ಅನೇಕ ಶಾಸನಗಳು ಈ ದೃಷ್ಟಿಯಿಂದ ಗಮನಾರ್ಹವಾಗಿವೆ. ಚಿಕ್ಕಕೆರೆ ಯಾಗಿನಹಳ್ಳಿ, ತಿಮ್ಮಲಾಪುರ, ಸಂಡೂರು, ಪೋತಲಕಟ್ಟೆ, ಮಗಿಮಾವಿನಹಳ್ಳಿ, ಚಿಲಕನಹಟ್ಟಿ, ಹಾರುವನಹಳ್ಳಿ ಮುಂತಾದ ಗ್ರಾಮಗಳಲ್ಲಿನ ಶಾಸನಗಳು ತಿಳಿಸುವಂತೆ, ಅಚ್ಯುತರಾಯನ ಕೈಕೆಳಗೆ ಅಧಿಕಾರಿಯಾಗಿದ್ದ ಬಯಕಾರ ರಾಮಪ್ಪಯ್ಯನು ತನ್ನ ತಂದೆ ತಿಮ್ಮರಸಯ್ಯ, ತಾಯಿ ಹಿರಿಯ ಲಕ್ಕರಸಮ್ಮ, ತನ್ನ ಚಿಕ್ಕಪ್ಪ ಬಾಚರಸಯ್ಯ, ಚಿಕ್ಕಮ್ಮ ಅಂಮಾಜಮ್ಮ ತನ್ನ ತಮ್ಮ ಕೃಷ್ಣಪ್ಪ ತನ್ನ ಮಗ ಶಿಂಗಾಲಯ್ಯ ಮುಂತಾದವರಿಗೆ ಪುಣ್ಯವಾಗಬೇಕೆಂದು ಗೋಪಿನಾಥ ದೇವಾಲಯ ಬಾಚೇಶ್ವರ, ಅಂಮೇಶ್ವರ, ಕೃಷ್ಣೇಶ್ವರ ಮೊದಲಾದ ದೇವಾಲಯಗಳನ್ನು, ಶಿಂಗಾಲಯ್ಯನ ಹೆಸರಿನಲ್ಲಿ ಶಿಂಗಾಲಯ್ಯನ ಬಾವಿಯನ್ನು ತೊಡಿಸುತ್ತಾನೆ.

ಈತನು ಅಚ್ಯುತಮ್ಮ ಸಮುದ್ರ, ಬಾಚ ಸಮುದ್ರ, ರಾಮಸಮುದ್ರ, ಅಕ್ಕಸಮುದ್ರ, ಕಾಮಸಮುದ್ರ, ಅಮ್ಮಸಮುದ್ರ, ವೀರ ಸಮುದ್ರ, ಅಚ್ಯುತೇಂದ್ರ ಸಮುದ್ರ, ವೆಂಕಟೇಂದ್ರ ಸಮುದ್ರ, ಪೆದ್ದಲಕ್ಕ ಸಮುದ್ರ, ಲಿಂಗಾಲಯ ತಟಾಕ, ವೆಂಕಟಯ್ಯ ತಟಾಕ, ಪೆದತಿಮ್ಮ ಸಮುದ್ರ ಮತ್ತು ಚಿನಬಾಚ ಸಮುದ್ರವೇ ಮೊದಲಾದ ಇವರೆಲ್ಲರ ಹೆಸರಿನಲ್ಲಿ ಸುಮಾರು ೧೬ ಕೆರೆಗಳನ್ನು ಕಟ್ಟಿಸುತ್ತಾನೆ. ಇವನ ಕೈಕೆಳಗೆ ಅಧಿಕಾರಿ ನಮಶ್ಶಿವಾಯ ಎಂಬುವವನು ತಿಂಮಲಾಪುರದಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟಿಸುತ್ತಾನೆ. ಈ ಬಯಕಾರ ರಾಮಪ್ಪ ಸದಾಶಿವದೇವರಾಯನ ಕಾಲದಲ್ಲೂ ಇದ್ದು ಅನೇಕ ಕೆರೆಗಳನ್ನು ಕಟ್ಟಿಸುತ್ತಾನೆ. ತನ್ನ ಹೆಸರಿನಲ್ಲಿ ತನ್ನ ಹೆಂಡತಿಯ ಹೆಸರಿನಲ್ಲಿ ನೆಡು ತೋಪುಗಳನ್ನು ಹಾಕಿಸುತ್ತಾನೆ.[೨೫]

ಹೀಗೆ ಈ ಜಿಲ್ಲೆಯ ಈಗಿನ ಸಂಡೂರು ತಾಲೂಕು, ಹಗರಿಬೊಮ್ಮನಹಳ್ಳಿ, ತಾಲೂಕು, ಹೊಸಪೇಟೆ ತಾಲೂಕುಗಳ ವ್ಯಾಪ್ತಿಯಲ್ಲಿ ಇಂದಿಗೂ ಇವನು ಕಟ್ಟಿಸಿದ ಕೆರೆ ಹಾಗೂ ದೇವಾಲಯಗಳನ್ನು ಕಾಣಬಹುದಾಗಿದೆ. ಈತನು ಸಂಗೀತದ ಮೇಲೆ ಒಂದು ಕೃತಿಯನ್ನು ರಚಿಸಿದ್ದು ತಿಳಿದುಬರುತ್ತದೆ. ಇದೇ ಶಾಸನವು ಮುಂದುವರೆದು ಬಯಕಾರ ರಾಮಪ್ಪಯ್ಯನ ವಂಶಾವಳಿಯನ್ನು ನೀಡಿದ್ದು ಅದರಂತೆ ಕೊಂಡವೀಟಿಯ ಸಿಂಗಯ ಇವನ ಮಗ ಭಾವಯ ಮಂತ್ರಿ ಇವನ ಮಗ ರಾಮಮಂತ್ರಿ ಇವನ ಪತ್ನಿ ತೆಲಗಮಾಂಬ, ಇವರ ಮಗ ಪೆದ್ದ ತಿಮ್ಮಯ್ಯ, ಪತ್ನಿ ಲಕ್ಕಾಂಬಿಕ, ಇವರ ಮಗನೇ ರಾಮಪ್ಪಯ್ಯ ಹಾಗೂ ತಿಮ್ಮಮಂತ್ರಿ, ಸುರೀಂದ್ರ, ಭಾಸ್ಕರ ಚಮೂಪತಿ ಮತ್ತು ಭಾವಯ ಇವನ ಚಿಕ್ಕಪ್ಪಂದಿರಾಗಿದ್ದು ರಾಜನ ಕೈಕೆಳಗೆ ಅನೇಕ ಹುದ್ದೆಗಳನ್ನು ಹೊಂದಿದ್ದ ವಿಷಯದ ಬಗ್ಗೆ ಉಲ್ಲೇಖ ನೀಡುತ್ತದೆ.

ಕುಡತಿನಿ ಗ್ರಾಮದಲ್ಲಿ ಚಂಪನಕೆರೆ, ಗಂಜಿಕೆರೆ ..... ಮಯ್ಯನಕೆರೆ, ಸೆಟ್ಟಿಯಕೆರೆ, ಕಾಟಿಮಕೆರೆಗಳಿದ್ದ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಅವುಗಳಿಗೆ ಅರಸರು, ಮಹಾಮಾಂಡಳಿಕರು, ಅಧಿಕಾರಿಗಳು, ತಪೋಧನರು ದಾನದತ್ತಿಗಳನ್ನು ಬಿಟ್ಟಿದ್ದರು.

ಕೊಳಗಲ್ಲು ಗ್ರಾಮದ ಕ್ರಿ.ಶ. ೯೬೭ರ ರಾಷ್ಟ್ರಕೂಟ ಅರಸ ಕೊಟ್ಟಿಗನ ಕಾಲದ ಶಾಸನದಲ್ಲಿ[೨೫] ಗೌಡದೇಶದ (ಬಂಗಾಲ) ತಡಾ ಗ್ರಾಮದಿಂದ ಬಂದಂಥ ಶಾಂಡಿಲ್ಯಸ್ತು ತಪಸ್ವಿ ಲೋಹಾಸನ ಮಹಾಮುನಿ ಗಧಾದರನು ಕಾರ್ತಿಕೇಯ ತಪೋವನದ ಅಧಿಕಾರಿಯಾಗಿದ್ದನು. ಕೊಳಗಲ್ಲಿನಲ್ಲಿ ಕಾರ್ತಿಕೇಯ, ಸೂರ್ಯ, ಬ್ರಹ್ಮ, ವಿಷ್ಣು, ಮಹೇಶ್ವರ, ಪಾರ್ವತಿ ಮತ್ತು ವಿನಾಯಕ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡುತ್ತಾನೆ. ಅಲ್ಲದೆ ಕೆರೆಯನ್ನು ಕಟ್ಟಿಸಿದನು ಎಂಬ ಉಲ್ಲೇಖವಿದೆ. ಈ ಪ್ರಶಸ್ತಿಯನ್ನು ಬರೆದ ಕವಿ ಕರ್ಮಾರ ಕುಲದ ಋಷಿ ಮೊಮ್ಮಗ ಅತಿಬಳನ ಮಗನಾದ ಮಧುಸೂದನ.

೩.೫.೨ ಬಾವಿ ನಿರ್ಮಾಣ

ಕರಿಕಾಲ ಚೋಳ ಮಹಾರಾಜನು ಕುಡತಿನಿಯಲ್ಲಿಯ ಪ್ರದೇಶದಲ್ಲಿ ನೂರಾವೊಂದು ದೇವಾಲಯಗಳನ್ನು ಮತ್ತು ಬಾವಿಗಳನ್ನು ಕಟ್ಟಿಸಿದನೆಂದು ಅಲ್ಲಿನ ಶಾಸನಗಳು ಮಾಹಿತಿ ನೀಡುತ್ತವೆ. ಈ ಮಹಾರಾಜನು ತಪೋವನದ ಋಷಿಗಳನ್ನು ಭೇಟಿಯಾದದ್ದು ಈ ಪ್ರದೇಶದಲ್ಲಿಯೇ. ಕುಡತಿನಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ನೂರಾ ಮೂವತ್ತಕ್ಕಿಂತಲೂ ಹೆಚ್ಚು ದೇವಾಲಯ ಮತ್ತು ನೂರಕ್ಕಿಂತಲೂ ಹೆಚ್ಚು ಬಾವಿಗಳಿದ್ದವೆಂದು ಸ್ಥಳೀಯ ಜನರ ಹೇಳಿಕೆಯಿಂದ ತಿಳಿದುಬರುತ್ತದೆ. ಈಗಲೂ ಕುಡತಿನಿ ಗ್ರಾಮದಲ್ಲಿ ಬಹಳಷ್ಟು ದೇವಾಲಯಗಳು ಮತ್ತು ಬಾವಿಗಳು ಇವೆ. ಅಲ್ಲದೆ ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ಹಾಳಾದ ದೇವಾಲಯ ಅದರ ಅವಶೇಷಗಳು ಕಂಡುಬರುವವು.

ಕೊಳಗಲ್ಲು ಗ್ರಾಮದ ಕ್ರಿ.ಶ. ೯೬೭ರ ರಾಷ್ಟ್ರಕೂಟ ಅರಸ ಕೊಟ್ಟಿಗನ ಕಾಲದ ಶಾಸನದಲ್ಲಿ[೨೬] ಗೌಡದೇಶದ (ಬಂಗಾಲದ) ತಡಾ ಗ್ರಾಮದಿಂದ ಬಂದ ಶಾಂಡಿಲ್ಯಸ್ತು ತಪಸ್ವಿ ಲೋಹಾಸನ ಮಹಾಮುನಿ ಗಧಾದರನು ಕಾರ್ತಿಕೇಯ ತಪೋವನದ ಅಧಿಕಾರಿಯಾಗಿದ್ದನು. ಈತನು ಕೊಳಗಲ್ಲಿನಲ್ಲಿ ಕೆಲವು ದೇವರುಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ಬಾವಿಯನ್ನೂ ಕಟ್ಟಿಸಿದ ಉಲ್ಲೇಖವಿದೆ.

ಕ್ರಿ.ಶ. ೧೫೪೯ರಲ್ಲಿ ಅಚ್ಯುತದೇವರಾಯನ ಕೈಕೆಳಗಿನ ಅಧಿಕಾರಿಯಾಗಿದ್ದ ಬಯಕಾರ ರಾಮಪ್ಪಯ್ಯನು ತನ್ನ ಮಗನಾದ ಶಿಂಗಾಲಯ್ಯನ ಹೆಸರಿನಲ್ಲಿ ಬಾವಿ ತೋಡಿಸಿದ ಉಲ್ಲೇಖ ಬಂದಿದೆ.[೨೮]

ಹರಪನಹಳ್ಳಿಯ ಅರಸ ಮೊದಲ ವೀರ ಬಸಪ್ಪನಾಯಕ (ಶಾ.ಶ. ೧೬೬೩ - ೧೬೬೪) ನಿಗೆ ಪುಟ್ಟರಸ ಎಂಬ ಪುತ್ರನಿದ್ದು ೬ ವರ್ಷ ಪ್ರಾಯದಲ್ಲಿ ಮೈಲಿ ಬೇನೆಯಿಂದ ಮೃತನಾದನು. ಅವನ ಸಮಾಧಿ ಮೇಲೆ

ಸಣ್ಣಮಠ ಕಟ್ಟಿಸಿ ಇಳಿದು ತುಂಬುವ ಬಾವಿಯನ್ನು ಅದರ ಪಕ್ಕದಲ್ಲಿ ಕಟ್ಟಿಸಿದನು. ಆ ಬಾವಿ ಸಂಡೂರಿನ ಸರಕಾರಿ ಪದವಿಪೂರ್ವ ಕಾಲೇಜಿನ ಮಕ್ಕಳ ಆಟದ ಮೈದಾನಕ್ಕೆ ಸೇರಿದ್ದಿತು. ಅದನ್ನು ಕ್ರಿ.ಶ. ೧೬೫೩ರಲ್ಲಿ ಮುಚ್ಚಿಸಿದರೆಂದು ಸ್ಥಳೀಯರಿಂದ ತಿಳಿದುಬರುತ್ತದೆ.

೩.೫.೩ ಗ್ರಾಮ ನಿರ್ಮಾಣ

ರಾಷ್ಟ್ರಕೂಟ ಅರಸ

ಇಮ್ಮಡಿ ಕೃಷ್ಣನು ಸಂಡೂರಿನ ಸಮೀಪವಿರುವ ಕುಮಾರಸ್ವಾಮಿ ದೇವರಿಗೆ ದತ್ತಿ ಬಿಟ್ಟಿದ್ದನ್ನು ಸಂಡೂರಿನ ಶಾಸನ ತಿಳಿಸುತ್ತದೆ.[೨೯] ಇಮ್ಮಡಿ ಕೃಷ್ಣನ ಕಾಲಕ್ಕಾಗಲೇ ಸಂಡೂರಿನ ಕುಮಾರಸ್ವಾಮಿ ದೇವಾಲಯ ಅತ್ಯಂತ ಪ್ರಸಿದ್ಧಿ ಪಡೆದಿತ್ತು. ಹೀಗಾಗಿ ಕೃಷ್ಣನು, ಭಕ್ತಿಪೂರ್ವಕವಾಗಿ ದೇವರ ನೈವೇದ್ಯಕ್ಕೆ ಪ್ರೀತ ತಟಾಕ (ಕೆರೆಯಪಳ್ಳಿ ಈಗಿನ ಕೆರ್ನಳಿ) ಗ್ರಾಮವನ್ನು ದಾನ ಬಿಡುತ್ತಾನೆ.

ಸಂಡೂರು ಎಂಬ ಹೆಸರು ನಮಗೆ ಮೊದಲು ಕಂಡುಬರುವುದು ಈ ಪಾರ್ವತಿ ದೇವಾಲಯದಲ್ಲಿರುವ ಕ್ರಿ.ಶ. ೧೨೦೬ರ ಮಾರ್ಚ್ ೧೧ರ ಶಾಸನದಿಂದ.

ಹೊಯ್ಸಳ ಅರಸ

ಸಂಡೂರಿನ ಕುಮಾರಸ್ವಾಮಿ ದೇವಾಲಯದ ಶಾಸನದಿಂದ ಈತನು ಕ್ರಿ.ಶ. ೧೨೦೬ ಮಾರ್ಚ್ ೧೧ ರಂದು ತುಂಗಭದ್ರ ನದಿ ತೀರದ 'ಮಧುವನ'ದ ನೆಲೆ ವೀಡಿನಿಂದ ಆಳುತ್ತಿದ್ದದು ತಿಳಿದುಬರುತ್ತದೆ.[೩೦] ಕುಮಾರಸ್ವಾಮಿ ದೇವಾಲಯಕ್ಕೆ ಹಿಂದೆ ರಾಷ್ಟ್ರಕೂಟ ದೊರೆ ಕೃಷ್ಣನು ಬಿಟ್ಟಿದ್ದ 'ಪ್ರೀತ ತಟಾಕ' ಎಂಬ ಗ್ರಾಮವನ್ನು ಶಾಸನದಲ್ಲಿ 'ಕೆರೆಯಪಳ್ಳಿ' ಎಂದು ಕರೆಯಲಾಗಿದೆ. ಅದನ್ನೇ ಇಂದು 'ಕೆರ್ನಳ್ಳಿ' ಎಂದು ಕರೆಯಲಾಗುತ್ತಿದೆ. ಈ ಗ್ರಾಮದಿಂದ ಅರಸರಿಗೆ ಸಲ್ಲುತ್ತಿದ್ದ ತೆರಿಗೆ, ಆಯ ಮೊದಲಾದವು ಕುಮಾರಸ್ವಾಮಿ ದೇವಾಲಯಕ್ಕೆ ಸಲ್ಲುವಂತೆ ಮಾಡಿ ಈ ಗ್ರಾಮವನ್ನು ಪುನರ್ದತ್ತಿ ಮಾಡಿಕೊಡುತ್ತಾನೆ.

ಕ್ರಿ.ಶ. ೧೨೨೪ರಲ್ಲಿ ವೀರಬಲ್ಲಾಳನ ದಂಡನಾಯಕ ಅಮಿತಯ್ಯನೆಂಬುವನು ಶ್ರೀಪುರದಲ್ಲಿ (ನಾರಿಹಳ್ಳಿ) ತ್ರಿಕೂಟ ದೇವಾಲಯವನ್ನು ಕಟ್ಟಿಸಿ, ಅದರಲ್ಲಿ ಅಮೃತೇಶ್ವರ, ವಾಮೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವರುಗಳನ್ನು ಪ್ರತಿಷ್ಠಾಪಿಸುತ್ತಾನೆ. ಅಲ್ಲದೆ ಈ ದೇವಾಲಯದ ಪೂಜಾಕಾರ್ಯಕ್ಕಾಗಿ ಕೊಂಡಕಸಿಪುರವೆಂಬ ಗ್ರಾಮವನ್ನು ದಾನ ನೀಡುತ್ತಾನೆ.[೩೧]

೩.೫.೪ ಇತರೆ

ಸುಬ್ಬರಾಯನಹಳ್ಳಿ ಬಳಿ ಇರುವ ನವಿಲು ತೀರ್ಥದಲ್ಲಿಯ ಶಾಸನದ ಪ್ರಕಾರ[೩೨] ಬುಕ್ಕರಾಯನು ಈ ಸ್ಥಳದಲ್ಲಿ ಮಂಟಪವನ್ನು ಮತ್ತು ಕೊಂಡ (ಕೊಳ)ವನ್ನು ಮಾಡಿಸಿದ ಉಲ್ಲೇಖವಿದೆ. ಅದೇ ದೇವಾಲಯದ ಬಳಿ ಇರುವ ಇನ್ನೊಂದು ಶಾಸನದಲ್ಲಿ ಹರಿಹರನ ಮಗ ಬುಕಂಣರಾಯರ ಉಲ್ಲೇಖವಿದೆ. ಹಾಗೂ ವಿರೂಪಣ್ಣನು ಸ್ವಾಮಿದೇವರಿಗೆ ಏನೋ ಮಾಡಿಸಿದಂತೆ ತಿಳಿಯುತ್ತದೆ.

ಕ್ರಿ.ಶ. ೧೫೨೩ರ ಕುರಿಕುಪ್ಪೆ ಶಾಸನದಲ್ಲಿ[೩೩] ಕೃಷ್ಣರಾಯನ ಆಳ್ವಿಕೆಯಲ್ಲಿ ಅನಂತ ಸೇತುವೆಂದು ಪ್ರತಿ ನಾಮವಾದ ಕುರಿಕುಪ್ಪೆಯಲ್ಲಿ ವಸಿಷ್ಠಗೋತ್ರದ್ರಾಹ್ಯಯಣ ಸೂತ್ರದ ಸಾಮ ಶಾಖೆಯ ಹೆಗ್ಗರಸರ ಮಗನಾದ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ, ಬಸವಾದೀಕ್ಷಿತರಿಂದ ಭೂಮಿಯನ್ನು ಕ್ರಮವಾಗಿ ಪಡೆದು ದೇವಕಾರ್ಯಕ್ಕೆ ದಾನ ನೀಡುತ್ತಾನೆ.

ಹಾಗೂ ಊರಿನ ಮಹಾಜನರು ನಾಗುಳ ತೋಟವನ್ನು ದಾನವಾಗಿ ನೀಡುತ್ತಾರೆ. ಇದೇ ವಿಷಯವನ್ನು ತಿಳಿಸುವ ಮತ್ತೊಂದು ಕಂಭದ ಮೇಲಿರುವ ಶಾಸನ ನಾಗರಿಲಿಪಿಲ್ಲಿದೆ.

ಕುಡತಿನಿ ಗ್ರಾಮದ ಕುಮಾರಸ್ವಾಮಿ ದೇವಾಲಯದ ಸಭಾಮಂಟಪದಲ್ಲಿಯ ಕ್ರಿ.ಶ. ೯೯೬ರ ಕಲ್ಯಾಣ ಚಾಲುಕ್ಯ ಅರಸ ಅಹಮಲ್ಲದೇವನ ಶಾಸನದಲ್ಲಿ[೩೪] ಪಂಚಮಹಾ ಶಬ್ದವೃತ ಸಂಯುಕ್ತ ಶ್ರೀಸ್ವಾಮಿ ತಪೋವನಾಧಿಪತಿಗಳಪ್ಪ ಕೊಟ್ಟಿ ಸ್ಥಾನದಯ್ಯುವರ್ಗದ ಸಂಯುಕ್ತ ತೋಟದಾನ ಕೊಟ್ಟ ವಿಷಯವಿದೆ.

೩.೬. ದಾನದ ರೀತಿಗಳು

೩.೬.೧ ಹಣ ದಾನ

ತುಂಬರಗುದ್ದಿಯ ಶಾಸನದಲ್ಲಿ[೩೫] ದುರಬಿ ನರಸಪ್ಪನವರು ತುಂಬರಗುತ್ತಿಯ ಹನುಮಂತದೇವರ ದೀಪಾರಾಧನೆಗೆ ನೈವೇದ್ಯಕ್ಕೆ ಮೂರು ಕಾಸನ್ನು, ಈ ಮೂರು ಕಾಸು ಸುಂಕವನ್ನು ಮಾನ್ಯರೂಪದಲ್ಲಿ ದಾನ ನೀಡಿದ ಉಲ್ಲೇಖವಿದೆ.

ಚೋರನೂರು ಶಾಸನದಲ್ಲಿ[೩೬] ಚೋರಮನೂರು ಗವುಡ ಶ್ಯಾನಬೋವ ಬಡಗಿ ಕಮ್ಮಾರರಿಗೆ ವರ್ಷಕ್ಕೆ ಮೂರು ಗದ್ಯಾಣಗಳನ್ನು ಬಿಟ್ಟ ಉಲ್ಲೇಖವಿದೆ.

ಕುಡತಿನಿ ಗ್ರಾಮದ ಕುಮಾರಸ್ವಾಮಿ ದೇವಾಲಯದ ಸಭಾಮಂಟಪದಲ್ಲಿಯ ಕ್ರಿ.ಶ. ೧೦೯೮ರ ಕಲ್ಯಾಣ ಚಾಲುಕ್ಯ ಅರಸ ತ್ರಿಭುವನಮಲ್ಲದೇವರ ಕಾಲದ ಶಾಸನದಲ್ಲಿ[೩೭] ಶ್ರೀ ಕಾರ್ತಿಕೇಯ ತಪೋವನಾಧಿಪತಿಗಳಾದ

ದಂಡಾಸನೀ ವಿಶ್ವರೂಪ ಬ್ರಹ್ಮಚಾರಿಗಳು, ಸಮಸ್ತ ದೇಸಿಕಜನಾಧರರು, ಶ್ರೀಸ್ವಾಮಿ ಕಾರ್ತಿಕೇಯ ಪಾದ ಪದ್ಮೋಪ ಜೀವಿಗಳಾದ ಶ್ರೀಮತ್ ಕೊಟ್ಟತೊಣೆಯ ಸ್ಥಾನದಯ್ಯುವರ್ಗರಿದ್ದು, ಏರಣಿಗ ಮಾದೋಜನ ಮಗ ಸಾವಿಮೋಜ ಮತ್ತು ಬೇಚೋಜನ ಮಗ ಚಿಕ್ಕ ಮಾದೋಜರು ಶ್ರೀಸ್ವಾಮಿ ದೇವರ ನವಿಲಚ್ಚಿನ ಪೊನ್ನವನ್ನು ಲೊಕ್ಕಿಯ ಪೊನ್ನದ ಬದಲಾಗಿ ಅದರ ಸಮತೂಕದ ಬಂಗಾರದ ನಾಣ್ಯಗಳನ್ನು ಅಚ್ಚುಹಾಕಿ ಶ್ರೀ ಸ್ವಾಮಿಗೆ ವರ್ಷಕ್ಕೆ ೧೨ ಪೊನ್ನುಗಳನ್ನು ಕೊಡುತ್ತಾರೆ.

೩.೬.೨ ತೆರಿಗೆ ದಾನ

೩.೬.೨.೧ ತೆರಿಗೆ ವಿಧಗಳು

ಸಂಡೂರು ತಾರಕೇಶ್ವರ ದೇವಾಲಯದ ಮುಂದಿರುವ ಕ್ರಿ.ಶ. ೨೬.೫.೧೫೪೪ರ ಶಾಸನದಲ್ಲಿ[೩೮] ಸದಾಶಿವದೇವರಾಯನ ಆಳ್ವಿಕೆಯಲ್ಲಿ ರಾಮರಾಜನು ನಾಯಿಂದರಿಗೆ ಕೆಲವು ತೆರಿಗೆಗಳನ್ನು ಬಿಟ್ಟಂತೆ ತಿಳಿಯುತ್ತದೆ.

ಕ್ರಿ.ಶ. ೧೫೩೨ರಲ್ಲಿ ಅಚ್ಯುತದೇವರಾಯನು ದಕ್ಷಿಣ ಭುಜದಂಡ ಭಂಡಾರದ ತಿಮ್ಮಪಯ್ಯನವರಿಗೆ ಪುಣ್ಯವಾಗಬೇಕೆಂದು ಮಯಿದುನ ಕೊಂಡಪನು ಸೂರ್ಯಗ್ರಹಣದ ಪುಣ್ಯಕಾಲದಲ್ಲಿ ಕುಡತಿನಿ ವೀರಭದ್ರ ದೇವರ ನೈವೇದ್ಯ ಹಾಗೂ ಜೀರ್ಣೋದ್ಧಾರಕ್ಕೆಂದು ಇಕ್ಕಳ, ಕರಿಎರೆಯ ಹೊಲ, ಕೆಲವು ತೆರಿಗೆಗಳನ್ನು ಬಿಡುತ್ತಾನೆ.[೩೯]

೩.೬.೩ ಭೂಮಿದಾನ

೩.೬.೩.೧ ಭೂಮಿದಾನದ ವಿಧಗಳು

ಕ್ರಿ.ಶ. ೧೦೭೪ರ ಸಂಡೂರಿನ ಕುಮಾರಸ್ವಾಮಿ ದೇವಾಲಯ ಪ್ರವೇಶದ ಎಡ ಹಸ್ತಿಹಸ್ತದಲ್ಲಿನ ಶಾಸನವೊಂದರಲ್ಲಿ[೪೦] ಶ್ರೀ ಸ್ವಾಮಿದೇವರ ತಪೋವನಾಧಿಪತಿಗಳಾದ ಗಧಾದರರಸರು ಕಲ್ಕುಟಿಗರಾದ ಬಿಯಳ ಚಟ್ಟ, ಬೆನಗಬೋವ, ಕಮ್ಮಾರನಾಯಕರಿಗೆ ಸ್ವಾಮಿದೇವರ ದೇಗುಲದ ಕೆಲಸ ಮಾಡಿದ್ದಕ್ಕೆ ಭೂದಾನ ನೀಡಿದ ಉಲ್ಲೇಖವಿದೆ.

ತಳೂರಿನ ಹತ್ತಿರದ ನಾರಿಹಳ್ಳದ ದಡದಲ್ಲಿರುವ ಪಾಳು ಶಿವಾಲಯ ಮಂಟಪದ ಕಂಬದಲ್ಲಿನ ಕ್ರಿ.ಶ. ೪.೬.೧೨೧೮ರ ಶಾಸನದಂತೆ[೪೧] ವೀರಬಲ್ಲಾಳನ ಆಳ್ವಿಕೆಯಲ್ಲಿ ತಲರದ ಈಶ್ವರ ದೇವಾಲಯವನ್ನು ಕಟ್ಟಿಸಿದ ಯಗವಟ್ಟಿಯ ಬೊಮ್ಮಗವುಡನು ದೇವಾಲಯವನ್ನು ಕಟ್ಟಿದ ಬೊಮ್ಮೋಜನಿಗೆ ಭೂದಾನ ನೀಡಿದ ಉಲ್ಲೇಖವಿದೆ.

ಕ್ರಿ.ಶ. ೧೫೨೩ರಲ್ಲಿ ಕುರಿಕುಪ್ಪೆ ಗ್ರಾಮದ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ ಬಸವಾದೀಕ್ಷಿತರ ಭೂಮಿಯನ್ನು ಕ್ರಮವಾಗಿ ಪಡೆದು ದೇವರ ಕಾರ್ಯಕ್ಕೆ ದತ್ತಿ ಬಿಡುತ್ತಾನೆ.[೪೨] ನಾರಿಹಳ್ಳ (ತಾರಾನಗರ)ದ ಕ್ರಿ.ಶ. ೧೦೪೭ರ ಶಾಸನವೊಂದರಲ್ಲಿ[೪೩] ವೇಹೊರ ಅಗ್ರಹಾರದಲ್ಲಿ ಅಧಿಕಾರಿಯಾಗಿದ್ದ ಸಾಹಿಯ ಮಾರ್ಯನು ಕಟ್ಟಿಸಿದ ತ್ರೈಪುರುಷ ದೇವಾಲಯದ ಪೂಜಾಕಾರ್ಯ ಹಾಗೂ ನಿರ್ವಹಣೆಗಾಗಿ ಆತನ ಮೊಮ್ಮಗ ಮುದ್ದಿಮಾರ್ಯಾನಿಗೆ ತ್ರೈಲೋಕ್ಯಮಲ್ಲನು ಭೂದಾನ ನೀಡಿದ ಉಲ್ಲೇಖವಿದೆ.

ಸಂಡೂರು ಗ್ರಾಮದ ಹಳೇಯ ತಾಲೂಕು ಕಛೇರಿ ಆವರಣದಲ್ಲಿಯ ಕ್ರಿ.ಶ. ೧೭೨೩ರಲ್ಲಿಯ ಶಾಸನವೊಂದರಲ್ಲಿ[೪೪] ಹಿಂದೂರಾಯರ ಗುರುವು ಜಂಮ ..... ಬಾವನು ರಾಮಪ್ಪಯ್ಯನ ಮಗಳು ರುಕ್ಕಾಯ .....ಗೆ ಭೂದಾನ ನೀಡಿದ ಉಲ್ಲೇಖವಿದೆ.

ಕುಡತಿನಿ ಗ್ರಾಮದ ದುರ್ಗೇಶ್ವರಿ ದೇವಾಲಯದ ಮುಂದಿರುವ ಕ್ರಿ.ಶ. ೯೭೬ರ ಕಲ್ಯಾಣ ಚಾಲುಕ್ಯ ಅರಸ ಅಹಮಲ್ಲದೇವ (೨ನೆಯ ತೈಲಪ)ನ ಕಾಲದ ಶಾಸನದ[೪೫] ಆರಂಭದಲ್ಲಿ ಸ್ಕಂದ ದೇವನ ಸ್ತೋತ್ರವಿದೆ. ಶ್ರೀಮತ್ ಸ್ವಾಮಿ ದೇವರ ಪಾದಪದ್ಮೋಪ ಜೀವಿ ತಪೋವನಾಧಿಪತಿ ಶ್ರೀ ಮದ್ದಂಡಾಸನೀ ಗದಾಧರ ಬ್ರಹ್ಮಚಾರಿ, ಸ್ಥಾನದಯ್ಯುವರ್ಗದವರು ಮತ್ತು ಹಂಪಣಭಟ್ಟೋಪಾದ್ಯಾಯ ಇವರ ಸಮ್ಮುಖದಲ್ಲಿ ಕೊಟ್ಟಿತೊನೆಯ ಕೇರಿಯ ಭೈರವ ದೇವರಿಗೆ ಭೂದಾನ ಬಿಡಲಾಯಿತು ಎಂಬ ಉಲ್ಲೇಖವಿದೆ.

ಅದೇ ಗ್ರಾಮದ ವೀರಭದ್ರ ದೇವಾಲಯದ ಮುಂದಿರುವ ಕ್ರಿ.ಶ. ೧೧೧೯ರ ಚಾಲುಕ್ಯ ಅರಸ ತ್ರಿಭುವನಮಲ್ಲ ದೇವರ ಕಾಲದ ಶಾಸನದಲ್ಲಿ[೪೬] ಸ್ವಸ್ತಿಸಮದಿಗತ ಪಂಚಮಹಾಶಬ್ದ ವೃತ ಜಪನಿಯಮ ಹೋಮ ಸಂಯುಕ್ತ ಶ್ರೀಸ್ವಾಮಿ ಕಾರ್ತಿಕೇಯ ತಪೋವನಾಧಿಪತಿ ಶ್ರೀಮದ್ದಣ್ಡಾಸನಿ ಯಶೋಧರ ಬ್ರಹ್ಮಚಾರಿಯರಸರು, ಸಮಸ್ತ ದೇಶಿಗಜನಾಧರರು ಶ್ರೀಸ್ವಾಮಿ ಕಾರ್ತಿಕೇಯ ಪಾದಪದ್ಮೋಪ ಜೀವಿಗಳಾದ ಶ್ರೀಮತ್ ಕೊಟ್ಟಿತೊಣೆಯ ಸ್ಥಾನದಯ್ಯುವರ್ಗದವರ ಮುಖಂಡತ್ವದಲ್ಲಿ ಕೇಶಿರಾಜನು ಸರಸ್ವತಿ, ವಿನಾಯಕ, ಇಂದ್ರನ ದೀಪಸ್ತಂಬ ಕಟ್ಟಿಸಿ ಭೂದಾನ ಕೊಡುತ್ತಾನೆ ಎಂದು ಉಲ್ಲೇಖಿಸಿದೆ.

ಅದೇ ಗ್ರಾಮದ ದರ್ಗಾದಲ್ಲಿರುವ ಕ್ರಿ.ಶ. ೧೧೨೦ರ ಶಾಸನವು[೪೭] ಬಹಳ ತ್ರುಟಿತವಾಗಿದೆ. ಇದರಲ್ಲಿ ಪಂಚ ಮಹಾಶಬ್ದ ವೃತಜಪನಿಯಮಹೋಮ ಸಂಯುಕ್ತ ಶ್ರೀ ಸ್ವಾಮಿ ಕಾರ್ತಿಕೇಯ ಪಾದಪದ್ಮೋಪ ಜೀವಿಗಳಾದ ಶ್ರೀಮದ್ದಂಡಾಸನಿ ಮಾಧವ ಬ್ರಹ್ಮಚಾರಿಯರಸರು, ಸ್ಥಾನದಯ್ಯು ವರ್ಗದವರ ಸಮ್ಮುಖದಲ್ಲಿ ದುರ್ಗರಾಜ ದಂಡನಾಯಕ ಮತ್ತು ಅವನ ಮಗಳು ಚಾವಣದೇವಿಯವರು ದುರ್ಗೇಶ್ವರ ದೇವಾಲಯಕ್ಕೆ ಭೂಮಿ ದಾನಕೊಡುತ್ತಾರೆ ಎಂದು ಉಲ್ಲೇಖವಿದೆ.

ಕ್ರಿ.ಶ. ೧೧೪೮ರಲ್ಲಿ ಕೇಶಿರಾಜನ ಮೊಮ್ಮಗ ದೇಕರಸನ ಮಗನಾದ ಮಲ್ಲಿದೇವನು ತಪೋವನಾಧಿಪತಿ ಮಾಧವ ಬ್ರಹ್ಮಚಾರಿ, ಶಿಷ್ಟಜನಾಧರರು ಮತ್ತು ಸ್ಥಾನದಯ್ಯುವರ್ಗದವರ ಸಮ್ಮುಖದಲ್ಲಿ ಶತಕೋಟಿ ತೀರ್ಥದ

[illegible]

ಸ್ವಾಮಿ ದೇವರ ಸನ್ನಿಧಾನದಲ್ಲಿ (ಕುಡತಿನಿಯಲ್ಲಿ) ಸ್ವಾಮಿಯಾತ್ರೆಗೆ ಬಂದ ಕಪ್ಪಡಿಗಳ ಸತ್ರಕ್ಕೆ ಭೂದಾನ ಕೊಡುತ್ತಾನೆ ಎಂದು ತಿಳಿಯುತ್ತದೆ.[೪೮]

ಕುಡತಿನಿ ಗ್ರಾಮದ ಕುಮಾರಸ್ವಾಮಿ ದೇವಾಲಯದ ಜಗತಿಗೆ ಜೋಡಿಸಿದ ಕ್ರಿ.ಶ. ೧೧೬೮ರ ಶಾಸನದಲ್ಲಿ[೪೯] ಕೊಂಕಣಗೆರಿಯ ಗೌಡನೊಬ್ಬನು ಕಾರ್ತಿಕೇಯ ತಪೋವನಾಧಿಪತಿ ಪುರುಷೋತ್ತಮ ಬ್ರಹ್ಮಚಾರಿಯ ಮುಖಂಡತ್ವದಲ್ಲಿ ಕೊಟ್ಟಿತೊನೆಯಲ್ಲಿ ಋಣಮೋಚನದೇವರ ದೇವಾಲಯವನ್ನು ಕಟ್ಟಿಸಿ ಭೂದಾನ ಕೊಡುತ್ತಾನೆ ಎಂದು ಉಲ್ಲೇಖಿಸುತ್ತದೆ.

ಅದೇ ಗ್ರಾಮದ ಕುಮಾರಸ್ವಾಮಿ ದೇವಾಲಯದ ಜಗತಿಗೆ ಜೋಡಿಸಿದ ಕ್ರಿ.ಶ. ೧೨೧೦ರ ಶಾಸನದಂತೆ[೫೦] ಸ್ವಸ್ತಿ ಸಮದಿಗತ ಪಂಚಮಹಾಶಬ್ದ ವ್ರತ ಜಪನಿಯಮ ಸಂಯುಕ್ತರು ಶ್ರೀ ಕಾರ್ತಿಕೇಯ ತಪೋವನಾಧಿಪತಿ ಶ್ರೀಮದ್ದಂಡಾಸನ ಸುಖಾಸೀನರಾದ ವಿನಯನಿದಿ ವಿಷ್ಣುಕರ ದೇವರು ಹಾಗೂ ಸ್ಥಾನದಯ್ದುವರ್ಗದವರು, ಏಳ್ಕೋಟಿ ತಪೋಧನರು, ಬಣಜಿಗರು ಭಕ್ತರು ಮಹಾಸಭೆಯಾಗಿ ಸೇರಿದಾಗ ಅವರ ಮುಖಂಡತ್ವದಲ್ಲಿ ನಾಗೇಶ್ವರ ದೇವರಿಗೆ ಮನೆ, ನಂದಾದೀವಿಗೆಗೆ ಗಾಣವೊಂದನ್ನು ಹಾಗೂ ಭೂಮಿಗಳನ್ನು ದಾನ ಬಿಡುತ್ತಾರೆ ಎಂದು ತಿಳಿದುಬರುತ್ತದೆ.

ಕುಡತಿನಿಯ ಶಾಸನವೊಂದರಲ್ಲಿ ಸುಧಾಶೀಳ ಕಾಷ್ಟೆಷ್ಟಕಂ ಚಿತ್ರಕಾಂಚನ ಲೋಹಾದಿ ಕಣ್ಣಸ್ಪುಟಿ ತನವ ಕರ್ಮ್ಮ xxxxx ತುರಾಶ್ರಮ xx ಗಿಗಳಿ xx ರ್ತ್ಥಿಗೆ ಹೊತ್ತಗೆಗಾ (ಕ್ಷರಾರ್ತ್ಥಿ) ಗಾಹಾರಕಂ ಬಿಟ್ಟಕೆಯಿ ಎಂದು ಉಲ್ಲೇಖಿಸುವದರಿಂದ ಕಾಷ್ಟ, ಲೋಹ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಿರುವವರ ಆಹಾರಕ್ಕೆ ಭೂದಾನ ಬಿಡಲಾಗಿತ್ತೆಂದು ತಿಳಿದುಬರುತ್ತದೆ. ಈ ಶಾಸನವು ಬಹಳ ತ್ರುಟಿತವಾಗಿದ್ದು, ಬರವಣಿಗೆ, ಭಾಷೆಗಳಿಂದ ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದೆ.[೫೧]

೩.೭ ಸ್ಮಾರಕ ಶಾಸನಗಳು

ವೀರನೊಬ್ಬನ ಸ್ಮಾರಕವಾಗಿ ನಿಲ್ಲಿಸಿದ ಶಿಲೆಯೇ ವೀರಶಾಸನ ಹಾಗೂ ವೀರಗಲ್ಲು. ವೀರನು ಯುದ್ಧದಲ್ಲಿಯೋ, ತನ್ನ ಗ್ರಾಮವನ್ನು ಕಾಪಾಡುವ ಸಲುವಾಗಿಯೋ, ಇಲ್ಲವಾದರೆ ಇನ್ನಾವುದಾದರೂ ಧಾರ್ಮಿಕ ಕಾರ್ಯವನ್ನು ಮಾಡುವಲ್ಲಿ ತನ್ನ ಪ್ರಾಣವನ್ನು ಅರ್ಪಿಸಿದರೆ ಆ ಗ್ರಾಮದ, ಇಲ್ಲವೇ ಆ ರಾಜ್ಯದ ಅರಸರು ಅವನ ಸ್ಮಾರಕವಾಗಿ ಕಲ್ಲುಗಳನ್ನು ಕೆತ್ತಿಸಿ ನೆಡುತ್ತಿದ್ದರು.

ಶಿಲ್ಪದ ದೃಷ್ಟಿಯಿಂದ ವೀರಗಲ್ಲುಗಳಿಗೆ ವಿಶಿಷ್ಟ ಮಹತ್ವವಿದೆ. ಸಾಮಾನ್ಯವಾಗಿ ವೀರಗಲ್ಲುಗಳಲ್ಲಿ ಮೂರು ಹಂತಗಳಿರುತ್ತವೆ. ಮೊದಲನೆಯ ಹಂತದಲ್ಲಿ ವೀರನು ತನ್ನ ಶತ್ರುಗಳೊಡನೆ ಯುದ್ಧದಲ್ಲಿ ಹೋರಾಡುತ್ತಿರುವುದು. ಎರಡನೆಯ ಹಂತದಲ್ಲಿ ಯುದ್ಧದಲ್ಲಿ ಹೋರಾಡಿ ಮಡಿದ ವೀರನನ್ನು ದೇವಕನ್ನಿಕೆಯರು

ದೇವಲೋಕಕ್ಕೆ ಕರೆದೊಯ್ಯುತ್ತಿರುವುದು, ಮೂರನೆಯ ಹಂತದಲ್ಲಿ ಯುದ್ಧದಲ್ಲಿ ಮಡಿದ ವೀರನು ಶಿವಲಿಂಗದ ಸಮ್ಮುಖದಲ್ಲಿರುವುದು ಕೆತ್ತಲಾಗಿರುತ್ತದೆ.

ಕೆಲವು ವೀರಗಲ್ಲುಗಳು ನಾಲ್ಕು- ಐದು- ಆರು ಹಂತಗಳಲ್ಲಿಯೂ ಇರುತ್ತವೆ. ಇನ್ನು ಕೆಲವು ವೀರಗಲ್ಲುಗಳಲ್ಲಿ ಯುದ್ಧಕ್ಕೆ ಹೋರಾಟ ಅಥವಾ ಯುದ್ಧದಲ್ಲಿದ್ದ ಯೋಧನೊಬ್ಬನು ಕೈಯಲ್ಲಿ ಬಿಲ್ಲು - ಬಾಣ ಅಥವಾ ಖಡ್ಗ, ಭರ್ಚಿ, ಢಾಲು ಹಿಡಿದ ಚಿತ್ರವಿರಬಹುದು. ಇಲ್ಲವೆ ಇಬ್ಬರೇ ಹೋರಾಡುತ್ತಿರುವ ಸನ್ನಿವೇಶವಿರಬಹುದು.

ಕೆಲವು ಕಡೆ ಒಂದೇ ಹಂತದಲ್ಲಿ ವೀರನ ಚಿತ್ರವೂ, ಪಕ್ಕದಲ್ಲಿ ದೇವತಾ ಸ್ತ್ರೀಯರು ಕೊಂಡೊಯ್ಯುತ್ತಿರುವ ಚಿತ್ರವೂ ಇರುತ್ತದೆ. ಕೆಲವು ಕಡೆ ಚಿತ್ರಗಳ ಜೊತೆಗೆ ವೀರಗಲ್ಲಿನ ಮೇಲೆ ಬರಹಗಳಿರುತ್ತವೆ. ಕೆಲವು ಕಲ್ಲುಗಳ ಮೇಲೆ ಬರಹಗಳಿರುವುದಿಲ್ಲ. ಸಾಮಾನ್ಯವಾಗಿ ಎರಡು ಅಂತಸ್ತುಗಳ ಮಧ್ಯ ಭಾಗದಲ್ಲಿರುವ ಸ್ಥಳದಲ್ಲೆಲ್ಲ ಶಾಸನವು ಕೆತ್ತಲ್ಪಟ್ಟಿರುತ್ತದೆ. ಹೆಚ್ಚು ವೀರಗಲ್ಲುಗಳು ಗದ್ಯ ರೂಪವಾಗಿಯೇ ಇರುತ್ತವೆ. ರಾಜನ ಹೆಸರು ಮುಂತಾದ ವಿವರಗಳನ್ನು ಹೇಳಿದ ನಂತರ ವೀರನು ಯುದ್ಧದಲ್ಲಿ ಕಾದಾಡಿದ ವರ್ಣನೆಯು ಬರುತ್ತದೆ. ಹಾಗೂ ಇವುಗಳಲ್ಲಿ ಕಾಲವೂ ನಿರ್ದೇಶಿತವಾಗಿರುತ್ತದೆ.

ಇನ್ನು ಕೆಲವು ಕಡೆ ವೀರನ ಚಿತ್ರವನ್ನೇ ಕೊರೆಯದೇ ಅವನ ಶೌರ್ಯವನ್ನು ಮಾತ್ರ ಕೆತ್ತಿರುತ್ತದೆ. ಇವೂ ವೀರಗಲ್ಲುಗಳೇ ಆದರೆ ಇವು ವೀರಗಲ್ಲುಗಳೆಂಬುದನ್ನು ತಿಳಿಯಬೇಕಾದರೆ ಬರೀ ನೋಡಿದರೆ ಸಾಲದು ಓದಬೇಕು. ಈ ವೀರರ ಬಗ್ಗೆ ಶಾಸನಗಳನ್ನು ಬರೆಯಿಸಲು ಎರಡು ಉದ್ದೇಶಗಳಿದ್ದವು. ಮೊದಲನೆಯದಾಗಿ ಮಡಿದ ವೀರನ ಹೆಸರು ಶಾಶ್ವತವಾಗಿರಲೆಂದು, ಎರಡನೆಯದಾಗಿ ಹೋರಾಡಿ ಮಡಿದ ವೀರರ ಮನೆಯವರಿಗೆ, ವೀರನ ಸ್ಮಾರಕವಾಗಿ ದಾನಗಳನ್ನು ಮಾಡಿ ಅದನ್ನು ಅವನ ಕುಟುಂಬಕ್ಕೆ ಕೊಡುತ್ತಿದ್ದರು.

ಹಾಗೂ ಇನ್ನೂ ಕೆಲವು ವೀರಗಲ್ಲುಗಳು ಆರಾಧನೆಗೊಳಪಡುತ್ತಿರುವುದನ್ನು ನಾವು ಕಾಣುತ್ತೇವೆ. ಇಂತ ವೀರರ ಮೂರ್ತಿಗಳು ಬಿಲ್ಲು, ಬಾಣ, ಖಡ್ಗ ಮುಂತಾದ ಆಯುಧಗಳನ್ನು ಹಿಡಿದಿರುವಂತೆ ಚಿತ್ರಿತವಾಗಿರುತ್ತವೆ. ಇಂತಹ ದೈವತ್ವ ಮಟ್ಟಕ್ಕೇರಿದ ವೀರರನ್ನು ಎಲ್ಲಾ ಜಾತಿಯ ಜನರು ಜಾತಿಮತದ ಭೇದವಿಲ್ಲದೆ ವರ್ಷಕ್ಕೊಮ್ಮೆಯಾದರೂ ಪೂಜಿಸುವ ಸಂಪ್ರದಾಯವಿದೆ. ಹಾಗೂ ಇಂತವರ ಹೆಸರಿನಲ್ಲಿ ವರ್ಷಕ್ಕೊಮ್ಮೆ ಜಾತ್ರೆಗಳು ನಡೆಯುತ್ತವೆ.

ಹೀಗೆ ಯುದ್ಧದಲ್ಲಿ ಹೋರಾಡಿ ದೇಹವನ್ನಿತ್ತ ಕಡುಗಲಿಗಳ ಸಾರ್ಥಕ ಜೀವನವನ್ನು ಸಾರುತ್ತಾ ನಿಂತಿವೆ. ಈ ಸ್ಮಾರಕ ಶಿಲೆಗಳು.

೩.೭.೧ ವೀರಗಲ್ಲುಗಳು

ಸಂಡೂರು ತಾಲೂಕಿನ ಗೆಂತಿಕಟ್ಟೆಯಲ್ಲಿ ಒಂದು ವೀರಗಲ್ಲು ಹಾಗೂ ಶಾಸನ ದೊರೆತಿದ್ದು, ಆ ವೀರಗಲ್ಲು ಶಾಸನ ತ್ರುಟಿತವಾಗಿದೆ. ಆ ಶಾಸನದಲ್ಲಿ ಗೊನ್ತಿಕಟ್ಟೆಯ ಉಲ್ಲೇಖವಿದ್ದು, ಧಾಳಿಯಾದಂತೆ ತಿಳಿದುಬರುತ್ತದೆ. ಈ ಧಾಳಿಯಲ್ಲಿ ಹೋರಾಡಿ ಮಡಿದ ಒಬ್ಬ ವೀರನ ಸ್ಮರಣೆಗಾಗಿ ಈ ವೀರಗಲ್ಲು ಶಾಸನ ನಿಲ್ಲಿಸಿದಂತೆ ತಿಳಿದುಬರುತ್ತದೆ. ಇದು ಈ ಜಿಲ್ಲೆಯಲ್ಲಿ ದೊರೆತ ಮೊದಲ ವೀರಗಲ್ಲಾಗಿದೆ.

ಸಂಡೂರು ತಾಲೂಕಿನ ರಾಮಘಡದಲ್ಲಿ ದೊರಕಿರುವ ಎರಡು ವೀರಗಲ್ಲು ಶಾಸನಗಳು ಹೊಸಮಲೆ ದುರ್ಗದ ಅರಸರಿಗೆ ಸಂಬಂಧಿಸಿವೆ. ಸೀತಾರಾಮ ಜಾಗೀರದಾರರ ವಾದದಂತೆ ಸಂಡೂರು ತಾಲೂಕಿನ ರಾಮಘಡದ ರಾಮದೇವರ ಬಳಿಯಿರುವ ಕ್ರಿ.ಶ. ೧೩೨೩ರ ವೀರಗಲ್ಲು ಶಾಸನವು ಹೊಯ್ಸಳರ ಮತ್ತು ಕುಮ್ಮಟ ಅರಸರ ಸಂಬಂಧವನ್ನು ಕುರಿತು ಮಹತ್ವದ ಬೆಳಕು ಚೆಲ್ಲುತ್ತದೆ.

ಕ್ರಿ.ಶ. ೧೩೨೩ರ ವೀರಗಲ್ಲು ಶಾಸನವು[೫೨] ಹೊಯ್ಸಳ ವೀರ ಬಲ್ಲಾಳನು ತಾನೇ ಸೈನ್ಯ ಸಮೇತನಾಗಿ ಮತ್ತೊಮ್ಮೆ ದೊರವಡಿಗೆ ಬಂದು ಕಂಪಿಲರಾಯನೊಂದಿಗೆ ಯುದ್ಧ ಮಾಡುತ್ತಾನೆ. ಈ ಯುದ್ಧದಲ್ಲಿ ಇವರೀರ್ವರು ನೇರವಾಗಿ ಭಾಗವಹಿಸಿದುದನ್ನು ಶಾಸನ ತಿಳಿಸುತ್ತದೆ. ರಾಮಘಡ ಶಾಸನದಲ್ಲಿ ಈ ಯುದ್ಧದ ವಿವರವನ್ನು "ಶ್ರೀ ಮತು ದುಂದುಭಿ ಸಂವತ್ಸರದ ಫಾಲ್ಗುಣ ಸುದ್ಧ ೧೫ ಸೋಮವಾರಕ್ಕೆ ಶ್ರೀ ವೀರ ಕಂಪಿಲದೇವನ ಮೇಲೆ ಬಲ್ಲಾಳರಾಯನು (ದಂಡೆತ್ತಿ) ಬಂದಲಿಯಿಬ್ಬರು ದಾಯದ ದಂಡಿನೊಳಗೆ ದಂಡಿನ ಬಯಿಚಯ್ಯನು ಆ ಸಮರಂಗದ ಕಟ್ಟಿನಲ್ಲಿ ಹೊಕ್ಕು ಆ ಕಂಪಿಲ ದೇವನು ಬಯಿಚ ಬೋವನ ಕುದುರೆಯನು ಯೇರಿದರೆ ಆ ಬಯಿಚ ಬೋವನು ಸಮರಂಗದ ಕಟ್ಟಿನಲ್ಲಿ ತಿರಿಗಿ ಹಾರಿ ಹೋಯಿದಾಡಿ ಬಿದ್ದನು" ಎಂದು ತಿಳಿಸುತ್ತದೆ.

'ಯಿಬ್ಬರು ದಾಯಾದ ದಂಡಿನೊಳಗೆ' ಎಂಬ ಪದಗಳು ಮುಖ್ಯವಾಗಿವೆ. ಅಂದರೆ ಕಂಪಿಲದೇವ ಮತ್ತು ಬಲ್ಲಾಳ ದಾಯಾದಿಗಳಾಗಿದ್ದರೆಂದು ತಿಳಿದುಬರುತ್ತದೆ. ಜೊತೆಗೆ ಹೊಯ್ಸಳರ ಸಂಬಂಧಿಗಳಾಗಿದ್ದರೆಂದು ತಿಳಿಯುತ್ತದೆ. ಹಾಗೂ ಈ ಶಾಸನದಲ್ಲಿ ಬಲ್ಲಾಳರಾಯನು ವೀರ ಕಂಪಿಲರಾಯನ ಮೇಲೆ ದಂಡೆತ್ತಿ ಬಂದಾಗ ಯುದ್ಧರಂಗದಲ್ಲಿ ಬಯಿಚ ಬೋವನು ಹೋರಾಡಿ ಸತ್ತನು ಎಂದು ತಿಳಿಯುತ್ತದೆ. ಒಟ್ಟಿನಲ್ಲಿ ಮುಮ್ಮಡಿ ಸಿಂಗನ ಮೇಲೆ ಹೊಯ್ಸಳರು ದಾಳಿ ಮಾಡಿದಂತೆ ಉಲ್ಲೇಖವಿದೆ.

ಅದೇ ದೇವಾಲಯದ ಮುಂಭಾಗದ ಗೋಡೆಗೆ ಒರಗಿಸಿರುವ ಕ್ರಿ.ಶ. ೧೫೨೭ರ ಹೊಸಮಲೆ (ರಾಮನಮಲೆ) ಶಾಸನವು ಇವರ ವಂಶಾವಳಿಯನ್ನು ಹೀಗೆ ಹೇಳುತ್ತದೆ.[೫೩]

ಮುಮ್ಮಡಿ ಸಿಂಗೇಯನಾಯಕ
(ಹೆಂಡತಿ - ಮಾದನಾಯಕಿತಿ)
|
ಕಂಪಿಲದೇವ ಅಥವಾ ಖಂಡೇರಾಯ
(ಹೆಂಡತಿ - ಗುಜಲ ಹರಿಹರದೇವಿ)
|
ಕುಮಾರ ರಾಮನಾಥ

ಹೀಗೆ ಈ ವಂಶದಲ್ಲಿ ಕುಮ್ಮಟದ ನಾಯಕರ ಮೂಲಪುರುಷ ಮುಮ್ಮಡಿ ಸಿಂಗೇಯನಾಯಕ. ಇವನ ಮಗ ಕಂಪಿಲದೇವ. ಇವನ ಮಗ ರಾಮನಾಥ. ಎಂಬ ಮೂವರನ್ನು ಮಾತ್ರ ಗುರುತಿಸಬಹುದಾಗಿದೆ. ಮುಮ್ಮಡಿ ಸಿಂಗೇಯ ನಾಯಕನ ಹೆಂಡತಿ ಮಾದನಾಯಕಿತಿ ತಮಗೆ ಹುಟ್ಟಿದ ಗಂಡು ಮಗುವಿಗೆ ಕಂಪಿಲಿಯ ಸೋಮೇಶ್ವರನ ಹೆಸರಿನಲ್ಲಿ ಕಂಪಿಲದೇವನೆಂದು ಹೆಸರಿಡುತ್ತಾರೆ. ಕಂಪಿಲದೇವನಿಗೆ ಖಂಡೇರಾಯ ಎಂಬ ಇನ್ನೊಂದು ಹೆಸರಿತ್ತೆಂದು ತಿಳಿದುಬರುತ್ತದೆ.

ಹಾಗೂ ಶಾಸನಗಳಲ್ಲಿನ ಮಾಹಿತಿಗಳನ್ನಾಧರಿಸಿ ಇಂದಿನ ಸಂಡೂರು ತಾಲೂಕಿನ ರಾಮಘಡ ಹೊಸಮಲೆದುರ್ಗವೆಂದು, ಇದು ಕಂಪಿಲದೇವನ ಮತ್ತೊಂದು ರಾಜಧಾನಿಯೆಂದು ವಿದ್ವಾಂಸರು ಗುರುತಿಸಿದ್ದಾರೆ.[೫೪] ಹೀಗೆ ಕಂಪಿಲನು ರಕ್ಷಣೆ ಮತ್ತು ಸೌಲಭ್ಯದ ದೃಷ್ಟಿಯಿಂದ ಸಂಡೂರು ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಗಿರಿದುರ್ಗವನ್ನು ನಿರ್ಮಿಸಿ ಅದನ್ನು ಹೊಸಮಲೆದುರ್ಗವೆಂದು ಕರೆದು ತನ್ನ ಮತ್ತೊಂದು ರಾಜಧಾನಿಯಾಗಿ ಮಾಡಿಕೊಂಡಿದ್ದನೆಂದು ಹೇಳಬಹುದು. ಆದರೂ ಕುಮ್ಮಟದುರ್ಗವೇ ಮುಖ್ಯ ರಾಜಧಾನಿಯಾಗಿತ್ತು. 'ಹೊಸಮಲೆಯ ರಾಮನಾಥ ವೊಡೆಯನ (ಕುಮಾರ ರಾಮನ) ನೆನಪಿಗೆ' ರಾಮಘಡದಲ್ಲಿ ಕಟ್ಟಿಸಿದ ರಾಮನಾಥ ದೇವಾಲಯದಿಂದಾಗಿ ಹೊಸಮಲೆದುರ್ಗ ನಂತರದ ಕಾಲದಲ್ಲಿ ರಾಮಘಡವೆಂಬ ಹೆಸರನ್ನು ಪಡೆಯಿತ್ತೆನ್ನಬಹುದು.

ಹಾಗೂ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಹೊಸಮಲೆದುರ್ಗದ ಮುಮ್ಮಡಿಸಿಂಗನ ಮೊಮ್ಮಗನೂ, ಕಂಪಿಲರಾಯ ಮತ್ತು ಹರಿಹರ ದೇವಿಯರ ಮಗನೂ ಆದ ರಾಮನಾಥನ ಗುಡಿಯನ್ನು ಗೋಪಾಯಿ ಮತ್ತು ಆಕೆಯ ತಮ್ಮ ರಾಮಣನು ಕಟ್ಟಿಸಿದನು.

ವೀರನು ಮರಣಿಸಿದರೆ ಆತನನ್ನು ಕುರಿತು ಕಥೆ, ಹಾಡು, ಕಟ್ಟಿ ಹೇಳುವುದು ಸಾಮಾನ್ಯ, ಕೆಲವು ವೀರರು ಇದನ್ನು ಮೀರಿ ದೈವತ್ವ ಪಡೆದುಕೊಳ್ಳುತ್ತಾರೆ. ಅಂಥವರಲ್ಲಿ ಕುಮಾರರಾಮನೂ ಒಬ್ಬ. ಈತನು ೧೫ನೆಯ ಶತಮಾನಕ್ಕಾಗಲೇ ದೈವತ್ವವನ್ನು ಪಡೆದುಕೊಂಡಿದ್ದನು. ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿಕೊಟ್ಟ ನ್ಯೂನಿಜ್ ಕುಮಾರರಾಮನನ್ನು ದೇವರೆಂದು ಇಲ್ಲಿಯ ಜನರು ಪೂಜಿಸುತ್ತಾರೆಂದು ತಿಳಿಸುತ್ತಾನೆ. ಇದರಿಂದ ಕುಮಾರರಾಮನು ಮರಣಿಸಿದ ಸಂದರ್ಭದಿಂದಲೇ ಈತನ ಆರಾಧನೆ ಪ್ರಾರಂಭವಾಗಿರಬೇಕು. ಕುಮಾರರಾಮನ ದೇವಾಲಯ ನಿರ್ಮಿಸಿ ಅದರಲ್ಲಿ ಆತನ ತಲೆಯ ಪ್ರತಿರೂಪವನ್ನೋ, ಅಶ್ವಾರೂಢನಾದ ಕುಮಾರರಾಮನ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಪೂಜಿಸುವ ಪದ್ಧತಿ ಬೆಳೆದುಕೊಂಡು ಬಂದಿದೆ.

[illegible]

ಈ ತೆರನಾದ ಕುಮಾರರಾಮನ ದೇವಾಲಯಗಳು ಕರ್ನಾಟಕದ ವಿವಿಧೆಡೆ ಇರುವುದು ತಿಳಿದುಬರುತ್ತದೆ. ಅವುಗಳಲ್ಲಿ ಒಂದಾದ ಸಂಡೂರಿನಲ್ಲಿರುವ ರಾಮಸ್ವಾಮಿ ದೇವಾಲಯ ಕುಮಾರರಾಮನ ದೇವಾಲಯವೇ ಆಗಿದೆ. ಸಂಡೂರಿನ ನಾಯಕರ ಓಣಿಯಲ್ಲಿರುವ ಈ ದೇವಾಲಯದಲ್ಲಿ ಇತ್ತೀಚೆಗೆ ಶ್ರೀರಾಮಚಂದ್ರನ ಮೂರ್ತಿ ಕೆತ್ತಿ ಇಡಲಾಗಿದೆ. ಮೂಲತ: ಪೂಜಿಸಲ್ಪಡುತ್ತಿದ್ದ ಕುಮಾರರಾಮನ ಶಿರಸ್ಸು ದೇವಾಲಯದ ಹೊರಗೆ ಇಡಲಾಗಿದೆ. ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ಕುಮಾರರಾಮನ ತಲೆಯನ್ನು ತುಂಗಭದ್ರ ನದಿಗೆ ತೆಗೆದುಕೊಂಡು ಹೋಗಿ ಪೂಜೆ ಸಲ್ಲಿಸಿ ಅಲ್ಲಿಂದ ರಾಮಘಡಕ್ಕೆ (ಹೊಸಮಲೆದುರ್ಗ) ಒಯ್ದು ನಂತರ ಸಂಡೂರಿಗೆ ತರಲಾಗುತ್ತದೆ. ರಾಮಘಡದಲ್ಲಿರುವ ರಾಮಸ್ವಾಮಿ ದೇವಾಲಯವು ಕುಮಾರರಾಮನ ದೇವಾಲಯವೇ ಆಗಿದೆ. ಹೀಗೆ ಕಂಪಲಿರಾಯ, ಕುಮಾರರಾಮರು ಔತ್ತರೇಯ ಸುಲ್ತಾನರೊಂದಿಗೆ ಹೋರಾಡಿ ತಮ್ಮ ಪ್ರಾಣವನ್ನೇ ಕೊಟ್ಟರು.

೩.೮ ಶಾಸನ ಶಿಲ್ಪ

೩.೮.೧ ಶೈವ

ಸಂಡೂರು ತಾಲೂಕಿನ ಗೆಂತಿಕಟ್ಟೆಯಲ್ಲಿ ದೊರೆತಿರುವ ಈ ವೀರಗಲ್ಲು ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಈ ವೀರಗಲ್ಲು ಶಾಸನವು ಎರಡು ಹಂತದ ಶಾಸನ ಶಿಲ್ಪವಾಗಿದೆ. ಮೊದಲನೆಯ ಹಂತದಲ್ಲಿ ವೀರರು ಹೋರಾಡುತ್ತಿರುವ ದೃಶ್ಯವಿದ್ದು, ಎರಡನೆಯ (ಮೇಲಿನ ಭಾಗ) ಹಂತದಲ್ಲಿ ಶಿವಲಿಂಗ ಶಿಲ್ಪವಿದ್ದು, ಅದರ ಅಕ್ಕ ಪಕ್ಕದಲ್ಲಿ ವೀರರು ಶಿವನ ಸಾನಿಧ್ಯದಲ್ಲಿದ್ದು, ಚಂದ್ರ, ಸೂರ್ಯರ ಚಿತ್ರಗಳನ್ನು ಕೆತ್ತಲಾಗಿದೆ. ಅದರ ಪಕ್ಕದಲ್ಲಿರುವ ಕಲ್ಲಿನ ಮೇಲೆ ಶಾಸನ ಕೆತ್ತಲಾಗಿದೆ.

ಸಂಡೂರು ತಾಲೂಕಿನ ರಾಮಘಡದಲ್ಲಿ ದೊರೆತಿರುವ ಈ ವೀರಗಲ್ಲು ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಶಾಸನದ ಮೇಲ್ಭಾಗದ ಮಧ್ಯದಲ್ಲಿ ಶಿವಲಿಂಗ ಮೂರ್ತಿ ಇದ್ದು, ಬಲಪಕ್ಕಕ್ಕೆ ನಂದಿ, ಎಡಪಕ್ಕಕ್ಕೆ ವೀರನ ಶಿಲ್ಪಗಳಿವೆ. ಇವುಗಳ ಮೇಲೆ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ ಹಾಗೂ ಮಧ್ಯಭಾಗದಲ್ಲಿ ಶಾಸನವನ್ನು ಕೆತ್ತಿದ್ದು ಕೆಳಭಾಗದಲ್ಲಿ ರಾಮನಮೂರ್ತಿ ಶಿಲ್ಪವನ್ನು ಕೆತ್ತಲಾಗಿದೆ.

ಸಂಡೂರು ತಾಲೂಕಿನ ಸುಬ್ಬರಾಯನ ಹಳ್ಳಿಯ ಬಳಿ ಇರುವ ನವಿಲು ತೀರ್ಥದ ನವಿಲುಸ್ವಾಮಿಯ ಬೆಟ್ಟದಲ್ಲಿರುವ ನವಿಲುಸ್ವಾಮಿಯ ದೇವಾಲಯದ ಮುಂದಿರುವ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಶಾಸನದ ಮೇಲ್ಭಾಗದಲ್ಲಿ ಶಿವಲಿಂಗಮೂರ್ತಿ ಇದ್ದು, ಅಕ್ಕ ಪಕ್ಕದಲ್ಲಿ ಸೂರ್ಯ, ಚಂದ್ರರ ಶಿಲ್ಪಗಳಿವೆ. ನಂದಿ ಶಿಲ್ಪವಿದ್ದು, ಪೂಜಿಸುತ್ತಿರುವ ಒಬ್ಬ ಮನುಷ್ಯನ ಮೂರ್ತಿ ಇದೆ.

ಸಂಡೂರು ತಾಲೂಕಿನ ಅಂತಾರಪುರದ ದೇವಾಲಯದ ಮುಂದಿರುವ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಶಾಸನದ ಮೇಲ್ಭಾಗದಲ್ಲಿ ಶಿವಲಿಂಗಮೂರ್ತಿ ಇದ್ದು, ನಂದಿ ಶಿಲ್ಪವಿದೆ. ಹಾಗೂ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಸಂಡೂರು ತಾಲೂಕಿನ ಚೋರುನೂರು ದೇವಾಲಯದ ಮುಂದಿರುವ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಶಾಸನದ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಶಿವಲಿಂಗ ಮೂರ್ತಿಯು ತ್ರುಟಿತವಾಗಿದ್ದು, ಕಾಣಿಸುತ್ತವೆ.

ಸಂಡೂರು ತಾಲೂಕಿನ ಕುಮಾರಸ್ವಾಮಿ ಬೆಟ್ಟದಲ್ಲಿರುವ ಪಾರ್ವತಿ ದೇವಾಲಯದ ಒಳಗಿನ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಶಾಸನದ ಮೇಲ್ಭಾಗದಲ್ಲಿ ನಂದಿ, ಕರು, ನವಿಲು ಹಾಗೂ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಸಂಡೂರು ತಾಲೂಕಿನ ತುಂಬರಗುದ್ದಿಯ ದೇವಾಲಯದ ಮುಂದಿರುವ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಶಾಸನದ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಇದರಲ್ಲಿ ಶಿವಲಿಂಗದ ಮೂರ್ತಿಯು ಹಾಳಾಗಿದೆ.

ಸಂಡೂರು ತಾಲೂಕಿನ ತಾಳೂರಿನ ದೇವಾಲಯದ ಕಂಬದಲ್ಲಿ ಕೆತ್ತಿರುವ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದ್ದು, ಸೂರ್ಯ ಮತ್ತು ಚಂದ್ರರ ಶಿಲ್ಪಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ.

ಸಂಡೂರು ತಾಲೂಕಿನ ಕುರಿಕುಪ್ಪೆಯ ದೇವಾಲಯದ ಕಂಬದಲ್ಲಿ ಕೆತ್ತಿರುವ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದ್ದು, ಸೂರ್ಯ ಮತ್ತು ಚಂದ್ರರ ಶಿಲ್ಪಗಳು ಸ್ಪಷ್ಟವಾಗಿ ಕಾಣುತ್ತವೆ.

ಈ ಪರಿಸರದಲ್ಲಿ ಶೈವ ಶಾಸನ ಶಿಲ್ಪಗಳು ಮಾತ್ರ ಕಂಡುಬಂದಿದ್ದು, ವೈಷ್ಣವ ಶಾಸನ ಶಿಲ್ಪಗಳು ಇದುವರೆಗೂ ಎಲ್ಲೂ ಕಂಡುಬಂದಿಲ್ಲ.

೩.೯ ಸ್ಮಾರಕ ಶಾಸನ ಶಿಲ್ಪ

೩.೯.೧ ವೀರಗಲ್ಲು

ಸಂಡೂರು ತಾಲೂಕಿನ ಗೆಂತಿಕಟ್ಟೆಯಲ್ಲಿ ದೊರೆತ ಸ್ಮಾರಕ ಶಾಸನ ಶಿಲ್ಪವು ವೀರಗಲ್ಲು ಶಾಸನವಾಗಿದ್ದು, ಶಾಸನವು ತ್ರುಟಿತವಾಗಿದೆ. ಆ ಶಾಸನದಲ್ಲಿ ದಾಳಿ ನಡೆದ ಬಗ್ಗೆ ಹಾಗೂ ದಾಳಿಯಲ್ಲಿ ಹೋರಾಡಿ ಸತ್ತ ಒಬ್ಬ ವೀರನ ಸ್ಮರಣೆಗಾಗಿ ಈ ವೀರಗಲ್ಲು ಶಾಸನ ನಿಲ್ಲಿಸಿದಂತೆ ತಿಳಿದುಬರುತ್ತದೆ. ಈ ಸ್ಮಾರಕ ಶಾಸನ ಶಿಲ್ಪವು

ಶೈವ ಶಾಸನ ಶಿಲ್ಪವಾಗಿದ್ದು, ಈ ವೀರಗಲ್ಲು ಶಾಸನವು ಎರಡು ಹಂತದ ಶಾಸನ ಶಿಲ್ಪವಾಗಿದೆ. ಮೊದಲನೆಯ ಹಂತದಲ್ಲಿ ವೀರರು ಹೋರಾಡುತ್ತಿರುವ ದೃಶ್ಯವಿದ್ದು, ಎರಡನೆಯ ಹಂತದಲ್ಲಿ ಶಿವಲಿಂಗ ಶಿಲ್ಪವಿದ್ದು, ಅದರ ಅಕ್ಕಪಕ್ಕದಲ್ಲಿ ವೀರರು ಶಿವನ ಸಾನಿಧ್ಯದಲ್ಲಿದ್ದು, ಸೂರ್ಯ, ಚಂದ್ರರ ಚಿತ್ರಗಳನ್ನು ಕೆತ್ತಲಾಗಿದೆ. ಅದರ ಪಕ್ಕದಲ್ಲಿರುವ ಕಲ್ಲಿನ ಮೇಲೆ ಶಾಸನ ಕೆತ್ತಲಾಗಿದೆ.

ಸಂಡೂರು ತಾಲೂಕಿನ ರಾಮಘಡದಲ್ಲಿ ವೀರಗಲ್ಲು ಹಾಗೂ ಶಾಸನ[೫೫] ದೊರೆತಿದ್ದು. ಆ ವೀರಗಲ್ಲು ತ್ರುಟಿತವಾಗಿದೆ. ಆ ಶಾಸನದಲ್ಲಿ ಬಲ್ಲಾಳರಾಯನು ವೀರ ಕಂಪಿಲರಾಯನ ಮೇಲೆ ದಂಡೆತ್ತಿ ಬಂದಾಗ ಯುದ್ಧರಂಗದಲ್ಲಿ ಬಯಿಚ ಬೋವನು ಹೋರಾಡಿ ಸತ್ತ ವಿಷಯವನ್ನು ತಿಳಿಸುತ್ತದೆ.

ಈ ವೀರಗಲ್ಲು ಮೂರು ಹಂತದ್ದಾಗಿದೆ. ಕೆಳಗಿನ ಹಂತದಲ್ಲಿ ವೀರರು ಹೋರಾಡುತ್ತಿರುವ ದೃಶ್ಯವನ್ನು, ಮಧ್ಯದ ಹಂತದಲ್ಲಿ ಅಪ್ಸರೆಯರು ವೀರನನ್ನು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಹಾಗೂ ಮೇಲಿನ ಹಂತದಲ್ಲಿ ವೀರನು ಶಿವನ ಸಾನಿಧ್ಯದಲ್ಲಿ ಕುಳಿತು ಪೂಜಿಸುತ್ತಿರುವ ದೃಶ್ಯಗಳಿವೆ. ಹಾಗೂ ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ.

ಈ ಸ್ಮಾರಕ ಶಾಸನ ಶಿಲ್ಪವು ಶೈವ ಶಾಸನ ಶಿಲ್ಪವಾಗಿದೆ. ಈ ವೀರಗಲ್ಲನ್ನು ಯುದ್ಧದಲ್ಲಿ ಹೋರಾಡಿ ಸತ್ತ ವೀರನ ಸ್ಮರಣೆಗಾಗಿ ಈ ವೀರಗಲ್ಲು ಶಾಸನವನ್ನು ನೆಡಲಾಗಿದೆ. ಹಾಗೂ ದೇವಾಲಯದ ಒಳಗೆ ಇರುವ ವೀರಗಲ್ಲಿನಲ್ಲಿ ಒಬ್ಬ ವೀರನು ಇದ್ದು, ಅವನ ಕೈಯಲ್ಲಿ ಬಿಲ್ಲು, ಬಾಣ ಹಿಡಿದ ವೀರನ ಶಿಲ್ಪವಿದೆ.

೩.೯.೨ ಇತರೆ

ತಾಳೂರಿನಲ್ಲಿ ಈಶ್ವರ ದೇವಾಲಯಕ್ಕೆ ಹೋಗುವ ಆವರಣದ ಬಲಗಡೆಗೆ ಒಂದು ತುಂಡಾದ ವೀರಗಲ್ಲು ಇದೆ. ಒಬ್ಬ ವೀರನು ಕುದುರೆಯನ್ನು ಏರಿ ಬಿಲ್ಲು ಹಿಡಿದು ಹೋರಾಡುತ್ತಿರುವ ಚಿತ್ರ ಮೊದಲನೆಯ ಹಂತದಲ್ಲಿದೆ. ಈ ಭಾಗದ ಅರ್ಧಭಾಗ ತುಂಡಾಗಿದೆ. ಅದರ ಮುಂದಿನ ಹಂತದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಚಿತ್ರವಿದೆ. ಅದರ ಮುಂದಿನ ಹಂತವಾದ ಮೂರನೆಯ ಹಂತದಲ್ಲಿ ವೀರನು ಶಿವನ ಬಳಿ ಕುಳಿತು ಪೂಜಿಸುತ್ತಿರುವ ಚಿತ್ರವಿದೆ.

ತಾಳೂರಿನ ಅದೇ ದೇವಾಲಯದ ಆವರಣದ ಎಡಗಡೆಗೆ ಒಂದು ವೀರಗಲ್ಲು ಇದೆ. ಈ ಶಿಲೆಯಲ್ಲಿ ಮೊದಲನೆಯ ಹಂತದಲ್ಲಿ ವೀರರು ಹೋರಾಡುತ್ತಿರುವ ದೃಶ್ಯವಿದೆ. ಎರಡನೆಯ ಹಂತದಲ್ಲಿ ಅಪ್ಸರೆಯರು ವೀರನನ್ನು ದೇವಲೋಕಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯವಿದೆ. ಮೂರನೆಯ ಹಂತದಲ್ಲಿ ವೀರನು ಶಿವನ ಸಾನಿಧ್ಯದಲ್ಲಿ ಕುಳಿತ ಚಿತ್ರವಿದೆ.

ಕುರಿಕುಪ್ಪೆಯ ಹನುಮಂತದೇವರ ಗುಡಿಯ ಮುಂಭಾಗದಲ್ಲಿಯ ಕಟ್ಟೆಯ ಮೇಲೆ ಒಂದು ವೀರಗಲ್ಲು ಹಾಗೂ ನಾಗ, ಶಿವಲಿಂಗ ಶಿಲ್ಪಗಳಿವೆ. ಇಲ್ಲಿರುವ ವೀರಗಲ್ಲು ಒಂದೇ ಹಂತದ ವೀರಗಲ್ಲಾಗಿದೆ. ಇಬ್ಬರು ವೀರರು ಕುದುರೆಯನ್ನು ಏರಿ ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಹೋಗುತ್ತಿರುವ ಹಾಗೂ ನಿಂತಿರುವ ಒಬ್ಬ ವೀರನ ಕೈಯಲ್ಲಿ ಖಡ್ಗ ಹಿಡಿದಿರುವ ಚಿತ್ರವಿದೆ. ಸೂರ್ಯ, ಚಂದ್ರರ ಮಧ್ಯ ಶಿವಲಿಂಗವಿರುವ ಚಿತ್ರವಿದೆ.

ಚಿಕ್ಕ ಅಂತಾಪುರದ ಒಂದು ಹೊಲದಲ್ಲಿ ಒಂದು ಶಿಲೆಯ ಮೇಲೆ ಒಬ್ಬ ಮನುಷ್ಯನು ಕೊಡೆಯನ್ನು ಹಿಡಿದಿರುವ ಚಿತ್ರವಿದೆ. ಹಾಗೂ ಮೇಲೆ ಸೂರ್ಯ, ಚಂದ್ರರ ಚಿತ್ರಗಳಿವೆ. (ಈ ಮುಂದೆ ಈ ಶಿಲ್ಪದ ಛಾಯಾಚಿತ್ರವನ್ನು ಯಾರೂ ತೆಗೆದುಕೊಂಡಿಲ್ಲ) ಇದು ಚಿಕ್ಕ ಅಂತಾಪುರಕ್ಕೆ ಹೋಗುವ ರಸ್ತೆಯ ಬಲಗಡೆಗೆ ಇರುವ ಹೊಲದ, ಊರ ದಕ್ಷಿಣಾ ಪಶ್ಚಿಮಾಭಿಮುಖದ ಕಡೆಗೆ ಈ ಹೊಲವಿದೆ. (ಈ ಹೊಲದ ಮಾಲಿಕನ ಹೆಸರು ಅಜಮರ ದುರ್ಗಪ್ಪ) ಇದನ್ನು ವಾಮನ ಮುದ್ರೆಕಲ್ಲು ಎನ್ನುತ್ತಾರೆ.

ಅಡಿಟಿಪ್ಪಣಿಗಳು

೧. ಕರ್ನಾಟಕ ಶಾಸನ ಸಂಪುಟ, ಎ.ವಿ.ನರಸಿಂಹಮೂರ್ತಿ, ೧೯೮೩

೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಹೆಚ್.ತಿಪ್ಪೇರುದ್ರಸ್ವಾಮಿ, ೧೯೯೭

೩. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧, ಸಂಡೂರು - ೭, ಕ್ರಿ.ಶ. ೧೨೦೬

೩a. I.B.O.Vol, II, ARSIE, ೧೯೨೨- ೨೩, No. ೭೪೦ of ೧೯೨೨- No. ೫೨೪

೪. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧, ಬಳ್ಳಾರಿ - ೨೪, ಕ್ರಿ.ಶ. ೧೨೧೦

೫. ಅದೇ, ಸಂಡೂರು - ೧೯, ಕ್ರಿ.ಶ. ೧೨೧೮

೬. ಅದೇ, ಸಂಡೂರು - ೧೬, ಕ್ರಿ.ಶ. ೧೬ ಶತಮಾನ

೬a. I.B.D. Vol, II, No. ೪೯೨, ARSIE, ೧೯೨೨ - ೨೩, No. ೭೩೩ of ೧೯೨೨, ೧೫೫೫. A.D.

೬b. I.B.D.Vol.II, No.೪೯೩, ARSIE, ೧೯೨೨-೨೩, No.೭೩೪ of ೧೯೨೨, ೧೫೭೫.A.D.

೭. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧, ಸಂಡೂರು - ೨೦, ಕ್ರಿ.ಶ. ೧೫೨೩

೮. ಅದೇ, ಸಂಡೂರು - ೩, ಕ್ರಿ.ಶ. ೧೮೫೪

೮a. I.B.D. Vol, II, No. ೫೦೮, ARSIE, ೧೯೨೪- ೨೫, No. ೨೮೭ of ೧೯೨೫

೮b. I.B.D. Vol, II, No. ೫೩೪, AR$IE, ೧೯೪೩- ೪೪, No.B. ೭೨, ೧೮th Century

೮c. I.B.D. Vol, II, No. ೫೪೭, ARSIE, ೧೯೨೪- ೨೫, No. ೨೯೨ of ೧೯೨೫

೯. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧, ಸಂಡೂರು - ೧೪, ಕ್ರಿ.ಶ. ೧೫೨೭

೧೦. ಅದೇ, ಸಂಡೂರು - ೨೪, ಕ್ರಿ.ಶ. ೧೬ನೇ ಶತಮಾನ

೧೧. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೨೯

೧೨. ವಡ್ಡಾರಾಧನೆ ಸೂಚಿಸುವ ಬಸದಿ ಮತ್ತು ಸಂಡೂರು, ಕ.ಇ.ದ. ಪು. ೧೮೪

೧೩. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೫೭

೧೪. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ - ೧, ಹಗರಿಬೊಮ್ಮನಹಳ್ಳಿ ತಾ, - ೧೫, ೧೮, ೧೯ - ಕ್ರಿ.ಶ. ೧೦೫೫, ಕ್ರಿ.ಶ. ೧೨೭೬

೧೪a. ಕೋಗಳಿನಾಡಿನ ಅಧ್ಯಯನ, ಅಪ್ರಕಟಿತ, ಎಂ.ಫಿಲ್. ಪ್ರಬಂಧ, ಪು. ೭

೧೫. ವಡ್ಡಾರಾಧನೆ ಸೂಚಿಸುವ ಬಸದಿ ಮತ್ತು ಸಂಡೂರು, ಕ.ಇ.ದ. ಪು. ೧೮೪ - ೧೮೫

೧೬. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧, ಸಂಡೂರು - ೧೯, ಕ್ರಿ.ಶ. ೧೨೧೮

೧೬a. I.B.D. Vol, II, No. ೫೨೮, ARIE, ೧೯೪೩- ೪೪, No.B. ೬೬, ೧೭೪೮, A.D.

೧೬b. I.B.D. Vol, II, No. ೫೨೯, ARIE, ೧೯೪೩- ೪೪. No.B. ೬೭, ೧೭೦೮, A.D.

೧೬c. I.B.D. Vol, II, No. ೫೩೧, ARIE, ೧೯೪೩- ೪೪, No.B. ೬೯, ೧೭೦೩, A.D.

೧೭. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧, ಸಂಡೂರು - ೨೩, ಕ್ರಿ.ಶ.

೧೮. ಅದೇ, ಸಂಡೂರು - ೧, ಕ್ರಿ.ಶ. ೧೦೭೪

೧೯. ಅದೇ, ಸಂಡೂರು - ೨೪, ಕ್ರಿ.ಶ.
೨೦. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೫೬
೨೧. ಹರಪನಹಳ್ಳಿ ಪಾಳೇಗಾರರು, ಕುಂ.ಬಾ.ಸ. ೧೯೯೬.
೨೨. ಪ್ರಭುಪ್ರಕಾಶ, ಸ್ಮರಣ ಸಂಚಿಕೆ, ಪು. ೧೦, ೧೨, ೧೩
೨೩. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧, ಸಂಡೂರು - ೧೭, ಕ್ರಿ.ಶ. ೧೦೪೭
೨೪. ಅದೇ, ಸಂಡೂರು - ೨೨, ಕ್ರಿ.ಶ. ೧೫೩೯
೨೫ ಅದೇ, ಸಂಡೂರು - ೨೨, ಕ್ರಿ.ಶ. ೧೫೩೯
೨೬ ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೩೫, ೩೬
೨೭. ಅದೇ, ಚಾರಿತ್ರಿಕ ಅಧ್ಯಯನ, ಪು. ೩೫, ೩೬
೨೮. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಸಂಡೂರು - ೨೨, ಕ್ರಿ.ಶ. ೧೫೩೯
೨೯ ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ಇತಿಹಾಸ, (ರಾಜಕೀಯ : ವಿಜಯನಗರ ಪೂರ್ವ, ಸಂಪುಟ - ೧), ಪು. ೩೪
೩೦. ಅದೇ, ಪು. ೪೯
೩೧ ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಸಂಡೂರು - ೧೮, ಕ್ರಿ.ಶ. ೧೨೨೪
೩೨. ಅದೇ, ಸಂಡೂರು - ೯,
೩೩. ಅದೇ, ಸಂಡೂರು - ೨೦, ಕ್ರಿ.ಶ. ೧೫೨೩
೩೪. ಅದೇ, ಬಳ್ಳಾರಿ - ೨೬, ಕ್ರಿ.ಶ. ೧೯೯೬
೩೫ ಅದೇ, ಸಂಡೂರು - ೨೪
೩೬ ಅದೇ, ಸಂಡೂರು - ೨೩
೩೭ ಅದೇ, ಬಳ್ಳಾರಿ - ೨೦, ಕ್ರಿ.ಶ. ೧೦೯೮
೩೮. ಅದೇ, ಬಳ್ಳಾರಿ - ೨೧, ಕ್ರಿ.ಶ. ೯೭೭
೩೯. ಅದೇ, ಸಂಡೂರು - ೧೧, ಕ್ರಿ.ಶ. ೧೫೪೪
೪೦. ಅದೇ, ಬಳ್ಳಾರಿ - ೩೧, ಕ್ರಿ.ಶ. ೧೫೩೨
೪೧. ಅಧೇ, ಸಂಡೂರು - ೧, ಕ್ರಿ.ಶ. ೧೦೭೪
೪೨. ಅದೇ, ಸಂಡೂರು - ೧೯, ಕ್ರಿ.ಶ. ೧೨೧೮
೪೩. ಅದೇ, ಸಂಡೂರು - ೨೦, ಕ್ರಿ.ಶ. ೧೫೩೨
೪೪. ಅದೇ, ಸಂಡೂರು - ೧೭, ಕ್ರಿ.ಶ. ೧೦೪೭
೪೫. ಅದೇ, ಸಂಡೂರು - ೧೨, ಕ್ರಿ.ಶ. ೧೭೫೩
೪೬. ಅದೇ, ಬಳ್ಳಾರಿ - ೩೨, ಕ್ರಿ.ಶ. ೯೭೬
೪೭. ಅದೇ, ಬಳ್ಳಾರಿ - ೩೬, ಕ್ರಿ.ಶ. ೧೧೧೯
೪೮. ಅದೇ, ಬಳ್ಳಾರಿ - ೩೩, ಕ್ರಿ.ಶ. ೧೧೨೦
೪೯. ಅದೇ, ~~ಸಂಡೂರು~~ ಬಳ್ಳಾರಿ - ೨೩, ಕ್ರಿ.ಶ. ೧೧೪೮
೫೦. ಅದೇ, ~~ಸಂಡೂರು~~ ಬಳ್ಳಾರಿ - ೨೫, ಕ್ರಿ.ಶ. ೧೧೬೮
೫೧. ಅದೇ, ~~ಸಂಡೂರು~~ ಬಳ್ಳಾರಿ - ೨೪, ಕ್ರಿ.ಶ. ೧೨೧೦
೫೨. ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ಇತಿಹಾಸ, (ರಾಜಕೀಯ : ವಿಜಯನಗರ ಪೂರ್ವ, ಸಂಪುಟ - ೧), ಪು. ೧೨೪, ೧೨೫
೫೩. ಕ.ಕು.ರಾ.ಪಂ. (ಜಾನಪದ ವಿಭಾಗ), ಮಂಜುನಾಥ ಬೇವಿನಕಟ್ಟಿ, ೧೯೯೬
೫೪. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಸಂಡೂರು - ೧೪, ಕ್ರಿ.ಶ. ೧೫೨೭
೫೫. Vijayanagara progress of Research, ೧೯೯೧, P. ೧೯೨- ೧೯೩
೫೬. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಸಂಡೂರು - ೧೪, ಕ್ರಿ.ಶ. ೧೩೨೩

೪

ಶಾಸನೋಲ್ಲೇಖಿತ ದೇವಾಲಯಗಳು

೪

ಶಾಸನೋಲ್ಲೇಖಿತ ದೇವಾಲಯಗಳು

ಪ್ರಾಚೀನ ಕಾಲದಿಂದಲೂ ನಮ್ಮ ಜನಸಮೂಹ ಅನೇಕ ದೇವಾಲಯಗಳನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ಸು.ಕ್ರಿ.ಶ. ೬ನೆಯ ಶತಮಾನದಿಂದ ಈ ನಿರ್ಮಾಣಗಳಲ್ಲಿ ಒಂದು ಕ್ರಮ ಮತ್ತು ಸ್ವರೂಪವನ್ನು ತರಲು ಪ್ರಯತ್ನ ಮಾಡಿದಂತೆ ತೋರುತ್ತದೆ. ತತ್ಪರಿಣಾಮವಾಗಿ ಸು.ಕ್ರಿ.ಶ. ೭-ಆನೆಯ ಶತಮಾನದ ಹೊತ್ತಿಗೆ ದೇವಾಲಯಗಳ ರಚನಾಕ್ರಮದಲ್ಲಿ ಸ್ಪಷ್ಟತೆ ಮೂಡಲಾರಂಭಿಸಿತು. ಈ ದೇವಾಲಯಗಳನ್ನು ಮೊದಲು ಮರ, ಇಟ್ಟಿಗೆಯಿಂದ ನಿರ್ಮಿಸಿರುವುದನ್ನು ಕಾಣುತ್ತೇವೆ. ಆದರೆ ಇವುಗಳು ಹೆಚ್ಚು ಶಾಶ್ವತವಲ್ಲವಾದ್ದರಿಂದ ಕಲ್ಲಿನ ದೇವಾಲಯಗಳೇ ಶ್ರೇಷ್ಠವೆಂಬ ನಂಬಿಕೆ ಇದ್ದುದರಿಂದ ಮತ್ತು ಅದು ಶಾಶ್ವತವಾಗಿ ಉಳಿಯುವಂತದಾದ್ದರಿಂದ ಕಲ್ಲಿನ ನಿರ್ಮಾಣಗಳು ಆರಂಭವಾದ ಮೇಲೆ ಅದೇ ಮುಂದುವರೆಯಿತು.

ಶಾಸ್ತ್ರಗ್ರಂಥಗಳು ಪ್ರಸ್ತುತ ಪಡಿಸುವ ವಿಧಿ - ನಿಷೇಧಗಳೊಂದಿಗೆ, ಪ್ರಾದೇಶಿಕ ಭಿನ್ನತೆ, ಪರಸ್ಪರ ಪ್ರಭಾವ, ಪ್ರಾಕೃತಿಕ ಪರಿಸರ, ಕಟ್ಟಡ ಸಾಮಗ್ರಿಗಳ ಅನುಕೂಲ, ಕಾಲಕಾಲಕ್ಕೆ ಪ್ರಬಲವಾಗುತ್ತಿದ್ದ ಬೇರೆ ಬೇರೆ ಮತಗಳು, ಜನರ ಅಭಿರುಚಿ, ರಾಜಮಹಾರಾಜರ ಪ್ರೋತ್ಸಾಹ, ಕಟ್ಟಡದ ಅವಶ್ಯಕತೆ, ಶಿಲ್ಪಿಗಳ ಮನೋಧರ್ಮ ಮತ್ತು ಕೈಚಳಕ ಇತ್ಯಾದಿ ಅಂಶಗಳ ಹಿನ್ನೆಲೆಯಲ್ಲಿ ದೇವಾಲಯಗಳು ಸ್ಥಳೀಯ ಪ್ರಭೇದಗಳನ್ನು ಬೆಳೆಸಿಕೊಂಡವು. ಈ ಎಲ್ಲ ಕಾರಣಗಳಿಂದ ಆಯಾ ಪ್ರದೇಶದಲ್ಲಿ ಉಗಮಗೊಂಡು ವಿಕಾಸಗೊಂಡ ಹಲವಾರು ಶೈಲಿಯ ದೇವಾಲಯಗಳನ್ನು ಕಾಣುತ್ತೇವೆ.

ದೇವಾಲಯಗಳು ಸಾಮಾನ್ಯವಾಗಿ ನದಿ ದಡದಲ್ಲಿ, ಬೆಟ್ಟದ ಮೇಲೆ, ಊರ ಮಧ್ಯದಲ್ಲಿ, ಊರಿನ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಒಂದಲ್ಲಾ ಒಂದು ಕಡೆ ದೇವಾಲಯಗಳು

[illegible]

[illegible]

[illegible]

[illegible]

[illegible]

ಕಂಡುಬರುತ್ತವೆ. ಇವು ರಾಜರ ಅಧಿಕಾರಿಗಳ ಆಶ್ರಯದೊಂದಿಗೆ ಊರಿನ ಜನರ ಪೋಷಣೆಯಲ್ಲಿ ದೇವಸ್ಥಾನಗಳು ಬೆಳೆದುಬಂದಿವೆ. ಈ ದೇವಾಲಯ ನಿರ್ಮಾಣವು ಇಡೀ ಸಮಾಜದ ಧಾರ್ಮಿಕ ಶ್ರದ್ಧೆಯ ಹಾಗೂ ಭಕ್ತಿಯ ಪ್ರತೀಕವೆನಿಸಿತು. ಆಯಾಯಾ ಧಾರ್ಮಿಕ ಮತಗಳಿಗೆ ಅನುಗುಣವಾಗಿ ಈ ಪೂಜಾ ಸ್ಥಾನಗಳು ಬೇರೆ ಬೇರೆ ಹೆಸರಿನಿಂದ ಕರೆಯಲ್ಪಟ್ಟವು. ಉದಾಹರಣೆಗೆ ಹೇಳುವುದಾದರೆ ಹಿಂದೂಗಳು ದೇವಾಲಯವೆಂದು, ಜೈನರು ಬಸದಿಯೆಂದು ಹೀಗೆ ಕರೆದಿರುವುದನ್ನು ಕಾಣುತ್ತೇವೆ.

ಸಂಡೂರು ಪರಿಸರದ ಪ್ರಾಚೀನ ಕಾಲದ ಶಾಸನೋಲ್ಲೇಖಿತ ದೇವಾಲಯಗಳನ್ನು ಮುಖ್ಯವಾಗಿಟ್ಟು ಕೊಂಡು ಅಧ್ಯಯನ ಮಾಡಲಾಗಿದ್ದು, ಇಲ್ಲಿಯ ಶಾಸನಗಳಲ್ಲಿ ಅನೇಕ ರಾಜ ಮನೆತನದವರುಗಳಾದ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರ ಕಾಲದವರೆಗೂ ಈ ಪರಿಸರದಲ್ಲಿ ನಿರ್ಮಾಣವಾಗಿರುವ ದೇವಾಲಯ ಗಳು ಶಾಸನದಲ್ಲಿ ಉಲ್ಲೇಖಿತವಾಗಿರುವುದನ್ನು ಕಾಣುತ್ತೇವೆ. ಹಾಗೂ ಈ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ನಿರ್ವಾಹಣೆಗಾಗಿ ನೀಡಿದ ದಾನ - ದತ್ತಿಗಳ ಬಗ್ಗೆ ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣುತ್ತೇವೆ.

೪.೧ ಶೈವ ದೇವಾಲಯಗಳು

೧

ಊರು	: ತಾಳೂರು	ಸ್ಥಳ	: ನಾರಿಹಳ್ಳದ ದಂಡೆಮೇಲೆ
ಸ್ಮಾರಕ	: ಈಶ್ವರ ದೇವಾಲಯ	ಕಾಲ	: ಕ್ರಿ.ಶ. ೧೨೧೮
ಶೈಲಿ	: ಕಲ್ಯಾಣ ಚಾಲುಕ್ಯ	ಅಭಿಮುಖ	: ಪೂರ್ವ
ಸ್ಥಿತಿ	: ಕನಿಷ್ಠ	ಪಂಥ	: ಶೈವ

ನಿರ್ಮಾಣ

ಕ್ರಿ.ಶ. ೧೨೧೮ರ ತಾಳೂರಿನ ಶಾಸನದಲ್ಲಿ[1] ವೀರಬಲ್ಲಾಳನ ಆಳ್ವಿಕೆಯಲ್ಲಿ ತಲರದ ಈಶ್ವರ ದೇವಾಲಯವನ್ನು ಯಗವಟ್ಟಿಯ ಬೊಮ್ಮ ಗವುಡನು ಕಟ್ಟಿಸಿದ ಉಲ್ಲೇಖವಿದೆ.

ಜೀರ್ಣೋದ್ಧಾರ

ಬೊಮ್ಮಗವುಡನು ಈಶ್ವರ ದೇವಾಲಯವನ್ನು ಕಟ್ಟಿಸಿ ಈ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಬೊಮ್ಮೋಜನಿಗೆ ಭೂದಾನ ನೀಡಿದ ಉಲ್ಲೇಖವಿದೆ.

ನಿರ್ವಹಣೆ

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗಮೂರ್ತಿ ಇದೆ. ಅಂತರಾಳದಲ್ಲಿ ನಂದಿ ಶಿಲ್ಪವಿದೆ. ವಿಶಾಲವಾದ ಸಭಾಮಂಟಪಕ್ಕೆ ಉತ್ತರ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ. ಈ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಹಾಗೂ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಈ ದೇವಾಲಯವನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ. ಸಭಾಮಂಟಪದಲ್ಲಿ ನಾಲ್ಕು ಅಲಂಕೃತ ಕಂಬಗಳಿವೆ. ಮುಖಮಂಟಪದಲ್ಲಿ ಸಾದಾ ಕೆತ್ತನೆಯ ಎರಡು ಕಂಬಗಳಿವೆ. ಈ ದೇವಾಲಯವು ಅದಿಷ್ಠಾನ, ಗೃಹಪಿಂಡಿ, ಗರ್ಭಗೃಹದಲ್ಲಿ ವಿಗ್ರಹಕ್ಕೆ ಅಭಿಷೇಕ ಮಾಡಿದ ನೀರು ಹೊರಗೆ ಹೋಗಲು ಅದರ ಭಿತ್ತಿಯಲ್ಲಿ ಒಂದು ರಂಧ್ರಯುಕ್ತ ಜಲಪ್ರಾಣಳಿ ಇದೆ. ಗರ್ಭಗೃಹದ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಈ ದೇವಾಲಯವು ಚೌಕಾಕಾರದ ತಳವಿನ್ಯಾಸವನ್ನು ಹೊಂದಿದ್ದು, ಇದರ ಶಿಖರ ಭಾಗವು ಚೌಕಾಕಾರವಾಗಿದೆ. ಸಭಾಮಂಟಪ ದಲ್ಲಿಯ ನಾಲ್ಕು ಕಂಬಗಳ ಶೈಲಿಯು ಈ ರೀತಿ ಇದೆ. ಪೀಠ, ಪಾದ, ದಂಡ, ದಂಡಾಗ್ರ, ಬೋದಿಗೆಯನ್ನೊಳ ಗೊಂಡಿದೆ. ದಂಡದ ಭಾಗದಲ್ಲಿ ಮಡಿಕೆಗಳಿಂದ ಕೂಡಿದ್ದು, ಚತುರಾಶ್ರ ಪಟ್ಟಿಕೆ ಹೊಂದಿದೆ. ಹಾಗೂ ಮಧ್ಯ ಪಟ್ಟಿಕೆ ಇದ್ದು, ಒಂದು ಕಂಬದ ಮಧ್ಯಪಟ್ಟಿಕೆಯಲ್ಲಿ ಹಾಗೂ ಪಾದದಲ್ಲಿ ಶಾಸನವನ್ನು ಕೆತ್ತಲಾಗಿದೆ. ದಂಡಾಗ್ರದ ಮೇಲೆ ನಾಸಿ, ಕುಂಭ ಅದರ ಮೇಲೆ ವೃತ್ತಾಕಾರದ ಪಟ್ಟಿಕೆ ಇದೆ. ಕುಂಭದ ಮೇಲೆ ಕಂಠವಿದ್ದು ಅದರ ಮೇಲೆ ಮಂಡಿ, ಹಾರಿಕಾ, ವೃತ್ತವೇತ್ರ ಅಂಗಗಳಿದ್ದು ಮೇಲೆ ಚೌಕಾಕಾರದ ಫಲಕವಿದೆ. ಅದರ ಮೇಲೆ ಬೋದಿಗೆ ಇದೆ.

೨

ಊರು	:	ಚೋರುನೂರು	ಸ್ಥಳ	:	ಗ್ರಾಮದ ಆಗ್ನೇಯಕ್ಕೆ
ಸ್ಮಾರಕ	:	ವೀರಭದ್ರ ದೇವಾಲಯ	ಶೈಲಿ	:	ವಿಜಯನಗರ
ಕಾಲ	:	ಕ್ರಿ.ಶ.ಸು. ೧೬ನೆಯ ಶತಮಾನ	ಸ್ಥಿತಿ	:	ಮಧ್ಯಮ
ಅಭಿಮುಖ	:	ಉತ್ತರ	ಪಂಥ	:	ಶೈವ

ನಿರ್ಮಾಣ

ಚೋರುನೂರಿನ ದೇವಾಲಯವು ಕ್ರಿ.ಶ.ಸು. ೧೬ನೆಯ ಶತಮಾನದ ವಿಜಯನಗರದ ಅರಸ ಸದಾಶಿವರಾಯನ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ತಿಳಿದುಬರುತ್ತದೆ. ಚೋರಮನೂರ ಗವುಡ ಶ್ಯಾನಬೋವ ಬಡಗಿ ಕಮ್ಮಾರರಿಗೆ ವರ್ಷಕ್ಕೆ ಮೂರು ಗದ್ಯಾಣಗಳನ್ನು ಬಿಟ್ಟ ಉಲ್ಲೇಖವಿದೆ.[1] ಈ ಶಾಸನವು ದೇವಾಲಯದ ಪ್ರಾಕಾರದ ಒಳಗೆ ಇದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಗರ್ಭಗೃಹ ತೆರೆದ ಸಭಾಮಂಟಪ ಹಾಗೂ ಪ್ರಾಕಾರವನ್ನೊಳಗೊಂಡಿದೆ. ಈ ದೇವಾಲಯವು ಎತ್ತರದ ಜಗತಿಯ ಮೇಲೆ ಗರ್ಭಗೃಹ ತೆರೆದ ಸಭಾಮಂಟಪಗಳಿವೆ. ಜಗತಿಗೆ ಹೊಂದಿಕೊಂಡು ಸೋಪಾನವನ್ನು ನಿರ್ಮಿಸಲಾಗಿದೆ. ನಿರಾಂಧಾರ ಪ್ರದಕ್ಷಿಣಾ ಪಥವನ್ನೊಳಗೊಂಡಿದೆ. ಭಿತ್ತಿಯು ಅಲಂಕಾರ ರಹಿತವಾಗಿದೆ. ಹಾಗೂ ದೇವಾಲಯದ ಮೇಲ್ಕಟ್ಟಡವು ಶಿಖರ ರಹಿತವಾಗಿದೆ. ಈ ದೇವಾಲಯದ ಗರ್ಭಗೃಹ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಹಾಗೂ ಸಭಾ ಮಂಟಪದಲ್ಲಿ ಸಾದಾ ಕೆತ್ತನೆಯ ಚೌಕಾಕಾರದ ೬ ಕಂಬಗಳಿವೆ. ಗರ್ಭಗೃಹದಲ್ಲಿರುವ ವೀರಭದ್ರನ ಮೂಲ ವಿಗ್ರಹವನ್ನು ದೇವಾಲಯದ ಒಳಗೆ ಒಂದು ಪಕ್ಕದಲ್ಲಿ ಇಡಲಾಗಿದ್ದು, ಇತ್ತೀಚೆಗೆ ಪ್ರತಿಷ್ಠಾಪಿಸಿದ ಮೂರ್ತಿಯು ಗರ್ಭಗೃಹದಲ್ಲಿದೆ. ಗರ್ಭಗೃಹದಲ್ಲಿಯ ಮೂಲ ವೀರಭದ್ರನ ವಿಗ್ರಹವು ಸಮಭಂಗಿಯಲ್ಲಿದ್ದು ಇದರ ಕೈಗಳಲ್ಲಿ ಬಿಲ್ಲು, ಬಾಣ, ಖಡ್ಗ, ಗುರಾಣಿಗಳಿವೆ. ಹಾಗೂ ವೀರಭದ್ರ ದೇವನ ಮೂರ್ತಿ ಶಿಲ್ಪವು ಕಿರೀಟ, ಕೊರಳಲ್ಲಿ ಕಂಠೀಹಾರ, ಕೈಗಡಗ, ತೋಳಬಂದಿ, ಕಾಲುಗಡಗ, ಸೊಂಟದಲ್ಲಿ ಸೊಂಟಪಟ್ಟಿ ಅದರಲ್ಲಿ ಒಂದು ಭರ್ಚಿ ಇದೆ. ಕಿವಿಯಲ್ಲಿ ಕುಂಡಲಗಳಿವೆ. ವೀರಭದ್ರನ ಮೂರ್ತಿಯ ಬಲ ಪಕ್ಕದಲ್ಲಿ ಕೆಳಗೆ ದಕ್ಷಯಜ್ಞನ ಮೂರ್ತಿ ಇದೆ.

೩

ಊರು	:	ಕುರಿಕುಪ್ಪೆ	ಸ್ಥಳ	:	ಗ್ರಾಮದ ಒಳಗೆ
ಸ್ಮಾರಕ	:	ಪಂಪಾಪತಿ ದೇವಾಲಯ	ಕಾಲ	:	ಕ್ರಿ.ಶ.ಸು.೧೬ನೇ ಶತಮಾನ
ಶೈಲಿ	:	ವಿಜಯನಗರ	ಅಭಿಮುಖ	:	ದಕ್ಷಿಣ
ಸ್ಥಿತಿ	:	ಉತ್ತಮ	ಪಂಥ	:	ಶೈವ

ನಿರ್ಮಾಣ

ಕ್ರಿ.ಶ. ೧೫೨೩ರ ಶಾಸನವು ಕುರಿಕುಪ್ಪೆಯಲ್ಲಿ ಕೃಷ್ಣದೇವರಾಯನ ಆಳ್ವಿಕೆ ಅವಧಿಯಲ್ಲಿ ಸಾಮ ಶಾಖೆಯ ಹೆಗ್ಗರಸರ ಮಗನಾದ ಬೆನಕರಸನು ವಿರೂಪಾಕ್ಷ ದೇವಾಲಯ ಕಟ್ಟಿಸಿದನೆಂಬ ಉಲ್ಲೇಖವಿದೆ.[1] ಈಗ ಈ ದೇವಾಲಯವು ಪಂಪಾಪತಿ ದೇವಾಲಯವೆಂದು ಖ್ಯಾತಿ ಪಡೆದಿದೆ.

ಜೀರ್ಣೋದ್ಧಾರ

ಸಾಮ ಶಾಖೆಯ ಹೆಗ್ಗರಸರ ಮಗನಾದ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ ಬಸವಾದೀಕ್ಷಿತರಿಂದ ಭೂಮಿಯನ್ನು ಕ್ರಮವಾಗಿ ಪಡೆದು ದೇವ ಕಾರ್ಯಕ್ಕೆ ದಾನ ನೀಡುತ್ತಾನೆ. ಹಾಗೂ ಊರಿನ ಮಹಾಜನರು ನಾಗುಳ ತೋಟವನ್ನು ದಾನವಾಗಿ ನೀಡುತ್ತಾರೆ.

[illegible]

ಈ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಗರ್ಭಗೃಹ ಹಾಗೂ ವಿಶಾಲವಾದ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗ ಮೂರ್ತಿ, ಸಭಾಮಂಟಪದಲ್ಲಿ ನಂದಿಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದಲ್ಲಿ ೧೬ ಕಂಬಗಳಿದ್ದು, ೮ ಕಂಬಗಳು ಸಾದಾ ಕೆತ್ತನೆಯಿಂದ ಕೂಡಿವೆ. ಇನ್ನೂ ೮ ಕಂಬಗಳು ಕೆತ್ತನೆಯಿಂದ ಕೂಡಿವೆ. ಒಂದು ಕಂಬದಲ್ಲಿ ಎರಡು ಕಡೆ ಕನ್ನಡದಲ್ಲಿ ಶಾಸನವನ್ನು ಕೆತ್ತಲಾಗಿದೆ. ಅದೇ ರೀತಿ ಇನ್ನೊಂದು ಕಂಬದಲ್ಲಿ ಎರಡು ಕಡೆ ಅದೇ ಪಾಠವನ್ನು ಸಂಸ್ಕೃತದಲ್ಲಿ ಕೆತ್ತಲ್ಪಟ್ಟಿದೆ. ಈ ದೇವಾಲಯದ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು, ಲಲಾಟ ಬಿಂಬದಲ್ಲಿ ಬ್ರಹ್ಮ, ಶಿವ, ಪಾರ್ವತಿ, ಗಣೇಶ ಹಾಗೂ ಗರುಡನ ಮೇಲೆ ಕುಳಿತ ವಿಷ್ಣುವಿನ ಶಿಲ್ಪಗಳಿವೆ. ನಂದಿ, ಸಿಂಹಗಳ ಶಿಲ್ಪಗಳಿವೆ. ಹಾಗೂ ಶೈವ ದ್ವಾರಪಾಲಕರ ಶಿಲ್ಪಗಳಿವೆ. ದೇವಾಲಯದ ಎದುರುಗಡೆ ಗರುಡ ಗಂಭವಿದೆ. ಈ ದೇವಾಲಯದ ಸಭಾಮಂಟಪದಲ್ಲಿ ೮ ಕಂಬಗಳ ಕೆತ್ತನೆಯ ಶೈಲಿಯು ಈ ರೀತಿ ಇವೆ. ಪೀಠ, ಪಾದ, ದಂಡ, ದಂಡಾಗ್ರ, ಬೋದಿಗೆಗಳನ್ನು ಒಳಗೊಂಡಿವೆ. ದಂಡವು ಮಡಿಕೆಗಳಿಂದ ಕೂಡಿದ್ದು ಚತುರಾಶ್ರ ಪಟ್ಟಿಕೆ ಹೊಂದಿದೆ. ಮಧ್ಯ ಪಟ್ಟಿಕೆ ಇದೆ. ಪಾದದಲ್ಲಿ ಎರಡು ಕಡೆ ಶಾಸನ ಕೆತ್ತಲಾಗಿದೆ. ದಂಡಾಗ್ರದ ಮೇಲೆ ನಾಸಿ, ಕುಂಭ, ಅದರ ಮೇಲೆ ವೃತ್ತಾಕಾರದ ಪಟ್ಟಿಕೆ ಇದ್ದು, ಕುಂಭದ ಮೇಲೆ ಕಂಠವಿದ್ದು, ಅದರ ಮೇಲೆ ಮಂಡಿ, ಹಾರಿಕಾ, ವೃತ್ತವೇತ್ರ ಅಂಗಾಗಳಿದ್ದು ಚೌಕಾಕಾರದ ಫಲಕವಿದೆ. ಅದರ ಮೇಲೆ ಬೋದಿಗೆ ಇದೆ. ಈ ದೇವಾಲಯವು ಬೆಣಚು ಕಲ್ಲಿನಿಂದ ನಿರ್ಮಿಸಲಾಗಿದೆ. ಈ ದೇವಾಲಯವು ಏಕಕೂಟ ದೇವಾಲಯವಾಗಿದೆ.

೪

ಊರು	:	ಅಂತಾಪುರ	ಸ್ಥಳ	:	ಗ್ರಾಮದ ಒಳಗೆ
ಸ್ಮಾರಕ	:	ಮಲ್ಲಿಕಾರ್ಜುನ ದೇವಾಲಯ	ಕಾಲ	:	ಕ್ರಿ.ಶ.ಸು. ೧೬ನೇ ಶತಮಾನ
ಶೈಲಿ	:	ವಿಜಯನಗರ	ಸ್ಥಿತಿ	:	ಕನಿಷ್ಠ
ಅಭಿಮುಖ	:	ದಕ್ಷಿಣ	ಪಂಥ	:	ಶೈವ

೧.೪. ಜೀರ್ಣೋದ್ಧಾರ

ಅಂತಾಪುರದ ಒಂದು ಶಾಸನದಲ್ಲಿ ತಿಮ್ಮರಸಯ್ಯನವರು ಅಂತಾಪುರದ ಮಲ್ಲಿಕಾರ್ಜುನ ದೇವಾಲಯದ ನಂದಾದೀಪಕ್ಕೆ ದಾನ ನೀಡಿದಂತೆ ತಿಳಿಯುತ್ತದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಎತ್ತರದ ಜಗತಿಯ ಮೇಲೆ ಗರ್ಭಗೃಹವಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ತೆರೆದ ಸಭಾಮಂಟಪವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗಮೂರ್ತಿ ಇದೆ. ಜಗತಿಯ ಮೇಲೆ ತೆರೆದ ಸಭಾಮಂಟಪವಿದ್ದು, ಅದರಲ್ಲಿ ನಂದಿ ಶಿಲ್ಪವಿದೆ. ಈ ದೇವಾಲಯದ ಗರ್ಭಗೃಹದ ಬಾಗಿಲದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಈ ದೇವಾಲಯದ ತಲವಿನ್ಯಾಸ

ಚೌಕಾಕಾರವಾಗಿದೆ. ಹಾಗೂ ಈ ದೇವಾಲಯವು ಶಿಖರ ರಹಿತವಾಗಿದೆ. ಜಗತಿಗೆ ಹೊಂದಿಕೊಂಡು ಸೋಪಾನವನ್ನು ನಿರ್ಮಿಸಲಾಗಿದೆ. ದೇವಾಲಯದ ಭಿತ್ತಿಯು ಸಾದಾ ಕೆತ್ತನೆಯಿಂದ ಕೂಡಿದೆ.

೫

ಊರು	:	ಸಂಡೂರು	ಸ್ಥಳ	:	ಗ್ರಾಮದ ಮಧ್ಯ
ಸ್ಮಾರಕ	:	ತಾರಕೇಶ್ವರ ದೇವಾಲಯ	ಕಾಲ	:	ಕ್ರಿ.ಶ. ೧೫೪೪
ಅಭಿಮುಖ	:	ದಕ್ಷಿಣ	ಶೈಲಿ	:	ವಿಜಯನಗರ
ಸ್ಥಿತಿ	:	ಉತ್ತಮ	ಪಂಥ	:	ಶೈವ

ಸಂಡೂರಿನ ಕ್ರಿ.ಶ. ೨೬.೫.೧೫೪೪ರ ಶಾಸನವು[೫] ಸದಾಶಿವ ದೇವರಾಯನ ಆಳ್ವಿಕೆಯಲ್ಲಿ ರಾಮರಾಜನು ನಾಯಿಂದರಿಗೆ ಕೆಲವು ತೆರಿಗೆಗಳನ್ನು ಬಿಟ್ಟಂತೆ ತಿಳಿಯುತ್ತದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಈ ದೇವಾಲಯವನ್ನು ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಗರ್ಭಗೃಹ, ಅಂತರಾಳವನ್ನು ಒಳಗೊಂಡಿದೆ. ವಿಶಾಲವಾದ ಪ್ರಾಕಾರವನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗ ಮೂರ್ತಿ ಇದ್ದು, ಪಂಚಲೋಹದ ಐದು ಹೆಡೆಯ ಸರ್ಪವನ್ನು ಹೊಂದಿದೆ. ಅಂತರಾಳದಲ್ಲಿ ನಂದಿ ಶಿಲ್ಪವಿದೆ. ದೇವಾಲಯದ ಭಿತ್ತಿಯು ಸಾದಾ ಕೆತ್ತನೆಯಿಂದ ಕೂಡಿದೆ. ದೇವಾಲಯದ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಮಧ್ಯ ವಿನಾಯಕನ ಶಿಲ್ಪವಿದ್ದು, ಅದರ ಅಕ್ಕಪಕ್ಕದಲ್ಲಿನ ನಾಸಿಕದಲ್ಲಿ ಮುನಿಗಳ ಶಿಲ್ಪಗಳಿವೆ. ಹಾಗೂ ನಂದಿ ಶಿಲ್ಪಗಳಿವೆ. ಈ ದೇವಾಲಯದ ತಲವಿನ್ಯಾಸವು ಚೌಕಾಕಾರವಾಗಿದ್ದು, ಮೇಲ್ ಭಾಗವು ಚೌಕಾಕಾರವಾಗಿದೆ. ದೇವಾಲಯದ ಎದುರುಗಡೆ ಗರುಡ ಗಂಭವಿದೆ. ಇದು ಪ್ರಾಕಾರದಲ್ಲಿದೆ. ಈ ಗರುಡಗಂಭಕ್ಕೆ ಒರಗಿಸಿ ಶಾಸನವನ್ನು ನಿಲ್ಲಿಸಲಾಗಿದೆ. ಇದು ನಿರಾಂಧಾರ ಪ್ರದಕ್ಷಿಣ ಪಥವನ್ನೊಳಗೊಂಡಿದೆ. ಗರ್ಭಗೃಹಕ್ಕೆ ನೇರವಾಗಿ ಚಿಕ್ಕ ಗೋಪುರವಿದೆ.

೬

ಊರು	:	ಸುಬ್ಬರಾಯನ ಹಳ್ಳಿ	ಸ್ಥಳ	:	ನವಿಲುಸ್ವಾಮಿ ಬೆಟ್ಟ
ಸ್ಮಾರಕ	:	ನವಿಲು ಸ್ವಾಮಿಯ ದೇವಾಲಯ	ಕಾಲ	:	ಕ್ರಿ.ಶ. ೧೪ನೇ ಶತಮಾನ
ಶೈಲಿ	:	ವಿಜಯನಗರ	ಸ್ಥಿತಿ	:	ಉತ್ತಮ
ಅಭಿಮುಖ	:	ಪೂರ್ವ	ಪಂಥ	:	ಶೈವ

ನಿರ್ಮಾಣ

ಇಲ್ಲಿನ ಶಾಸನದಲ್ಲಿ ಬುಕ್ಕರಾಯನು ಮಂಟಪ ಮತ್ತು ಕೊಂಡ (ಕೊಳ) ವನ್ನು ಮಾಡಿಸಿದ ಉಲ್ಲೇಖವಿದೆ.[೬]

[illegible]

ಅದೇ ದೇವಾಲಯದ ಇನ್ನೊಂದು ಶಿಲಾಶಾಸನದಲ್ಲಿ ವಿರೂಪಣ್ಣನು ಸ್ವಾಮಿ ದೇವರಿಗೆ ಏನೋ ಮಾಡಿಸಿದಂತೆ ತಿಳಿಯುತ್ತದೆ. ಹಾಗೂ ಹರಿಹರನ ಮಗ ಬುಕಂಣರಾಯರ ಉಲ್ಲೇಖವಿದೆ. ಈ ಶಾಸನವು ತ್ರುಟಿತವಾಗಿದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಇದು ಸಂಡೂರಿನ ಕುಮಾರಸ್ವಾಮಿ ದೇವಾಲಯದ ಪಶ್ಚಿಮಕ್ಕೆ ಸುಮಾರು ೩ ಕಿ.ಮೀ. ಅಂತರದಲ್ಲಿ ಇಂದಿಗೂ ಇದೆ. ಈ ದೇವಾಲಯವನ್ನು ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಗರ್ಭಗೃಹ ಮತ್ತು ಸಭಾಮಂಟಪ, ಪ್ರಾಕಾರವನ್ನೊಳಗೊಂಡಿದೆ. ಸಭಾಮಂಟಪದಲ್ಲಿ ೩೬ ಕಂಬಗಳಿದ್ದು, ಮೂರು ದ್ವಾರಗಳಿಂದ ಕೂಡಿವೆ. ಇಲ್ಲಿಯ ಕಂಬಗಳು ಚೌಕಾಕಾರವಾಗಿದ್ದು, ಸಾದಾ ಕೆತ್ತನೆಯಿಂದ ಕೂಡಿವೆ. ಈ ದೇವಾಲಯದ ತಲವಿನ್ಯಾಸವು ಚೌಕಾಕಾರವಾಗಿದ್ದು, ಮೇಲ್ಕಟ್ಟಡವು ಚೌಕಾಕಾರವಾಗಿದೆ. ಗರ್ಭಗೃಹದ ನೇರಕ್ಕೆ ವೃತ್ತಾಕಾರದ ಚಿಕ್ಕ ಗೋಪುರವಿದೆ. ಪ್ರಾಕಾರದಲ್ಲಿ ಗೋಡೆಗೆ ಒರಗಿಸಿ ಎರಡು ಶಿಲಾಶಾಸನ ನಿಲ್ಲಿಸಲಾಗಿದೆ. ಹಾಗೂ ದೇವಾಲಯದ ಎದುರುಗಡೆ ಸುಮಾರು ೩೦ ಅಡಿ ಎತ್ತರದ ದಪ್ಪನೆಯ ಕಲ್ಲಿನ ಒಂದು ಮಾನ ಸ್ತಂಭವನ್ನು ನಿಲ್ಲಿಸಲಾಗಿದೆ. ಸ್ತಂಭದ ತುದಿಯ ಮೇಲೆ ಕಲ್ಲಿನಲ್ಲಿ ಸುಂದರವಾಗಿ ಕೆತ್ತಲಾದ ನವಿಲಿನ ಒಂದು ವಿಗ್ರಹವನ್ನು ಸ್ಥಾಪಿಸಲಾಗಿದೆ. ಅದರ ಕೆಳಗೆ ಕೃಷ್ಣನ ವಿಗ್ರಹವಿದೆ. ಹಾಗೂ ದೇವಾಲಯದ ಮುಂದೆ ವಿಜಯನಗರದ ಅರಸರು ಕಟ್ಟಿಸಿದ ಒಂದು ಪುಷ್ಕರಣಿ ಇದೆ. ಮೊದಲು ಗರ್ಭಗುಡಿಯ ಒಳಗೆ ಸುಮಾರು ನಾಲ್ಕೈದು ಅಡಿ ಎತ್ತರದ ಸುಂದರವಾದ ಕಾರ್ತಿಕ ಋಷಿಯ ಪ್ರತಿಮೆಯಿತ್ತೆಂದು ಅದು ಭಿನ್ನ (ಕಳುವು) ಗೊಂಡ ಮೇಲೆ ಹೊಸ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪಿಸಿದ ಬಗ್ಗೆ ತಿಳಿದು ಬರುತ್ತದೆ. ಈ ನವಿಲು ಸ್ವಾಮಿಯ ಮೂರ್ತಿಯು ತನ್ನ ವಾಹನನಾದ ನವಿಲಿನ ಮೇಲೆ ದಂಡಾಯುಧ ಹಿಡಿದು ಕುಳಿತಿದ್ದಾನೆ. ದೇವಾಲಯದ ಪ್ರವೇಶದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು ಕೆಳಭಾಗದಲ್ಲಿ ಮದನಿಕ ವಿಗ್ರಹಗಳಿವೆ.

೭

ಊರು	:	ಸಂಡೂರು	ಸ್ಥಳ	:	ಕುಮಾರಸ್ವಾಮಿ ಬೆಟ್ಟ
ಸ್ಮಾರಕ	:	ಕುಮಾರಸ್ವಾಮಿ ದೇವಾಲಯ	ಕಾಲ	:	ಕ್ರಿ.ಶ.ಸು. ೧೧ನೆಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ	ಅಭಿಮುಖ	:	ಪೂರ್ವ
ಸ್ಥಿತಿ	:	ಉತ್ತಮ	ಸಂರಕ್ಷಣೆ	:	ಕೇಂದ್ರ ಪುರಾತತ್ವ ಇಲಾಖೆ
ಪಂಥ	:	ಶೈವ			

ನಿರ್ಮಾಣ

ಕುಮಾರಸ್ವಾಮಿ ದೇವಾಲಯದ ಕ್ರಿ.ಶ. ೧೧೭೪ರ ಕುಮಾರಸ್ವಾಮಿ ದೇವಾಲಯದ ಪ್ರವೇಶದ

[illegible]

ಎಡಹಸ್ತಿಯಲ್ಲಿರುವ ಶಾಸನದಲ್ಲಿ[೮] ಸ್ವಾಮಿದೇವರ ದೇಗುಲದ ಕೆಲಸ ಮಾಡಿದ ಕಲ್ಕುಟಿಗರಾದ ಬಿಯಳಚಟ್ಟ, ಬೆನಗಬೋವ, ಕಮ್ಮಾರನಾಯಕ ನಿರ್ಮಾಣ ಕಾರ್ಯ ಮಾಡಿದರೆಂದು ಉಲ್ಲೇಖವಿದೆ.

ಈ ದೇಗುಲದ ಕೆಲಸ ಮಾಡಿದ್ದಕ್ಕೆ ಶ್ರೀಸ್ವಾಮಿ ದೇವರ ತಪೋವನಾಧಿಪತಿಗಳಾದ ಗಧಾದರರಸರು ಕಲ್ಕುಟಿಗರಾದ ಬಿಯಳಚಟ್ಟ, ಬೆನಗಬೋವ, ಕಮ್ಮಾರನಾಯಕರಿಗೆ ಭೂದಾನವನ್ನು ನೀಡಿರುತ್ತಾರೆ. ಇದು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾಯಿತ್ತೆಂದು ಸ್ಪಷ್ಟವಾಗುತ್ತದೆ.

ಜೀರ್ಣೋದ್ಧಾರ

ಪಾರ್ವತಿ ದೇವಾಲಯದ ಮಂಟಪದಲ್ಲಿ ಇರಿಸಿರುವ ಕ್ರಿ.ಶ. ೧೨೦೬ರ ಶಾಸನದಲ್ಲಿ ಹೊಯ್ಸಳ ದೊರೆ ವೀರ ಬಲ್ಲಾಳನ ಆಜ್ಞೆಯಂತೆ ಅವನ ದಂಡನಾಯಕನಾದ ಮಹದೇವ ದಂಡನಾಯಕನು ಹಿಂದೆ ರಾಷ್ಟ್ರಕೂಟ ವಂಶದ ಕೃಷ್ಣ ರಾಜನು ಸ್ವಾಮಿದೇವರಿಗೆ ನೀಡಿದ್ದ ಕೆರೆಯಪಳ್ಳಿ (ಈಗಿನ ಕೆರ್ನಳ್ಳಿ ಗ್ರಾಮ) ಗ್ರಾಮವನ್ನು ಪುನರ್ದತ್ತಿಯಾಗಿ ನೀಡುತ್ತಾನೆ. ಈ ದತ್ತಿಯನ್ನು ಆ ಸ್ಥಳದ ವಿಷ್ಣುಕರ ಬ್ರಹ್ಮಚಾರಿ ಸ್ವೀಕರಿಸುತ್ತಾನೆ.

ಕುಮಾರಸ್ವಾಮಿ ದೇವಾಲಯದ ಜಾಗಟೆಯ ಮೇಲಿನ ಶಾಸನದಲ್ಲಿ ಕ್ರಿ.ಶ. ೧೮೫೪ರ ಕುಮಾರಸ್ವಾಮಿ ದೇವರಿಗೆ ಗುಹೇಶ್ವರ ದುರ್ಗದ ಅಭುವನಗೋತ್ರದ ಕಂಚುಗಾರ ಬಟ್ಲ ಬಸವನ ಪೌತ್ರ ಸಿಂಗಪ್ಪನು (ಗಡಿಯಾರ) ತೂಕ ಶೇ. ೫೬ ಜಾಗಟೆಯ ನೀಡಿದ ಹಾಗೂ ಸಣ್ಣ ಬಸಪ್ಪನ ಪುತ್ರ ಸಕ್ರಪ್ಪ ಮತ್ತು ಕುಮಾರಪ್ಪನವರು ಸಲಾಕಿ (ಸರಪಳಿ) ಮಾಡಿಸಿಕೊಟ್ಟಿರುತ್ತಾರೆ. ಇದರ ತೂಕ ೮೧ ಸೇರು ಈ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾಯಿತ್ತೆಂದು ಸ್ಪಷ್ಟವಾಗುತ್ತದೆ. ಅಲ್ಲದೆ ವಿಜಯನಗರ ಕಾಲದವರೆಗೂ ಇದರ ಜೀರ್ಣೋದ್ಧಾರ ಅಭಿವೃದ್ಧಿ ಕಾರ್ಯ ನಡೆಯುತ್ತ ಬಂದಿದೆ. ದೇವಾಲಯದ ಪ್ರಾಕಾರಕ್ಕೆ ತಾಗಿಕೊಂಡು ದ್ವಾರ ಮಂಟಪವಿದೆ. ದ್ವಾರ ಮಂಟಪದ ಗೋಪುರ ಇಟ್ಟಿಗೆ ಹಾಗೂ ಗಾರೆಗಳಿಂದ ಐದು ಹಂತಗಳಲ್ಲಿ ರಚನೆಗೊಂಡಿದೆ.

ನಿರ್ವಹಣೆ

ಈ ದೇವಾಲಯವು ಕೇಂದ್ರ ಪುರಾತತ್ವ ಇಲಾಖೆಯ ನಿರ್ವಹಣೆಗೆ ಒಳಪಟ್ಟಿದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಇದು ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದ ಪ್ರವೇಶದ್ವಾರವು ಹೂವಿನ ಎಸಳುಗಳು, ಮಯೂರಸಾಲು ಹಾಗೂ ಮರದಿಂದ ರಚಿಸಿದ ಗಜ, ಗಿಳಿಗಳ ಕೆತ್ತನೆಯ ಶಿಲ್ಪಗಳಿಂದ ಅಲಂಕೃತಗೊಂಡಿದೆ. ಗರ್ಭಗೃಹದಲ್ಲಿ ಆರು ಕಂಬಗಳಿವೆ. ಕಂಬಗಳಲ್ಲಿ ಚೌಕಾಕಾರ ಹಾಗೂ ವರ್ತುಲಾಕಾರದ ಭಾಗಗಳಿರುತ್ತವೆ. ಇವು ಅಂತರಾಳದ ಕಂಬಗಳಂತಿವೆ. ಅವುಗಳ ಮಧ್ಯದಲ್ಲಿ ಸುಮಾರು ನಾಲ್ಕೂವರೆ ಅಡಿ

[illegible]

ಎತ್ತರದ ಕುಮಾರಸ್ವಾಮಿಯು ಸಮಭಂಗಿಯಲ್ಲಿದೆ. ಸುತ್ತಲೂ ಪ್ರಭಾವಳಿ ಹಾಗೂ ಕಿರೀಟ, ಮುಕುಟು, ಕೊರಳಾಭರಣ, ಕರ್ಣಾಭರಣಗಳನ್ನು ಹೊಂದಿದೆ. ಈತನ ಒಂದು ಕೈಯಲ್ಲಿ ದಂಡಾಯುಧ ಇನ್ನೊಂದು ಕೈ ಅಭಯ, ಕೈಮೇಲೆ ಕ್ರೌಂಚ ಪಕ್ಷಿ ನಿಂತಿದೆ. ಇದರ ಕೆಳಗೆ ರಾಮ, ಲಕ್ಷ್ಮಣರು, ಬಲಬದಿ ಕೆಳಗೆ ಮಯೂರ ಶಿಲ್ಪಗಳನ್ನು ಕಂಡರಿಸಲಾಗಿದೆ.

ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು, ಕೆಳ ಮತ್ತು ಮೇಲೆ ಚೌಕಾಕಾರ, ಮಧ್ಯ ವೃತ್ತಾಕಾರದಲ್ಲಿದ್ದು, (ಅದರಲ್ಲಿ ಚೈತ್ಯಾಕಾರದ ಕೆತ್ತನೆಗಳಿವೆ) ಫಲಕ ಬೋಧಿಗೆಗಳನ್ನು ಹೊಂದಿವೆ. ಸಭಾಮಂಟಪದ ಗೋಡೆಗೆ ನಿಂತಿರುವ ಮಹಿಷಮರ್ಧಿನಿ ಮತ್ತು ಪಾರ್ವತಿ ಶಿಲ್ಪಗಳು ಸುಂದರ ಕೆತ್ತನೆಗಳಿಂದ ಕೂಡಿವೆ. ದೇವಾಲಯದ ಹೊರಗೋಡೆಯ ಅಧಿಷ್ಠಾನದಲ್ಲಿ ಕುಮುದ ಹಾಗೂ ಚೌಕಗಳುಳ್ಳ ಪಟ್ಟಿಕಾ ಭಾಗಗಳು ಎದ್ದು ಕಾಣುತ್ತವೆ. ದೇವಾಲಯದ ಗೋಡೆಗಳಲ್ಲಿ ಎತ್ತರವಾದ ಅರ್ಧಗಂಬಗಳು ಹಾಗೂ ದೇವಕೋಷ್ಠಗಳಿವೆ. ಅರ್ಧಗಂಬಗಳ ವೈಶಿಷ್ಟ್ಯವೆಂದರೆ ಇವುಗಳೆಲ್ಲಾ ಚೌಕಾಕಾರವಾಗಿದ್ದು, ಕಾಂಡದ ಮೇಲ್ಭಾಗದಲ್ಲಿ ಮೂರು ಮುಖದ ಮುಚ್ಚಳ, ಚಾಚು ಪೀಠ ಅದರ ಮೇಲೆ ಬೋದುಗೆ ಇದೆ. ಇಕ್ಕೆಲಗಳಲ್ಲಿ ಚಿಕ್ಕ ಚಿಕ್ಕ ಅರ್ಧಗಂಬಗಳನ್ನು ಹೊಂದಿದ ಕೋಷ್ಠಕಗಳ ಮೇಲ್ಭಾಗದ ಶಿಖರಗಳು ದೇವಾಲಯದ ತುದಿ ಮಾಳಿಗೆಯನ್ನು ಮುಟ್ಟಿರುತ್ತವೆ. ಕೈಪಿಡಿ ಗೋಡೆಯ ಮೇಲೆ ಕೂಟಗಳು, ನಂದಿ ಶಿಲ್ಪಗಳಿವೆ. ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ಕೂಟ ಶಿಖರದಲ್ಲಿ ಹಿತ್ತಾಳೆ ಕಳಸವನ್ನು ಇಡಲಾಗಿದೆ. ಕೆಂಪು ಉಸುಕಿನ ಶಿಲೆಯಲ್ಲಿ ಈ ದೇವಾಲಯ ರಚನೆಯಾಗಿದ್ದು, ಅಮೃತ ಶಿಲೆಯ ದೀಪಸ್ತಂಭವು ದೇವಾಲಯದ ಮುಂದಿದೆ. ಮುಖಮಂಟಪದ ಇಕ್ಕೆಲಗಳಲ್ಲಿರುವ ಕಂಬಗಳ ಮೇಲೆ ದ್ವಾರಪಾಲಕರ ವಿಗ್ರಹಗಳಿವೆ.

ದೇವಾಲಯದ ಅಧಿಷ್ಠಾನವು ಉಪಾನ, ಜಗತಿ, ಕಂಠ, ತ್ರಿಪಟ್ಟ ಕುಮುದ, ಪದ್ಮ ಮತ್ತು ಪಟ್ಟಿಕೆಗಳನ್ನೊಳಗೊಂಡಿದೆ. ಹೊರಗಡೆ ಹಿಂಬಣಿ - ಮುಂಬಣಿಗಳಿಂದ ಕೂಡಿದ್ದು, ಗೊಡೆಯ ಮೇಲೆ ಜೋಡಿ ಅರ್ಧಗಂಬಗಳು ಅವುಗಳ ಮೇಲೆ ಶಿಖರ, ಅದರಲ್ಲಿ ಚೈತ್ಯಾಕಾರದ ಕೆತ್ತನೆ ಇದೆ.

ಅಂತರಾಳದ ಮೇಲೆ ಒಂದೇ ಸಾಲಿನಲ್ಲಿರುವ ಐದು ಶಿಖರಗಳಲ್ಲಿ ಮಧ್ಯದ ಶಿಖರ ಉಳಿದವುಗಳಿಗಿಂತಲೂ ಎತ್ತರ ಮತ್ತು ದೊಡ್ಡ ಪ್ರಮಾಣದಲ್ಲಿದ್ದು, ವಿಜಯನಗರದ ದೇವಾಲಯಗಳ ಗೋಪುರದಂತಿದೆ. ಗರ್ಭಗೃಹದ ಮೇಲೆ ನಾಲ್ಕು ಭಾಗಗಳಲ್ಲಿ ಪದ್ಮಗಳಿಂದ (ಚೈತ್ಯಾಕಾರ ಮಾದರಿಯಲ್ಲಿ) ಕೂಡಿದ ವಿಜಯನಗರ ಮಾದರಿಯ ಶಿಖರವಿದೆ. ಬಹುಶ: ಮೇಲಿನ ಶಿಖರಗಳು ವಿಜಯನಗರ ಕಾಲದಲ್ಲಿ ನಿರ್ಮಾಣವಾದಂತೆ ಕಾಣುತ್ತವೆ.

ಒಟ್ಟಿನಲ್ಲಿ ಈ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾಯಿತ್ತೆಂದು ಸ್ಪಷ್ಟವಾಗುತ್ತದೆ. ಅಲ್ಲದೆ ವಿಜಯನಗರದ ಕಾಲದವರೆಗೂ ಇದರ ಜೀರ್ಣೋದ್ಧಾರ ಅಭಿವೃದ್ಧಿ ಕಾರ್ಯ ನಡೆಯುತ್ತ ಬಂದಿದೆ. ದೇವಾಲಯದ ಪ್ರಾಕಾರಕ್ಕೆ ತಾಗಿಕೊಂಡು ದ್ವಾರಮಂಟಪವಿದೆ. ದ್ವಾರ ಮಂಟಪದ ಗೋಪುರವು ಇಟ್ಟಿಗೆ ಹಾಗೂ ಗಾರೆಗಳಿಂದ ಐದು ಹಂತದಲ್ಲಿ ರಚನೆಗೊಂಡಿದೆ.

[illegible]

[illegible]

[illegible]

[illegible]

೮

ಊರು	:	ಸಂಡೂರು	ಸ್ಥಳ	:	ಕುಮಾರಸ್ವಾಮಿ ಬೆಟ್ಟ
ಸ್ಮಾರಕ	:	ಪಾರ್ವತಿ ದೇವಾಲಯ	ಶೈಲಿ	:	ರಾಷ್ಟ್ರಕೂಟ
ಕಾಲ	:	ಕ್ರಿ.ಶ.ಸು. ೧೧ನೆಯ ಶತಮಾನ	ಸ್ಥಿತಿ	:	ಉತ್ತಮ
ಅಭಿಮುಖ	:	ಪೂರ್ವ	ಪಂಥ	:	ಶೈವ
ಸಂರಕ್ಷಣೆ	:	ಕೇಂದ್ರ ಪುರಾತತ್ವ ಇಲಾಖೆ			

ನಿರ್ಮಾಣ

ಬಹುಶ: ಪಾರ್ವತಿ ದೇವಾಲಯವನ್ನು ಕಟ್ಟಿದ ಜಿನಾಲಯನ್‌ನ ಉಲ್ಲೇಖ ಇರಬಹುದು.[೭] ಒಟ್ಟಿನಲ್ಲಿ ಈ ದೇವಾಲಯದ ಲಕ್ಷಣಗಳಿಂದ ಮತ್ತು ದೇವಾಲಯದಲ್ಲಿ ದೊರೆತ ಶಾಸನ ಮಾಹಿತಿಗಳಂತೆ ಇದು ರಾಷ್ಟ್ರಕೂಟರ ಕಾಲವೆಂದು ದೃಡಪಡುತ್ತದೆ.

ನಿರ್ವಹಣೆ

ಈ ದೇವಾಲಯವು ಕೇಂದ್ರ ಪುರಾತತ್ವ ಇಲಾಖೆಯ ನಿರ್ವಹಣೆಯಲ್ಲಿದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಇದು ಸುಮಾರು ಮೂರು ಅಡಿ ಎತ್ತರವಾಗಿರುವ ಅಧಿಷ್ಠಾನವು ಸಾದಾ ಕೆತ್ತನೆಯಿಂದ ಕೂಡಿದೆ. ಈ ದೇವಾಲಯವು ವಿಶಾಲವಾದ ಗರ್ಭಗೃಹ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ರಾಷ್ಟ್ರಕೂಟ ಶೈಲಿಯ ಆರು ಕಂಬಗಳು, ಇವುಗಳ ಮಧ್ಯ ಪೀಠದ ಮೇಲೆ ಪಾರ್ವತಿ ಶಿಲ್ಪವಿದೆ. ಇದು ಸುಮಾರು ನಾಲ್ಕುವರೆ ಅಡಿ ಎತ್ತರವಾಗಿದ್ದು ಸಮಭಂಗಿಯಲ್ಲಿದೆ. ಇದರ ಕೈಗಳಲ್ಲಿ ಶಿವ, ಗಣೇಶ ಮತ್ತು ಫಲಗಳಿವೆ. ಇತ್ತೀಚೆಗೆ ಕಂಚಿನಿಂದ ನಿರ್ಮಿಸಿದ ಪ್ರಭಾವಳಿಯನ್ನು ಈ ಶಿಲ್ಪಕ್ಕೆ ಜೋಡಿಸಲಾಗಿದೆ. ಅಂತರಾಳದ ಪ್ರವೇಶದ್ವಾರಕ್ಕೆ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಪದ್ಮ, ಹೂವಿನ ಎಸಳುಗಳು, ಕೀರ್ತಿಮುಖಗಳಿವೆ. ದ್ವಾರದ ಎರಡೂ ಭಾಗಗಳಲ್ಲಿರುವ ದ್ವಾರಪಾಲಕರ ವಿಗ್ರಹಗಳಲ್ಲಿ ಬಲಭಾಗದ ವಿಗ್ರಹವು ಉದ್ದವಾದ ಜಟೆ, ಮೀಸೆ, ಮೊಳಕಾಲದವರೆಗೆ ವಸ್ತ್ರ ಮತ್ತು ಪಾದರಕ್ಷೆಗಳನ್ನು ಧರಿಸಿ, ಉದ್ದನೆಯ ದಂಡವನ್ನು ಎರಡೂ ಕೈಗಳಲ್ಲಿ ಹಿಡಿದು ನಿಂತಿದ್ದಾನೆ. ಎಡಭಾಗದ ವಿಗ್ರಹ, ತಲೆಯ ಮೇಲೆ ಟೋಪಿ, ಇಳಿಬಿದ್ದ ಕರ್ಣಾಭರಣ ಹಾಗೂ ಬಳೆಗಳು, ತೆಳುವಾದ ವಸ್ತ್ರವನ್ನುಟ್ಟು ಕೈಗಳಲ್ಲಿ ದಂಡ ಹಿಡಿದಿರುವನು. ಅಂತರಾಳದಲ್ಲಿ ಗೋಡೆಗೆ ಹೊಂದಿಕೊಂಡು ಎರಡು ದಪ್ಪವಾದ ಚೌಕಾಕಾರ ಕಂಬಗಳಿವೆ.

ಗರ್ಭಗೃಹದ ಪ್ರವೇಶದ್ವಾರಕ್ಕೆ ವೃತ್ತಾಕಾರದ ಅರ್ಧಗಂಬಗಳು ಎರಡೂ ಭಾಗಗಳಲ್ಲಿ ಪದ್ಮಗಳನ್ನು ಹಿಡಿದ ದ್ವಾರಪಾಲಕ (ಕುಬ್ಜ) ವಿಗ್ರಹಗಳು, ಮೇಲ್ಭಾಗ ಅಂತಸ್ತಿನಿಂದ ಕೂಡಿದ ಗೋಪುರ, ಅದರ

ಕೆಳಪಟ್ಟಿಕೆಯಲ್ಲಿ ಚಿಕ್ಕ ಚಿಕ್ಕ ಶಿಲ್ಪಗಳು, ಮಧ್ಯದಲ್ಲಿ ಚಿಕ್ಕಮೂರ್ತಿ ಹಾಗೂ ಲಲಾಟ ಬಿಂಬದಲ್ಲಿ ಗರುಡಶಿಲ್ಪವಿದೆ. ವಿಶಾಲವಾದ ಗರ್ಭಗೃಹದಲ್ಲಿ ನಾಲ್ಕು ಕಂಬಗಳು ಅಂತರಾಳದ ಕಂಬಗಳಂತಿವೆ. ಮಧ್ಯದಲ್ಲಿ ಎತ್ತರವಾದ ಪೀಠ, ಅದರ ಮೇಲೆ ಪಾರ್ವತಿ ವಿಗ್ರಹವಿದೆ.

ಸಭಾಮಂಟಪದ ಪಾರ್ಶ್ವಗಳಲ್ಲಿರುವ ದೇವಕೋಷ್ಠಗಳಲ್ಲಿ ಕೇಶವ, ಸೂರ್ಯ, ಮಾಧವ, ಯಮಧರ್ಮ ಮತ್ತು ಶಾಸನ ಶಿಲ್ಪಗಳಿವೆ. ಕೇಶವನ ಶಿಲ್ಪವು ಕಿರೀಟ, ಮುಕುಟ, ಚಕ್ರ ಕುಂಡಲ, ಕೊರಳಹಾರ, ಬಳೆಗಳು, ಯಜ್ಞೋಪವಿತ, ದೊತ್ರಧರಿಸಿ ಪದ್ಮದ ಮೇಲೆ ಸಮಭಂಗಿಯಲ್ಲಿದೆ. ನಾಲ್ಕು ಕೈಗಳಿದ್ದು, ಹಿಂದಿನ ಬಲ, ಎಡಕೈಗಳಲ್ಲಿ ಶಂಖ, ಚಕ್ರ, ಮುಂದಿನ ಬಲ, ಎಡಕೈಗಳಲ್ಲಿ ಪದ್ಮಗುಚ್ಚ, ಗದೆ ಇರುತ್ತವೆ. ಸುತ್ತಲಿನ ಫಲಕದ ಮೇಲೆ ಗರುಡ, ಚಾಮರಧಾರೆಯರ ಶಿಲ್ಪಗಳಿವೆ. ಸೂರ್ಯನ ಶಿಲ್ಪವು ಕಿರೀಟ, ಮುಕುಟ, ಕರ್ಣಕುಂಡಲ, ಕೊರಳಹಾರ, ಬಳೆಗಳು, ರತ್ನಪಟ್ಟಿ, ಕಾಲುಗಡಗ, ದೊತ್ರಧರಿಸಿ ಸಮಭಂಗಿಯಲ್ಲಿದೆ. ಎರಡು ಕೈಗಳನ್ನು ಹೊಂದಿದ್ದು, ಒಂದು ಕೈಯಲ್ಲಿ ಪದ್ಮ, ಇನ್ನೊಂದು ಅಭಯ ಮುದ್ರೆಯಲ್ಲಿದೆ. ಸುತ್ತಲಿನ ಫಲಕದ ಮೇಲೆ ಚಾಮರಧಾರೆಯರು ಮತ್ತು ಚಿಕ್ಕ ಚಿಕ್ಕ ಶಿಲ್ಪಗಳಿವೆ. ಮಾಧವನ ಶಿಲ್ಪವು ಕಿರೀಟ ಮುಕುಟ, ಕರ್ಣಕುಂಡಲ, ಕೊರಳಹಾರ, ನಾಗಬಂಧ, ಬಳೆಗಳು, ಯಜ್ಞೋಪವಿತ, ರತ್ನಪಟ್ಟಿ ಮತ್ತು ದೊತ್ರವನ್ನು ಧರಿಸಿ, ಸಮಭಂಗಿಯಲ್ಲಿದೆ. ನಾಲ್ಕು ಕೈಗಳಲ್ಲಿ ಹಿಂದಿನ ಬಲ, ಎಡ ಕೈಗಳಲ್ಲಿ ಚಕ್ರ, ಶಂಖ ಮುಂದಿನ ಬಲ ಎಡ ಕೈಗಳು ಡೋಲ ಹಸ್ತ ಕಟ್ಯಾವಲಂಬಿತ ಮುದ್ರೆಯಲ್ಲಿದೆ. ಯಮಧರ್ಮನ ಶಿಲ್ಪವು ಕೋಣದ ಮೇಲೆ ಕುಳಿತು ಕಿರೀಟ, ಮುಕುಟ, ಕರ್ಣ, ಕಂಠಾಭರಣ, ಯಜ್ಞೋಪವಿತ, ಬಳೆಗಳನ್ನು ಧರಿಸಿದ ಈ ಮೂರ್ತಿಯ ಕೈಗಳಲ್ಲಿ ದಂಡ ಪಾಶಗಳಿವೆ.

ಸಭಾಮಂಟಪದ ಪ್ರವೇಶದ್ವಾರಕ್ಕೆ ಹೊಂದಿಕೊಂಡು ಸೋಪಾನಗಳನ್ನು ರಚಿಸಲಾಗಿದೆ. ದೇವಾಲಯದ ಹೊರಗೊಡೆಯ ಅಧಿಷ್ಠಾನ ಭಾಗವು, ಉಪಾನೆ, ಜಗತಿ, ವೃತ್ತಕುಮುದ ಮತ್ತು ಪಟ್ಟಿಕೆಗಳಿಂದ ಕೂಡಿದೆ. ಗೋಡೆಯಲ್ಲಿ ಎತ್ತರದ ಅರ್ಧಗಂಬಗಳು ಮತ್ತು ದೇವಕೋಷ್ಠಗಳಿವೆ. ಈ ಕಂಬಗಳು ಚೌಕಾಕಾರವಾಗಿದ್ದು, ಕಾಂಡದ ಮೇಲ್ಭಾಗದಲ್ಲಿ ಮೂರು ಮುಖದ ಮುಚ್ಚಳ, ಚಾಚುಪೀಠ ಅದರ ಮೇಲೆ ಬೋದಿಗೆ ಇದೆ. ದೇವಾಲಯದ ಮುಖಭಾಗವು ಒಳಗೊಂಡಂತೆ ಹೊರಗೊಡೆಯ ಸುತ್ತಲೂ ಎರಡೆರಡೂ ಅರ್ಧಗಂಬಗಳ ಮಧ್ಯದಲ್ಲಿರುವ ಕೋಷ್ಠಕಗಳಲ್ಲಿ ವಿವಿಧ ಭಂಗಿಯಲ್ಲಿ ಶಿವನ ಮೂರ್ತಿಗಳಿವೆ. ಈ ಕೋಷ್ಠಕಗಳ ಮೇಲ್ಭಾಗ ಮಕರ ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದು, ಕೋಷ್ಠಕಗಳ ತುದಿ ದೇವಾಲಯದ ಶಿಖರವನ್ನು ಮುಟ್ಟಿರುತ್ತದೆ.

ಅಂತರಾಳದ ವಿಮಾನದ ಮೇಲಿನ ಭಾಗದ ಗೋಡೆಯ ಲಕ್ಷಣಗಳೇ ಇದ್ದು, ಮುಂದಿನ ಭಾಗದ ಗೂಡಿನಲ್ಲಿ ಶಿವಪಾರ್ವತಿಯ ವಿಗ್ರಹಗಳು, ಮೇಲ್ಭಾಗ ಗಜಪುಷ್ಠಾಕಾರದ ಚಪ್ಪಡಿ ಇದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯಲ್ಲಿರುವ ಅಂತಸ್ತಿನಿಂದ ಕೂಡಿದ ಶಿಖರ, ಅಮಲಕಗಳಿವೆ. ದೇವಾಲಯದ ಲಕ್ಷಣಗಳಿಂದ ಬಾದಾಮಿ ಚಾಲುಕ್ಯರ ಕಾಲದ ಉತ್ತರಾರ್ಧದಲ್ಲಿ ನಿರ್ಮಾಣವಾಗಿದೆ ಎಂದು ಗುರುತಿಸಬಹುದಾಗಿದೆ.

ಈ ದೇವಾಲಯವು ಎಲ್ಲಾ ಲಕ್ಷಣಗಳಿಂದ ಶೈವ ಸಂಪ್ರದಾಯಕ್ಕೆ ಸಂಬಂಧಿಸಿದೆ. ಆದರೆ ದೇವಾಲಯದ ಗೋಡೆಯ ಮೇಲೆ ಅಲ್ಲಲ್ಲಿ ಬಹುಶ: 'ಶ್ರೀ ಜಿನಾಲಯನ' ಎಂದು ಬರೆದಿರುವ ಆದಿ ಚಾಲುಕ್ಯರ ಕಾಲದ ಬರವಣಿಗೆಗಳಿವೆ.

ಆದರೆ ದೇವಾಲಯದಲ್ಲಿ ದೊರೆತ ಶಾಸನ ಮಾಹಿತಿಯಂತೆ ಇದು ರಾಷ್ಟ್ರಕೂಟರ ಕಾಲದ್ದೆಂದು ದೃಡಪಡುತ್ತದೆ.

ಈ ದೇವಾಲಯದ ಒಳಗೋಡೆಯ ಮೇಲೆ ಚಿಕ್ಕ ಚಿಕ್ಕ ದೇವಕೋಷ್ಠಕಗಳಿವೆ. ಮಕರ ತೋರಣಗಳನ್ನೊಂದಿವೆ. ಗರ್ಭಗೃಹದ ಬಾಗಿಲ ದ್ವಾರದ ಮೇಲ್ಭಾಗದಲ್ಲಿ ಪರಮೇಶ್ವರನ ಶಿಲ್ಪವಿದೆ. ದ್ವಾರದ ಕೆಳಭಾಗದ ಎರಡೂ ಕಡೆಗಳಲ್ಲಿ ದ್ವಾರಪಾಲಕರ ಹಾಗೂ ನಾಗಕನ್ಯೆಯರ ಶಿಲ್ಪಗಳು ಇವೆ. ಈ ದೇವಾಲಯವು ಒಳಗೆ ಭುವನೇಶ್ವರವನ್ನೊಳಗೊಂಡಿದ್ದು, ನವಿಲಿನ ಚಿತ್ರವನ್ನು ಕಂಡರಿಸಲಾಗಿದೆ.

೯

ಊರು	:	ಸಂಡೂರು	ಸ್ಥಳ	:	ಕುಮಾರಸ್ವಾಮಿ ಬೆಟ್ಟ
ಸ್ಮಾರಕ	:	ನಾಗನಾಥೇಶ್ವರ ದೇವಾಲಯ	ಕಾಲ	:	ಕ್ರಿ.ಶ.ಸು. ೧೦ನೆಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ	ಅಭಿಮುಖ	:	ಪೂರ್ವ
ಸ್ಥಿತಿ	:	ಉತ್ತಮ	ಸಂರಕ್ಷಣೆ	:	ಕೇಂದ್ರ ಪುರಾತತ್ವ ಇಲಾಖೆ
ಪಂಥ	:	ಶೈವ			

ನಿರ್ಮಾಣ

ಕ್ರಿ.ಶ. ೨೫.೪.೧೦೪೫ರ ಶಾಸನದಲ್ಲಿ ಓರ್ವೆಯ ಹಂಪಾಚಾರಿಯ ಮೊಮ್ಮಗ ಚನಯಾಚಾರಿಯ ಮಗ ಧರ್ಮಾಂಬುಧಿಯು ನವಿಲನ್ನು ಪ್ರತಿಷ್ಠೆ ಮಾಡಿದ ಉಲ್ಲೇಖವಿದೆ.

ಈ ದೇವಾಲಯವು ಗರ್ಭಗೃಹ ಹಾಗೂ ಸಭಾಮಂಟಪವನ್ನು ಹೊಂದಿದೆ. ಸಮಚತುಷ್ಕನಾಕಾರದಲ್ಲಿರುವ ಗರ್ಭಗಹವು, ಶಿವಲಿಂಗ, ವಿಷ್ಣು, ಗಣೇಶ ಹಾಗೂ ನಂದಿ ಶಿಲ್ಪಗಳನ್ನು ಒಳಗೊಂಡಿದೆ. ಸಭಾಮಂಟಪದ ಮುಂಭಾಗದಲ್ಲಿ ಇತ್ತೀಚೆಗೆ ಮುಖಮಂಟಪವನ್ನು ಜೋಡಿಸಲಾಗಿದೆ. ಈ ದೇವಾಲಯದ ಬಲಭಾಗದಲ್ಲಿ ಸುಮಾರು ಎಂಟು ಅಡಿ ಎತ್ತರವಾದ ಜಗತಿಯ ಮೇಲೆ ವಿಷ್ಣು ಶಿಲ್ಪವಿದೆ. ಅಲ್ಲಿ ಹತ್ತು ಶಿವಲಿಂಗಗಳಿವೆ. ಒಂದು ಶಿವಲಿಂಗದ ಪೀಠದಲ್ಲಿ ಶಾಸನವನ್ನು ಕೆತ್ತಲಾಗಿದೆ.

ಈ ದೇವಾಲಯವು ನಿರಾಧಾರ ಪ್ರದಕ್ಷಿಣಾ ಪಥವನ್ನೊಳಗೊಂಡಿದೆ. ಬಾಗಿಲ ದ್ವಾರದ ಮೇಲ್ಭಾಗವು ಪುಷ್ಪಗಳಿಂದ ಅಲಂಕೃತವಾಗಿದೆ. ದ್ವಾರದಲ್ಲಿ ದ್ವಾರಪಾಲಕರ ವಿಗ್ರಹಗಳಿವೆ, ಗಧೆ ಹಿಡಿದು ನಿಂತ ಈ ವಿಗ್ರಹಗಳು ಕೈಗಡಗ, ಕಾಲುಗಡಗ, ಕೊರಳಹಾರ, ಕಿರೀಟ, ತೋಳಬಂಧಿ, ಸೊಂಟಪಟ್ಟಿಯನ್ನು ಧರಿಸಿಕೊಂಡಿವೆ. ಹೊರಗೆ ನಾಗಶಿಲ್ಪಗಳು, ವಿನಾಯಕನ ಮೂರ್ತಿಗಳಿವೆ. ಈ ದೇವಾಲಯವು ಅಧಿಷ್ಠಾನ, ಭಿತ್ತಿ, ಶಿಖರ, ಸ್ತೂಫಿಗಳನ್ನೊಳಗೊಂಡಿದೆ. ದೇವಾಲಯದ ಮುಂಭಾಗದ ಶಿಖರದಲ್ಲಿ ನಂದಿ ಶಿಲ್ಪಗಳಿದ್ದು, ನಾಸಿಕಲದಲ್ಲಿ ವಿನಾಯಕನ ಮೂರ್ತಿ ಇದೆ. ಎಡಭಾಗದ ನಾಸಿಕದಲ್ಲಿ ಗೋಪಾಲಕೃಷ್ಣನ ಮೂರ್ತಿ ಇದೆ. ಹಿಂಭಾಗದ ನಾಸಿಕದಲ್ಲಿ ವಿಷ್ಣುವಿನ ವಿಗ್ರಹವಿದೆ. ಬಲಭಾಗದ ನಾಸಿಕದಲ್ಲಿ ಮುನಿಯ ವಿಗ್ರಹವಿದೆ.

೧೦

ಊರು	:	ಕುಡತಿನಿ	ಸ್ಥಳ	:	ಗ್ರಾಮದ ಒಳಗೆ
ಸ್ಮಾರಕ	:	ಕುಮಾರಸ್ವಾಮಿ ದೇವಾಲಯ	ಕಾಲ	:	ಕ್ರಿ.ಶ.ಸು. ೧೨ನೆಯ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ	ಅಭಿಮುಖ	:	ಪೂರ್ವ
ಸ್ಥಿತಿ	:	ಉತ್ತಮ	ಪಂಥ	:	ಶೈವ

ಎತ್ತರವಾದ ಜಗತಿಯ ಮೇಲೆ ನಿರ್ಮಾಣವಾದ ಈ ದೇವಾಲಯವು ತ್ರಿಕೂಟಾಚಲವಾಗಿದೆ. ಮಧ್ಯದಲ್ಲಿರುವ ಗರ್ಭಗೃಹವೇ ಕುಮಾರಸ್ವಾಮಿಯದು. ಗರ್ಭಗೃಹದಲ್ಲಿಯ ಮೂಲ ಕುಮಾರಸ್ವಾಮಿಯ ವಿಗ್ರಹ ಹಾಳಾಗಿದ್ದು, ಇತ್ತೀಚೆಗೆ ಪ್ರತಿಷ್ಠಾಪಿಸಲಾದ ಶಿವಲಿಂಗವಿದೆ.

ಈ ಗ್ರಾಮವನ್ನು ರಾಜಧಾನಿ ಕೊಟ್ಟಿತೊಣೆ, ಶ್ರೀಸ್ವಾಮಿದೇವರ ಕೊಟ್ಟಿತಣೆ, ಕೊಟ್ಟಿತೊಣೆ, ಕುಡತಿನಿ ಎಂದು ಶಾಸನಗಳಲ್ಲಿ[೧೦] ಉಲ್ಲೇಖಿಸಲಾಗಿದೆ. ಕುಡತಿನಿ ಗ್ರಾಮವು ಬಲ್ಲಕುಂದೆ ನಾಡಿನಲ್ಲಿ ಸಬಾಲ ಎಪ್ಪತ್ತರ ಮುಖ್ಯ ಸ್ಥಳವಾಗಿತ್ತು.

ಈ ಗ್ರಾಮಕ್ಕೆ ಅತಿ ಪ್ರಾಚೀನ ಕಾಲದ ಚರಿತ್ರೆಯಿದೆ. ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ ಹರಡಿದ ಹಾಳುಮಣ್ಣಿನಲ್ಲಿ ನವಶಿಲಾ ಸಂಸ್ಕೃತಿಯ ಕೈಗೊಡಲಿಗಳು, ಶಾತವಾಹನ ಹಾಗೂ ನಂತರದ ಕಾಲದ ಪಾತ್ರಾವಶೇಷಗಳು ಕಂಡುಬರುತ್ತವೆ. ರಾಷ್ಟ್ರಕೂಟರು, ಚಾಲುಕ್ಯರು ಮತ್ತು ವಿಜಯನಗರ ಅರಸರ ಅವಧಿಯಲ್ಲಿ ಪ್ರಮುಖ ಪಟ್ಟಣವಾದ ಈ ಸ್ಥಳದಲ್ಲಿ ತಪೋಧನರು, ಬ್ರಾಹ್ಮಣರು, ಕುಶಲಕರ್ಮಿಗಳು, ವ್ಯಾಪಾರಿಗಳು ಮುಂತಾದ ವರ್ಗದವರು ವಾಸವಾಗಿದ್ದರು.

[illegible]

ಕುಮಾರಸ್ವಾಮಿ ದೇವಾಲಯ (ಕುಡತಿನಿ)

ಕುಡತಿನಿ ಗ್ರಾಮದ ಮಧ್ಯದಲ್ಲಿರುವ ಕುಮಾರಸ್ವಾಮಿ ದೇವಾಲಯವು ಮೂರು ಗರ್ಭಗೃಹ, ವಿಶಾಲವಾದ ಅಂತರಾಳ, ವಿಶಾಲವಾದ ಸಭಾಮಂಟಪವನ್ನು ಹೊಂದಿದೆ.

ಒಂದೇ ಸಾಲಿನಲ್ಲಿರುವ ಮೂರು ಗರ್ಭಗೃಹಗಳಲ್ಲಿ ಬಲಭಾಗದ ಗರ್ಭಗೃಹದ ಪ್ರವೇಶದ್ವಾರವು ಪದ್ಮದ ಸಾಲು, ಹೂವಿನ ಎಸಳುಗಳು, ಅರ್ಧಗಂಬಗಳಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಮೇಲ್ಭಾಗದಲ್ಲಿ ರೇಖಾನಾಗರ ಶಿಖರಗಳು, ಇಕ್ಕೆಲಗಳಲ್ಲಿ ಮೂರರಂತೆ ದ್ವಾರಪಾಲಕರ ವಿಗ್ರಹಗಳಿವೆ. ಮಧ್ಯದ ವಿಗ್ರಹ ಜಟಾಮುಕುಟ, ಕೈಗಳಲ್ಲಿ ಡಮರು, ತ್ರಿಶೂಲ, ಗದಾ - ಅಭಯ ಮುದ್ರೆಯಲ್ಲಿದೆ. ಎಡ - ಬಲ ಭಾಗಗಳಲ್ಲಿ ಹೆಣ್ಣು ವಿಗ್ರಹಗಳಿವೆ. ದ್ವಾರಪಾಲಕರ ವಿಗ್ರಹಗಳ ಎರಡೂ ಭಾಗಗಳಲ್ಲಿ ಅರ್ಧಗಂಬಗಳು ಅವುಗಳ ಮೇಲೆ ಮಕರ ತೋರಣ ಮಧ್ಯ ಕೀರ್ತಿಮುಖವಿದೆ. ಗರ್ಭಗೃಹದಲ್ಲಿ ಇತ್ತೀಚೆಗೆ ಪ್ರತಿಷ್ಠಾಪಿಸಿದ ಗಣೇಶನ ಮೂರ್ತಿ ಇದ್ದು, ಮೂಲ ಮೂರ್ತಿ ಅಂತರಾಳದಲ್ಲಿ ಹಾಳಾದ ಸ್ಥಿತಿಯಲ್ಲಿದೆ.

ಮಧ್ಯದ ಗರ್ಭಗೃಹದ ಪ್ರವೇಶದ್ವಾರ ಬಲಭಾಗದಂತಿದ್ದು, ಈ ದ್ವಾರಕ್ಕೆ ಯಾಳಿಯ ಸಾಲು ಕೂಡಿಕೊಂಡಿದೆ. ಅವುಗಳಲ್ಲಿ ಅಲ್ಲಲ್ಲಿ ಬಾಯಿಯಲ್ಲಿ ಸರಗಳನ್ನು (ಸರ್ಪವನ್ನು?) ಹಿಡಿದ ನವಿಲುಗಳಿವೆ. ಗರ್ಭಗೃಹದಲ್ಲಿ ಈಗಿರುವ ಶಿವಲಿಂಗದ ಬದಲಾಗಿ ಮೂಲತ: ಇಲ್ಲಿ ಕುಮಾರಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿರಬಹುದು.

ಎಡಭಾಗದ ಗರ್ಭಗೃಹದ ಪ್ರವೇಶದ್ವಾರವು ಬಲಭಾಗದಂತಿದೆ. ಆದರೆ ಇಲ್ಲಿಯ ದ್ವಾರಪಾಲಕ ವಿಗ್ರಹಗಳು ಮಾತ್ರ ಭಿನ್ನವಾಗಿವೆ. ಈ ವಿಗ್ರಹಗಳು ಕಿರೀಟ ಮುಕುಟ, ಕೈಗಳಲ್ಲಿ ಶಂಕ, ಚಕ್ರ ಗದಾ - ಅಭಯ ಮುದ್ರೆಯಲ್ಲಿವೆ. ಈ ವಿಗ್ರಹಗಳು ವೈಷ್ಣವ ಸಂಪ್ರದಾಯಕ್ಕೆ ಸಂಬಂಧಿಸಿದ್ದರಿಂದ ಮೂಲತ: ಈ ಗರ್ಭಗೃಹದಲ್ಲಿರುವ ಶಿವಲಿಂಗದ ಬದಲಾಗಿ ವಿಷ್ಣು ಅಥವಾ ನಾರಾಯಣನ ಮೂರ್ತಿಯನ್ನು ಪ್ರತಿಷ್ಠಾಪಿಸಿರಬಹುದು.

ಈ ದೇವಾಲಯದ ಅಂತರಾಳವು ವಿಶಾಲವಾಗಿದ್ದು, ಪ್ರವೇಶದ್ವಾರಕ್ಕೆ ಪದ್ಮದ ಸಾಲುಗಳು, ಅರ್ಧಗಂಬಗಳು, ಕೆಳಭಾಗ ಇಳಿಬಿದ್ದ ಪದ್ಮದ ಗುಚ್ಛಗಳು ಮೇಲ್ಭಾಗ ರೇಖಾನಾಗರ ಶಿಖರಗಳು. ಲಲಾಟಬಿಂಬದಲ್ಲಿ ಗಜಲಕ್ಷ್ಮಿ, ಇಕ್ಕೆಲಗಳಲ್ಲಿ ದ್ವಾರಪಾಲಕ ವಿಗ್ರಹಗಳಿವೆ. ಈ ವಿಗ್ರಹಗಳು ಜಟಾಮುಕುಟ, ಕೈಗಳಲ್ಲಿ ಡಮರು, ತ್ರಿಶೂಲ ಗದಾ ಮತ್ತು ಅಭಯ ಮುದ್ರೆಯಲ್ಲಿದ್ದು, ತ್ರಿಭಂಗಿಯಲ್ಲಿವೆ. ಅಂತರಾಳದ ಮಧ್ಯ ಒಂದೇ ಸಾಲಿನಲ್ಲಿ ೬ ಕಂಬಗಳಿದ್ದು, ಮಧ್ಯದ ಎರಡು ಕಂಬಗಳು, ಆಕಾರದಲ್ಲಿ ಚಿಕ್ಕದಾಗಿವೆ. ಕೆಳಭಾಗದ ಪೀಠ ಅಸಮ ಚೌಕಾಕಾರ ಮೇಲೆ ವೃತ್ತಾಕಾರ ಹಾಗೂ ವೃತ್ತಾಕಾರದ ಫಲಕಗಳನ್ನು ಹೊಂದಿವೆ. ಉಳಿದ ಕಂಬಗಳು ಪೀಠ, ಕೆಳಗೆ ಮೇಲೆ ನಕ್ಷತ್ರಾಕಾರ ಮತ್ತು ಮಧ್ಯ ಚೌಕಾಕಾರದಲ್ಲಿದ್ದು, ಫಲಕ, ಬೋದಿಗೆಗಳಿಂದ

ಕೂಡಿವೆ. ಈ ಕಂಬಗಳು ಅಂತರಾಳವನ್ನು ಎರಡು ಭಾಗಗಳನ್ನಾಗಿ ವಿಭಾಗಿಸಿವೆ. ಮೊದಲನೆಯ ಭಾಗ (ಗರ್ಭಗೃಹಗಳ ಮುಂದಿನ ಭಾಗ) ೫ ಅಂಕಣಗಳು, ಎರಡನೆಯ ಭಾಗ ೭ ಅಂಕಣಗಳಲ್ಲಿದೆ.

ಈ ದೇವಾಲಯವು ವಿಶಾಲವಾದ ಸಭಾಮಂಟಪ ಹೊಂದಿದ್ದು, ೩೦ ಕಂಬಗಳು ಮತ್ತು ೩೫ ಅಂಕಣಗಳನ್ನು ಹೊಂದಿದೆ. ಸಭಾಮಂಟಪದಲ್ಲಿ (ಅಂತರಾಳದ) ಮುಂದಿನ ಸಾಲಿನಲ್ಲಿರುವ ಕಂಬಗಳು ಕೆಳ ಮತ್ತು ಮೇಲೆ ಚೌಕಾಕಾರ ಮಧ್ಯ ವೃತ್ತಾಕಾರದಲ್ಲಿದ್ದು (ವೃತ್ತಾಕಾರದ ಪಟ್ಟಿಕೆ, ಪದ್ಮದ ಸಾಲುಗಳಿವೆ) ಮೇಲ್ಭಾಗ ವೃತ್ತಾಕಾರದ ಫಲಕ ಹಾಗೂ ಚೌಕಾಕಾರದ ಬೋದಿಗೆಗಳಿಂದ ಕೂಡಿದೆ. ಮಧ್ಯದ ಮೂರು ಸಾಲುಗಳಲ್ಲಿರುವ ಕಂಬಗಳು, ಕೆಳಭಾಗ ಪೀಠ, ಕೆಳಗೆ ಮತ್ತು ಮೇಲೆ ಚೌಕಾಕಾರವಾಗಿದ್ದು, ಮಧ್ಯ ೧೬ ಪಟ್ಟಿಕೆಗಳ ವೃತ್ತಾಕಾರದಲ್ಲಿದ್ದು (ಅದರಲ್ಲಿ ಸರಪಳಿಯ ಸಾಲುಗಳಿವೆ) ವೃತ್ತಾಕಾರದ ಫಲಕ ಬೋದಿಗೆಗಳಿಂದ ಕೂಡಿವೆ. ಮುಂದಿನ ಭಾಗ ಒಂದು ಸಾಲಿನಲ್ಲಿರುವ ಕಂಬಗಳು, ಕೆಳ ಚೌಕಾಕಾರ ಮಧ್ಯ ನಕ್ಷತ್ರಾಕಾರ ಮೇಲೆ ವೃತ್ತಾಕಾರವಾಗಿವೆ. ಪ್ರವೇಶದ ಇಕ್ಕೆಲಗಳಲ್ಲಿರುವ ಕಂಬಗಳು ಆಕಾರದಲ್ಲಿ ದೊಡ್ಡದಾಗಿವೆ. ಹಾಗೂ ಭುವನೇಶ್ವರಗಳನ್ನು ಕೆತ್ತಲಾಗಿದೆ.

೪.೨ ವೈಷ್ಣವ ದೇವಾಲಯಗಳು

೧

ಊರು	: ತುಂಬರಗುದ್ದಿ	ಸ್ಥಳ	: ಗ್ರಾಮದ ಈಶಾನ್ಯಕ್ಕೆ
ಸ್ಮಾರಕ	: ಆಂಜಿನೇಯ ದೇವಾಲಯ	ಕಾಲ	: ಕ್ರಿ.ಶ.ಸು. ೧೭ನೇ ಶತಮಾನ
ಶೈಲಿ	: ವಿಜಯನಗರ	ಅಭಿಮುಖ	: ದಕ್ಷಿಣ
ಸ್ಥಿತಿ	: ಮಧ್ಯಮ	ಪಂಥ	: ವೈಷ್ಣವ

ಜೀರ್ಣೋದ್ಧಾರ

ತುಂಬರಗುದ್ದಿಯ ಶಾಸನದಲ್ಲಿ ದುರಬಿ ನರಸಪ್ಪನವರು ತುಂಬರಗುತ್ತಿಯ ಹನುಮಂತ ದೇವರ ದೀಪಾರಾಧನೆಗೆ ಮೂರು ಕಾಸನ್ನು ದಾನ ನೀಡಿದ ಉಲ್ಲೇಖವಿದೆ.[೧೧] ಈ ದೇವಾಲಯವನ್ನು ಈಗ ಜೀರ್ಣೋದ್ಧಾರಗೊಳಿಸಲಾಗಿದೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದೆ. ಈ ದೇವಾಲಯವು ಸುಮಾರು ೩ ಅಡಿ ಎತ್ತರದ ಜಗತಿಯ ಮೇಲೆ ಗರ್ಭಗೃಹ, ತೆರೆದ ಸಭಾಮಂಟಪ ಹಾಗೂ ಪ್ರಾಕಾರವನ್ನು ಹೊಂದಿರುವ ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಈ ದೇವಾಲಯದ ಭಿತ್ತಿಯು ಅಲಂಕಾರ ರಹಿತವಾಗಿದೆ.

ಸಭಾಮಂಟಪದಲ್ಲಿಯ ೬ ಕಂಬಗಳು ಸಾದಾ ಕೆತ್ತನೆಯಿಂದ ಕೂಡಿದ್ದು, ಚೌಕಾಕಾರವಾಗಿವೆ. ಈ ದೇವಾಲಯದ ಪ್ರವೇಶ ದ್ವಾರದ ಮೇಲ್ಕಟ್ಟಡದಲ್ಲಿ ನಾಸಿಕವಿದೆ. ಇದು ಶಿಖರ ರಹಿತವಾಗಿದೆ. ದೇವಾಲಯದ ಗರ್ಭಗೃಹದ ಬಾಗಿಲ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದೆ. ಪ್ರಾಕಾರಕ್ಕೆ ಹೊಂದಿಕೊಂಡು ಶಾಸನವಿದೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬುಶಿಲ್ಪವಿದೆ.

೨

ಊರು	:	ಸುಶೀಲನಗರ	ಸ್ಥಳ	:	ರಾಮಘಡ
ಸ್ಮಾರಕ	:	ರಾಮ ದೇವಾಲಯ	ಕಾಲ	:	ಕ್ರಿ.ಶ. ೧೫೨೭
ಶೈಲಿ	:	ವಿಜಯನಗರ	ಅಭಿಮುಖ	:	ಪೂರ್ವ
ಸ್ಥಿತಿ	:	ಮಧ್ಯಮ	ಪಂಥ	:	ವೈಷ್ಣವ

ನಿರ್ಮಾಣ

ರಾಮಘಡ ಶಾಸನದಲ್ಲಿ ಕ್ರಿ.ಶ. ೧೫೨೭ರಲ್ಲಿ ಶ್ರೀಕೃಷ್ಣದೇವರಾಯನ ಆಳ್ವಿಕೆಯಲ್ಲಿ ಗೋಪಾಯಿ ಮತ್ತು ಆಕೆಯ ತಮ್ಮ ರಾಮಣನು ರಾಮನಾಥನ ಗುಡಿಯನ್ನು ಕಟ್ಟಿಸಿದ ಉಲ್ಲೇಖ ಬರುತ್ತದೆ.[೧೨]

ಜೀರ್ಣೋದ್ಧಾರ

ಗೋಪಾಯಿ ಮತ್ತು ಆಕೆಯ ತಮ್ಮ ರಾಮಣನು ರಾಮನಾಥ ಗುಡಿಯನ್ನು ಕಟ್ಟಿಸಿ ಆ ಗುಡಿಯ ಜೀರ್ಣೋದ್ಧಾರಕ್ಕೆ ಗಂಟೆ, ಜಾಗಟೆ, ಹರಿವಾಣ, ಚೆಂಬು ಮೇಲೆ ಹೊನ್ನನ್ನು ಪೂಜಾ ಸಾಮಾಗ್ರಿಗಳನ್ನು ನೀಡುತ್ತಾರೆ.

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಈ ದೇವಾಲಯವು ಗರ್ಭಗೃಹ ಮತ್ತು ತೆರೆದ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗಮೂರ್ತಿ ಇದ್ದು, ಈ ಮೂರ್ತಿಯ ಹಿಂದೆ ರಾಮನ ಶಿಲ್ಪವಿದೆ. ಗರ್ಭಗೃಹದ ಬಾಗಿಲ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು, ಅದರ ಮೇಲೆ ಐದು ನಾಸಿಕಗಳಿವೆ. ಅದರ ಮಧ್ಯದ ನಾಸಿಕದಲ್ಲಿ ವಿನಾಯಕನ ಶಿಲ್ಪವಿದೆ. ನಾಲ್ಕು ನಾಸಿಕಗಳು ಖಾಲಿ ಇವೆ. ಅವು ಇತ್ತೀಚೆಗೆ ಮಾಡಿಸಿದಂತೆ ಕಾಣಿಸುತ್ತವೆ. ಸಭಾಮಂಟಪದಲ್ಲಿ ನಾಲ್ಕು ಚೌಕಾಕಾರದ ಸಾದಾ ಕೆತ್ತನೆಯ ಕಂಬಗಳಿವೆ. ದೇವಾಲಯದ ಭಿತ್ತಿಯು ಸಾದಾ ಕೆತ್ತನೆಯಿಂದ ಕೂಡಿದೆ. ದೇವಾಲಯದ ಎದುರುಗಡೆ ಗರುಡಗಂಬವಿದೆ. ಹಾಗೂ ರಾಮನ ಪಾದಗಳಿವೆ. ಈ ದೇವಾಲಯದ ಪ್ರವೇಶದ್ವಾರವು ಲಲಾಟಬಿಂಬವನ್ನು ಹೊಂದಿದ್ದು, ಮೂರು ನಾಸಿಕಗಳನ್ನೊಳಗೊಂಡಿದೆ. ಈ ನಾಸಿಕಗಳಲ್ಲಿ ಯಾವುದೇ

ಮೂರ್ತಿಗಳಿಲ್ಲ. ಈ ದೇವಾಲಯವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಿಗಳನ್ನು ಒಳಗೊಂಡಿದೆ. ಈ ಶಿಖರವು ಅರಳಿದ ಪದ್ಮಗಳಿಂದ ಕೂಡಿದೆ. ಈ ದೇವಾಲಯದ ಗೋಪುರದಲ್ಲಿ ಸಿಂಹ, ನಂದಿ, ನಾರಸಿಂಹ, ವಿಷ್ಣು ಮುಂತಾದ ವೈಷ್ಣವ ಮೂರ್ತಿ ಶಿಲ್ಪಗಳಿವೆ. ಹಾಗೂ ಸಭಾಮಂಟಪದಲ್ಲಿ ಗೋಡೆಗೆ ಒರಗಿಸಿ ಒಂದು ವೀರಗಲ್ಲನ್ನು ಇಡಲಾಗಿದೆ. ಆ ವೀರಗಲ್ಲಿನಲ್ಲಿ ಬಿಲ್ಲು, ಬಾಣವನ್ನು ಹಿಡಿದುಕೊಂಡ ವೀರನ ಶಿಲ್ಪವಿದೆ. ದೇವಾಲಯದ ಹೊರಗೋಡೆಯ ಬಲಗಡೆಗೆ ಶಾಸನ ನಿಲ್ಲಿಸಲಾಗಿದೆ.

ದೇವಾಲಯದ ಹೊರ ಆವರಣದ ಬಲಭಾಗದಲ್ಲಿ ಅನೇಕ ಶಂಖ, ಚಕ್ರಧಾರಿಯಾದ ವಿಷ್ಣುವಿನ ಮೂರ್ತಿಗಳು, ನಾಗಶಿಲ್ಪಗಳು, ಪಾದಗಳು, ವಿನಾಯಕ ಶಿಲ್ಪ ಹಾಗೂ ವೀರಗಲ್ಲುಗಳಿವೆ. ಈ ವೀರಗಲ್ಲುಗಳು ತ್ರುಟಿತವಾಗಿವೆ.

ಈ ದೇವಾಲಯದ ಹಿಂಭಾಗದಲ್ಲಿ ಒಂದು ಹೊಂಡವಿದೆ. ಅದಕ್ಕೆ ರಾಮನ ಹೊಂಡವೆಂದು ಕರೆಯುತ್ತಾರೆ. ಈಗ ಆ ಹೊಂಡದಲ್ಲಿ ನೀರು ಬತ್ತಿವೆ.

ಅಡಿಟಿಪ್ಪಣಿಗಳು

೧. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧, ಸಂಡೂರು ತಾಲೂಕು - ೧೯ - ಕ್ರಿ.ಶ. ೧೨೧೮
೨. ಅದೇ, ೨೩ - ಕ್ರಿ.ಶ. ೧೬ನೇ ಶತಮಾನ
೩. ಅದೇ, ೨೦ - ಕ್ರಿ.ಶ. ೧೫೨೩
೪. ಅದೇ, ೧೬ - ಕ್ರಿ.ಶ. ೧೬
೫. ಅದೇ, ೧೧ - ಕ್ರಿ.ಶ. ೧೫೪೪
೬. ಅದೇ, ೯ - ಕ್ರಿ.ಶ. ೧೪
೭. ಅದೇ, ೪ - ಕ್ರಿ.ಶ. ೧೦
೮. ಅದೇ, ೧ - ಕ್ರಿ.ಶ. ೧೦೭೪
೯. ಅದೇ, ೮ - ಕ್ರಿ.ಶ. ೧೦೪೫
೧೦. ಅದೇ, ಬಳ್ಳಾರಿ - ೨೦ · ಕ್ರಿ.ಶ. ೧೨ ·
೧೧. ಅದೇ, ಸಂಡೂರು ತಾಲೂಕು - ೨೪
೧೨. ಅದೇ, ೧೪ - ಕ್ರಿ.ಶ. ೧೫೨೭

✣✣

೫

ಕಾರ್ತಿಕೇಯ ತಪೋವನ

೫

ಕಾರ್ತಿಕೇಯ ತಪೋವನ

೫.೧. ಕಾರ್ತಿಕೇಯ - ಅರ್ಥ

ಸಂಡೂರು ಎಂದು ಪ್ರಸಿದ್ಧವಾದ ನಗರವು ಸ್ಕಂದಪುರಿ ಎಂದು ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ರಾಮಾಯಣ, ಮಹಾಭಾರತಗಳಲ್ಲಿಯೂ ಸ್ಕಂದನ ಉಲ್ಲೇಖವಿದೆ. ಕಾರ್ತಿಕೇಯನು ಸೂರ್ಯ ದೇವತೆಯ ಪ್ರತೀಕವೆಂದೂ, ಕುಕ್ಕುಟವು (ಕೋಳಿ) ಸೂರ್ಯಪಕ್ಷಿ ಎಂದೂ ಕರೆಯುವುದುಂಟು. ಕಾರ್ತಿಕೇಯನು ಈ ಕುಕ್ಕುಟವನ್ನು ಧ್ವಜವನ್ನಾಗಿ ಮಾಡಿಕೊಂಡಿರುವನು. ಆತನು ಸ್ವರೂಪದಲ್ಲಿ ಕೌಮಾರವೇ ಇವನ ಲಕ್ಷಣವಾದದ್ದರಿಂದ 'ಬಾಲನ್' ಕುಮಾರ ಎಂದು ಕರೆದರು.[೧]

ವೇದಗಳ ಕಾಲದಿಂದಲೂ ಹಲವು ನಾಮಾವಳಿಗಳನ್ನು ಪಡೆದು ಪ್ರಸಿದ್ಧನಾಗುತ್ತ ಬಂದಿದ್ದಾನೆ. ಈ ಪ್ರಸಿದ್ಧಿಯೇ ಮುಂದೆ ಮಹಾಕಾವ್ಯಗಳಲ್ಲೂ ವಿವಿಧ ಕಥೆಗಳ ರೂಪದಲ್ಲಿ ಮುಂದುವರೆದಿದೆ ಎಂದರೆ ತಪ್ಪಾಗಲಾರದು.[೨]

ಆಗಮಗಳಲ್ಲಿ ಕಾರ್ತಿಕೇಯನ ಲಕ್ಷಣಗಳು ಮತ್ತು ಪೂಜಾ ಕ್ರಮಗಳ ವಿವರವಿದೆ. ಅವು ಕಾಮಿಕಾಗಮ, ಪೂರ್ವ ಕಾಮಿಕಾಗಮ ಮತ್ತು ಸುಪ್ರಭೇದಾಗಮಗಳು. ಕುಮಾರತಂತ್ರ ಮತ್ತು ಶ್ರೀತತ್ವ ನಿಧಿಗಳಲ್ಲಿ ಕಾರ್ತಿಕೇಯನ ಹಲವು ನಾಮಗಳು ಈ ರೀತಿಯಾಗಿವೆ.[೩]

ಶಕ್ತಿಧರ

ಒಂದು ಮುಖ ಎರಡು ಕೈಗಳನ್ನು ಹೊಂದಿದ್ದು, ಬಲಗೈಯಲ್ಲಿ ಶಕ್ತಿ ಎಡಗೈಯಲ್ಲಿ ವಜ್ರವಿರುತ್ತದೆ. ಶ್ರೀತತ್ವನಿಧಿಯಲ್ಲಿ ಈತನಿಗೆ ಜ್ಞಾನಶಕ್ತಿ ಎಂದು ಉಲ್ಲೇಖವಿದ್ದು, ಒಂದು

ಮುಖ, ನಾಲ್ಕು ಕೈಗಳು, ಜಟಾಮುಕುಟವಿರುತ್ತದೆ. ಕೈಗಳಲ್ಲಿ ಅಭಯಮುದ್ರೆ, ಕುಕ್ಕುಟಧ್ವಜ, ಶಕ್ತಿ, ವಜ್ರಾಯುಧಗಳಿರುತ್ತವೆ.

ಸ್ಕಂದ

ತನ್ನ ಬಾಹುಬಲದಿಂದ ಜಗತ್ತನ್ನು ವಶಪಡಿಸಿಕೊಂಡದ್ದರಿಂದ ಸ್ಕಂದನೆಂದು, ಒಂದು ಮುಖ ಎರಡು ಕೈಗಳು ಮತ್ತು ಕಮಲ ಬಣ್ಣವಿರುತ್ತದೆ. ಕೌಪಿನ ಧರಿಸಿದ್ದು, ಬಲಗೈಯಲ್ಲಿ ದಂಡ, ಎಡಗೈಯು ಕಟ್ಯಾವಲಂಬಿತ ಮುದ್ರೆಯಲ್ಲಿರುತ್ತದೆ. ಶ್ರೀತತ್ವನಿಧಿಯಲ್ಲಿ ವಾಲಾಯುಧ ಸುಬ್ರಹ್ಮಣ್ಯನೆಂದು ಕರೆಯಲಾಗಿದೆ. ಇದರಲ್ಲಿ ಸ್ಕಂದನು ಒಂದು ಮುಖ, ನಾಲ್ಕು ಕೈಗಳು, ಪದ್ಮಾಸನದಲ್ಲಿ ಕಮಲದ ಮೇಲೆ ಕುಳಿತಿರುವನು. ಆತನ ತಲೆಯ ಹಿಂದೆ ಪ್ರಭಾಮಂಡಲ, ಕರಂಡ ಮುಕುಟವಿರುವುದು, ನಾಲ್ಕು ಕೈಗಳಲ್ಲಿ ವರದ, ಕುಕ್ಕುಟ, ಅಭಯ, ವಜ್ರಾಯುಧಗಳಿರುತ್ತವೆ.

ಸೇನಾಪತಿ

ಈತನು ಸೂರ್ಯನ ಪ್ರಭಾವದಿಂದ ಉಂಟಾದವನೆಂದೂ, ಆರು ಮುಖಗಳು, ಹನ್ನೆರಡು ಕೈಗಳನ್ನು ಹೊಂದಿದ್ದು, ಎಡತೊಡೆಯ ಮೇಲೆ ದೇವಿ ಕುಳಿತುಕೊಂಡಿರುತ್ತಾಳೆ. ಎಡಗೈ ಅವಳನ್ನು ಆಲಂಗಿಸಿದ್ದು, ಬಲಗೈಯಲ್ಲಿ ಪದ್ಮವಿರುತ್ತದೆ. ಉಳಿದ ಕೈಗಳಲ್ಲಿ ಶೂಲ, ಖೇಟಕ, ವಜ್ರ, ಧನುಷ್ಯ, ಗದಾ, ಘಂಟಾ, ಕುಕ್ಕುಟ ಆಯುಧಗಳು ಮತ್ತು ಅಭಯ ಮುದ್ರೆಯಲ್ಲಿರುತ್ತದೆ. ಶ್ರೀತತ್ವ ನಿಧಿಯಲ್ಲಿ ದೇವಸೇನಾಧಿಪತಿ ಎಂದು ಉಲ್ಲೇಖವಾಗಿದ್ದು, ಒಂದು ಮುಖ ನಾಲ್ಕು ಕೈಗಳು, ಕರಿಯಬಣ್ಣದಲ್ಲಿರುತ್ತಾನೆ. ಮುಂದಿನ ಕೈಗಳು ಅಭಯ, ವರದ ಹಿಂದಿನ ಕೈಗಳಲ್ಲಿ ಶಂಖ, ಚಕ್ರಗಳಿರುತ್ತವೆ.

ಸುಬ್ರಹ್ಮಣ್ಯ

ಬ್ರಾಹ್ಮಣರ ರಕ್ಷಣೆ ಮಾಡುವುದರಿಂದ ಸುಬ್ರಹ್ಮಣ್ಯನೆಂದೂ ಹೆಸರು ಇದೆ. ಸುಬ್ರಹ್ಮಣ್ಯನು ಕುಂಕುಮ ಬಣ್ಣದವನಾಗಿದ್ದು, ಕೇಯೂರ ಹಾರ ಮುಂತಾದ ಆಭರಣಗಳನ್ನು ಮತ್ತು ಬಿಳಿಬಟ್ಟೆ ಧರಿಸಿರುತ್ತಾನೆ. ಬಲ ಕೈ ಅಭಯ ಮುದ್ರೆಯಲ್ಲಿ, ಉಳಿದವುಗಳಲ್ಲಿ ಶಕ್ತಿ, ಕುಕ್ಕುಟ ಮತ್ತು ಪದ್ಮ ಹಿಡಿದಿರುತ್ತಾನೆ. ಕೆಲವು ಸಲ ಅಭಯ, ಕಟ್ಯಾವಲಂಬಿತ ಮುದ್ರೆಯಲ್ಲಿರುವ ಎರಡೇ ಕೈಗಳನ್ನು ಹೊಂದಿರುತ್ತಾನೆ.

ಗಜವಾಹನ

ಈ ಒಂದು ಮುಖ ನಾಲ್ಕು ಕೈಗಳನ್ನು ಹೊಂದಿದ್ದು, ಮುಂದಿನ ಕೈಗಳು ಅಭಯ ವರದ ಹಿಂದಿನ ಕೈಗಳಲ್ಲಿ ಶಕ್ತಿ - ಕುಕ್ಕುಟವಿರುತ್ತದೆ.

ಶರವನಭವ

ಆರು ಮುಖಗಳು ಹನ್ನೆರಡು ಕೈಗಳು, ಮುಂದಿನ ಬಲ - ಎಡ ಕೈಗಳು ಅಭಯ - ವರದ ಮುದ್ರೆಯಲ್ಲಿರುತ್ತವೆ. ಉಳಿದ ಕೈಗಳಲ್ಲಿ ಶಕ್ತಿ, ಘಂಟಾ, ಧ್ವಜ, ಪದ್ಮ, ಕುಕ್ಕುಟ, ಪಾಶ, ದಂಡ, ಟಂಕ, ಬಾಣ, ಧನುಷ್ಯಾಯುಧಗಳಿರುವವು.

ಷಣ್ಮುಖ

ಪಂಚಮುಖ ಪರಮೇಶ್ವರ ಏಕಮುಖ ಪಾರ್ವತಿಯರಿಂದ ಜನಸಿರುವುದರಿಂದ ಇವನಿಗೆ ಷಣ್ಮುಖನೆಂದು ಹೆಸರು ಬಂದಿರುವುದು. ಆರು ಮುಖಗಳು ಹನ್ನೆರಡು ಕೈಗಳನ್ನು ಹೊಂದಿರುತ್ತಾನೆ. ಕುಂಕುಮ ಬಣ್ಣದವನಾಗಿದ್ದು, ನವಿಲಿನ ಮೇಲೆ ಕುಳಿತಿರುತ್ತಾನೆ. ಮುಂದಿನ ಬಲ - ಎಡಕೈಗಳು ಅಭಯ - ವರದ ಮುದ್ರೆಯಲ್ಲಿ, ಉಳಿದ ಕೈಗಳಲ್ಲಿ ಶಕ್ತಿ, ಬಾಣ, ಖಡ್ಗ, ಧ್ವಜ, ಗದಾ, ಧನಷ್ಯ, ವಜ್ರ, ಪದ್ಮ, ಕಟಕ ಹಸ್ತದಲ್ಲಿ ಇರುತ್ತವೆ. ಶ್ರೀತತ್ವನಿಧಿಯ ಉಲ್ಲೇಖದಂತೆ, ಈತನು ಶಂಖ, ಚಕ್ರ, ಕುಕ್ಕುಟ, ಪಾಶ, ಹಲಾಯುಧಗಳನ್ನು ಹಿಡಿದು, ಅಜಯ - ವಿಜಯ ಎಂಬ ಇಬ್ಬರು ದೇವಿಯರೊಡನೆ ನಿಂತಿರುವನು.

ತಾರಕಾರಿ

ಈತನು ಕುಂಕುಮ ಬಣ್ಣದಂತೆ ಹೊಳೆಯುತ್ತಿದ್ದು, ಹನ್ನೆರಡು ಕೈಗಳನ್ನು ಹೊಂದಿರುತ್ತಾನೆ. ಅವುಗಳಲ್ಲಿ ಅಂಕುಶ, ಧ್ವಜ, ಖಡ್ಗ, ಪಾಶ, ಚಕ್ರ, ಮುಸಲ, ಶಕ್ತಿ, ವಜ್ರ, ಖೇಟಕ ಆಯುಧಗಳನ್ನು ಹಿಡಿದು, ಒಂದು ಕಟಕಹಸ್ತ ಎರಡು ಅಭಯ - ವರದ ಮುದ್ರೆಯಲ್ಲಿರುತ್ತವೆ. ಶ್ರೀತತ್ವನಿಧಿಯ ಉಲ್ಲೇಖದಂತೆ, ಒಂದು ಮುಖ, ಮೂರು ಕಣ್ಣುಗಳು, ನಾಲ್ಕು ಕೈಗಳನ್ನು ಹೊಂದಿದ ಇವನು ಆನೆಯ ಮೇಲೆ ಕುಳಿತಿರುವನು. ಬಲಗೈಗಳಲ್ಲಿ ಖಡ್ಗ - ಶಕ್ತಿ ಎಡಗೈಗಳಲ್ಲಿ ಒಂದು ವರದ ಮುದ್ರೆ ಮತ್ತೊಂದು ಕೈಯಲ್ಲಿ ಖೇಟಕ ಅಥವಾ ಅಕ್ಷಮಾಲಾ ಇರುತ್ತದೆ.

ಕ್ರೌಂಚಬೆಟ್ಟಾ

ಆರು ಮುಖಗಳು, ಎಂಟು ಕೈಗಳನ್ನು ಹೊಂದಿರುತ್ತಾನೆ. ಮುಂದಿನ ಎಡ - ಬಲ ಕೈಗಳು ಅಭಯ - ವರದ ಮುದ್ರೆಯಲ್ಲಿ, ಉಳಿದವುಗಳಲ್ಲಿ ಖಡ್ಗ, ಶಕ್ತಿ, ಬಾಣ, ವಜ್ರ, ಧನಷ್ಯ, ಖೇಟಕಗಳಿರುತ್ತವೆ. ಶ್ರೀತತ್ವನಿಧಿಯ ಉಲ್ಲೇಖದಂತೆ, ಒಂದು ಮುಖ, ಮೂರು ಕಣ್ಣುಗಳು, ನಾಲ್ಕು ಕೈಗಳನ್ನು ಹೊಂದಿದ್ದು, ಮುಂದಿನ ಬಲ - ಎಡ ಕೈಗಳು ವರದ - ಅಭಯ ಹಿಂದಿನ ಬಲ - ಎಡ ಕೈಗಳಲ್ಲಿ ಬಾಣ - ಧನಷ್ಯಗಳಿರುತ್ತವೆ.

ಸೇನಾನಿ

ಆರು ಮುಖಗಳು, ಹನ್ನೆರಡು ಕೈಗಳು, ಅವುಗಳಲ್ಲಿ ಎರಡು ಕೈಗಳು ವರದ - ಅಭಯ ಮುದ್ರೆಗಳಲ್ಲಿ, ಉಳಿದ ಕೈಗಳಲ್ಲಿ ಖಡ್ಗ, ಚಕ್ರ, ಅಂಕುಶ, ಶಕ್ತಿ, ಶೂಲ, ಪದ್ಮ, ದಂಡ, ಗದಾಯುಧಗಳಿರುವವು.

ಬ್ರಹ್ಮಶಾಸ್ತಾ

ಒಂದು ಮುಖ, ನಾಲ್ಕು ಕೈಗಳು, ಮೈ ಬಣ್ಣವು ಕೆಂಪು ಅಥವಾ ಕಮಲದಂತಿದ್ದು, ಮುಂದಿನ ಬಲ - ಎಡ ಕೈಗಳು ವರದ - ಅಭಯ, ಹಿಂದಿನ ಬಲ - ಎಡ ಕೈಗಳಲ್ಲಿ ಅಕ್ಷಮಾಲಾ ಕಮಂಡಲ ಇರುತ್ತದೆ.

ಬಾಲಸ್ವಾಮಿ

ಈತನನ್ನು ಸೋಮಸ್ಕಂದನೆಂದೂ ಕರೆಯುತ್ತಾರೆ. ಬಾಲ್ಯಾವಸ್ಥೆಯಲ್ಲಿದ್ದ ಕಾರ್ತಿಕೇಯನು ತಂದೆ - ತಾಯಿಗಳಾದ ಪಾರ್ವತಿ - ಪರಮೇಶ್ವರರ ಮಧ್ಯ ನಿಂತುಕೊಂಡಿರುವನು. ಎಂಟು ಕೈಗಳನ್ನು ಹೊಂದಿದ ಇವನು, ಅವುಗಳಲ್ಲಿ ಪದ್ಮಗಳನ್ನು ಹಿಡಿದುಕೊಂಡಿರುತ್ತಾನೆ. ಕೆಲವು ಸಲ ಕೆಂಪು ಬಣ್ಣದವನಾಗಿದ್ದು, ಬಲಗೈಯಲ್ಲಿ ಪದ್ಮ, ಎಡಗೈಯು ಕಟ್ಯಾವಲಂಬಿತ ಮುದ್ರೆಯಲ್ಲಿರುತ್ತದೆ. ಶ್ರೀತತ್ವನಿಧಿಯ ಉಲ್ಲೇಖದಂತೆ ಕಪ್ಪುಬಣ್ಣ, ಒಂದು ಮುಖ, ನಾಲ್ಕು ಕೈಗಳನ್ನು ಹೊಂದಿರುತ್ತಾನೆ. ಅವುಗಳಲ್ಲಿ ಎರಡು ಅಭಯ - ವರದ, ಇನ್ನೆರಡು ಕೈಗಳಲ್ಲಿ ಶಕ್ತಿ - ವಜ್ರಾಯುಧಗಳಿರುತ್ತವೆ.

ವಲ್ಲಿ ಕಲ್ಯಾಣ ಸುಂದರ

ಈತನಲ್ಲಿಯ ವಿಶೇಷತೆ ವಲ್ಲಿಯನ್ನು ಲಗ್ನವಾಗಿರುವುದು. ಒಂದು ಮುಖ ನಾಲ್ಕು ಕೈಗಳು, ಮುಂದಿನ ಕೈಗಳು ಅಭಯ - ಕಟ್ಯಾವಲಂಬಿತ ಮುದ್ರೆಯಲ್ಲಿ, ಹಿಂದಿನ ಕೈಗಳಲ್ಲಿ ಅಕ್ಷಮಾಲಾ - ಕಮಂಡಲಗಳಿರುತ್ತವೆ. ಶ್ರೀತತ್ವನಿಧಿಯ ಪ್ರಕಾರ, ಈ ಮೂರ್ತಿಯನ್ನು ಅಗ್ನಿ ಜಾತಾಸುಬ್ರಹ್ಮಣ್ಯ, ಸೌರಭೇಯ, ಗಂಗೆಯ, ಗುಹಾ, ಬ್ರಹ್ಮಚಾರಿ, ದೇಶಿಕಾ ಎಂದು ಹೆಸರಿಸಲಾಗಿದೆ.

ಅಗ್ನಿ ಜಾತಾ ಸುಬ್ರಹ್ಮಣ್ಯ

ಎರಡು ಮುಖಗಳು, ಎಂಟು ಕೈಗಳು, ದೇಹವು ಬಿಳಿಯ ಬಣ್ಣ, ಕಂಠ ಕಪ್ಪು ಬಣ್ಣಗಳಲ್ಲಿರುತ್ತವೆ. ಬಲಗೈಗಳಲ್ಲಿ ಶ್ರುವ, ಅಕ್ಷಮಾಲಾ, ಖಡ್ಗ, ಇನ್ನೊಂದು ಸ್ವಸ್ತಿಕಾಕಾರದಲ್ಲಿರುತ್ತವೆ. ಎಡಗೈಗಳಲ್ಲಿ ವಜ್ರ, ಕುಕ್ಕುಟ, ಖೇಟಕ, ಅಜೇಯ ಪಾತ್ರೆಗಳಿರುತ್ತವೆ.

ಸೌರಭೆಯ ಸುಬ್ರಹ್ಮಣ್ಯ

ನಾಲ್ಕು ಮುಖಗಳು, ಎಂಟು ಕೈಗಳು, ಕಮಲಾಸನದಲ್ಲಿ ಕುಳಿತುಕೊಂಡಿದ್ದು, ಮುಂದಿನ ಎರಡೂ ಕೈಗಳು ಅಭಯ - ವರದ ಮುದ್ರೆಗಳಲ್ಲಿ, ಉಳಿದವುಗಳಲ್ಲಿ ಬಾಣ, ಕಮಲ, ಶಕ್ತಿ, ಶೂಲ, ಧನಷ್ಯ, ವಜ್ರಗಳಿರುತ್ತವೆ.

ಗಂಗೆಯ ಸುಬ್ರಹ್ಮಣ್ಯ

ಒಂದು ಮುಖ, ಮೂರು ಕಣ್ಣುಗಳು, ನಾಲ್ಕು ಕೈಗಳು, ಕರಂಡ ಮುಕುಟ ಧರಿಸಿ ಮಕರ (ಮೀನಿನ ಜಾತಿಯ) ದ ಮೇಲೆ ನಿಂತಿರುವವನು. ಕೈಗಳಲ್ಲಿ ಕುಕ್ಕುಟ ಧ್ವಜ, ನೀಲೋತ್ಪಲ ಬಣ್ಣದ ಹೂವು ಅಥವಾ ಪರಶು, ಪೂರ್ಣಕುಂಭ, ಅರಣಿ, ಕುಕ್ಕುಟ (ಬಂಗಾರ ಬಣ್ಣದ) ಗಳಿರುತ್ತವೆ.

ಗುಹಾ ಸುಬ್ರಹ್ಮಣ್ಯ

ಒಂದು ಮುಖ, ಮೂರು ಕಣ್ಣುಗಳು, ನಾಲ್ಕು ಕೈಗಳು ಮತ್ತು ಕಿರೀಟ, ಮುಕುಟ, ಮುಂದಿನ ಕೈಗಳು ಅಭಯ, ವರದ, ಹಿಂದಿನ ಕೈಗಳಲ್ಲಿ ವಜ್ರ, ಶೂಲಗಳಿರುತ್ತವೆ. ಕಪ್ಪು ಮೈಬಣ್ಣ, ಬಿಳಿವಸ್ತ್ರ ಧರಿಸಿರುತ್ತಾನೆ. ಈತನ ಹೆಂಡತಿಯೂ ಕೂಡಾ ಹತ್ತಿರ ನಿಂತು ಕೊಂಡಿರುತ್ತಾಳೆ.

ಬ್ರಹ್ಮಚಾರಿ ಸುಬ್ರಹ್ಮಣ್ಯ

ಒಂದು ಮುಖ, ಎರಡು ಕೈಗಳು, ಪದ್ಮದ ಮೇಲೆ ನಿಂತಿರುವವನು. ಕೆಂಪು ಮೈಬಣ್ಣ ಯಜ್ಞೋಪವಿತ, ಮೌಂಜಿ ಮತ್ತು ಕೌಪಿನ ಧರಿಸಿರುತ್ತಾನೆ. ಬಲಗಾಲು ಪದ್ಮದ ಮೇಲೆ, ಎಡಕಾಲು ಕೆಳಗಿರುವುದು. ಬಲಗೈಯಲ್ಲಿ ದಂಡ, ಎಡಗೈಯಲ್ಲಿ ವಜ್ರಗಳಿರುತ್ತವೆ.

ದೇಶಿಕ ಸುಬ್ರಹ್ಮಣ್ಯ

ಒಂದು ಮುಖ, ಆರು ಕೈಗಳು, ಕರಂಡ ಮುಕುಟ ಧರಿಸಿ ನವಿಲಿನ ಮೇಲೆ ಕುಳಿತಿರುವವನು. ಎರಡು ಕೈಗಳಲ್ಲಿ ಒಂದು ಶಕ್ತಿ ಇನ್ನೊಂದರಲ್ಲಿ ಅಕ್ಷಮಾಲಾ ಹಾಗೂ ಉಳಿದ ಮೂರು ಕೈಗಳು ವರದ, ಅಭಯ, ಚಿನ್ ಮುದ್ರೆಯಲ್ಲಿರುತ್ತವೆ. ಈತನು ಶಿವನ ಮಗನಾಗಿದ್ದರಿಂದ ಗುರೂಪದೇಶ ಮಾಡುತ್ತಿರುತ್ತಾನೆ.

ಶಿಷ್ಯಭಾವ ಮೂರ್ತಿ

ಮಾನಸಾರದ ಪ್ರಕಾರ, ಶಿಷ್ಯಭಾವ ಮೂರ್ತಿ, ಶಿವನು ಆತನ ಮುಂದೆ ಕುಳಿತಿರುವವನು. ಈತನು

ಪದ್ಮಾಸನದಲ್ಲಿ ಕುಳಿತಿದ್ದು, ಒಂದು ಕೈ ತುಟಿಯ ಮೇಲೆ ಮತ್ತೊಂದು ಎದೆಯ ಮೇಲೆ ಬಾಣಮುದ್ರೆಯಲ್ಲಿರುವುದು. ಉಳಿದೆರಡು ಕೈಗಳಲ್ಲಿ ಟಂಕ, ಮೃಗ ಹಿಡಿದಿರುತ್ತಾನೆ. ಪಾರ್ವತಿಯೂ ಕೂಡಾ ಈತನ ಹತ್ತಿರ ನಿಂತುಕೊಂಡಿರುತ್ತಾಳೆ.

೫.೨ ಕಾರ್ತಿಕೇಯ - ಹುಟ್ಟು

ಕಾರ್ತಿಕೇಯನ ಹುಟ್ಟಿನ ಬಗ್ಗೆ ವೇದ, ಪುರಾಣ, ರಾಮಾಯಣ, ಮಹಾಭಾರತಗಳಲ್ಲಿ ಉಲ್ಲೇಖವಿದೆ.

ಸ್ಕಂದ ಪುರಾಣದ ಪ್ರಕಾರ

"ಪುರಾಣಂ ಸರ್ವಶಾಸ್ತ್ರಾಣಂ ಪ್ರಥಮಂ ಬ್ರಹ್ಮಣಾ ಸ್ಮೃತಮ್ |
ಅನಂತರಂ ಚ ವಕ್ತ್ರೇಭ್ಯೋ ವೇದಾಸ್ತತ್ರ ವಿನಿರ್ಗತಾಃ ||

ಎಂಬ ಈ ಶ್ಲೋಕವನ್ನು ನೋಡಿದಾಗ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಪುರಾಣಗಳಿಗೆ ಎಷ್ಟೊಂದು ಮಹತ್ವವಿದೆ ಎಂಬುದು ಸ್ಪಷ್ಟವಾಗುತ್ತದೆ. ಸ್ಕಂದ ಚರಿತ್ರೆಯ ದೃಷ್ಟಿಯಿಂದ ಮಹತ್ವವಾದವುಗಳೆನಿಸಿದ ವಾಯು, ಮತ್ಸ್ಯ, ಬ್ರಹ್ಮ, ಸ್ಕಂದ ಪುರಾಣಗಳಲ್ಲಿ ಬರುವ ಸ್ಕಂದ ವೃತ್ತಾಂತವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ.

ವಾಯುಪುರಾಣವು ಅತ್ಯಂತ ಪ್ರಾಚೀನ ಪುರಾಣಗಳಲ್ಲೊಂದಾಗಿದೆ. ಇದರ ೭೨ನೆಯ ಸರ್ಗದಲ್ಲಿ ಸ್ಕಂದನ ಹುಟ್ಟು, ಸಾಹಸ ಇವುಗಳ ವರ್ಣನೆ ಇದೆ. ವಾಯು ಪುರಾಣೋಕ್ತ ಸ್ಕಂದ ವೃತ್ತಾಂತದ ಸಾರಾಂಶ ಹೀಗಿದೆ.

ಪೂರ್ವಕಾಲದಲ್ಲಿ ಶಂಕರ - ಶಂಕರಿಯರು ಎಷ್ಟೋ ಸಹಸ್ರ ವರ್ಷಗಳವರೆಗೆ ರತಿ - ಕ್ರೀಡೆಗಳಲ್ಲಿ ಮಗ್ನರಾಗಿದ್ದರು. ಪುತ್ರ ಮಾತ್ರ ಜನಿಸಲಿಲ್ಲ. ಇಂದ್ರನು ಕುಯುಕ್ತಿಯುಳ್ಳವನಾಗಿ ಶಿವ - ಶಿವೆಯರ ರತಿಕ್ರೀಡೆಗೆ ಆತಂಕವನ್ನೊಡ್ಡಲು ಅಗ್ನಿಗೆ ಹೇಳಿದನು. ಅದರಂತೆ ಅಗ್ನಿಯು ಕೃತಕಾರ್ಯನಾಗಲು, ಶಿವೆಯ ಗರ್ಭವನ್ನು ಸೇರಬೇಕಾಗಿದ್ದ ಶಂಕರನ ರೇತಸ್ಸು ನೆಲದ ಪಾಲಾಯಿತು. ಇದರಿಂದ ಅತೀವ ಕ್ರುದ್ಧಳಾದ ಶಂಕರಿಯು ಆ ಶಿವತೇಜಸ್ಸನ್ನು ಪಾನ ಮಾಡಲು ಅಗ್ನಿಗೆ ಆಜ್ಞಾಪಿಸಿದಳು. ಶಿವೆಯ ಆಜ್ಞೆಯಂತೆ ಶಿವನ ರೇತಸ್ಸನ್ನು ಕುಡಿದ ಅಗ್ನಿ ಅದನ್ನು ಗರ್ಭದಲ್ಲಿ ಎಷ್ಟೋ ವರ್ಷಗಳವರೆಗೆ ಹೊತ್ತು ಕೊನೆಗೆ ಗಂಗೆಯಲ್ಲಿ ವಿಸರ್ಜಿಸಿದನು. ಅವಳೂ ಶಿವ ವೀರ್ಯವನ್ನು ಧಾರಣೆಮಾಡಲು ಅಸಮರ್ಥಳಾಗಿ ಅದನ್ನು ಶರವಣದಲ್ಲಿ ಸ್ಥಾಪಿಸಿದಳು. ಆ ಶರವಣದಲ್ಲಿಯ ಶಿವ ತೇಜಸ್ಸಿನಿಂದಲೇ ಕಾರ್ತಿಕೇಯನ ಜನ್ಮವಾಯಿತು. ಶಿಶುವು ಶರವಣಲ್ಲಿ ಜನ್ಮ ತಳೆದಿದ್ದರಿಂದ "ಶರವಣಭವ" ಎಂಬ ನಾಮಧೇಯ ಸ್ಕಂದನಿಗೆ ಉಂಟಾಯಿತು; ಹಾಗೂ ಕೃತ್ತಿಕೇಯರಿಂದ ಜೋಪಾನ ಮಾಡಲ್ಪಟ್ಟಿದ್ದರಿಂದ ಕಾರ್ತಿಕೇಯನೆಂಬ ಹೆಸರೂ ಬಂದಿತು. ಇದೇ ಪುರಾಣದ ಬೇರೆ ಬೇರೆ ಎಡೆಗಳಲ್ಲಿ ಸ್ಕಂದನಿಗೆ ಅಗ್ನಿಸುತ ಉಮಾಸುತ, ಪಶುಪತಿಸ್ವಾಹಾರಸುತ, ಜಾಹ್ನವೀಸುತ ಮೊದಲಾದ ನಾಮಧೇಯಗಳು ಕೊಡಲ್ಪಟ್ಟಿವೆ.

ಮತ್ಸ್ಯಪುರಾಣದ ೧೫೮ - ೧೬೦ನೇ ಸರ್ಗಗಳ ಪ್ರಕಾರ ಸ್ಕಂದ ಜನ್ಮದ ಉಲ್ಲೇಖ : ದೇವತೆಗಳೆಲ್ಲರ ಪ್ರೇರಣೆಯಿಂದ ಅಗ್ನಿಯು ಶಿವ - ಪಾರ್ವತಿಯರ ವಿಹಾರೋದ್ಯಾನಕ್ಕೆ ಬಂದು ಅವರೀರ್ವರೂ ಬಿಗಿಯಾದ ಅಪ್ಪುಗೆಯಲ್ಲಿರುವದನ್ನು ಕಂಡನು. ಶಿವನೂ ಕೂಡ ಅಗ್ನಿಯ ಆಕಸ್ಮಿಕ ಆಗಮನವನ್ನು ಕಂಡು ಚಕಿತನಾದರೂ ಮರುಕ್ಷಣದಲ್ಲಿ ಕ್ರುದ್ಧನಾಗಿ ದೇವತೆಗಳೆಲ್ಲರಿಗೆ ತಾನು ವಿಸರ್ಜಿಸಿದ ತೇಜಸ್ಸನ್ನು ಪಾನಮಾಡಲು ಆಜ್ಞಾಪಿಸಿದನು. ಅಗ್ನಿಗೆ ಪ್ರೇರಣೆ ಮಾಡಿದ ದೇವತೆಗಳೂ ಕಡ್ಡಾಯವಾಗಿ ಶಿವತೇಜವನ್ನು ಕುಡಿಯಲೇಬೇಕಾಯಿತು. ಕೆಲವು ಕಾಲಾನಂತರ ಶಿವವೀರ್ಯ ದೇವತೆಗಳ ಮೈಯಿಂದ ಹೊರಹೊಮ್ಮಿತು. ಅದರಿಂದಲೇ ಒಂದು ಸುಂದರವಾದ ಸರಸಿ ನಿರ್ಮಿತವಾಯಿತು. ಕಮಲಗಳಿಂದಲೂ ಪಕ್ಷಿಗಳ ಕೂಜನದಿಂದಲೂ ಸರೋವರ ಬಹು ಸುಂದರವಾಗಿ ಪರಿಣಮಿಸಿತು. ಒಂದು ದಿನ ಪಾರ್ವತಿಯು ಆ ಸರೋವರಕ್ಕೆ ಸ್ನಾನಕ್ಕೆಂದು ಬಂದಳು. ಸರಸಿಯಲ್ಲಿ ಮನಸಾರೆ ಮಿಂದು ತನ್ನ ಮುಡಿಗೆ ಸುಂದರವಾದ ಕಮಲವೊಂದನ್ನು ಮುಡಿದುಕೊಂಡಳು. ಅಷ್ಟರಲ್ಲಿ ಕೃತ್ತಿಕೆಯರು ಸರೋವರಕ್ಕೆ ಬಂದು ಕೊಡಗಳಲ್ಲಿ ನೀರನ್ನು ತುಂಬಿಕೊಂಡು ಹೋಗುತ್ತಿರಲು ಪಾರ್ವತಿಯು ಅವರು ಹೊತ್ತು ತಂದ ನೀರನ್ನು ಕುಡಿಯಲು ಬಯಸಿದಳು. ಆಗ ಕೃತಿಕೆಯರು "ತಾಯಿ, ನಿನಗೆ ನೀರನ್ನು ಕುಡಿಯಲು ಕೊಡುತ್ತೇವೆ, ನೀನು ನಿನ್ನ ಗರ್ಭದಲ್ಲಿ ಉದಿಸುವ ಮಗನಿಗೆ ನಮ್ಮ ಹೆಸರನ್ನಿಡಬೇಕು. ಮತ್ತು ಆತನು ನಮ್ಮ ಮಗನೆಂದೂ ಪ್ರಸಿದ್ಧನಾಗಬೇಕು ಎಂಬ ನಮ್ಮ ಕರಾರುಗಳಿಗೆ ನೀನು ಒಪ್ಪಬೇಕು" ಎಂದರು. ಪಾರ್ವತಿಯು ಅವರ ನಿಬಂಧನೆಗಳಿಗೆ ಒಪ್ಪಿದಳು. ಕೃತ್ತಿಕೆಯರಿತ್ತ ನೀರನ್ನು ಕುಡಿದು ಗಿರಿಜೆ ಗರ್ಭಿಣಿಯಾದಳು. ಅನತಿಕಾಲದಲ್ಲಿಯೇ ಅದ್ಭುತವಾದ ಶಿಶುವೊಂದು ಪಾರ್ವತಿಯ ಬಲ ಪಾರ್ಶ್ವದಿಂದ ಹೊರಬಂದಿತು. ಆ ಶಿಶುವಿನ ದೇಹದಿಂದ ಚಿಮ್ಮಿದ ಪ್ರಕಾಶ ಕಿರಣಗಳು ಮೂಲೋಕವನ್ನು ಬೆಳಗಿದವು. ಆ ಶಿಶು ಉದಯಭಾನುವಿನಂತೆ ಕಂಗೊಳಿಸಿತು. ಆತನೇ ಕಾರ್ತಿಕೇಯ.

ಬ್ರಹ್ಮಪುರಾಣದ ೧೨೮ನೆಯ ಸರ್ಗದಲ್ಲಿಯೂ ಕೂಡ ಸ್ಕಂದ ಜನ್ಮದ ಸಾಂಪ್ರದಾಯಿಕ ವೃತ್ತಾಂತವೇ ಬಂದಿವೆ. ದೇವತೆಗಳು ಶಿವನ ನಂದನೋದ್ಯಾನವನ್ನು ಪ್ರವೇಶಿಸಲು ಅಗ್ನಿಯನ್ನು ಪ್ರಾರ್ಥಿಸಿಕೊಂಡಾಗ ಅಗ್ನಿಯು ಅದಕ್ಕೆ ಒಪ್ಪದೆ :

"ನ ಗಂತವ್ಯಂ ತತ್ರದೇಶೆ ದಂಪತಯೋಃ ಸ್ಥಿತಯೋರಹ
ಸಾಮಾನ್ಯ ಮಾತ್ರಾತು ನ್ಯಾಯಃ ಕಿಂ ಪುನಃ ಶೂಲ ಪಾಣಿನೇ"||

ಎಂದು ಉತ್ತರಿಸುತ್ತಾನೆ. ಆದರೆ ತಾರಕಾಸುರನಿಂದ ಅತ್ಯಂತ ಬಾಧೆಗೊಳಗಾದ ದೇವತೆಗಳಾರೂ ಆ ಸಮಯದಲ್ಲಿ ಇಂಥ ಯಾವ ತರ್ಕವನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಬಳಿಕ ನಿರುಪಾಯನಾದ ಅಗ್ನಿಯು ಮನಸ್ಸಿಲ್ಲದ ಮನಸ್ಸಿನಿಂದ ಶಿವನಿದ್ದ ತಾಣವನ್ನು ಪ್ರವೇಶಿಸಿದ. ಮುಂದಿನ ಕಥೆ ವಾಯು ಪುರಾಣದ ಕಥೆಯಂತೆಯೇ ಮುಂದುವರಿಯುತ್ತದೆ.

ಬೃಹತ್ ಪುರಾಣವೆನಿಸಿದ ಸ್ಕಂದ ಪುರಾಣದಲ್ಲಿ ಐದು ಸಂದರ್ಭಗಳಲ್ಲಿ ಕಾರ್ತಿಕೇಯ ಜನ್ಮವೃತ್ತಾಂತವು ಬಂದಿದೆ. ಆ ಸಂದರ್ಭಗಳ ವಿವರ ಹೀಗಿದೆ -

೧. ಮಹೇಶ್ವರ ಖಂಡದಲ್ಲಿಯ ಕೇದಾರ ಖಂಡದ ೨೭ ಸರ್ಗಗಳು

೨. ಅದೇ ಮಹೇಶ್ವರ ಖಂಡದ ಕೌಮಾರಿಕಾ ಖಂಡದ ೨೯ ಸರ್ಗಗಳು

೩. ಅವಂತಿ ಕ್ಷೇತ್ರ ಮಹಾತ್ಮ್ಯೆಯ ೩೪ ಸರ್ಗಗಳು

೪. ನಾಗರ ಖಂಡದ ೨೪೬ ಸರ್ಗ ಇವುಗಳು ಸ್ಕಂದ ಜನ್ಮ ಹಾಗೂ ಸಾಹಸ ಕೃತ್ಯಗಳ ವೃತ್ತಾಂತಕ್ಕೆ ಮೀಸಲಾಗಿವೆ. ಇವಲ್ಲದೆ ಸ್ಕಂದನಿಗೆ ಸಂಬಂಧಪಟ್ಟ ಅನೇಕ ವಿಷಯಗಳೂ ಈ ಪುರಾಣದಲ್ಲಿ ಅಲ್ಲಲ್ಲಿ ವಿಸ್ತೃತವಾಗಿ ವರ್ಣಿತವಾಗಿವೆ. ಅದಕ್ಕಾಗಿಯೇ ಈ ಪುರಾಣಕ್ಕೆ 'ಸ್ಕಂದ ಪುರಾಣ'ವೆಂದು ಹೆಸರು ಬಂದಿದೆ.

ಮೇಲೆ ಕಾಣಿಸಿದ ಸ್ಕಂದಪುರಾಣದ ಪ್ರಥಮ ವೃತ್ತಾಂತವು ವಾಯು ಪುರಾಣದಲ್ಲಿ ಬರುವ ವೃತ್ತಾಂತದಿಂದ ಅಷ್ಟೊಂದು ಭಿನ್ನವಾಗಿಲ್ಲ. ಆದರೂ ಇಲ್ಲಿ ಅಗ್ನಿಯೊಡನೆ ಶಿವವೀರ್ಯವನ್ನು ಪಾನಮಾಡಿದ ದೇವತೆಗಳು ಶಿವತೇಜಸ್ಸಿನಿಂದ ಪೀಡಿತರಾಗಿ ಕೈಲಾಸಕ್ಕೆ ತೆರಳಿ ಶಿವನ ಅನುಜ್ಞೆಯಂತೆ ಅದನ್ನು ದಮನಮಾಡಿಕೊಂಡು ಸುಖಿಗಳಾಗುತ್ತಾರೆ. ಆದರೆ ಅಗ್ನಿಗೆ ಆ ಭಾಗ್ಯವಿರುವುದಿಲ್ಲ. ಗರ್ಭಸ್ಥ ಶಿವತೇಜದ ಪರಿಣಾಮವಾಗಿ ದಹಿಸುತ್ತಿರುವ ದೇಹವನ್ನು ಶೀತಲಗೊಳಿಸಲು ಅಗ್ನಿಯು ಸರೋವರವೊಂದಕ್ಕೆ ತೆರಳುತ್ತಾನೆ. ಅರುಂಧತಿಯೊಬ್ಬಳನ್ನುಳಿದು ಆರು ಜನ ಋಷಿ ಪತ್ನಿಯರು ಅಗ್ನಿಯನ್ನು ಕಂಡು ತಮಗುಂಟಾದ ಚಳಿಯನ್ನು ಹೋಗಲಾಡಿಸಿಕೊಳ್ಳಲು, ಅಗ್ನಿಯನ್ನು ಸಮೀಪಿಸುತ್ತಾರೆ. ಅಗ್ನಿಯ ಸಾನಿಧ್ಯದಿಂದ ಗರ್ಭವತಿಯರಾದ ಆರು ಜನ ಋಷಿ ಪತ್ನಿಯರು ಕೂಡಲೇ ಹಿಮಗಿರಿಗೆ ತೆರಳಿ ತಮ್ಮ ಗರ್ಭಸ್ಥ ಶಿವವೀರ್ಯವನ್ನು ಇಳುಹಿ ಬರುತ್ತಾರೆ. ಹಿಂದಿನಿಂದ ಇದನ್ನರಿತ ಋಷಿಗಳು ತಮ್ಮ ಪತ್ನಿಯರಿಗೆ ನಕ್ಷತ್ರಗಳಾಗಿರೆಂದು ಶಾಪವನ್ನು ಕೊಡುತ್ತಾರೆ. ಶಿವನ ಆ ತೇಜಸ್ಸು ಹೇಗೊ ಗಂಗೆಯಲ್ಲಿ ಉರುಳಿ ಶರವಣದಲ್ಲಿ ಸ್ಥಾಪಿತವಾಗಿ ಕಾರ್ತಿಕೇಯನು ಜನಿಸಿದನು ಎಂಬುದಾಗಿ ಕೊನೆಕೊನೆಯಲ್ಲಿ ರಂಜನೀಯವಾಗುವಂತೆ ವಿಭಿನ್ನವಾಗಿದೆ.

ಎರಡನೆಯ ಕಥೆ ಬಹುಮಟ್ಟಿಗೆ ಮೊದಲನೆಯ ಸಂದರ್ಭದ ಕಥೆಯಂತೆ ಇದ್ದರೂ ತುಂಬ ಗೊಂದಲಮಯವಾಗಿದೆ. ಮೂರನೆಯ ಕಥೆ ಮತ್ಸ್ಯ ಪುರಾಣದ ವೃತ್ತಾಂತದಿಂದ ಪ್ರಚೋದಿತವಾಗಿದೆ. ನಾಲ್ಕನೆಯ ಸಂದರ್ಭದಲ್ಲಿ ಬರುವ ವೃತ್ತಾಂತದಲ್ಲಿ ಅಗ್ನಿಯ ಬದಲು ವಾಯುವು ಬವಣೆಗೆ ಗುರಿಯಾಗಿದ್ದಾನೆ. ಐದನೆಯ ವೃತ್ತಾಂತದಲ್ಲಿ ಹೇಳಲು ಹೊಸದೇನೂ ಇಲ್ಲ.

ತಮಿಳಿನ 'ಕಂದಪುರಾಣ' ಸಂಸ್ಕೃತದ 'ಸ್ಕಂದ ಪುರಾಣ'ದ ಮೂಲವೆಂದು, (ಅದು ಈಗ ಉಪಲಬ್ಧವಿಲ್ಲ) ಈ ಪುರಾಣದ ಶಂಕರ ಸಂಹಿತೆಯಲ್ಲಿ ಸ್ಕಂದನ ಕಥೆ ಬರುತ್ತದೆ.[೫] ಶಿವನ ಮುಖಗಳಿಂದ ಹೊರಹೊಮ್ಮಿದ

[illegible]

ಆರು ಕಳೆಗಳನ್ನು ಅಗ್ನಿ, ವಾಯು ಒಯ್ದು ಶರವಣ ಸರೋವರದಲ್ಲಿ ಇರಿಸಿದರಂತೆ, ಇಲ್ಲಿ ಆರು ಜನ ಕೃತ್ತಿಕೆಯರು ಅದನ್ನು ಬೆಳೆಸಿದರು. ಇದು ಕಾರ್ತಿಕೇಯನ ಮೊದಲ ರೂಪ. ಪಾರ್ವತಿ ಶರವಣ ಸರೋವರಕ್ಕೆ ಬಂದು ಆರೂ ಕಳೆಗಳನ್ನು ಅಪ್ಪಿಕೊಂಡಳು. ಆರು ಸೇರಿ ಒಂದಾಯಿತು. ಈ ಆರು ಕಳೆಯಿಂದ ಜನಿಸಿದವನೇ ಸ್ಕಂದ. ಆತನಿಗೆ ಹಾಲನ್ನುಣಿಸಿದ ಪಾರ್ವತಿ ಹಾಗೂ ಪರಮೇಶ್ವರರು ತಮ್ಮ ಮಧ್ಯ ನಿಲ್ಲಿಸಿಕೊಂಡರು ಅವನೇ ಸೋಮಸ್ಕಂದನಾದ. ಪಾರ್ವತೀಯ ಸುಪುರದಿಂದ ಹೊರಬಂದ ಒಂಭತ್ತು ವೀರರು ಆತನ ಸೇವಕರಾದರು. ದೇಶಿಕ, ಕಶ್ಯಪ ಮತ್ತು ಮಾಯೆಯರ ಮಕ್ಕಳಾದ, ಶೂರಪದ್ಮ, ಸಿಂಹಾ ಮುಖ, ತಾರಕ ಎಂಬ ಮೂವರು ಅಸುರರು ಲೋಕ ಕಂಟಕರಾದರು. ಆರು ದಿನದ ಶಿಶುವಾದ ಕಾರ್ತಿಕೇಯನು ಅವರೊಂದಿಗೆ ಹೋರಾಡಲು ಹೊರಟನು. ತಾರಕಾಸುರನು ಕಾರ್ತಿಕೇಯನೊಂದಿಗೆ ಹೋರಾಡಲಾಗದೆ ಕ್ರೌಂಚ ಪರ್ವತದಲ್ಲಿ ಅಡಗಿ ಕುಳಿತನು. ವಜ್ರಾಯುಧದಿಂದ ಕ್ರೌಂಚ ಪರ್ವತವನ್ನು ಸೀಳಿ ತಾರಕನನ್ನು ಸಂಹರಿಸಿದನು. ಇದರಿಂದ ಅವನು ಕ್ರೌಂಚವಿಧಾರಣ ಎಂಬ ಹೆಸರು ಪಡೆದನು. ತಮ್ಮನನ್ನು ಕೊಂದದ್ದರಿಂದ ಸೂರಪದ್ಮನು ಕುಮಾರನ ಮೇಲೆ ಏರಿಹೋಗಲು ಕೊನೆಗೆ ಸೋತು ಸಮುದ್ರ ದಡದಲ್ಲಿ ಮಾವಿನ ಮರದ ರೂಪವನ್ನು ತಳೆದು ಅಡಗಿಕೊಂಡನು. ಕಾರ್ತಿಕೇಯನು ವೇಲಾಯುಧದಿಂದ ಈ ಮಾವಿನ ಮರವನ್ನು ಉರುಳಿಸಿದಾಗ ಅಸುರನ ಶರೀರ ಇಬ್ಭಾಗವಾಯಿತು. ಒಂದು ಭಾಗ ನವಿಲಿನಂತೆ ಮತ್ತೊಂದು ಭಾಗ ಕೋಳಿಯಂತೆ ಕಾಣಿಸಿಕೊಂಡವು. ಕುಮಾರನು ನವಿಲನ್ನು ತನ್ನ ವಾಹನವನ್ನಾಗಿಯೂ, ಕೋಳಿಯನ್ನು ತನ್ನ ಧ್ವಜಚಿನ್ಹೆಯಾಗಿಯೂ ಮಾಡಿಕೊಂಡನು. ಕ್ರೌಂಚನನ್ನು ಕೊಂದದ್ದು ತಿರುತ್ತಣಿಯಲ್ಲಿ ಸೂರಪದ್ಮನನ್ನು ಕೊಂದದ್ದು ತಿರುಚೆಂದೂರಿನಲ್ಲಿ ಇದಕ್ಕೆ ಜಯಂತಿಪುರವೆಂದು ಹೆಸರು.

ಅಥರ್ವಣ ವೇದದಲ್ಲಿ ಸ್ಕಂದ ಯಾಗದ ಪ್ರಸ್ತಾಪ ಬರುತ್ತದೆ. ಅಗ್ನಿಭೂ: ಆದ ಕುಮಾರನ ಪರಿಚಯ ಇಲ್ಲಿ ಕಾಣುತ್ತದೆ. "ಕೆಲವರು ಅಗ್ನಿಯ ಮಗನೆಂದು, ಇನ್ನೂ ಕೆಲವರು ಕೃತ್ತಿಕೆಯರ ಮಗನೆಂದು ಮತ್ತೆ ಕೆಲವರು ಇಂದ್ರನ ಸಂಬಂಧಿಯೆಂದು, ಕೆಲವರು ಶಿವನ ಮಗನೆಂದು ಹೇಳುತ್ತಾರೆ. ಛಾಂದೋಗ್ಯೋಪನಿಷತ್ತಿನಲ್ಲಿ ನಾರದನಿಗೆ ಬ್ರಹ್ಮ ವಿದ್ಯೆಯನ್ನು ಉಪದೇಶಿಸಿದ ಸನತ್ಕುಮಾರನನ್ನು ಸ್ಕಂದನೆಂದು ಕರೆದಿದ್ದಾರೆ. ಮಹಾಭಾರತದಲ್ಲಿ ತನ್ನ ಶಕ್ತ್ಯಾಯುಧದಿಂದ ಕ್ರೌಂಚ ಪರ್ವತವನ್ನು ಸೀಳಿದ ಸ್ಕಂದನ ಉಲ್ಲೇಖ ವಿಸ್ತಾರವಾಗಿ ಬರುತ್ತದೆ. ಇಲ್ಲಿ ಕಾರ್ತಿಕೇಯನು ಸೆಣಸುವುದು ಮಹಿಷನೊಂದಿಗೆ ಭಗವದ್ಗೀತೆಯಲ್ಲಿ 'ಸೇನಾನೀನಾರ್ಮಹಂ ಸ್ಕಂದ' ಎಂದು ಉಲ್ಲೇಖ ಇದೆ. ಮುಖ್ಯವಾಗಿ ಸ್ಕಂದ ಅಗ್ನಿದೇವತೆ. ಅಗ್ನಿಯು ರುದ್ರನೊಂದಿಗೆ ಬೆರೆತು, ಸ್ವಾಹಾ ಉಮಾಳೊಂದಿಗೆ ಬೆರೆತು, ರುದ್ರನ ಮಡದಿ ಉಮಾ ಎಂಬ ಕಲ್ಪನೆ ಬೇರೂರಿದಾಗ ಅವರಿಬ್ಬರ ಮಗನೇ ಸ್ಕಂದನಾಗುತ್ತಾನೆ.

ರಾಮಾಯಣದ ಬಾಲಕಾಂಡದಲ್ಲಿ ಕಾರ್ತಿಕೇಯನ ಉಲ್ಲೇಖವಿದೆ.[೬] ಶಿವ, ಉಮಾಳನ್ನು ಮದುವೆಯಾದ ನಂತರ ಅವಳಲ್ಲಿ ಅನುರಕ್ತನಾದ. ಸಾವಿರ ವರ್ಷ ಕಳೆದರೂ ಯಾವುದೇ ದೇವತೆಗಳ ಸೃಷ್ಟಿಯಾಗಿರಲಿಲ್ಲ. ಈ

ವೇಳೆಯಲ್ಲಿ ಮಹಾದೇವನಿಗೆ ಅದ್ವಿತೀಯ ಶಕ್ತಿಯನ್ನು ಹೊಂದಿದ ಸಂತಾನವಾಗುವ ವಿಷಯ ದೇವತೆಗಳಿಗೆ ಗೊತ್ತಾಗಿ, ಆತನನ್ನು ಕುರಿತು ಪ್ರಾರ್ಥಿಸಿದಾಗ ಶಿವನು ಅದನ್ನು ಸ್ವೀಕರಿಸುತ್ತಾನೆ. ಆದರೆ ತನ್ನಿಂದ ಈಗಾಗಲೇ ಹೊರ ಹೋದ ವೀರ್ಯ ಏನಾಯಿತೆಂಬುದು ತಿಳಿದಿರಲಿಲ್ಲ. ಇದಕ್ಕೆ ದೇವತೆಗಳು ನಿಮ್ಮಿಂದ ಹೋದ ವೀರ್ಯವನ್ನು ಪೃಥ್ವಿ, ಅಗ್ನಿ ಮತ್ತು ವಾಯು ಸ್ವೀಕರಿಸಿದ್ದಾರೆಂದು ಹೇಳುತ್ತಾರೆ. ಇದರಲ್ಲಿ ಅಗ್ನಿಯ ಪ್ರವೇಶದಿಂದಾಗಿ ಬಿಳಿ ಪರ್ವತ ಉಂಟಾಗುತ್ತದೆ. ಅಲ್ಲಿಯೇ ಕಾರ್ತಿಕೇಯನು ಹುಟ್ಟುತ್ತಾನೆ. ಇದರಿಂದ ತೃಪ್ತರಾದ ದೇವತೆಗಳು ಶಿವನನ್ನು ಕುರಿತು ಪ್ರಾರ್ಥಿಸುತ್ತಾರೆ. ಇದನ್ನು ತಿಳಿದು ಕೋಪಗೊಂಡ ಉಮಾ ತಾಯಿಯಾಗುವ ಅವಕಾಶ ತಪ್ಪಿಸಿದ್ದರಿಂದ ಎಲ್ಲ ದೇವತೆಗಳ ಹೆಂಡತಿಯರು ಬಂಜೆಯರಾಗಲೆಂದು ಶಾಪ ಕೊಡುತ್ತಾಳೆ.

ಮತ್ತೊಂದು ಕಥೆಯ ಪ್ರಕಾರ : ಎಲ್ಲ ದೇವತೆಗಳ ಒಡೆಯನಾದ ಶಿವ ಉಗ್ರ ತಪಸ್ಸನ್ನಾಚರಿಸುತ್ತಿರುತ್ತಾನೆ. ದೇವತೆಗಳು ಬ್ರಹ್ಮನಲ್ಲಿಗೆ ಹೋಗಿ ಶಿವನು ತಪಸ್ಸಿಗೆ ಕುಳಿತುಕೊಂಡಿರುವುದರಿಂದ ತಮಗೆ ಮತ್ತೊಬ್ಬ ಒಡೆಯನನ್ನು ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತಾರೆ. ಇದಕ್ಕೆ ಬ್ರಹ್ಮನು, ಉಮಾಳ ಶಾಪದಿಂದಾಗಿ ಯಾವ ದೇವತೆಗಳಿಗೂ ಸಂತಾನವಾಗುವಂತಿಲ್ಲ. ಆದರೆ ಅಗ್ನಿ ಗಂಗಾ ಇವರ ಸಂಪರ್ಕದಿಂದ ಒಂದು ಮಗುವನ್ನು ಪಡೆದುಕೊಳ್ಳಲು ಸಾಧ್ಯವಿದೆ. ಆತನೆ ದೇವಸೇನಾಪತಿಯಾಗುವನೆಂದು ಹೇಳಿದನು. ಬ್ರಹ್ಮನ ಸಲಹೆಯಂತೆ ಎಲ್ಲ ದೇವತೆಗಳು ಕೈಲಾಸ ಪರ್ವತಕ್ಕೆ ಬಂದು ತಮ್ಮ ಕಾರ್ಯಸಿದ್ಧಿಗಾಗಿ ಅಗ್ನಿಯಲ್ಲಿ ಕೇಳಿಕೊಳ್ಳುತ್ತಾರೆ. ಅಗ್ನಿ, ಗಂಗಾಳೊಂದಿಗೆ ಕೂಡಿಕೊಂಡದ್ದರಿಂದ ಕಾರ್ತಿಕೇಯನು ಹುಟ್ಟುತ್ತಾನೆ.

ಮಹಾಭಾರತದ ವನಪರ್ವದ ಉಲ್ಲೇಖದಂತೆ : ದಾನವರು ಇಂದ್ರನ ಸೈನ್ಯವನ್ನು ಸೋಲಿಸುತ್ತಾರೆ. ಇಂದ್ರನು ಚಿಂತಾಗ್ರಸ್ಥನಾಗಿ ಮರುಳುತ್ತಿರುವಾಗ ತನ್ನ ರಕ್ಷಣೆಗಾಗಿ ಮೊರೆಯಿಡುತ್ತಿರುವ ಹೆಂಗಸಿನ ಧ್ವನಿ ಕೇಳುತ್ತದೆ. ಅವಳು ದಾನವ ಕೇಶಿನ್‌ನಿಂದ ಬಂದಿತಳಾಗಿರುತ್ತಾಳೆ. ಅದನ್ನು ಕಂಡ ಇಂದ್ರ ಅವಳನ್ನು ಬಿಡುವಂತೆ ಕೇಳುತ್ತಾನೆ. ಇದನ್ನು ಅಲಕ್ಷಿಸಿದ ಕೇಶಿನ್ ಸೋತು ಪಲಾಯನ ಮಾಡುತ್ತಾನೆ. ಅವಳನ್ನು ದೇವಸೇನಾ (ದೇವತೆಗಳ ಸೈನ್ಯ) ಅವಳ ಸಹೋದರಿಯನ್ನು ದೈತ್ಯಸೇನಾ (ದಾನವರ ಸೈನ್ಯ) ಎಂದು ಕರೆಯುತ್ತಿದ್ದು, ಅವರಿಬ್ಬರೂ ಪ್ರಜಾಪತಿಯ ಮಕ್ಕಳೆಂದು ಅವಳಿಂದ ಇಂದ್ರನಿಗೆ ತಿಳಿಯುತ್ತದೆ. ನನ್ನ ಸಹೋದರಿ ದಾನವ ಕೇಶಿನ್‌ನನ್ನು ಇಷ್ಟಪಡುತ್ತಾಳೆ. ಆದರೆ ನಾನು ಇಷ್ಟಪಡುವುದಿಲ್ಲ. ಆದ್ದರಿಂದ ನನ್ನನ್ನು ರಕ್ಷಿಸುವ ಮತ್ತು ದೇವತೆಗಳ ಎಲ್ಲಾ ಶತ್ರುಗಳನ್ನು ಸದೆ ಬಡಿಯುವ ಗಂಡನನ್ನು ದಯಪಾಲಿಸಬೇಕೆಂದು ಇಂದ್ರನಲ್ಲಿ ಬೇಡಿಕೊಳ್ಳುತ್ತಾಳೆ. ಇಂದ್ರನು ಅವಳನ್ನು ಬ್ರಹ್ಮನಲ್ಲಿಗೆ ಕರೆದುಕೊಂಡು ಹೋಗಿ ಈ ವಿಷಯವನ್ನು ತಿಳಿಸುತ್ತಾನೆ. ಬ್ರಹ್ಮನು ಅವಳಿಗೆ ಪರಾಕ್ರಮವನ್ನು ಹೊಂದಿದ ಗಂಡನನ್ನು ಕೊಡುವುದಾಗಿ ವಚನ ಕೊಡುತ್ತಾನೆ ಮತ್ತು ಸದ್ಯದಲ್ಲೆ ಹುಟ್ಟುವವನು ನಿನ್ನ ಗಂಡನಾಗುವನೆಂದು ಈ ಕೆಳಗಿನಂತೆ ಹೇಳುತ್ತಾನೆ ;

ವಸಿಷ್ಠ ಮತ್ತು ಇತರ ಋಷಿಗಳು ಯಜ್ಞ ಕೈಗೊಳ್ಳುತ್ತಾರೆ. ಅಗ್ನಿ ಸೂರ್ಯನಿಂದ ಕೆಳಗಿಳಿದು ಯಜ್ಞ ಪ್ರವೇಶಿಸಿ ಋಷಿಗಳು ಸಲ್ಲಿಸಿದ ಕಾಣಿಕೆಗಳನ್ನು ಎಲ್ಲ ದೇವತೆಗಳಿಗೂ ತಲುಪಿಸುತ್ತಿರುತ್ತಾನೆ. ಅಗ್ನಿಗೆ ಋಷಿಗಳ ಪತ್ನಿಯರ ಮೇಲೆ ಮೋಹ ಉಂಟಾಗುತ್ತದೆ. ಅವರ ಮನ ಸೆಳೆಯಲು ವಿಫಲನಾದ ಕಾರಣ ಕಾಡಿನಲ್ಲಿ ಪ್ರವೇಶ ಮಾಡುತ್ತಾನೆ. ಅಗ್ನಿಯನ್ನು ಪ್ರೀತಿಸುತ್ತಿದ್ದ ದಕ್ಷನ ಮಗಳಾದ ಸ್ವಾಹಾಗೆ ಈ ವಿಷಯ ತಿಳಿದು ಅವಳು ಋಷಿಗಳ ಪತ್ನಿಯರ ರೂಪಧರಿಸಿ ಆರು ಬಾರಿ ಅಗ್ನಿಯೊಂದಿಗೆ ಕೂಡುತ್ತಾಳೆ. ವಸಿಷ್ಠನ ಹೆಂಡತಿ ಆರುಂಧತಿ ಪರಮ ಪತಿವ್ರತೆಯಾಗಿದ್ದರಿಂದ ಆಕೆಯ ರೂಪವನ್ನು ತಳೆಯುವುದು ಸ್ವಾಹಾಗೆ ಸಾಧ್ಯವಾಗಲಿಲ್ಲ. ಹೀಗೆ ಪ್ರತಿ ಸಲವೂ ಅಗ್ನಿಯೊಂದಿಗೆ ಸೇರಿ ಗಾರುಡಿ ಪಕ್ಷಿಯ ರೂಪ ತಾಳಿ ಕಾಡಿನಿಂದ ಹೊರಬಂದು ಬಿಳಿ ಪರ್ವತವನ್ನು ಪ್ರವೇಶಿಸುತ್ತಾಳೆ. ಈ ಪರ್ವತವು ಬಾಣದ ಬೇಲಿಯಿಂದ ಸುತ್ತುವರಿದಿದ್ದು, ಏಳು ಹೆಡೆಗಳ ಸರ್ಪ, ದಾನವರು ಮುಂತಾದವರಿಂದ ಕಾವಲಿರುತ್ತದೆ. ಅದರ ಶಿಖರಕ್ಕೇರಿ ಅಗ್ನಿಯಿಂದ ಪಡೆದ ವೀರ್ಯವನ್ನು ಬಂಗಾರದ ಪಾತ್ರೆಯಲ್ಲಿ ಬಿಡುತ್ತಾಳೆ.

ಹೀಗೆ ಆರು ಬಾರಿ ವೀರ್ಯವನ್ನು ಈ ಪಾತ್ರೆಯಲ್ಲಿ ಸಂಗ್ರಹಿಸಿದ್ದರಿಂದ ಆರು ಮುಖಗಳು, ಹನ್ನೆರಡು ಕೈಗಳು, ಕಣ್ಣುಗಳು, ಕಿವಿಗಳು ಮತ್ತು ಪಾದಗಳನ್ನು ಹೊಂದಿದ ಕುಮಾರನ ಜನನವಾಗುತ್ತದೆ. ಈತನೇ ದೇವಸೇನಾಪತಿಯಾಗುತ್ತಾನೆ. ದೇವಸೇನಾ ಮತ್ತು ಶಿವಮುನಿಯ ಮಗಳಾದ ವಳ್ಳಿಯನ್ನು ಲಗ್ನವಾಗುತ್ತಾನೆ. ಕಾರ್ತಿಕೇಯನ ಜನನದ ವಿಷಯ ಋಷಿಗಳಿಗೆ ತಿಳಿದು ತಮ್ಮ ಪತ್ನಿಯರಲ್ಲಿ ಸಂದೇಹ ಉಂಟಾಗಿ ಅವರನ್ನು ತೊರೆಯುತ್ತಾರೆ. ಋಷಿ ಪತ್ನಿಯರು ಷಣ್ಮುಖನಲ್ಲಿಗೆ ಹೋಗಿ ವಿಷಯ ತಿಳಿಸಿ ತಮಗೆ ಸ್ವರ್ಗ ಪ್ರಾಪ್ತವಾಗುವಂತೆ ತಮ್ಮ ಸ್ಥಾನಗಳು ಮರಳಿ ಸಿಗುವಂತೆ ದಯಪಾಲಿಸಬೇಕೆಂದು ಕೇಳಿಕೊಳ್ಳುತ್ತಾರೆ. ಅವರ ಇಷ್ಟವನ್ನು ಈಡೇರಿಸಿದ ಕುಮಾರ ತನ್ನಲ್ಲಿಯೇ ಇಟ್ಟುಕೊಳ್ಳುತ್ತಾನೆ. ನಂತರ ಸ್ವಾಹಾ ಕುಮಾರನಲ್ಲಿಗೆ ಬಂದು ತಾನು ಅಗ್ನಿಯನ್ನು ಪ್ರೀತಿಸುತ್ತಿರುವುದಾಗಿಯೂ ನಿಜವಾದ ತಾಯಿ ತಾನೇ ಇರುವುದಾಗಿಯೂ ಹೇಳುತ್ತಾಳೆ. ಕುಮಾರ ಅವಳು ಯಾವಾಗಲೂ ಅಗ್ನಿಯೊಂದಿಗೆ ಇರುವಂತೆ ಮತ್ತು ಅಗ್ನಿಗೆ ಸಲ್ಲುವ ಕಾಣಿಕೆಗಳು ಮೊದಲು ಅವಳಿಗೆ ಸಲ್ಲುವಂತೆ ವರವನ್ನು ಕೊಡುತ್ತಾನೆ.

೫.೩ ಕಾರ್ತಿಕೇಯ - ಇತಿಹಾಸ

ಕುಡತಿನಿ ಮತ್ತು ಸಂಡೂರಿನ ಬೆಟ್ಟದಲ್ಲಿರುವ ಶಾಸನಗಳಿಂದ ಈ ಕಾರ್ತಿಕೇಯ ತಪೋವನ ಸಂಡೂರಿನ ಕುಮಾರಸ್ವಾಮಿ ದೇವಾಲಯದ ಪ್ರದೇಶವೇ ಆಗಿತ್ತೆಂದು ಪುರಾತತ್ವ ವಿದ್ವಾಂಸರು ಗುರುತಿಸಿದ್ದಾರೆ.[೯] ಪ್ರಸ್ತುತ ಅಧ್ಯಯನದಿಂದ ಶಾಸನ ಹಾಗೂ ಸಾಹಿತ್ಯಗಳಲ್ಲಿ ಉಲ್ಲೇಖವಾದ ಕಾರ್ತಿಕೇಯ ತಪೋವನ ಕುಡತಿನಿಯಲ್ಲಿತ್ತೆಂದು ತಿಳಿದುಬರುತ್ತದೆ. ವಡ್ಡಾರಾಧನೆ ಮತ್ತು ಕೈಫಿಯತ್ತುಗಳಲ್ಲಿ ಕಾರ್ತಿಕೇಯನ ಉಲ್ಲೇಖ ಬರುತ್ತದೆ. ವಡ್ಡಾರಾಧನೆಯಲ್ಲಿ, ಲಾಳದೇಶದ ಅಗ್ನಿ ಎಂಬ ಅರಸನು ತನ್ನ ಮಗಳಾದ ಕೃತ್ತಿಕೇಯ ಮೇಲೆ ಮೋಹವುಂಟಾಗಿ ಲಗ್ನವಾಗುತ್ತಾನೆ. ಆಕೆಗೆ ಕಾರ್ತಿಕ ಮತ್ತು ವೀರಶ್ರೀ ಎಂಬ ಎರಡು ಮಕ್ಕಳಾಗುತ್ತಾರೆ.

ವೀರಶ್ರೀಯನ್ನು ಕೋಗಳಿಯಲ್ಲಿ ಆಳ್ವಿಕೆ ಮಾಡುತ್ತಿದ್ದ ಕ್ರೌಂಚ ಎಂಬ ಅರಸನಿಗೆ ವಿವಾಹ ಮಾಡಿಕೊಡುತ್ತಾರೆ. ಕಾರ್ತಿಕನಿಗೆ ತನ್ನ ಅಜ್ಜ ಮತ್ತು ತಂದೆ ಒಬ್ಬನೆ ಎಂದು ಜಿಗುಪ್ಸೆಗೊಂಡು ತಪಸ್ಸನ್ನು ಆಚರಿಸುತ್ತ ಕಿಷ್ಕಿಂಧ ನಂತರ ಕೋಗಳಿಗೆ ಬರುತ್ತಾನೆ. ಕಾರ್ತಿಕ ಋಷಿಯು ಭಿಕ್ಷೆಗೆ ಹೋಗುತ್ತಿರುವಾಗ ಆತನ ತಂಗಿ ವೀರಶ್ರೀ ತನ್ನ ಅರಮನೆಗೆ ಭಿಕ್ಷೆಗೆ ಬರಬೇಕೆಂದು ಬೇಡಿಕೊಳ್ಳುತ್ತಿರುವಾಗ, ಕ್ರೌಂಚನಿಗೆ ಎಚ್ಚರವಾಗಿ ಆಕೆಯ ಮೇಲೆ ಅನುಮಾನ ಬಂದು ಶಕ್ತಿ ಆಯುಧದಿಂದ ಕಾರ್ತಿಕ ಋಷಿಗೆ ಇರಿಯುತ್ತಾನೆ. ಕಾರ್ತಿಕ ಋಷಿಯ ಅಜ್ಜಿ ವೀರಮತಿ ನವಿಲು ರೂಪತಾಳಿ ಆತನನ್ನು ಹೊತ್ತುಕೊಂಡು ಕೊಗಳಿಯಿಂದ ಪೂರ್ವದ ಪರ್ವತಕ್ಕೆ ತಂದು ಮಂಟಪದಲ್ಲಿ ಇರಿಸುತ್ತಾಳೆ. ಅಲ್ಲಿ ಕಾರ್ತಿಕ ಋಷಿ ತಪಸ್ಸನ್ನು ಕೈಗೊಂಡು ಮರಣಹೊಂದುತ್ತಾನೆ. ಆ ಜಾಗದಲ್ಲಿಯೇ ವೀರಮತಿ ಬಸದಿ ಕಟ್ಟಿಸುತ್ತಾಳೆ.

ಡಾ.ಡಿ.ಎಲ್.ನರಸಿಂಹಾಚಾರ್ ಅವರು "ಈ ಕಥೆಯಲ್ಲಿ ಉಲ್ಲೇಖವಾದ ಪರ್ವತ ಸಂಡೂರು ಬೆಟ್ಟ, ಕಾರ್ತಿಕ ಋಷಿ ಕುಮಾರಸ್ವಾಮಿಯಾಗಿ, ಆ ಬಸದಿ ಈಗಿನ ದೇವಾಲಯವಾಗಿ ಪರಿವರ್ತನೆಗೊಂಡಿರಬಹುದೆಂದು" ಹೇಳುತ್ತಾರೆ. ಈ ಗ್ರಂಥದಲ್ಲಿ ಉಲ್ಲೇಖವಾದ ಪ್ರದೇಶ ಸ್ಥಳಗಳು ಹಾಗೂ ಬಸದಿ ಮುಂತಾದವುಗಳ ಬಗ್ಗೆ ಹೆಚ್ಚಿನ ವಿಷಯ ದೊರಕುವುದಿಲ್ಲ. ಬಹುಶಃ ಶಿವಕೋಟ್ಯಾಚಾರ್ಯರು ಈ ಹಿಂದೆ ಮತ್ತು ಸಮಕಾಲೀನದಲ್ಲಿ ಪ್ರಚಾರದಲ್ಲಿದ್ದ ಘಟನೆಯನ್ನು ತಮ್ಮ ಕಥೆಗೆ ಅಳವಡಿಸಿಕೊಂಡಂತೆ ಕಾಣುತ್ತದೆ.

ಕಾರ್ತಿಕೇಯನ ಜನನ ಒಂದು ವಿಚಿತ್ರ ರೀತಿಯಲ್ಲಿ ನಡೆದಿದ್ದರಿಂದ ಶಿವ ಕೋಟ್ಯಾಚಾರ್ಯರು, ಕಾರ್ತಿಕ ಋಷಿ ಕಥೆ ಬರೆಯುವಾಗ ತಂದೆ - ಮಗಳ ಸಂಬಂಧವನ್ನು ಕಲ್ಪಿಸಿದ್ದಾರೆ. ವಡ್ಡಾರಾಧನೆಯಲ್ಲಿ ಬರುವ ಬಾದುಬ್ಬೆಯ ಪರ್ವ ಮರದ ಮುಖವಾಡಗಳನ್ನು ಹಾಕಿಕೊಂಡು ಕುಣಿಯುತ್ತಿರುವುದು ಮತ್ತು ಲಂಗುಟಿ ಧರಿಸಿ, ಕವಡಿಗಳನ್ನು ಬಾಯಿಯಲ್ಲಿ, ನವಿಲುಗರಿಯನ್ನು ಕೈಯಲ್ಲಿ ಹಿಡಿದು ಕುಣಿಯುತ್ತ ಬರುತ್ತಿರುವ ಅಂಶಗಳನ್ನು ಗಮನಿಸಿದಾಗ, ಬಾದುಬ್ಬೆ ಎಂಬ ದೇವತೆಯ ಆರಾಧನೆ ಕ್ರಿ.ಶ. ೮-೧೦ನೇ ಶತಮಾನದಲ್ಲಿ ಬಹಳ ಪ್ರಚಾರದಲ್ಲಿತ್ತೆಂದು ಶಾಸನ, ಸಾಹಿತ್ಯ, ಶಿಲ್ಪಗಳಿಂದ ಕಂಡುಬರುತ್ತದೆ. ಇದೇ ವೇಳೆಯಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಕಪ್ಪಡಿಗಳು (ಕವಡಿಗಳು) ಕಾರ್ತಿಕೇಯನ ದರ್ಶನಕ್ಕಾಗಿ ಬರುತ್ತಿದ್ದರು. ಅವರ ಛತ್ರಕ್ಕಾಗಿಯೇ ಕುಡತಿನಿಯಲ್ಲಿ ಭೂದಾನ ಕೊಟ್ಟ ವಿಷಯ ಅಲ್ಲಿಯ ಶಾಸನದಿಂದ ತಿಳಿದುಬರುತ್ತದೆ. ಇಂದಿಗೂ ತಮಿಳುನಾಡಿನಲ್ಲಿ ಕೌಪಿನ, ಕವಡೆಗಳನ್ನು ಧರಿಸಿ, ಮುಖಕ್ಕೆ ಮಸಿ ಬಳಿದುಕೊಂಡು, ಸಿಂಗರಿಸಿದ ಕೋಲನ್ನು (ನವಿಲುಗರಿ ಹಾಗೂ ಹಣ್ಣು, ಹಾಲು, ತುಪ್ಪ ಮುಂತಾದ ಪದಾರ್ಥಗಳ ಗಡಿಗೆಗಳನ್ನು ಅದಕ್ಕೆ ಕಟ್ಟಿಕೊಂಡು) ಕೈಯಲ್ಲಿ ಹಿಡಿದು 'ಹರಹರ' ಎಂದು ಕುಣಿಯುತ್ತ ಮುರುಗನ ಗುಡಿಗೆ ಬರುತ್ತಾರೆ. ಅಲ್ಲದೆ ಮಲೆಮಹದೇಶ್ವರ ಬೆಟ್ಟದ ಸುತ್ತಮುತ್ತಲಿನ ಸ್ಥಳಗಳಲ್ಲಿ ವಾಸ ಮಾಡುತ್ತಿರುವ ಕಪ್ಪಡಿಗಳೆಂಬ ಜನವರ್ಗದವರಿದ್ದು, ಅವರು ಶೈವ ಆರಾಧಕರಾಗಿದ್ದಾರೆ.

ಕೈಫಿಯತ್ತಿನ ಪ್ರಕಾರ

"ಷಣ್ಮುಖನು ಕೈಲಾಸದಿಂದ ಬಂದು ಪಂಪಾಕ್ಷೇತ್ರಕ್ಕೆ ಅಗ್ನಿ ಭಾಗದಲ್ಲಿ ಹತ್ತು ಹರದಾರಿಯ ಮೇಲೆ ಕೆಲವು ಅರಣ್ಯವಾದ ಸ್ಥಳದ ಮಧ್ಯದಲು ವೊಂದು ಪಾತಾಳಗೃಹದ ವಳಗೆ ಕುಳಿತು ಯಿರಲಾಗಿ, ಪಾರ್ವತಿ ಪುತ್ರ ಮೋಹದಿಂದಾಗಿ ಹುಡುಕುತ್ತ ಬರಲಾಗಿ, ಆ ಷಣ್ಮುಖನು ತಾಯಿನ ಕಂಡು, ಗೃಹದ ವೊಳಗಿಂದಾ ಯಿಲ್ಲಿ ನೈರುತ್ಯ ಭಾಗದಲ್ಲಿ ಯೇಳು ಹರದಾರಿಯಲ್ಲಿ ಯಿರುವಂತಾ ಅರಣ್ಯ ಪ್ರದೇಶಕ್ಕೆ ಹೋಗಿ, ಅಲ್ಲಿ ವೊಂದು ಪರ್ವತದ ಮೇಲೆ ನಿಂತರು, ಯಿಲ್ಲಿಂದಾ ಷಣ್ಮುಖಸ್ವಾಮಿ ಬಿಲದ್ವಾರದಿಂದಾ ಹೋಗಿ ಆ ಬೆಟ್ಟದ ಮೇಲೆ ಹೋಗಿ ನಿಂತ ಕಾರಣ ಆ ಬೆಟ್ಟಕ್ಕೆ ದೇವದ್ವಾರ ಪರ್ವತವೆಂದು ನಾಮ ಪ್ರಸಿದ್ಧಿಯಾಗಿಯಿದೆ. ಅದಕ್ಕೆ ಸಾಮಾನ್ಯ ಜನರು ಅವರ ಅಜ್ಞಾತ ತತ್ವದಿಂದ ದೇವದಾರಿ ಬೆಟ್ಟವೆಂದು ಹೇಳಿಕೊಳ್ಳುತ್ತಯಿದ್ದಾರೆ. ಅದೇ ಜಾಗಾಕ್ಕೆ ಕೆಲವು ಜನರು ಪಾದಗಟ್ಟೆಯಂಬುವ ನಾಮವೆಂದು ಹೇಳಿಕೊಳ್ಳುತ್ತಾಯಿದ್ದಾರೆ.

ಅಲ್ಲಿ ನಿಂತವನಾಗಿ ಅಷ್ಟದಿಕ್ಕನ್ನು ನೋಡಿ ನಾನು ಯಿರುವುದಕ್ಕೆ ಆ ಪರ್ವತಕ್ಕೆ ದಕ್ಷಿಣ ಭಾಗದಲ್ಲು ಯರಡು ಹರದಾರಿ ಪರ್ವತದ ಮೇಲೆ ಅಗಸ್ತ್ಯ ಆಶ್ರಮಕ್ಕೆ ಪಶ್ಚಿಮ ಭಾಗಕ್ಕೆ ನಿಮ್ಮನ್ನು ಪಾರ್ವತಿ ಪರಮೇಶ್ವರನು ಆ ಪರ್ವತದ ಬಳಿಗೆ ಬಂದಲ್ಲಿ ಯೀ ಸ್ಥಳದಲ್ಲಿ ಪಾರ್ವತಿಗೆ ಮೊಲಿಯ ತೋರುತ್ತಾ ಯೀ ಸಾರೋಧಾರವಾಗಿ ಕ್ಷೀರವನ್ನು ಸುರಿಯಲಾಗಿ, ಆ ಸ್ಥಳ ಶ್ವೇತವರ್ನವು ಯಿದ್ದುದರಿಂದಾ ಜನರು ವಿಭೂತಿ ಬೆಟ್ಟವೆಂದು ಪ್ರಸಿದ್ಧಿಯಾಯಿತು.

..... ನಮ್ಮ ಪುತ್ರನು ಯಿದ್ದಾನೆಂದು ನಿಶ್ಚಯಿಸಿ ಹುಡುಕುತ್ತಾ ಯಿರಲಾಗಿ ಗುಪ್ತಾಗುಹ್ಯವೆಂಬೊದರಲ್ಲಿ ಕಾಣಲಾಗಿ ಗುಪ್ತಸ್ವಾಮಿಯಂಬುವ ನಾಮಯಿಟ್ಟು .....ದೈತ್ಯರ ಸಂಹಾರ ಮಾಡಲಾಗಿ ಅವರ ಶ್ರೋಣಿತವನ್ನು ಹರಿಯಲಾಗಿ, ನದಿ ಪ್ರವಾಹವಾಗಿ ಹರಿಯಲಾಗಿ, ಶ್ರೋಣಿತಪುರಯಂಬುವ ಅವನಿದ್ದ ಪಟ್ಟಣ ಪ್ರದೇಶಕ್ಕೆ ನಾಮವಾಯಿತು. ಕುಮಾರಸ್ವಾಮಿ ಯಿದ್ದ ಕಾರಣ ಸ್ಕಂದಪುರಾಯಂಬೊ ನಾಮವೂ ಪ್ರಬಲವಾಯಿತು.

ಯೀ ಸ್ಥಳದಲ್ಲಿ ಕೊಮರಸ್ವಾಮಿ ಕುಳಿತು ಹೋದ ತರುವಾಯ, ಕಲಿಯುಗದಲ್ಲಿ ಕಲ್ರಿ (ರಿ) ಕಾಲ ಚೋಳ ಮಹಾರಾಜರು ಯೀಶ್ವರ ಪ್ರಸಾದಾನುಗ್ರಹದಿಂದ ಅಸಮಾನ ಪರಾಕ್ರಮವಂತನಾಗಿ, ಮಹಾ ಐಶ್ವರ್ಯದಿಂದ ರಾಜ್ಯಪಾಲನೆ ಮಾಡುತ್ತ ಯಿರಲಾಗಿ, ಅರಸಿನ ಮಗಳಿಗೆ ಯೌವನ ಪ್ರಾಯಕ್ಕೆ ಬಂದ ಬಳಿಕ ಆಕೀಗೆ ಬ್ರಹ್ಮರಾಕ್ಷಸನ ಘಟನೆಯಾದ್ದರಿಂದ, ಯೆಷ್ಟು ಸಮರ್ಥರಾಗಿ ಯಿದ್ದ ಮಂತ್ರದಿಂದ ಅಸಾಧ್ಯ ಆದುದರಿಂದ, ನಿರ್ವಾಹವಾಗದ ಪ್ರಯುಕ್ತ, ಯಿದೆ (ವೈದ್ಯ) ರಾದವರನ ಕರಿಸಿ "ಯಿದಕ್ಕೆ ಸಾಧನವೇನೆಂ"ದು ಕೇಳಲಾಗಿ, ಅವರು ಹೇಳಿದ್ದು "ದೇವರ ಶೇವೆಯಿಂದಲೇ ನಿರ್ವಾಹಕವಾಗಬೇಕೇ" ಹೊರ್ತು ಮನುಷ್ಯ ಮಾತ್ರದವರ ಕೈಯಿಂದಾ ನಿರ್ವಾಹವಾಗಲಿಕ್ಕಿಲ್ಲ. ಆದ್ದರಿಂದ ವೊಂದು ದಿವಸಕ್ಕೆ ಯೀಶ್ವರ, ಯೀಶ್ವರ ದೇವಾಲಯವೊಂದು ಬಾವಿಯನ್ನು ಯೀ ಪ್ರಕಾರ ಕಟ್ಟಿಸಿದರೆ ಬ್ರಹ್ಮರಾಕ್ಷಸ ಬಿಟ್ಟುಹೋದೀತೆಂ"ದು ಹೇಳಿದ

ಕಾರಣ, ಅದರಂತೆ ಮನಸ್ಸಿನಲ್ಲಿ ನಿಶ್ಚಿತ ಮಾಡಿಕೊಂಡು ದೇವಾಲಯಗಳು ಬಾವಿಗಳು ಕಟ್ಟಿಕೊಳ್ಳುತ್ತ ಯೀ ಸ್ಥಳಕ್ಕೆ ಬಂದು, ಯೀ ಸ್ಥಳದಲ್ಲು ಆ ವ್ಯಾಳೆಗೆ ಯಿದ್ದಾ ರುಷಿಗಳನ್ನು ಕಂಡು ನಮಸ್ಕಾರ ಮಾಡಿ "ಯೀ ಸ್ಥಳದ ಮಹತ್ವಯೇನು?" ಯೆಂದು ವಿಚಾರಿಸಲಾಗಿ ಅವರು ಹೇಳಿದ್ದು: "ಈ ಸ್ಥಳದಲು ವೊಂದು ಪಾತಾಳಗೃಹಯಿದ್ದೀತು. ಅಲ್ಲಿ ಪೂರ್ವದಲ್ಲಿ ಯೀಶ್ವರನ ಪುತ್ರನಾದ ಕೊಮಾರಸ್ವಾಮಿ ಬಂದು ಕುಳಿತನು. ಆದ್ದರಿಂದ ಯೀ ಸ್ಥಳಕ್ಕೆ ಕೊಮಾರಕ್ಷೇತ್ರವೆಂದು ತಪಸ್ಸು ಮಾಡಿಕೊಳ್ಳುತ್ತ ಯಿದ್ದೇವೆ"ಯೆಂದು ಹೇಳಿದರಿಂದ ಯಿವರು ಇದು ಮಹಾಕ್ಷೇತ್ರವೆಂದು ತಿಳಿದು, ನೂರಾವೊಂದು ದೇವಾಲಯಗಳ ಕಟ್ಟಿ ಆ ದೇವಾಲಯಗಳಿಗೆ ಈಶ್ವರಲಿಂಗ ಪ್ರತಿಷ್ಟೇ ಮಾಡಿಸಿ, ಹಾಗೆ ನೂರಾವೊಂದು ಬಾವಿಗಳನ್ನು ಕಟ್ಟಿಸಿ, ಆ ದೇವರುಗಳಿಗೆ ಧೂಪ, ದೀಪ, ನೈವೇದ್ಯ, ಅಮೃತಪಡಿ, ನಂದಾದೀಪಾದಿಗಳು ನಡಸುವ ಹಾಗೆ ಭೂಸ್ವಾಸ್ತಿಯನ್ನು ನಿರ್ಣಯಿಸಿ, ಹಾಗೆ ಕೆಲವು ಅಗ್ರಹಾರಗಳ ಯೇರ್ಪಾಟು ಮಾಡಿ, ಬ್ರಹ್ಮರಿಗೆ ಧಾರಾಪೂರ್ವಕ ಮಾಡಿ ಬಿಟ್ಟರು"ಯೆಂದು ಸ್ಥಳಜ್ಞರು ಹೇಳಿಕೊಳ್ಳುತ್ತಾರೆ. "ಪೂರ್ವದಲ್ಲಿ ಕೊಮಾರಸ್ವಾಮಿ ಯಿಲ್ಲಿ ಕುಳಿತಾ"ಯಂದು ರುಷಿಗಳು ಹೇಳಿದ ಕಾರಣ 'ಕುಳಿತನೋ'ಯಂಬ ಅಗ್ರಹಾರವೆಂದು ಗ್ರಾಮಕ್ಕೆ ವ್ಯವಹಾರ ನಾಮವೆಂದು ಪ್ರಸಿದ್ಧಿಯಾಯಿತು.

ಈ ಕೈಫಿಯತ್ತಿನ ಪ್ರಕಾರ ಮೇಲಿನ ವಿಷಯವನ್ನು ಗಮನಿಸಿದಾಗ ಕುಡತಿನಿ ಗ್ರಾಮದ ಮೂಲ ಹೆಸರು ಕುಳಿತನೋಯೆಂಬ ಅಗ್ರಹಾರವಾಗಿದ್ದು, ರಾಷ್ಟ್ರಕೂಟರಿಂದ ವಿಜಯನಗರ ಕಾಲಾವಧಿಯಲ್ಲಿ ಅಗ್ರಹಾರ ಕೊಟ್ಟಿತೊನೆ ನಂತರ ಕುಡತಿನಿ (ಕುಳಿತನೋ > ಕೊಟ್ಟಿತೊನೆ > ಕುಡತಿನಿ) ಎಂದಾಯಿತು.

ಈ ಕೈಫಿಯತ್ತಿನಲ್ಲಿ ಹೆಸರಿಸಿದ ಸ್ಥಳಗಳನ್ನು ಪರಿಶೀಲಿಸಿರುವ ಅಂಶಗಳು ಈ ಕೆಳಗಿನಂತೆ ಕಂಡು ಬಂದಿವೆ.

೧. ಕುಮಾರನು ಕೈಲಾಸದಿಂದ ಬಂದು ಪಂಪಾಕ್ಷೇತ್ರದಿಂದ ಹತ್ತು ಹರದಾರಿ ಆಗ್ನೇಯಕ್ಕೆ ಅರಣ್ಯ ಪ್ರದೇಶದಲ್ಲಿ ಪಾತಾಳಗೃಹದಲ್ಲಿ ಕುಳಿತುಕೊಳ್ಳುತ್ತಾನೆ. ಈ ಪಾತಾಳಗೃಹವು ಈಗಿನ ಕುಡತಿನಿ ಗ್ರಾಮದಲ್ಲಿದೆ.[೧೧] ಈ ಗ್ರಾಮದ ಮಧ್ಯದಲ್ಲಿರುವ ಕುಮಾರಸ್ವಾಮಿ ದೇವಾಲಯದಲ್ಲಿ ಒಂದೇ ಸಾಲಿನಲ್ಲಿ ಮೂರು ಗರ್ಭಗೃಹಗಳಿವೆ. ಅವುಗಳ ಬಲಭಾಗ ಗಣೇಶ, ಮಧ್ಯ ಕುಮಾರಸ್ವಾಮಿ ಮತ್ತು ಎಡಭಾಗ ವಿಷ್ಣು ಅಥವಾ ನಾರಾಯಣನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಕುಮಾರಸ್ವಾಮಿ ಮತ್ತು ವಿಷ್ಣುವಿನ ಗರ್ಭಗೃಹಗಳ ಮಧ್ಯದ ಗೋಡೆಯಲ್ಲಿ ಒಂದು ಚಿಕ್ಕ ಕಿಂಡಿಯನ್ನು ಬಿಡಲಾಗಿದೆ. ಈ ಕಿಂಡಿಯನ್ನು ಪ್ರವೇಶಿಸಿದರೆ ಒಂದು ಚೌಕಾಕಾರದ ಗವಿ, ಅದರ ದಕ್ಷಿಣ ಭಾಗದಲ್ಲಿ ಅಂದರೆ ಕುಮಾರಸ್ವಾಮಿ ಗರ್ಭಗೃಹದ ತಳಭಾಗ ಅದು ಪಾತಾಳಕ್ಕೆ ಮುಂದುವರೆದುಕೊಂಡು ಹೋಗಿದೆ. ಸ್ಥಳೀಯ ಜನರು ಈ ಗವಿಯಲ್ಲಿ ಋಷಿಗಳು ತಪಸ್ಸು ಮಾಡುತ್ತಿದ್ದರೆಂದು ಹೇಳುತ್ತಾರೆ. ಈ ಗವಿಯ ಮೇಲೆ ಕ್ರಿ.ಶ. ೯೬೭ರಲ್ಲಿ ಗದಾಧರನು ಒಂದು ಚಿಕ್ಕ ದೇವಾಲಯವನ್ನು ಕಟ್ಟಿಸಿ ಅದರಲ್ಲಿ ಸ್ಕಂದನ ಮೂರ್ತಿ ಪ್ರತಿಷ್ಠಾಪಿಸುತ್ತಾನೆ. ನಂತರ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮೂರು ಗರ್ಭಗೃಹಗಳನ್ನು ಹೊಂದಿದ ವಿಶಾಲವಾದ

ದೇವಾಲಯವನ್ನು ಪುನಃ ನಿರ್ಮಿಸಲಾಯಿತು. ಈ ದೇವಾಲಯದ ಎರಡು ಗರ್ಭಗೃಹಗಳ ಪ್ರವೇಶದ ದ್ವಾರಪಾಲಕರ ಕೈಗಳಲ್ಲಿ ತ್ರಿಶೂಲ ಡಮರುಗಳಿದ್ದರೆ, ಒಂದು ಗರ್ಭಗೃಹದ ಪ್ರವೇಶದ್ವಾರದ ದ್ವಾರಪಾಲಕರ ಕೈಗಳಲ್ಲಿ ಶಂಖ, ಚಕ್ರಗಳಿವೆ. ಈಗ ಗರ್ಭಗೃಹಗಳಲ್ಲಿ ಗಣೇಶನ ಮೂರ್ತಿ ಇದ್ದು, ಕಾರ್ತಿಕೇಯ, ವಿಷ್ಣುವಿನ ಮೂರ್ತಿಗಳು ಹಾಳಾಗಿವೆ.

ಶತಕೋಟಿ ತೀರ್ಥ ಕುಡತಿನಿಯ ಶಾಸನಗಳಲ್ಲಿ ಉಲ್ಲೇಖವಾದ ಶತಕೋಟಿ ತೀರ್ಥವು, ಕುಮಾರಸ್ವಾಮಿ ದೇವಾಲಯದ ಅಂತರಾಳದಲ್ಲಿರುವ ತೀರ್ಥವೇ ಆಗಿದೆ. ಈ ತೀರ್ಥವನ್ನು ಸೇವಿಸಿದವರು ರೋಗಗಳಿಂದ ಮತ್ತು ಪಾಪಗಳಿಂದ ಮುಕ್ತರಾಗುವರೆಂಬ ನಂಬಿಕೆಯೂ ಕೂಡ ಇತ್ತು.

೨. ಕುಮಾರನು ಪಾತಾಳಗೃಹದ ಒಳಗಿಂದ ನೈಋತ್ಯ ಭಾಗದಲ್ಲಿ ಏಳು ಹರದಾರಿಯಲ್ಲಿರುವ ಪರ್ವತದ ಮೇಲೆ ನಿಂತುಕೊಳ್ಳುತ್ತಾನೆ. ಸಂಡೂರಿನ ಈಶಾನ್ಯ ಭಾಗದಲ್ಲಿರುವ ದೇವದಾರಿ ಬೆಟ್ಟ ಅಥವಾ ಪಾದಗಟ್ಟೆ ಎಂದು ಕರೆಯುವ ಪರ್ವತದ ಮೇಲೆ ದೊಡ್ಡ ದೊಡ್ಡ ಬಂಡೆಗಳ ಮೇಲೆ ಪಾದಗಳನ್ನು ಕೊರೆಯಲಾಗಿದೆ. ಮೂರು ದಿಕ್ಕುಗಳಲ್ಲಿರುವ ಪಾದಗಳ ಮೇಲೆ ದೇವಾಲಯಗಳನ್ನು ನಿರ್ಮಿಸಲಾಗಿದೆ. ಈ ಎಲ್ಲ ಪಾದಗಳು ಕುಮಾರಸ್ವಾಮಿಯವೆಂದು ಸ್ಥಳೀಯ ಜನರು ಕರೆಯುತ್ತಾರೆ. ಕೈಫಿಯತ್ತಿನಲ್ಲಿ ಉಲ್ಲೇಖಿಸಿದಂತೆ ಕುಮಾರನು ಪರ್ವತದ ಮೇಲೆ ನಿಂತು ಅಷ್ಟದಿಕ್ಕುಗಳನ್ನು ವಿಕ್ಷೀಸಿದನು ಎಂಬುದಕ್ಕೆ ನಾಲ್ಕು ದಿಕ್ಕುಗಳಿಗಿರುವ ಪಾದಗಳು ಸರಿಹೋಗುತ್ತವೆ.

೩. ದೇವದಾರಿ ಬೆಟ್ಟದಿಂದ ಎರಡು ಹರದಾರಿ ದಕ್ಷಿಣಕ್ಕೆ ಪರ್ವತದ ಮೇಲೆ ನಿಂತು, ಪಾರ್ವತಿಗೆ ಮೊಲೆ ತೋರುತ್ತ ಸಾರೋಧಾರವಾಗಿ ಕ್ಷೀರವನ್ನು ಸುರಿಯುತ್ತಾನೆ. ಪಾರ್ವತಿ, ಪರಮೇಶ್ವರರು ಕುಮಾರನಿಗೆ ಲಗ್ನವಾಗಲು ಹೇಳುತ್ತಾರೆ. ಅದಕ್ಕೆ ಕುಮಾರನು ಒಪ್ಪದಿದ್ದಾಗ ಪಾರ್ವತಿ "ಎಲೈ ಕುಮಾರ, ಚಿಕ್ಕಂದಿನಿಂದ ನಿನಗೆ ಸ್ತನ್ಯಪಾನ ಮಾಡಿಸಿ ಹಾಲು - ಬೆಣ್ಣೆ ಕೊಟ್ಟು ಪೋಷಿಸಿದ್ದಕ್ಕೆ ಚನ್ನಾಗಿ ಉಪಕಾರ ತೀರಿಸಿದೆ" ಎಂದಳು. ಇದಕ್ಕೆ ಸ್ಕಂದನು, ತೆಗೆದುಕೋ ನಿನ್ನ ಹಾಲು - ಬೆಣ್ಣೆ ಎಂದು ವಮನ ಮಾಡಿಕೊಳ್ಳುತ್ತಾನೆ. ಈ ಸ್ಥಳವು ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿ ಅಗಸ್ತ್ಯ ತೀರ್ಥದಿಂದ ಒಂದು ಮೈಲು ಪೂರ್ವಭಾಗದಲ್ಲಿದೆ. ಕುಮಾರನು ಹಾಲು ವಮನ ಮಾಡಿಕೊಂಡದ್ದ ರಿಂದ ಕೆಂಪು - ಬಿಳಿ ಬಣ್ಣದ್ದಾಗಿದೆ ಎಂದು ನಂಬಿಕೆ ಮತ್ತು ಜನರು ಇದನ್ನು ವಿಭೂತಿ ಬೆಟ್ಟವೆಂದು ಕರೆಯುತ್ತಾರೆ.

೪. ಪಾರ್ವತಿ ಪರಮೇಶ್ವರರು ಕುಮಾರನನ್ನು ಹುಡುಕುತ್ತ ಇದ್ದಾಗ ಗುಪ್ತ ಗುಹೆಯಲ್ಲಿ ಕಾಣಿಸಿ ಕೊಂಡಿದ್ದರಿಂದ ಗುಪ್ತಸ್ವಾಮಿ ಎಂದು ಹೆಸರನ್ನಿಡುತ್ತಾರೆ. ಕುಮಾರಸ್ವಾಮಿ ದೇವಾಲಯದಿಂದ ಸುಮಾರು ನಾಲ್ಕು ಮೈಲು ವಾಯುವ್ಯಕ್ಕೆ ಒಂದೇ ಸ್ಥಳದಲ್ಲಿ ಪ್ರಕಟಸ್ವಾಮಿ ಮತ್ತು ಗುಪ್ತಸ್ವಾಮಿ ಗುಹೆಗಳಿವೆ. ಪಾರ್ವತಿಗೆ ಕುಮಾರನು ಇಲ್ಲಿ ಸಿಕ್ಕ (ಪ್ರಕಟ)ದ್ದರಿಂದ ಪ್ರಕಟಸ್ವಾಮಿ ಮತ್ತು ಗುಹೆಯಲ್ಲಿ ಕುಳಿತಿದ್ದರಿಂದ ಗುಪ್ತಸ್ವಾಮಿ ಎಂಬ ಹೆಸರುಗಳು ಬಂದವು. ಹೊರಮಲ್ಲೆ

ಸೀಮೆಯವರು ಈ ದೇವರುಗಳನ್ನು ಗುಪ್ತಸ್ವಾಮಿ, ಪ್ರಕಟಸ್ವಾಮಿಗಳೆಂದೇ ಕರೆಯುತ್ತಾರೆ. ಈಗಲೂ ಮಳೆ ಬಾರದೇ ಇದ್ದಾಗ ಈ ದೇವರುಗಳಿಗೆ ಪರವು ಮಾಡಿದರೆ ಗುಡ್ಡ ಇಳಿದು ಬರುವುದರೊಳಗೆ ಮಳೆ ಬರುತ್ತದೆಂದು ಅಲ್ಲಿಯ ಜನರ ನಂಬಿಕೆ.

೫. ಕುಮಾರ ದೈತ್ಯರನ್ನು ಸಂಹಾರ ಮಾಡಿದಾಗ ಅವರ ಶ್ರೋಣಿತವು ನದಿ ಪ್ರವಾಹವಾಗಿ ಹರಿಯುತ್ತದೆ. ಈ ನದಿ ಸಂಡೂರು ಮತ್ತು ಕುಮಾರಸ್ವಾಮಿ ಬೆಟ್ಟದ ಮಧ್ಯದಲ್ಲಿದೆ. ಇದನ್ನು ಶ್ರೋಣಿತ ನದಿ ಎಂದು ಕರೆಯುತ್ತಾರೆ.

೬. ಕರಿಕಾಲ ಚೋಳ ಮಹಾರಾಜನು ಇದು ಮಹಾಕ್ಷೇತ್ರವೆಂದು ತಿಳಿದು ನೂರಾವೊಂದು ದೇವಾಲಯ ಮತ್ತು ಬಾವಿಗಳನ್ನು ಕಟ್ಟಿಸಿದನು. ಕರಿಕಾಲ ಚೋಳ ಮಹಾರಾಜನು ತಪೋವನದ ಋಷಿಗಳನ್ನು ಭೇಟಿಯಾದದ್ದು ಕುಡತಿನಿಯಲ್ಲಿ ಈ ಪ್ರದೇಶದಲ್ಲಿಯೇ ನೂರಾವೊಂದು ದೇವಾಲಯ ಮತ್ತು ಬಾವಿಗಳನ್ನು ಕಟ್ಟಿಸಿದನು. ಕುಡತಿನಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ನೂರಾ ಮೂವತ್ತಕ್ಕಿಂತಲೂ ಹೆಚ್ಚು ದೇವಾಲಯ ಮತ್ತು ನೂರಕ್ಕಿಂತಲೂ ಹೆಚ್ಚು ಬಾವಿಗಳಿದ್ದವೆಂದು ಸ್ಥಳೀಯ ಜನರಿಂದ ತಿಳಿದುಬರುತ್ತದೆ. ಈಗಲೂ ಕುಡತಿನಿ ಗ್ರಾಮದಲ್ಲಿ ಬಹಳಷ್ಟು ದೇವಾಲಯ ಮತ್ತು ಬಾವಿಗಳು ಇವೆ. ಅಲ್ಲದೆ ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ಹಾಳಾದ ದೇವಾಲಯ, ಅದರ ಅವಶೇಷಗಳು ಕಂಡುಬರುತ್ತವೆ.

೫.೪ ಕಾರ್ತಿಕೇಯ ತಪೋವನಾಧಿಪತಿಗಳು

ಕುಮಾರಸ್ವಾಮಿ ಬಂದು ಕುಳಿತ ಸ್ಥಳವಾದ ಕುಡತಿನಿಯಲ್ಲಿಯ ಕಾರ್ತಿಕೇಯ ತಪೋವನ ಇತಿಹಾಸಪೂರ್ವ ಕಾಲದಿಂದಲೇ ಪ್ರಸಿದ್ಧಿಯಾಗಿತ್ತು. ಚೋಳ ಮಹಾರಾಜರು ಋಷಿಗಳನ್ನು ಭೇಟಿಯಾಗಿ ಸ್ಥಳದ ಮಹಾತ್ಮೆಯನ್ನು ಅರಿತಿದ್ದು ಇಲ್ಲಿಯೇ. ಪ್ರಾಚೀನ ತಮಿಳು ಸಂಘಂ ಸಾಹಿತ್ಯದಲ್ಲಿ ಕರಿಕಾಲ ಚೋಳನ ಉಲ್ಲೇಖ ಬರುತ್ತದೆ.[೧೨] ಬಾಲ್ಯದಲ್ಲಿ ಅಗ್ನಿಯ ಅನಾಹುತಕ್ಕೊಳಗಾಗಿ ಅವನ ಕಾಲು ಸುಟ್ಟಿದ್ದರಿಂದ ಕರಿಕಾಲ ಚೋಳನೆಂದು ಹೆಸರಾದ. ಈ ಸಾಹಿತ್ಯದಲ್ಲಿ ಮುಖ್ಯವಾಗಿ ಚೋಳ, ಚೇರ ಮತ್ತು ಪಾಂಡ್ಯ ಅರಸರ ಹೆಸರು, ಅವರ ಆಡಳಿತದ ಬಗ್ಗೆ ತಿಳಿದುಬರುತ್ತದೆ. ಸಂಘಂ ಯುಗವು ಕ್ರಿ.ಪೂ. ೬ನೇ ಶತಮಾನದಲ್ಲಿ ಪ್ರಾರಂಭವಾಗಿ ಕ್ರಿ.ಶ. ೬ನೇ ಶತಮಾನದಲ್ಲಿ ಕೊನೆಗೊಂಡಿತ್ತೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಈ ಯುಗವು ಕ್ರಿ.ಪೂ. ೩ನೇ ಶತಮಾನದಿಂದ ಕ್ರಿ.ಶ. ೩ನೇ ಶತಮಾನದ ಅವಧಿಯಲ್ಲಿತ್ತೆಂದು ಪ್ರೊ. ಎನ್.ಬಾಲಸುಬ್ರಹ್ಮಣ್ಯಂ ಅವರ ಅಭಿಪ್ರಾಯವಾದರೆ, ಕ್ರಿ.ಪೂ. ೩ನೇ ಶತಮಾನದಿಂದ ಕ್ರಿ.ಶ. ೧ನೇ ಶತಮಾನದ ಅವಧಿಯಲ್ಲಿತ್ತೆಂಬುದು ಪ್ರೊ. ಕೆ.ಎ.ನೀಲಕಂಠಶಾಸ್ತ್ರೀಯವರ ಅಭಿಪ್ರಾಯವಾಗಿದೆ. ಸಂಘಂ ಯುಗದಲ್ಲಿ ಪ್ರಸಿದ್ಧ ಅರಸನಾದ ಕರಿಕಾಲ ಚೋಳ ಮಹಾರಾಜನು ಕಾರ್ತಿಕೇಯ ತಪೋವನಕ್ಕೆ ಬಂದು ಅಲ್ಲಿ ತಪಸ್ಸು ಮಾಡುತ್ತಿದ್ದ ಋಷಿಗಳನ್ನು ಭೇಟಿಯಾಗಿದ್ದರಿಂದ ಕಾರ್ತಿಕೇಯ ತಪೋವನವು ಕ್ರಿ.ಪೂ. ೨ನೇ ಶತಮಾನಕ್ಕಿಂತಲೂ ಪೂರ್ವದಲ್ಲಿಯೇ ಬೆಳೆದುಬಂದಿತ್ತೆಂದು ತಿಳಿದುಬರುತ್ತದೆ.

ಕೆಲವು ಶಾಸನಗಳಲ್ಲಿ ಕಾರ್ತಿಕೇಯ ತಪೋವನದ ಉಲ್ಲೇಖ ಬರುತ್ತದೆ. ''ಶ್ರೀಸ್ವಾಮಿ ಕಾರ್ತಿಕೇಯದೇವರ ಮೊದಲ ಬಾಡ ಕೊಟ್ಟಿತಣೆ'', ''ಶ್ರೀ ಸ್ವಾಮಿದೇವರ ಪಟ್ಟಣ'' ಮತ್ತು ಕಾರ್ತಿಕೇಯನಪುರ ಕೊಟ್ಟಿತ್ತೊಣೆ ಎಂದು ಪ್ರಸಿದ್ಧಿ ಹೊಂದಿತ್ತು. ''ಅಲ್ಲಿಯ ನೈಷ್ಠಿಕ ತಪೋದನರಾಹಾರಕ್ಕೆ ದಾನ ಕೊಟ್ಟ'' ಬಗ್ಗೆ, ''ಈ ಸ್ಥಾನಂ ನೈಷ್ಠಿಕ ತಪೋಧನರ ಸ್ಥಾನವಿಲ್ಲಿ'' ಎಂದು ಶಾಸನಗಳು ಉಲ್ಲೇಖಿಸುತ್ತವೆ. ಈ ಗ್ರಾಮದ ಶಾಸನಗಳು ತಪೋಧನರ ಹೆಸರನ್ನು ಹೇಳುವಾಗ ''ಶ್ರೀಸ್ವಾಮಿ ಕಾರ್ತಿಕೇಯ ತಪೋವನಾಧಿಪತಿಗಳೆಂದು ಉಲ್ಲೇಖಿಸುತ್ತವೆ. ಆದರೆ ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿಯ ಶಾಸನದಲ್ಲಿ ಕಾರ್ತಿಕೇಯ ತಪೋವನಾಧಿಪತಿ ಎಂದು ಹೇಳದೆ ಕೇವಲ ವಿಷ್ಣುಕರ ಬ್ರಹ್ಮಚಾರಿ ಎಂದಷ್ಟೆ ಉಲ್ಲೇಖವಿದೆ.

ಮೇಲಿನ ಎಲ್ಲ ಆಧಾರಗಳಿಂದ ಶ್ರೀಸ್ವಾಮಿ ಕಾರ್ತಿಕೇಯ ತಪೋವನ ಕುಡತಿನಿಯಾಗಿದ್ದು ಸಂಡೂರು ಕುಮಾರಸ್ವಾಮಿ ಬೆಟ್ಟ ಅಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಉಲ್ಲೇಖ

ರಾಮಾಯಣದಲ್ಲಿಯ ಉಲ್ಲೇಖದಂತೆ, ಕುಮಾರಸ್ವಾಮಿ ಬೆಟ್ಟದಿಂದ ಸುಮಾರು ೩೦ ಕಿ.ಮೀ. ಈಶಾನ್ಯಕ್ಕಿರುವ ಕುಡತಿನಿಯಲ್ಲಿಯೂ 'ಕಾರ್ತಿಕೇಯ ತಪೋವನ' ಎಂಬ ಉಲ್ಲೇಖವು ಅಲ್ಲಿಯ ೧೦ ರಿಂದ ೧೩ನೇ ಶತಮಾನದ ಒಂಭತ್ತು ಶಾಸನಗಳಲ್ಲಿವೆ. ಮತ್ತು ಇಲ್ಲಿ ೧೦ನೇ ಶತಮಾನದ ಕುಮಾರಸ್ವಾಮಿ ದೇವಾಲಯವೂ ಇದೆ. ಸ್ಥಳೀಯ ಕಥೆಯ ಪ್ರಕಾರ ಕಾರ್ತಿಕೇಯನು ನೆಲೆಸಿದ ಸ್ಥಳ 'ಲೋಹಾಚಲ'ವೆಂದು ಹೇಳಿದೆ. ಈ ಲೋಹಾಚಲವೇ ಕುಮಾರಸ್ವಾಮಿ ಬೆಟ್ಟವೆಂದು ಗುರುತಿಸಬಹುದು. ಈ ಬೆಟ್ಟದ ಮೇಲೆಯೇ ಕುಮಾರಸ್ವಾಮಿ, ಪಾರ್ವತಿ, ಶಿವ ದೇವಾಲಯಗಳಿವೆ. ಇವೂ ಕೂಡ ೮-೧೦ನೇ ಶತಮಾನದವು.

'ಕಾರ್ತಿಕೇಯದೇವ ತಪೋವನ' ಎಂಬ ಸ್ಥಳವನ್ನು ಗುರುತಿಸುವಲ್ಲಿ ಕುಡತಿನಿಯ ಎಂಟು ಶಾಸನಗಳಲ್ಲಿಯ[೧೩] ಕೆಲವೊಂದು ಅಂಶಗಳು ಗಮನಾರ್ಹ ಏಕೆಂದರೆ ಇವುಗಳಲ್ಲಿ ಕಾರ್ತಿಕೇಯ ತಪೋವನದ ಉಲ್ಲೇಖವಿದೆ.

ಸಂಡೂರು - ಕುಡುತಿನಿ - ಕೊಳಗಲ್ಲುಗಳ ಕುಮಾರಸ್ವಾಮಿಯ ತಪೋವನಾಧಿಪತಿಗಳು

ಕ್ರ.ಸಂ.	ಊರು	ದೇವರು - ದೇವಾಲಯ	ಕಾಲ	ನಿರ್ಮಾತೃಗಳು	ಆಕರ
೧	ಸಂಡೂರು (ಕು.ಬೆ.) ಕುಡುತಿನಿ	ಸ್ವಾಮಿದೇವರಿಗೆ- ಕುಮಾರಸ್ವಾಮಿ ದೇವಾಲಯ	ಶಕ. ೯೯೬ - ಕ್ರಿ.ಶ. ೫.೪.೧೦೭೪	ದಂಡಾಸನಿ ವಿಶ್ವರೂಪ ಬ್ರಹ್ಮಚಾರಿಗಳು (X X ವಿರಡಿಗಳು)	ಸೌ.ಇ.ಇ. ix (i), ೭೮
೨	ಸಂಡೂರು (ಕು.ಬೆ) ಕೊಳಗಲ್ಲು	ಕುಮಾರಸ್ವಾಮಿ ದೇವಾಲಯ - ನವಿಲು ಪ್ರತಿಷ್ಠಾಪನೆ (ಮಹೇಶ, ಪಾರ್ವತಿ, ವಿನಾಯಕ, ಕಾರ್ತಿಕೇಯ ವಿಗ್ರಹ)	ಶಕ. ೯೬೭ - ಕ್ರಿ.ಶ. ೨೫.೪.೧೦೪೫	ವಿಷ್ಣುಕರ ಬ್ರಹ್ಮಚಾರಿ (ರಾಷ್ಟ್ರಕೂಟ ಖೊಟ್ಟಿಗದೇವ)	ಸೌ.ಇ.ಇ. ೩೨ (ಎ.ಇ. xxi, ४೦)
೩	ತಾಳೂರು	ಈಶ್ವರ ದೇವಾಲಯ	ಕ್ರಿ.ಶ. ४.೬.೧೨೧೮	ಯಗವಟ್ಟಿ ಬೊಮ್ಮಗವುಡನು	ಅದೇ, ೩೩೬
४	ಕೊಳಗಲ್ಲು	ವಿಷ್ಣು, ಮಹೇಶ್ವರ, ಡಾಮರಿಕಾ (ಬ್ರಹ್ಮ?) ಸರಸ್ವತಿ, ಪಾರ್ವತಿ, ವಿನಾಯಕ, ಪ್ರತಿಷ್ಠೆ	ಕ್ರಿ.ಶ. ೯೬೬	ಲೋಹಾಸನಿ ಗದಾಧರ (ರಾಷ್ಟ್ರಕೂಟ ಖೊಟಿಗ ೯೬೭)	ಅದೇ, ೬೭, ೭೩ (೯೭೬ ಕುಡುತಿನಿ) ಎ.ಇ.xxi ४೦ (೯೬೭, ಕೊಳಗಲ್ಲು)
೫	ಕುಡತಿನಿ	ಸ್ಕಂದ ದೇವರ ಪ್ರತಿಷ್ಠೆ	ಕ್ರಿ.ಶ. ೯೭೧	ದಂಡಾಸನಿ ಗಧಾದರ (ಅರಸ: ರಾಷ್ಟ್ರಕೂಟ ಖೊಟ್ಟಿಗ)	ಸೌ.ಇ.ಇ. ix (i) ೭೦,೭೩
೬	ಕುಡತಿನಿ	ಮಳಿಗೆಯ ಭಗವತಿ ದೇವಿ	ಕ್ರಿ.ಶ. ೧೦೯೮	ದಂಡಾಸನಿ ವಿಶ್ವರೂಪ ಬ್ರಹ್ಮಚಾರಿಗಳು (ಅರಸ : ೬ನೆಯ ವಿಕ್ರಮಾದಿತ್ಯ (?)	ಅದೇ, ೧೬४, (ಕ್ರಿ.ಶ. ೧೦೯೯)
೭	ಕುಡತಿನಿ	ಮಾರ್ತ್ತಾಂಡೇಶ್ವರ ದೇವರ ಪ್ರತಿಷ್ಠೆ	ಕ್ರಿ.ಶ. ೧೧೧೯	ದಂಡಾಸನಿ ಯಶೋಧರ ಬ್ರಹ್ಮಚಾರಿಯರಸರು (ಮಾತ್ತಾಂಡನಾಯಕ)	ಅದೇ, ೧೯೭
೮	ಕುಡತಿನಿ	ದುರ್ಗೇಶ್ವರ ದೇವರ ಪ್ರತಿಷ್ಠೆ (?)	ಕ್ರಿ.ಶ. ೧೧೨೦	ದಂಡಾಸನಿ ಮಾಧವ ಬ್ರಹ್ಮಚಾರಿ (ದಂಡನಾಯಕ ದುರ್ಗರಾಜ)	ಅದೇ, ೧೯೯
೯	ಕುಡತಿನಿ	ಕಲಿದೇವ ದೇವಾಲಯ	ಕ್ರಿ.ಶ. ೧೨೦೭	ವಿಷ್ಣುಕರ ಬ್ರಹ್ಮಚಾರಿ, ದಂಡಾಸನಿ, ಲೋಹಾಸನಿ (ಏಕ್ಕೋಟಿ ಮಹಾದೇವರು)	ಸೌ.ಇ.ಇ. ೩೨
೧೦	ಕುಡತಿನಿ	ತೆಲ್ಲಿಗೇಶ್ವರ ದೇವಾಲಯ ನಿರ್ಮಾಣ	ಕ್ರಿ.ಶ. ೧೨೧೮	ದಂಡಾಸನಿ - ಲೋಹಸನಿ, ಉದಯಾಕರ ದೇವ - ಬ್ರಹ್ಮಚಾರಿ, (ಗಾಣದರುವತ್ತೊಕ್ಕಲು)	ಅದೇ, ೩೩೬ ix (i)

ಅಧಿಪತಿಗಳು

ಕುಡತಿನಿ, ಕೊಳಗಲ್ಲು, ಸಂಡೂರು ಮುಂತಾದ ಕಡೆಯ ಶಾಸನಗಳಲ್ಲಿ ಯತಿಗಳ (ಮುನಿಗಳ) ಉಲ್ಲೇಖ ಬಂದಿದೆ.[೧೫] ಕ್ರಿ.ಶ. ೯೬೬ ರಿಂದ ಕ್ರಿ.ಶ. ೧೨೧೮ರ ವರೆಗೆ ಸಂಡೂರು ಪರಿಸರಕ್ಕೆ ಸಂಬಂಧಿಸಿದಂತೆ :

ಶಕ - ೯೯೬	-	ಗಧಾಧರರಸ
ಶಕ - ೧೨೦೭ (೧೨೦೬)	-	ವಿಷ್ಣುಕರ ಬ್ರಹ್ಮಚಾರಿ
		ಲೋಹಾಸನಿ ದಂಡಾಸನಿ
ಶಕ - ೧೨೧೮	-	ಉದಯಾಕರದೇವ ಬ್ರಹ್ಮಚಾರಿ

ಕುಡತಿನಿಯಲ್ಲಿದ್ದ ಕಾರ್ತಿಕೇಯ ತಪೋವನಾಧಿಪತಿಗಳೆಂದು ಕರೆದುಕೊಂಡಿರುವ ಮುನಿ ಪರಂಪರೆ ಕಂಡುಬರುತ್ತದೆ. ಈ ಪರಂಪರೆಯ ಕರ್ಮಾರ ಕುಲದ ಲೋಹಾಸನಿ ಗಧಾದರನು ಬಂಗಾಳದ ವರೇಂದ್ರಿದೇಶದ ತಡಾಗ್ರಾಮದಿಂದ ಬಂದು ಬಳ್ಳಾರಿ ಬಳಿಯ ಕೊಳಗಲ್ಲಲ್ಲಿ ಕಾರ್ತಿಕೇಯ ದೇವಾಲಯವನ್ನು ಕಟ್ಟಿಸಿ ಕಾರ್ತಿಕೇಯ ತಪೋವನವನ್ನು ಸ್ಥಾಪಿಸಿರುತ್ತಾನೆ. ಅವನ ಸಂತತಿ ಹೀಗಿದೆ :

ಲೋಹಾಸನಿ ಗಧಾದರ	- ಕ್ರಿ.ಶ. ೯೬೬
ದಂಡಾಸನಿ ಗಧಾದರ	- ಕ್ರಿ.ಶ. ೯೭೧
ಲೋಹಾಸನಿ ಗಜೌಧರಯ್ಯ	- ಕ್ರಿ.ಶ. ೯೮೪
ಲೋಹಾಸನಿ ವಿರಡಿಗಳು	- ಕ್ರಿ.ಶ. ೯೯೬
ಗದಾಧರರಸ	- ಕ್ರಿ.ಶ. ೧೦೧೪
ದಂಡಾಸನಿದೇವ	- ಕ್ರಿ.ಶ. ೧೦೪೯
ದಂಡಾಸನಿ ವಿಶ್ವರೂಪ ಬ್ರಹ್ಮಚಾರಿ	- ಕ್ರಿ.ಶ. ೧೦೯೮
ದಂಡಾಸನಿ ಯಶೋಧರ ಬ್ರಹ್ಮಚಾರಿ	- ಕ್ರಿ.ಶ. ೧೧೧೯
ದಂಡಾಸನಿ ಮಾಧವ ಬ್ರಹ್ಮಚಾರಿ	- ಕ್ರಿ.ಶ. ೧೧೨೦
ವಿಷ್ಣುಕರ ಬ್ರಹ್ಮಚಾರಿ- ದಂಡಾಸನಿ ಲೋಹಾಸನಿ	- ಕ್ರಿ.ಶ. ೧೨೦೭
ಉದಯಾಕರದೇವ ಬ್ರಹ್ಮಚಾರಿ	- ಕ್ರಿ.ಶ. ೧೨೧೮

ಮುಂದೆ ಈ ಪರಂಪರೆ ನಿಂತು ಹೋಗುತ್ತದೆ.

ಕಾರ್ತಿಕೇಯ ತಪೋವನಾಧಿಪತಿಯನ್ನು ಉಲ್ಲೇಖಿಸುವ ಮೊದಲ ಶಾಸನ ಕುಡತಿನಿ ಗ್ರಾಮದಲ್ಲಿದೆ. ಆ ಗ್ರಾಮದ ಅಗಸೆ ಬಾಗಿಲಿನಲ್ಲಿರುವ ಕ್ರಿ.ಶ. ೯೪೭ರ ರಾಷ್ಟ್ರಕೂಟ ಅರಸ ಅಕಾಲವರ್ಷ ಮೂರನೆಯ ಕೃಷ್ಣನ ಕಾಲದ ಶಾಸನ. ಇದರ ಮುಂದಿನ ಮತ್ತು ಬಲಭಾಗಗಳಲ್ಲಿ ಕೆತ್ತನೆ ಇದೆ. ಮುಂದಿನ ಭಾಗದಲ್ಲಿ ಕುರುಗೋಡಿನ ಮುನ್ನೂರ್ವರ್ ಮಹಾಜನರು ದೇಕಮ್ಮನ ದೇಗುಲಕ್ಕೆ ಕುರುಗೋಡಿನಲ್ಲಿಯ ೭೦ ಮತ್ತರು ಭೂಮಿಯನ್ನು ದತ್ತಿ ಬಿಟ್ಟರು. ಈ ದತ್ತಿ ಹಾಳಾಗಲು ಅರಸನ ಆಜ್ಞೆಯ ಮೇರೆಗೆ ರುದ್ರರಾಶಿ ಭಟ್ಟಾರನು ಪುನಃ ದತ್ತಿ ಬಿಟ್ಟನು. ಬಲಭಾಗದಲ್ಲಿಯ ಶಾಸನದಂತೆ, ಸ್ವಸ್ತಿ ಸಮದಿಗತ ಪಂಚಮಹಾಶಬ್ದ

ವ್ರತಜಪನಿಮಹೋಮ ಸಂಯುಕ್ತಂ ಕಾರ್ತಿಕೇಯ ತಪೋವನಾಧಿಪತಿ ಶ್ರೀಮತ್ ಮಹಾಮುನಿಯ್ಯಂ, ಲೋಕಯ್ಯಗಾವುಂಡನು ದೇಕಮ್ಮನ ದೇಗುಲಕ್ಕೆ ದಾನಕೊಟ್ಟನು.

ಕೊಳಗಲ್ಲು ಗ್ರಾಮದ ಕ್ರಿ.ಶ. ೯೬೪ರ ರಾಷ್ಟ್ರಕೂಟ ಅರಸ ಅಕಾಲವರ್ಷ ದೇವನ ಶಾಸನದಲ್ಲಿ ಅಯ್ಯಪ್ಪಗಾವುಂಡನ ತಮ್ಮ ಚಂಗಗಾವುಂಡನು ಸೂಜಿಗಲ್ಲಿನ ಪಶ್ಚಿಮದ ೩೦ ಮತ್ತರ ಭೂಮಿ, ಗಾಣವನ್ನು ವಿದ್ಯಾದಾನ ಮಠದ ಅನ್ನಸತ್ರಕ್ಕಾಗಿ ಸತ್ಯರಾಶಿ ಭಟ್ಟಾರನಿಗೆ ದಾನ ಮಾಡಿದಂತೆಯೂ ಆ ದಾನವನ್ನು ವ್ರತಜಪನಿಯಮ ಹೋಮ ಸಂಯುಕ್ತಸ್ವಾಮಿ ಕಾರ್ತಿಕೇಯ ತಪೋವನಾಧಿಪತಿ ಲೋಹಾಸನಮಸ್ತ ಕೋಳಗಲ್ಲಿನ ಪ್ರಭು ಶ್ರೀಮತ್ ಗದಾಧರಯ್ಯನು ಸ್ಥಿರೀಕರಿಸಿದ ಬಗ್ಗೆ ಇದೆ.

ಕೊಳಗಲ್ಲು ಗ್ರಾಮದ ಕ್ರಿ.ಶ. ೯೬೭ರ ರಾಷ್ಟ್ರಕೂಟ ಅರಸ ಕೊಟ್ಟಿಗನ ಕಾಲದ ಶಾಸನದಲ್ಲಿ ಗೌಡದೇಶದ (ಬಂಗಾಲ) ತಡಾ ಗ್ರಾಮದಿಂದ ಬಂದಂಥ ಶಾಂಡಿಲ್ಯಸ್ತು ತಪಸ್ವಿ ಲೋಹಾಸನ ಮಹಾಮುನಿ ಗದಾಧರನು ಕಾರ್ತಿಕೇಯ ತಪೋವನದ ಅಧಿಕಾರಿಯಾಗಿದ್ದನು. ಕೊಳಗಲ್ಲಿನಲ್ಲಿ ಕಾರ್ತಿಕೇಯ, ಸೂರ್ಯ, ಬ್ರಹ್ಮ, ವಿಷ್ಣು, ಮಹೇಶ್ವರ, ಪಾರ್ವತಿ ಮತ್ತು ವಿನಾಯಕ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡುತ್ತಾನೆ. ಅಲ್ಲದೆ ಕೆರೆ, ಬಾವಿ, ಮಠಗಳನ್ನು ಕೂಡ ಕಟ್ಟಿಸಿದನು. ಈ ಪ್ರಶಸ್ತಿಯನ್ನು ಬರೆದ ಕವಿ ಕರ್ಮಾರ ಕುಲದ ಋಷಿ ಮೊಮ್ಮಗ ಅತಿಬಳನ ಮಗನಾದ ಮಧುಸೂದನ.

ಕುಡತಿನಿ ಗ್ರಾಮದ ಕುಮಾರಸ್ವಾಮಿ ದೇವಾಲಯದ ಜಗತಿಯಲ್ಲಿರುವ ಕ್ರಿ.ಶ. ೯೭೧ರ ರಾಷ್ಟ್ರಕೂಟ ಅರಸ ಕೊಟ್ಟಿಗನ ಕಾಲದ ಸಂಸ್ಕೃತ ಶಾಸನದಲ್ಲಿ ಭಟ್ಟಾತಳ ಹಳ್ಳಿಯ ಗದಾಧರನೆಂಬುವನು ಸ್ಕಂದ ದೇವನ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ.

ಅದೇ ಗ್ರಾಮದ ದುರ್ಗೇಶ್ವರಿ ದೇವಾಲಯದ ಮುಂದಿರುವ ಕ್ರಿ.ಶ. ೯೭೬ರ ಕಲ್ಯಾಣ ಚಾಲುಕ್ಯ ಅರಸ ಅಹಮಲ್ಲದೇವ (೨ನೆಯ ತೈಲಪ)ನ ಕಾಲದ ಶಾಸನದ ಆರಂಭದಲ್ಲಿ ಸ್ಕಂದ ದೇವನ ಸ್ತೋತ್ರವಿದೆ. ಶ್ರೀಮತ್ ಸ್ವಾಮಿ ದೇವರ ಪಾದಪದ್ಮೋಪಜೀವಿ ತಪೋವನಾಧಿಪತಿ ಶ್ರೀಮದ್ದಂಡಾಸನೀ ಗದಾಧರ ಬ್ರಹ್ಮಚಾರಿ, ಸ್ಥಾನದಯ್ಯುವರ್ಗದವರು ಮತ್ತು ಹಂಪನ ಭಟ್ಟೋಪಾಧ್ಯಾಯ ಇವರ ಸಮ್ಮುಖದಲ್ಲಿ ಕೊಟ್ಟಿ ತೊನೆಯ ಕೇರಿಯ ಭೈರವ ದೇವರಿಗೆ ಭೂದಾನ ಬಿಡಲಾಯಿತು.

ಅದೇ ಗ್ರಾಮದ ಕುಮಾರಸ್ವಾಮಿ ದೇವಾಲಯದ ಸಭಾಮಂಟಪದಲ್ಲಿಯ ಕ್ರಿ.ಶ. ೯೯೬ರ ಕಲ್ಯಾಣ ಚಾಲುಕ್ಯ ಅರಸ ಅಹಮಲ್ಲದೇವನ ಶಾಸನದಲ್ಲಿ 'ಪಂಚಮಹಾಶಬ್ದ ವ್ರತ ಸಂಯುಕ್ತ ಶ್ರೀಸ್ವಾಮಿ ತಪೋವನಾಧಿಪತಿಗಳಪ್ಪ xxxxx ಕೊಟ್ಟಿಸ್ಥಾನದಯ್ಯುವರ್ಗದ' ಸಂಯುಕ್ತ ತೋಟದಾನ ಕೊಟ್ಟ ವಿಷಯವಿದೆ. ಈ ಶಾಸನದಲ್ಲಿ ತಪೋವನಾಧಿಪತಿಗಳ ಹೆಸರು ತ್ರುಟಿತವಾಗಿದೆ.

ಅದೇ ಗ್ರಾಮದ ಕುಮಾರಸ್ವಾಮಿ ದೇವಾಲಯದ ಸಭಾಮಂಟಪದಲ್ಲಿಯ ಕ್ರಿ.ಶ. ೧೧೪೮ರ ಕಲ್ಯಾಣ ಚಾಲುಕ್ಯ ಅರಸ ತ್ರಿಭುವನ ಮಲ್ಲದೇವರ ಕಾಲದ ಶಾಸನದಲ್ಲಿ ಮಹಾಪ್ರಧಾನ ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯ ಮತ್ತು ಅವರ ಮೈದುನ ಮಹಾ ವಿಷ್ಣುವರಸರು, ಸ್ವಸ್ತಿ ಸಮದಿಗತ ಪಂಚಮಹಾಶಬ್ದ ವ್ರತಜಪನಿಯಮಹೋಮ ಸಂಯುಕ್ತ ಶ್ರೀ ಕಾರ್ತಿಕೇಯ ತಪೋವನಾಧಿಪತಿಗಳಾದ ದಂಡಾಸನೀ ವಿಶ್ವರೂಪ ಬ್ರಹ್ಮಚಾರಿಗಳು, ಸಮಸ್ತದೇಸಿಕಜನಾಧರರು, ಶ್ರೀಸ್ವಾಮಿ ಕಾರ್ತಿಕೇಯ ಪಾದಪದ್ಮೋಪ ಜೀವಿಗಳಾದ ಶ್ರೀಮತ್ ಕೊಟ್ಟಿತೊಣೆಯ ಸ್ಥಾನದಯ್ಯುವರ್ಗರಿದ್ದು, ಏರಣಿಗ ಮಾದೋಜನ ಮಗ ಸಾವಿಮೋಜ ಮತ್ತು ಬೇಚೋಜನ ಮಗ ಚಿಕ್ಕ ಮಾದೋಜರು ಶ್ರೀಸ್ವಾಮಿ ದೇವರ ನವಿಲಚ್ಚಿನ ಪೊನ್ನವನ್ನು ಲೊಕ್ಕಿಯ ಪೊನ್ನದ ಬದಲಾಗಿ ಅದರ ಸಮತೂಕದ ಬಂಗಾರದ ನಾಣ್ಯಗಳನ್ನು ಅಚ್ಚುಹಾಕಿ ಶ್ರೀ ಸ್ವಾಮಿಗೆ ವರ್ಷಕ್ಕೆ ೧೨ ಪೊನ್ನುಗಳನ್ನು ಕೊಡುತ್ತಾರೆ.

ಅದೇ ಗ್ರಾಮದ ಕುಮಾರಸ್ವಾಮಿ ದೇವಾಲಯದ ಜಗತಿಯಲ್ಲಿರುವ ಕ್ರಿ.ಶ. ೧೧೫೯ರ ಕಲ್ಯಾಣ ಚಾಲುಕ್ಯ ಅರಸ ತ್ರಿಭುವನಮಲ್ಲ ದೇವರ ಕಾಲದ ಶಾಸನದಲ್ಲಿ ಸ್ವಸ್ತಿ ಸಮದಿಗತ ಪಂಚಮಹಾಶಬ್ದ ವ್ರತಜಪನಿಯಮ ಹೋಮ ಸಂಯುಕ್ತ ಶ್ರೀ ಸ್ವಾಮಿ ಕಾರ್ತಿಕೇಯ ತಪೋವನಾಧಿಪತಿ ಶ್ರೀಮದ್ದಂಡಾಸನೀ ವಿಶ್ವರೂಪ ಬ್ರಹ್ಮಚಾರಿಗಳು, ಸ್ಥಾನದಯ್ಯುವರ್ಗ, ಸಜಾವಿಚಕ್ರಪಾಣಿಯರಿದ್ದು, ಕೊಟ್ಟಿತೊಣೆಯ ಮಳಿಗೆಯ ಭಗವಿತದೇವಿಗೆ ಪರಮೇಶ್ವರ ದತ್ತಿಯಾಗಿ ಬಿಟ್ಟ ಉಲ್ಲೇಖವಿದೆ.

ಅದೇ ಗ್ರಾಮದ ವೀರಭದ್ರ ದೇವಾಲಯದ ಮುಂದಿರುವ ಕ್ರಿ.ಶ. ೧೧೯೯ರ ಚಾಲುಕ್ಯ ಅರಸ ತ್ರಿಭುವನಮಲ್ಲದೇವರ ಕಾಲದ ಶಾಸನದಲ್ಲಿ ಸ್ವಸ್ತಿ ಸಮದಿಗತ ಪಂಚಮಹಾಶಬ್ದ ವ್ರತಜಪನಿಯಮ ಹೋಮ ಸಂಯುಕ್ತ ಶ್ರೀ ಸ್ವಾಮಿ ಕಾರ್ತಿಕೇಯ ತಪೋವನಾಧಿಪತಿ ಶ್ರೀಮದ್ದಣ್ಡಾಸನಿ ಯಶೋಧರ ಬ್ರಹ್ಮಚಾರಿಯರಸರು ಸಮಸ್ತ ದೇಶಿಗಜನಾಧರರು ಶ್ರೀ ಸ್ವಾಮಿ ಕಾರ್ತಿಕೇಯ ಪಾದಪದ್ಮೋಪ ಜೀವಿಗಳಾದ ಶ್ರೀಮತ್ ಕೊಟ್ಟಿತೊಣೆಯ ಸ್ಥಾನದಯ್ಯುವರ್ಗದವರ ಮುಖಂಡತ್ವದಲ್ಲಿ ಕೇಶಿರಾಜನು ಸರಸ್ವತಿ, ವಿನಾಯಕ, ಇಂದ್ರನ ದೀಪಸ್ತಂಬ ಕಟ್ಟಿಸಿ ಭೂದಾನ ಕೊಡುತ್ತಾನೆ.

ಅದೇ ಗ್ರಾಮದ ದರ್ಗಾದಲ್ಲಿರುವ ಕ್ರಿ.ಶ. ೧೧೨೦ರ ಶಾಸನವು ಬಹಳ ತೃಟಿತವಾದ ಇದರಲ್ಲಿ ಪಂಚಮಹಾಶಬ್ದ ವ್ರತಜಪನಿಯಮ ಹೋಮ ಸಂಯುಕ್ತ ಶ್ರೀ ಸ್ವಾಮಿ ಕಾರ್ತಿಕೇಯ ಪಾದಪದ್ಮೋಪ ಜೀವಿಗಳಾದ ಶ್ರೀ ಮದ್ದಾಂಡಾಸನಿ ಮಾಧವ ಬ್ರಹ್ಮಚಾರಿಯರಸರು, ಸ್ಥಾನದಯ್ಯುವರ್ಗದವರ ಸಮ್ಮುಖದಲ್ಲಿ ದುರ್ಗರಾಜ ದಂಡನಾಯಕ ಮತ್ತು ಅವನ ಮಗಳು ಚಾವಣದೇವಿಯವರು ದುರ್ಗೇಶ್ವರ ದೇವಾಲಯಕ್ಕೆ ಭೂಮಿ ದಾನ ಕೊಡುತ್ತಾರೆ.

[illegible]

ಅದೇ ಗ್ರಾಮದ ಕುಮಾರಸ್ವಾಮಿ ದೇವಾಲಯದ ಮುಂದಿನ ಭಾಗದಲ್ಲಿರುವ ಕ್ರಿ.ಶ. ೧೧೪೮ರ ಕಲ್ಯಾಣ ಚಾಲುಕ್ಯ ಅರಸ ಜಗದೇಕಮಲ್ಲನ ಕಾಲದ ಶಾಸನದಲ್ಲಿ ಕೇಶಿರಾಜನ ಮಗ ದೇಕರಸನು ಅವನ ಮಗ ಮಲ್ಲಿದೇವನು ಸಮದಿಗತ ಪಂಚಮಹಾಶಬ್ದ ವ್ರತಜಪನಿಯಮಹೋಮ ತಪೋವನಾಧಿಪತಿ ಶ್ರೀಮದ್ದಂಡಾಸನಿ, ಲೋಹಾಸನಿ ಮಾಧವ ಬ್ರಹ್ಮಚಾರಿಯರಸರು, ಶಿಷ್ಟಜನಾದರರು, ಶ್ರೀಸ್ವಾಮಿ ಕಾರ್ತಿಕೇಯ ಪಾದಪದ್ಮೋಪ ಜೀವಿಗಳಾದ ಶ್ರೀಮತು ಕೊಟ್ಟಿತೊಣೆಯ ಸ್ಥಾನದಯ್ಯುವರ್ಗದವರಿದ್ದು, ಶತಕೋಟಿ ತೀರ್ಥದ ಶ್ರೀ ಸ್ವಾಮಿದೇವರ ಸಂನಿದಾನದಲು ಸ್ವಾಮಿಯಾತ್ರೆಗೆ ಬಂದ ಕಪ್ಪಡಿಗಳ ಸತ್ರಕ್ಕೆ ಭೂದಾನ ಕೊಟ್ಟ ಉಲ್ಲೇಖವಿದೆ.

ಅದೇ ಗ್ರಾಮದ ಕುಮಾರಸ್ವಾಮಿ ದೇವಾಲಯದ ಜಗತಿಗೆ ಜೋಡಿಸಿದ ಕ್ರಿ.ಶ. ೧೧೬೮ರ ಶಾಸನದಲ್ಲಿ ಕೊಂಕಣಗೇರಿಯ ಗೌಡನೊಬ್ಬನು ಋಣಮೋಚನ ದೇವರ ದೇವಾಲಯವನ್ನು ಕಟ್ಟಿಸಿ, ಸ್ವಸ್ತಿ ಸಮದಿಗತ ಪಂಚಮಹಾಶಬ್ದ ವ್ರತನಿಯಮ ಸಂಯುಕ್ತರು ಕಾರ್ತಿಕೇಯ ತಪೋವನಾಧಿಪತಿ ಶ್ರೀಮದ್ದಂಡಾಸನಿ ಪುರುಷೋತ್ತಮ ಬ್ರಹ್ಮಚಾರಿಯ ಮುಖಂಡತ್ವದಲ್ಲಿ ಭೂದಾನ ಕೊಡುತ್ತಾನೆ. ಪುರುಷೋತ್ತಮ ಬ್ರಹ್ಮಚಾರಿ ಈ ಪ್ರದೇಶಕ್ಕೆ ಮುಖಂಡನಾಗಿದ್ದನು.

ಸಂಡೂರಿನ ಕುಮಾರಸ್ವಾಮಿ ಬೆಟ್ಟದಲ್ಲಿಯ ಪಾರ್ವತಿ ದೇವಾಲಯದಲ್ಲಿರುವ ಕ್ರಿ.ಶ. ೧೨೦೬ರ ಹೊಯ್ಸಳ ಅರಸ ವೀರಬಲ್ಲಾಳನ ಕಾಲದ ಶಾಸನದಲ್ಲಿ ಶ್ರೀ ಸ್ವಾಮಿದೇವರಿಗೆ ರಾಷ್ಟ್ರಕೂಟ ಅರಸ ಮುಮ್ಮಡಿ ಕೃಷ್ಣನ ಕಾಲದಲ್ಲಿ ಬಿಟ್ಟ ದತ್ತಿಯು ಕ್ರಮೇಣ ನಿಂತುಹೋಗಲು, ಅರಸನ ಆಜ್ಞೆಯಂತೆ ಪ್ರಧಾನಮಂತ್ರಿ ಮಹಾದೇವ ದಂಡನಾಯಕನು ಕೆರೆಯಪಳ್ಳಿ ಗ್ರಾಮವನ್ನು "ಸಕಳಕಳಾ ನಿಷ್ಣಾತಂ ಪೆಸರ್ವೆತ್ತಂ" ವಿಷ್ಣುಕರ ಬ್ರಹ್ಮಚಾರಿಗೆ ಪುನಃ ದತ್ತಿಯಾಗಿ ಬಿಡುತ್ತಾನೆ.

ಕುಡತಿನಿ ಗ್ರಾಮದ ಬೇವಿನ ಮರದ ಕೆಳಗಿರುವ ಕ್ರಿ.ಶ. ೧೨೦೭ರ ಹೊಯ್ಸಳ ಅರಸ ವೀರಬಲ್ಲಾಳನ ಕಾಲದ ಶಾಸನದಂತೆ, ಸ್ವಸ್ತಿ ಸಮದಿಗತ ಶ್ರೀಸ್ವಾಮಿ ಕಾರ್ತಿಕೇಯ ತಪೋವನಾಧಿಪತಿಗಳಾದ ವಿಷ್ಣುಕರ, ಬ್ರಹ್ಮಚಾರಿ, ಮುಖ್ಯ ಸ್ಥಾನದಯ್ಯುವರ್ಗದವರು, ಶ್ರೀ ಏಳ್ಕೋಟಿ ಮಹಾದೇವರು, ಅಸಂಖ್ಯಾತ ಗಣಗಳು, ಮುಮ್ಮರಿದಂಡುಗಳು ಕೂಡಿ, ಊರಿಗೆ ಅನ್ಯಾಯ ಅವಾಂತರ ಬಂದಾಗ ಸ್ಥಾನಿಕರು, ತಪೋಧನರ ಸಂಮತ ನಡೆಯುವಂತದ್ದು ಎಂದು ಪ್ರತಿಜ್ಞೆ ಮಾಡುತ್ತಾರೆ.

ಅದೇ ಗ್ರಾಮದ ಕುಮಾರಸ್ವಾಮಿ ದೇವಾಲಯದ ಜಗತಿಗೆ ಜೋಡಿಸಿದ ಕ್ರಿ.ಶ. ೧೨೧೦ರ ಶಾಸನದಂತೆ, ಸ್ವಸ್ತಿ ಸಮದಿಗತ ಪಂಚಮಹಾಶಬ್ದ ವ್ರತ ಜಪನಿಯಮ ಸಂಯುಕ್ತರು ಶ್ರೀ ಕಾರ್ತಿಕೇಯ ತಪೋವನಾಧಿಪತಿ ಶ್ರೀ ಮದ್ದಂಡಾಸನ ಸುಖಾಸೀನರಾದ ವಿನಯನಿದಿ ವಿಷ್ಣುಕರ ದೇವರು ಹಾಗೂ ಸ್ಥಾನದಯ್ಯುವರ್ಗದವರು, ಏಳ್ಕೋಟಿ ತಪೋಧನರು, ಬಣಜಿಗರು, ಭಕ್ತರು ಮುಂತಾದವರ ಮುಖಂಡತ್ವದಲ್ಲಿ ನಾಗೇಶ್ವರ ದೇವರಿಗೆ ಭೂಮಿಗಳನ್ನು ದಾನ ಬಿಡುತ್ತಾರೆ.

ಅದೇ ಗ್ರಾಮದ ಬೋಳುಬಸವ ದೇವಾಲಯದ ಮುಂದಿರುವ ಕ್ರಿ.ಶ. ೧೧೯೯ರ ಹೊಯ್ಸಳ ಅರಸ ವೀರಬಲ್ಲಾಳನ ಕಾಲದ ಶಾಸನದಲ್ಲಿ ಸ್ವಸ್ತಿ ಸಮದಿಗತ ಪಂಚಮಹಾಶಬ್ದ ವ್ರತಜಪನಿಯಮಹೋಮ ಕಾರ್ತಿಕೇಯ ತಪೋವನಾಧಿಪತಿ ಶ್ರೀಮದ್ದಂಡಾಸನಿ, ಲೋಹಾಸನಿ ಉದಯಾಕರ ಬ್ರಹ್ಮಚಾರಿಯರಸರು, ಮುಖ್ಯವಾಗಿ ಕೊಟ್ಟಿತೊಣೆಯ ಸ್ಥಾನದಯ್ದುವರ್ಗದವರು, ಪಂಚಮಠದ ತಪೋಧನರು, ಅಸಂಖ್ಯಾತ ಗಣಗಳು, ಗಾಣದರವತ್ತೊಕ್ಕಲುಗಳೆಲ್ಲರೂ ಮಹಾಸಭೆಯಾಗಿ ನೆರೆದು, ಶ್ರೀ ತೆಲ್ಲಿಗೇಶ್ವರ ದೇವರ ಶುಭದಿನ ಮುಹೂರ್ತದಲ್ಲಿ ಪ್ರತಿಷ್ಠಾಪನೆ ಮಾಡಿದರು.

ಇತಿಹಾಸಪೂರ್ವ ಕಾಲದಿಂದಲೂ ಅಭಿವೃದ್ಧಿಯಲ್ಲಿದ್ದ ಕಾರ್ತಿಕೇಯ ತಪೋವನದ ಅಧಿಪತಿಗಳ ಪರಂಪರೆ ರಾಷ್ಟ್ರಕೂಟರ ಕಾಲದಿಂದ ತಿಳಿದುಬರುತ್ತದೆ. ಕಾರ್ತಿಕೇಯ ತಪೋವನಾಧಿಪತಿ ಮಹಾಮುನಿಯಂನ ನಂತರ ಗದಾಧರಯ್ಯ ಬ್ರಹ್ಮಚಾರಿ ಅಧಿಕಾರವಹಿಸಿಕೊಂಡನು. ಇವನು ಗೌಡದೇಶದಿಂದ ಬಂದವನು. ತಡಾ ಎನ್ನುವ ಗ್ರಾಮದಲ್ಲಿ ಜನಿಸಿದನು. ಇದರಿಂದ ಉತ್ತರದ ಕಡೆಯವನಾಗಿದ್ದು, ದಕ್ಷಿಣದ ಕೊಳಗಲ್ಲು ಮತ್ತು ಕುಡತಿನಿ ಗ್ರಾಮಗಳಲ್ಲಿ ನೆಲೆಸಿದನೆಂದು ತಿಳಿಯುತ್ತದೆ. ಲೋಹಾಸನಿ, ದಂಡಾಸನಿ ಗದಾಧರನು ಕಾರ್ತಿಕೇಯ ಪಾದ ಪದ್ಮೋಪಜೀವಿಯಾಗಿದ್ದು, ಮೊದಲು ಕೊಳಗಲ್ಲು ನಂತರ ಕುಡತಿನಿ ಗ್ರಾಮಗಳಲ್ಲಿ ಸ್ಕಂದನ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದನು.

ಕಾರ್ತಿಕೇಯನ ಭಕ್ತನಾದ ಮಧುಸೂದನ ಗದಾಧರನಂತೆ ಬ್ರಹ್ಮಚಾರಿಯಾಗಿದ್ದ. ಕೊಳಗಲ್ಲು ಶಾಸನದಲ್ಲಿ "ಶ್ರೀ ಕರ್ಮಾರ ಕುಲಾಹ್ವಯದ್ದ್ವಿಜವರ ಗ್ರಾಮಸ್ತು ತರ್ಕಾರಿತೋ ನಿಷ್ಕ್ರಮ್ಯಕ್ರಮ ನಿರ್ಮಲ ಸ್ಸಮಭವತಸ್ಮಿನ್ನಪಿ (ಷ್ಪಂ)ಡಿತಸ್ತುತ್ಪುತ್ರ ಪ್ರಾಥಿತಃ ಕ್ಷಿತಾವತಿ (ಬ)ಳಸ್ತಸ್ಮಾದ ಭೂದಯ (ದ್ಯ) ಸ್ಸುತಸ್ತೇನ ಶ್ರೀ ಮಧುಸೂದನಾಖ್ಯಾಕವಿನಾಶಸ್ತಾ ಪ್ರಶಸ್ತಿಃ ಕೃತಾಃ" ಎಂದಿರುವುದರಿಂದ ಇದನ್ನು ಋಷಿ ಮೊಮ್ಮಗ, ಅತಿಬಳನ ಮಗ ಮಧುಸೂದನ ರಚಿಸಿದನೆಂದು ತಿಳಿಯುತ್ತದೆ. ಇದೇ ವಿಷಯ ಕುಡತಿನಿ ಶಾಸನದ ಕೊನೆಯಲ್ಲಿ ಬರುತ್ತದೆ. ಅದರಲ್ಲಿ "ಶ್ರೀ ಕರ್ಮಾರ ಕುಳಾಹ್ವದ್ವಿಜವರ ಗ್ರಾಮಸ್ಯತ ತ್ಕಾರಿತೊ ನಿಷ್ಕ್ರಮ್ಯಕ್ರಮ ನಿರ್ಮಳಃ ಸಮಭವತಸ್ಮಿನೃಷಿರ್ಪಣಿತ್ವಸ್ತತ್ಪುತ್ರೋ ಪ್ರಥಿತಃ ಕ್ಷಿತಾವತಿ ಬಳ' ಎಂದಿದೆ. ಹೀಗಾಗಿ, ಈ ಶಾಸನವನ್ನು ಮಧುಸೂದನನ ತಂದೆ ಅತಿಬಳ ರಚಿಸಿದನೆಂದು ಸ್ಪಷ್ಟವಾಗುತ್ತದೆ. ಈ ಶಾಸನದಲ್ಲಿ 'ತರ್ಕಾರಿತೊ' ಎಂಬಲ್ಲಿ ತ್ಕಾರಿತೊ ಎಂದಿದೆ. 'ಕಾರಿತ', 'ಪ್ರಥಿತ' ಎಂಬ ಪದಗಳು ಶಾಸನ ಶ್ಲೋಕವನ್ನು ಅದರಲ್ಲಿ ಉಲ್ಲೇಖವಾದ ಕವಿಯೇ ರಚಿಸಿದನೆಂದಾಗುವುದು.

ಕೊಳಗಲ್ಲು ಶಾಸನವನ್ನು ಸಂಗ್ರಹಿಸಿ ಪ್ರಕಟಿಸಿದ ಎನ್.ಲಕ್ಷ್ಮಿನಾರಾಯಣರಾವ್ ಅವರು 'ತರ್ಕಾರಿತೊ' ಎಂದು ಅರ್ಥೈಸಿ, ಮಧುಸೂದನ ಉತ್ತರ ಭಾರತದಿಂದ ಬಂದವನೆಂದು ಹೇಳಿದ್ದಾರೆ. ಬಹುಶಃ ಈ ಶಾಸನದಲ್ಲೂ ಕುಡತಿನಿ ಶಾಸನದಲ್ಲಿರುವಂತೆ ತ್ಕಾರಿತೊ ಎಂದಿರಬೇಕು. ಆ ಗ್ರಾಮದ ಮತ್ತೊಂದು ಶಾಸನವು, ಶಾಸನ ಕವಿಯನ್ನು "ಮಯೂರ ಮುದ್ರಾಹಸ್ತ ಶ್ರೀ ಸೋಮೇಶ್ವರರಾಸ್ಥಾನೇ | ಪ್ರಮಾಣ್ಯಂ ಯದಿ ವೇದೇಷು ಬ್ರಹ್ಮ ವಿಷ್ಣು

ಮಹೇಶ್ವರೇ ದೇವಕಾಗ್ರತ್ರಯಸ್ಯಾಪಿ ಲಬ್ದಸ್ಯಾಸ್ತಿ ಪ್ರಮಾಣತಾ | ಶ್ರೀ ಕರ್ಮಾರ ಕುಳಾಹ್ವಯದಿಜವ xx ಗ್ರಾಮಸ್ಯ xxxx ತೋ ನಿಷ್ಕ್ರಮ್ಯಕ್ರಮ'' ಎಂದು ವರ್ಣಿಸುತ್ತದೆ. ಈ ಶಾಸನದ ಕತೃವಿನ ಹೆಸರು ತೃಟಿತವಾಗಿದೆ. ಈ ಎಲ್ಲಾ ವಿಷಯಗಳಿಂದ ಅವರೆಲ್ಲರೂ ಉತ್ತರ ಭಾರತದಿಂದ ಬಂದವರಾಗಿರದೇ, ಇದೇ ಪ್ರದೇಶದ ಕಮ್ಮಾರ ಕುಲದ ಬ್ರಾಹ್ಮಣರ ವಂಶಕ್ಕೆ ಸಂಬಂಧಿಸಿದವರಾಗಿದ್ದು, ಅವರ ವಂಶಜರು ಋಷಿ ಪಂಡಿತರಾಗಿದ್ದರೆಂದು ತಿಳಿದುಬರುತ್ತದೆ.

ಕಾರ್ತಿಕೇಯ ತಪೋವನಾಧಿಪತಿಗಳು ತಮ್ಮನ್ನು ಕರೆದುಕೊಳ್ಳುವಾಗ ಲೋಹಾಸನಿ, ದಂಡಾಸನಿ ಎಂದು ಗುರುತಿಸಿಕೊಂಡಿದ್ದಾರೆ. ಲೋಹಾಸನಕ್ಕೆ ಸಂಬಂಧಿಸಿದ ಕಥೆಯ ಪ್ರಕಾರ, ಕಮ್ಮಾರನು ಸೂರ್ಯನಿಂದ ಶಾಖ ತೆಗೆದುಕೊಂಡು ಲೋಹದಿಂದ ಲೋಹೇಶ್ವರ (ಲೋಹಕ್ಕೆ ಒಡೆಯ)ನಿಗೆ ಆಸನ ಮಾಡಲು ಪ್ರಾರಂಭಿಸುತ್ತಾನೆ. ಈ ಆಸಾನ ಸರಿಯಾಗಿ ಹೊಂದದೇ ಇರುವುದಕ್ಕೆ ಚಿಂತಾಗ್ರಸ್ತನಾಗಿದ್ದಾಗ, ಆ ದಿನ ರಾತ್ರಿ ಲೋಹೇಶ್ವರನು ಕನಸಿನಲ್ಲಿ ಬಂದು ಆಸನ ಮಾಡುವ ಬಗೆ ಮತ್ತು ಅದರ ಲಕ್ಷಣಗಳನ್ನು ಹೇಳುತ್ತಾನೆ. ಮರುದಿವಸ ಆತನ ಹೇಳಿಕೆಯ ಪ್ರಕಾರ ಆಸನ ನಿರ್ಮಿಸಿದಾಗ ಒಂದು ಸರಿಯಾಗುತ್ತದೆ. ಲೋಹಾಸನಿ, ದಂಡಾಸನಿ ಎನ್ನುವುದು ಲೋಹ ತಂತ್ರಗಾರಿಕೆ ಮತ್ತು ಕಟ್ಟಿಗೆಯ ಕೆಲಸಗಳಿಗೆ ಮುಖಂಡತ್ವವನ್ನು ಸೂಚಿಸುತ್ತದೆ. ಬೆಟ್ಟದಾದಿಯಲ್ಲಿ ಹರಡಿರುವ ಕಬ್ಬಿಣದ ಅದಿರು ಲೋಹದ ಕೆಲಸಕ್ಕೆ ಮತ್ತು ಕಾಡು ಕಟ್ಟಿಗೆಯ ಕೆಲಸಕ್ಕೆ ಅನುಕೂಲವಾಗಿದ್ದವು. ಹೀಗಾಗಿ ಇಲ್ಲಿ ಈ ಎರಡೂ ಕಾರ್ಯಗಳು ಅತಿ ಪ್ರಾಚೀನ ಕಾಲದಿಂದಲೂ ಅಭಿವೃದ್ಧಿಯಲ್ಲಿದ್ದವು. ಕುಡತಿನಿಯ ಶಾಸನವು ''ಸುಧಾಶೀಳ ಕಾಷ್ಟೇಷ್ಟಕಂ ಚಿತ್ರಕಾಂಚನ ಲೋಹಾದಿ ಕಣ್ಣಸ್ಫುಟಿತನವಕರ್ಮ್ಮ xxxxx ತುರಾಶ್ರಮ xx ಗಿಗಳಿ xx ರ್ತ್ಥಿಗೆ ಹೊತ್ತಗೆಗಾ (ಕ್ಷರಾರ್ತ್ಥಿ) ಗಾಹಾರಕಂ ಬಿಟ್ಟ ಕೆಯಿ'' ಎಂದು ಉಲ್ಲೇಖಿಸುವದರಿಂದ ಕಾಷ್ಟ, ಲೋಹ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಿರುವವರ ಆಹಾರಕ್ಕೆ ಭೂದಾನ ಬಿಡಲಾಗಿತ್ತೆಂದು ತಿಳಿಯುತ್ತದೆ. ಈ ಶಾಸನ ಬಹಳ ತೃಟಿತವಾಗಿದ್ದು, ಬರವಣಿಗೆ, ಭಾಷೆಗಳಿಂದ ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದೆ.

ಸ್ಥಾನದಯ್ಯುವರ್ಗದವರು

ಕುಡತಿನಿಯ ಶಾಸನಗಳಲ್ಲಿ ಉಲ್ಲೇಖವಾದ ಸ್ಥಾನದಯ್ಯುವರ್ಗದವರು ಅಲ್ಲಿನ ಧರ್ಮಕ್ಕೂ, ಗ್ರಾಮಕ್ಕೂ ಮುಖ್ಯಸ್ಥರಾಗಿದ್ದರು. ಇವರು ತಮ್ಮನ್ನು ಕಾರ್ತಿಕೇಯ ಪಾದಪದ್ಮೋಪಜೀವಿಗಳೆಂದು ಕರೆದುಕೊಂಡಿದ್ದಾರೆ. ಧಾರ್ಮಿಕ ಕಾರ್ಯ, ದಾನದತ್ತಿ ಬಿಡುವುದು, ನ್ಯಾಯ ಬಗೆಹರಿಸುವುದು ಎಲ್ಲಾ ಪ್ರಮುಖ ಕಾರ್ಯಗಳು ಕಾರ್ತಿಕೇಯ ತಪೋವನದ ಅಧಿಪತಿಗಳ ಮತ್ತು ಸ್ಥಾನದಯ್ಯುವರ್ಗದವರ ಸಮ್ಮುಖದಲ್ಲಿ ನಡೆಯುತ್ತಿದ್ದವು. ಡಾ. ಅ.ಸುಂದರ ಅವರು ಈ ಸ್ಥಾನದಯ್ಯುವರ್ಗದವರು ವಿಶ್ವಕರ್ಮ ಪರಂಪರೆಯ ಪಾಂಚಾಳರು (ಕಲ್ಕುಟಗ, ಕಮ್ಮಾರ, ಅಕ್ಕಸಾಲಿಗ, ಕಂಚುಗಾರ, ಬಡಗಿ) ಆಗಿರಬಹುದು ಎಂದು ಹೇಳುತ್ತಾರೆ.

[illegible]

ಈ ಪ್ರದೇಶದಲ್ಲಿ ಲೋಹ ಮತ್ತು ಕಟ್ಟಿಗೆಯ ಕೆಲಸಗಳು ಪ್ರಮುಖವಾದ ಕಾರಣ. ಇಲ್ಲಿಯ ಸ್ಥಾನದಯ್ಯುವರ್ಗದವರು ವಿಶ್ವಕರ್ಮ ಪರಂಪರೆಯ ಪಾಂಚಾಳವರ್ಗದ ಕಮ್ಮಾರ, ಬಡಗಿ, ಅರ್ಕಸಾಲಿ, ಕಂಚುಗಾರ, ಶಿಲ್ಪಿಗಳಾಗಿದ್ದರು. ಈ ಧರ್ಮಕ್ಕೆ, ಗ್ರಾಮಕ್ಕೆ ಮತ್ತು ಕಬ್ಬಿಣ ಅದಿರನ್ನು ಹೊಂದಿದ ಪರ್ವತ ಪ್ರದೇಶಕ್ಕೆ ಪಾಂಚಾಳಕುಲದ ಜನಾಂಗದವರು ಮುಖಂಡರಾಗಿದ್ದರು ಎಂಬುದು ಕುಡತಿನಿ ಗ್ರಾಮದ ಶಾಸನಗಳಲ್ಲಿಯ "ಶ್ರೀ ಕರ್ಮಾರ ಕುಳಹ್ಯಯದ್ವಿಜವರ ಗ್ರಾಮಸ್ಯತ ಹಾಗೂ ಈ ಧರ್ಮಕ್ಕೆ ಸ್ಥಾನದಯ್ಯುವರ್ಗಮುಂವೊಡೆಯರಾಗಿ ಪ್ರತಿಪಾಳಿಸುವರು" 'ಬ್ರಹ್ಮಚಾರಿ ಮುಖ್ಯಸ್ಥಾನದಯ್ಯುವರ್ಗಗಳ್ದೇವರ' ಎಂಬ ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ.

ಈ ಮೊದಲೇ ಹೇಳಿದಂತೆ ಉತ್ತರ ಕರ್ನಾಟಕದಲ್ಲಿ ಕಬ್ಬಿಣದ ಅದಿರನ್ನು ಬಳಸುವ ಬೃಹತ್ ಶಿಲಾ ಸಂಸ್ಕೃತಿಯ ಹಂತವು ಕ್ರಿ.ಪೂ.ಸುಮಾರು ೧೨೦೦ - ೨೦೦೦ರ ವರೆಗೆ ಅಸ್ತಿತ್ವದಲ್ಲಿತ್ತು. ಹಿರೇಬೆನಕಲ್ (ಗಂಗಾವತಿ ತಾಲೂಕು) ಹಂಪಿ ಪ್ರದೇಶಗಳಲ್ಲಿ ಬೃಹತ್ ಶಿಲಾಯುಗದ ನೆಲೆಗಳು ಬಹಳಷ್ಟು ಕಂಡುಬರುತ್ತವೆ. ಈ ನೆಲೆಯಲ್ಲಿಯ ಬೃಹತ್ ಶಿಲಾಗೋರಿಗಳಲ್ಲಿ ಕಂಡುಬಂದಂತಹ ಕಬ್ಬಿಣದ ಉಪಕರಣಗಳ ವೈಜ್ಞಾನಿಕ ಅಧ್ಯಾಯನದಿಂದ ಅವು ಸಂಡೂರು, ತೋರಣಗಲ್ಲು, ಕುಡತಿನಿ ಪ್ರದೇಶದವೆಂದೂ ಮತ್ತು ಈ ಬೆಟ್ಟಗಳ ಅದಿರಿನಿಂದ ತಯಾರಾದವು (ಕ್ರಿ.ಪೂ. ೧೦೦೦ - ೮೦೦ ಅವಧಿಯಲ್ಲಿ) ಎಂದು ತಿಳಿದುಬರುತ್ತದೆ.

ಪ್ರಾರಂಭದಲ್ಲಿ ದಕ್ಷಿಣ ಭಾರತಕ್ಕೆ ಭೇಟಿಕೊಟ್ಟ ಯುರೋಪಿನ ಪ್ರವಾಸಿಗರು, ಕರ್ನಾಟಕದ ಕಮ್ಮಾರಿಕೆಯ ತಂತ್ರದ ಬಗ್ಗೆ ಇಲ್ಲಿ ತಯಾರಾಗುತ್ತಿದ್ದ ಕಬ್ಬಿಣ ಬೇರೆ ಪ್ರದೇಶಗಳಿಗಿಂತಲೂ ಉತ್ಕೃಷ್ಟವಾಗಿದ್ದರಿಂದ ಬಹು ಬೇಡಿಕೆಯುಳ್ಳದ್ದಾಗಿತ್ತೆಂದು ಹೇಳಿದ್ದಾರೆ. ಸಂಡೂರು, ಗಂಗಾವತಿ ಪ್ರದೇಶ ಬೃಹತ್ ಶಿಲಾ ಸಂಸ್ಕೃತಿಯ ಕೇಂದ್ರವಾಗಿತ್ತು. ಈ ಸಂಸ್ಕೃತಿಯ ಒಂದು ವರ್ಗದವರು ಲೋಹದ ಆಯುಧೋಪಕರಣಗಳನ್ನು ತಯಾರಿಸುವ ಕುಶಲಕರ್ಮಿಗಳಾಗಿದ್ದು, ಇತಿಹಾಸ ಕಾಲದಲ್ಲೂ ತಮ್ಮ ಕಾಯಕವನ್ನು ಮುಂದುವರೆಸಿಕೊಂಡು ಬಂದರು. ಮುಖ್ಯವಾಗಿ ಇವರು ಯುದ್ಧಕ್ಕೆ ಆಯುಧಗಳನ್ನು ತಯಾರಿಸುತ್ತಿದ್ದುದರಿಂದ ಹಲವು ಆಯುಧಗಳನ್ನು ಹೊಂದಿದ ದೇವಸೇನಾಧಿಪತಿ ಕಾರ್ತಿಕೇಯನು ಆರಾಧನ ದೇವತೆಯಾದ, ನಂತರ ಇದೇ ಪೀಳಿಗೆಯವರೆ ಕೊಳಗಲ್ಲು, ಕುಡತಿನಿ, ಸಂಡೂರು ಮುಂತಾದ ಗ್ರಾಮಗಳಲ್ಲಿ ನೆಲೆಸಿದರು. ಅಲ್ಲದೇ ಭಾರತದ ನಾನಾ ಭಾಗಗಳಿಂದ ಬಂದ ಈ ವರ್ಗದವರು ಇಲ್ಲಿಯವರೊಂದಿಗೆ ಬೆರೆತು ಕಾರ್ತಿಕೇಯನ ಆರಾಧಕರು, ಕಾರ್ತಿಕೇಯ ತಪೋವನದ ಅಧಿಕಾರಿಗಳಾದರು ಹಾಗೂ ಕಬ್ಬಿಣದ ಉಪಕರಣಗಳನ್ನು ತಯಾರಿಸುವ ವೃತ್ತಿಯಲ್ಲಿ ತೊಡಗಿದರು. ಗೌಡ ದೇಶದಿಂದ ಬಂದ ಲೋಹಾಸನಿ, ದಂಡಾಸನಿ ಗದಾಧರನೆಂಬುವವನು ಕಾರ್ತಿಕೇಯ ತಪೋವನದ ಅಧಿಕಾರಿಯಾದನು. ಇದರಿಂದ ಬೇರೆ ಬೇರೆ ಭಾಗಗಳಿಂದ ಬಂದ ಈ ಪರಂಪರೆಯವರೂ ಇಲ್ಲಿಯ ಲೋಹ ತಂತ್ರಗಾರಿಕೆಗೆ ಮುಖಂಡರಾಗುತ್ತಿದ್ದರೆಂಬುದು ತಿಳಿದು ಬರುತ್ತದೆ.

೫.೫ ಸಂಡೂರಿನ ಪ್ರೇಕ್ಷಣೀಯ ಸ್ಥಳಗಳು

ಹರಿಶಂಕರ ತೀರ್ಥ

ಮನ್ಮಥನು ಶಿವನ ತಪಸ್ಸು ಭಂಗ ಮಾಡಿದಾಗ, ತನ್ನ ಪಾಲನೇತ್ರದಿಂದ ಆತನನ್ನು ಸುಟ್ಟು ಭಸ್ಮ ಮಾಡುತ್ತಾನೆ. ವಿಷ್ಣುವು ಶಂಕರನ ದರ್ಶನ ಮಾಡಿ ತನ್ನ ಮಗನನ್ನು ಪುನ: ದಯಪಾಲಿಸಬೇಕೆಂದು ಪ್ರಾರ್ಥಿಸುತ್ತಾನೆ. ಆಗ ವಿಷ್ಣುವಿಗೆ ಲೋಹಚಲಕ್ಕೆ ಹೋಗಿ ತಪಸ್ಸು ಕೈಗೊಳ್ಳುವಂತೆ ಮತ್ತು ನಿನ್ನ ಇಷ್ಟಾರ್ಥವನ್ನು ಸಿದ್ಧಿಗೊಳಿಸುವುದಾಗಿ ಹೇಳಿದನು. ಅದರಂತೆ ವಿಷ್ಣುವು ಲೋಹಾಚಲಕ್ಕೆ ಬಂದು ತನ್ನ ಗದೆಯಿಂದ ಹೊಡದು ತೀರ್ಥವನ್ನು ನಿರ್ಮಾಣ ಮಾಡಿ, ಅದರಲ್ಲಿ ತ್ರಿಕಾಲ ಸ್ನಾನ ಮಾಡಿ ಈಶ್ವರನನ್ನು ಕುರಿತು ಪ್ರಾರ್ಥನೆ ಕೈಕೊಂಡನು. ಈ ತೀರ್ಥಕ್ಕೆ ಬೆಟ್ಟದ ಮೇಲಿನಿಂದ ಸದಾಕಾಲ ನೀರು ಹರಿದು ಬರುತ್ತದೆ. ಅಲ್ಲಿ ಒಂದು ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವಿದ್ದು, ಅದರಲ್ಲಿ ಈಶ್ವರಲಿಂಗವಿದೆ.

ವಡ್ಡಾರಾಧನೆಯ ಕಾರ್ತಿಕ ಋಷಿಯ ಕಥೆಯಂತೆ ಕಾರ್ತಿಕ ಋಷಿ ಪ್ರತಿಮಾಯೋಗದಲ್ಲಿ ಧ್ಯಾನಾಸಕ್ತನಾಗಿದ್ದಾಗ ಅವನ ದೇಹದ ಮೇಲೆ ಸುರಿದ ನೀರು ಇಲ್ಲಿ 'ಸರ್ವೌಷಧ'ವಾಗಿ ಪರಿಣಮಿಸಿ ತೀರ್ಥಕ್ಷೇತ್ರವಾಗಿರಬಹುದು ಎಂಬ ನಂಬಿಕೆಯೂ ಇದೆ.

ಒಟ್ಟಿನಲ್ಲಿ ಇದೊಂದು ಪ್ರಶಾಂತವಾದ ಮತ್ತು ಪರಿಶುದ್ಧವಾದ ನೀರು ಸಿಗುವ ಸ್ಥಳ. ಇದು ಕುಮಾರಸ್ವಾಮಿ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು ೪ - ೫ ಕಿಲೋಮೀಟರ್ ಮುಂಚೆಯೇ ಬಲಪಕ್ಕದಲ್ಲಿ ಸಿಗುತ್ತದೆ. ಬೆಟ್ಟದ ಮೂಲೆಯೊಂದರಿಂದ ಜಲಪಾತವಾಗುತ್ತಿರುವ ನೀರು, ಖನಿಜಾಂಶಗಳಿಂದ ಕೂಡಿದ್ದು ಆರೋಗ್ಯಕರವಾದ ಔಷಧದಂತೆ ಎಂದು ಬ್ರಿಟಿಷ್ ಅಧಿಕಾರದಲ್ಲಿ ಮುಂಬೈ ಸರಕಾರದಿಂದ ಪ್ರಶಂಸೆ ಪಡೆದಿದೆ.

ನವಿಲುಸ್ವಾಮಿ ತೀರ್ಥ

ಕುಮಾರಸ್ವಾಮಿ ದೇವಾಲಯದ ದಕ್ಷಿಣ ಭಾಗದಲ್ಲಿ ಈ ತೀರ್ಥವಿದೆ. ಮತ್ತು ನವಿಲುಸ್ವಾಮಿಯ ದೇವಾಲಯವಿದೆ. ಈ ದೇವಾಲಯದಲ್ಲಿಯ ನವಿಲುಸ್ವಾಮಿಯ ಮೂರ್ತಿ ಹಾಳಾದಾಗ ಅದೇ ರೀತಿಯ ಮತ್ತೊಂದು ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿಯ ಮೂಲ ಮೂರ್ತಿ ಘೋರ್ಪಡೆಯವರ ಅರಮನೆ ಆವರಣದಲ್ಲಿದೆ. ಈಗಿರುವ ಮೂರ್ತಿಯ ಲಕ್ಷಣ ಜಟಾಬಾರ, ಕಂಠಾಭರಣ, ಕರ್ಣಾಭರಣ, ಕಂಕಣಗಳನ್ನು ಧರಿಸಿ ನವಿಲಿನ ಮೇಲೆ ಕುಳಿತಿದ್ದಾನೆ. ಬಲಗೈಯಲ್ಲಿ ಅಂಕುಶ, ಎಡಗೈಯಿಂದ ನವಿಲಿನ ಕೊರಳ ಹಿಡಿದಿರುವನು. ಸುತ್ತಲೂ ಬೆಟ್ಟದಿಂದಾವರಿಸಿದ ತಗ್ಗಾದ ಪ್ರದೇಶದಲ್ಲಿ ನವಿಲುಸ್ವಾಮಿ ದೇವಾಲಯವಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿ ಕ್ರಮೇಣ ಜೀರ್ಣೋದ್ಧಾರಗೊಳಿಸಲಾಗಿದೆ. ಈ ತೀರ್ಥಕ್ಕೆ ಬೆಟ್ಟದಿಂದ ಸದಾಕಾಲ ನೀರು ಹರಿದುಬರುತ್ತದೆ.

[illegible]

[illegible]

[illegible]

[illegible]

[illegible]

[illegible]

ಪಾರ್ವತಿದೇವಿ ಕುಮಾರನಿಗೆ ಲಗ್ನವಾಗಲು ಕೇಳಿಕೊಂಡಾಗ ಮಹಿಳೆಯರಿಗೆ ತನ್ನ ದರ್ಶನ ನಿಷಿದ್ಧವೆಂದು ಶಾಪ ಕೊಡುತ್ತಾನೆ. ಇದರಿಂದ ಮರುಗಿದ ಪಾರ್ವತಿ, ಅಬಲೆಯರಿಗೂ ನಿನ್ನ ದರ್ಶನ ಸಿಗುವಂತೆ ಉಪಾಯ ಮಾಡಬೇಕೆಂದು ಹೇಳುತ್ತಾಳೆ. ಮಹಿಳೆಯರಿಗೆ ದರ್ಶನ ನೀಡುವ ಸಲುವಾಗಿ ನವಿಲುಸ್ವಾಮಿಯಾಗಿ ಕಾಣಿಸಿಕೊಳ್ಳುತ್ತಾನೆ.

ಶ್ರೀ ಎಚ್.ದೇವೀರಪ್ಪನವರು ವಡ್ಡಾರಾಧನೆಯಲ್ಲಿ ಶಿವಕೋಟ್ಯಾಚಾರ್ಯರು ಹೇಳಿರುವ ನವಿಲುಸ್ವಾಮಿಯ ಇದ್ದಿರುವಿಕೆಯು ಕುಮಾರಸ್ವಾಮಿ ಗುಡಿಯ ಹಿಂಭಾಗದ ತಗ್ಗಾದ ತಂಪು ಪ್ರದೇಶದಲ್ಲಿ ಎಂದಿರುವುದು ಗಮನಾರ್ಹ. ನವಿಲು ರೂಪಿನ ದೇವತೆ ಕಾರ್ತಿಕ ಖುಷಿಯನ್ನು ಎತ್ತಿಕೊಂಡು ಬಿಟ್ಟದ್ದು ಇಂದಿನ ನವಿಲುಸ್ವಾಮಿ ಆಗಿರಬಹುದು. ಡಾ. ಡಿ.ಎಲ್.ಎನ್. ಊಹಿಸಿರುವದನ್ನು ದೇವೀರಪ್ಪನವರ ಹೇಳಿಕೆಯನ್ನು ಹೋಲಿಸಿ ನೋಡಬಹುದು. ಈ ದೇವಸ್ಥಾನವು ಶಕವರ್ಷ ೬೪೧ (ಕ್ರಿ.ಶ. ೭೦೯)ರಲ್ಲಿ ಸ್ಥಾಪಿತವಾದಂತೆ ತಿಳಿದುಬರುತ್ತದೆ.

ಭೀಮತೀರ್ಥ

ಈ ತೀರ್ಥವು ಕೃಷ್ಣಾನಗರದ ಹಿಂಬದಿಯ ಬೆಟ್ಟದ ಸಂದಿನಲ್ಲಿದೆ. ದ್ವಾಪರಯುಗದಲ್ಲಿ ಪಾಂಡವರು ವನವಾಸದಲ್ಲಿದ್ದಾಗ ಕುಮಾರಸ್ವಾಮಿ ದೇವಾಲಯಕ್ಕೆ ಬಂದು ಸ್ವಾಮಿ ದರ್ಶನ ಮಾಡಿಕೊಂಡು ಅಲ್ಲಿ ತಮ್ಮ ಹೆಸರಿನಿಂದ ಪಂಚಲಿಂಗಗಳನ್ನು ಸ್ಥಾಪನೆ ಮಾಡಿದರು. ಈಗಲೂ ಇವರ ಹೆಸರಿನಿಂದ ಕರೆಯುವ ಲಿಂಗಗಳು ಕುಮಾರಸ್ವಾಮಿ ದೇವಾಲಯದ ಆವರಣದಲ್ಲಿವೆ. ಸ್ವಾಮಿದರ್ಶನ ಮಾಡಿಕೊಂಡು ಪರ್ವತದಿಂದ ಇಳಿಯುತ್ತಿರುವಾಗ ಧರ್ಮರಾಜನು ಭೀಮ ನನಗೆ ಬಹಳ ಬಾಯಾರಿಕೆಯಾಗಿದೆ ನಿನ್ನ ಗಧೆಯಿಂದ ಹೊಡೆದು ನೀರು ತೆಗೆಯಬಾರದೆ, ಎಂದು ಕೇಳಿದಾಗ ಕೂಡಲೇ ಅಣ್ಣನ ಆಜ್ಞೆಯಂತೆ ಗದೆಯಿಂದ ಹೊಡೆದು ನೀರು ತೆಗೆದನು. ಧರ್ಮರಾಜನ ತಮ್ಮನಿಂದ ನಿರ್ಮಿತವಾದ ಈ ತೀರ್ಥ ಇತರ ತೀರ್ಥಗಳಂತೆ ಹೆಸರುವಾಸಿ ಯಾಗಬೇಕೆಂದು ಕುಮಾರಸ್ವಾಮಿಯಲ್ಲಿ ಬೇಡಿಕೊಂಡನು. ಅಂದಿನಿಂದ ಭೀಮತೀರ್ಥವೆಂದು ಪ್ರಸಿದ್ಧವಾಗಿದೆ. ಇದು ವನವಿಹಾರಕ್ಕೆ ಯೋಗ್ಯವಾಗಿದೆ.

ಭೈರವತೀರ್ಥ

ಈ ತೀರ್ಥವು ಸಂಡೂರಿನಿಂದ ಈಶಾನ್ಯಕ್ಕೆ ಎರಡು ಹರದಾರಿ ದೂರದಲ್ಲಿದೆ. ತಾರಾನಗರದಿಂದ ೪ - ೫ ಕಿ.ಮೀ. ದೂರದಲ್ಲಿದೆ. ಈ ಪ್ರಸಿದ್ಧವಾದ ತೀರ್ಥಸ್ಥಳಕ್ಕೆ ತನ್ನದೇ ಆದ ಪೌರಾಣಿಕ ಹಿನ್ನೆಲೆಯಿದೆ. ತನ್ನ ತಂದೆ ತಾರಕಾಸುರನನ್ನು ಶ್ರೀಕುಮಾರಸ್ವಾಮಿ ಕೊಂದನೆಂದು ತಾರಕಾಕ್ಷ ದಾಳಿ ಮಾಡಲು ಪರಶಿವನ ಆದೇಶದ ಮೇರೆಗೆ ಭೈರವನು ಲೋಹಾಚಲಕ್ಕೆ ಬಂದು ತ್ರಿಶೂಲಾಯುಧದಿಂದ ತಾರಕಾಸುರನ ಮಗನಾದ ತಾರಕಾಕ್ಷನನ್ನು ಸಂಹಾರ ಮಾಡಿದನು. ದಾನವನ ತೊಂದರೆಯಿಂದ ಮುಕ್ತರಾದ ಅಲ್ಲಿಯ ಜನರು ಭೈರವನನ್ನು ಇಲ್ಲಿ ಸದಾ

ವಾಸ ಮಾಡುವಂತೆ ಪ್ರಾರ್ಥಿಸಿದರು. ಪರ್ವತದ ಪೂರ್ವದಿಕ್ಕಿನಲ್ಲಿ ತೀರ್ಥವನ್ನು ನಿರ್ಮಾಣ ಮಾಡಿ ಅಲ್ಲಿ ನೆಲೆಸಿದನು. ಇಲ್ಲಿಯೂ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವಿದ್ದು, ಅದರಲ್ಲಿ ಈಶ್ವರಲಿಂಗವಿದೆ. ಸುಂದರವಾದ ವಾತಾವರಣವನ್ನು ಪರಿಶುದ್ಧವಾದ ನೀರನ್ನು ಪಡೆದಿರುವ ಈ ಪ್ರದೇಶವೂ ವನವಿಹಾರಕ್ಕೆ ಯೋಗ್ಯವಾಗಿದೆ.

ಅಗಸ್ತ್ಯ ತೀರ್ಥ

ಅಗಸ್ತ್ಯ ಋಷಿಗಳಿಂದ ಇಲ್ಲಿಯ ಅಗಸ್ತ್ಯ ತೀರ್ಥ ನಿರ್ಮಾಣವಾಯಿತೆಂದು ಪ್ರತೀತಿ ಇದೆ. ಋಗ್ವೇದ, ಮಹಾಭಾರತ ಮತ್ತು ಪುರಾಣಗಳಲ್ಲಿ ಅಗಸ್ತ್ಯನ ಹೆಸರು ಕಂಡುಬರುತ್ತದೆ.

ಸಂಡೂರು ಕುಮಾರಸ್ವಾಮಿ ಬೆಟ್ಟದಲ್ಲಿಯ ಅಗಸ್ತ್ಯತೀರ್ಥವು ಕುಮಾರಸ್ವಾಮಿ ದೇವಾಲಯದ ಮುಂಭಾಗದಲ್ಲಿದೆ. ಪರಮೇಶ್ವರನ ಆಜ್ಞೆಯಂತೆ ಅಗಸ್ತ್ಯನು ಲೋಹಾಚಲಕ್ಕೆ ಬಂದು ತೀರ್ಥ ನಿರ್ಮಾಣ ಮಾಡಿ, ಅದರಲ್ಲಿ ತ್ರಿಕಾಲ ಸ್ನಾನ ಮಾಡಿ, ಷಣ್ಮುಖ ದ್ವಾದಶಕ್ಷರ ಮಂತ್ರದ ಪುನಃರುಚ್ಚರಣ ಮಾಡತೊಡಗಿದನು. ಸ್ವಾಮಿ ಪ್ರತ್ಯಕ್ಷನಾಗಿ ಇಲ್ಲಿ ವಾಸ ಮಾಡಿಕೊಂಡರು. ಕೆಲವು ಕಾಲವಾದ ಮೇಲೆ ನೀನು ಕೇಳಿದ ಆತ್ಮಪೂಜೆ ವಿಧಿಯನ್ನು ಉಪದೇಶಿಸಿ ತನ್ನ ಇಷ್ಟಾರ್ಥವನ್ನು ಪೂರ್ಣಗೊಳಿಸುವೆನು. ಈ ತೀರ್ಥವು ಎಲ್ಲ ತೀರ್ಥಗಳಿಗಿಂತ ಪರಮ ಪವಿತ್ರವಾಗಲಿ ಎಂದನು. ಅಂದಿನಿಂದ ಈ ತೀರ್ಥಕ್ಕೆ ಸ್ವರ್ಗಾವರ್ಗವೆಂದು ಹೆಸರು ಬಂದಿತು. ಭಕ್ತರು ಇದರಲ್ಲಿ ಸ್ನಾನ ಮಾಡಿದರೆ ಪಾಪಗಳಿಂದ ಮತ್ತು ಸರ್ವರೋಗಗಳಿಂದ ಮುಕ್ತರಾಗುವರು ಹಾಗೂ ಗಂಗಾ ನದಿಯಂತಃ ಪುಣ್ಯ ನದಿಗಿಂತಲೂ ಶತಾಂಶ ಪುಣ್ಯ ಪಡೆಯುವರೆಂಬ ಪ್ರತೀತಿ. ಈ ತೀರ್ಥದ ದಂಡೆಯ ಮೇಲೆ ಒಂದು ಚಿಕ್ಕ ದೇವಾಲಯವಿದೆ. ಅದರಲ್ಲಿ ಕುಬ್ಜನಂತೆ ಕಾಣುವ ದೊಡ್ಡ ಹೊಟ್ಟೆ, ಚಿಕ್ಕ ಕೈ ಕಾಲುಗಳು, ಕೈಯಲ್ಲಿ ದಂಡ ಹಿಡಿದು ನಿಂತಿರುವ ಚಿಕ್ಕ ಮೂರ್ತಿಯನ್ನು ಅಗಸ್ತ್ಯ ಋಷಿ ಎಂದು ಜನರು ಕರೆಯುತ್ತಾರೆ.

ನಾರೀಹಳ್ಳಿ ಆಣೆಕಟ್ಟು

ಇದು ಸಂಡೂರಿನ ಸೌಂದರ್ಯವನ್ನು ಶ್ರೀಮಂತಗೊಳಿಸುವ ಮೂಲ ಸ್ಥಳವಾಗಿದೆ. ಭೀಮತೀರ್ಥ ಮತ್ತು ಭೈರವ ತೀರ್ಥಗಳ ಮಧ್ಯೆ ಬರುವಂತ ಈ ತಾಣ ಮನಮೋಹಕವಾಗಿದೆ. ೧೯೭೦ರಲ್ಲಿ ನಾರೀಹಳ್ಳಕ್ಕೆ ಆಣೆಕಟ್ಟಿನ ನಿರ್ಮಾಣ ಕಾರ್ಯದ ಯೋಜನೆ ಪ್ರಾರಂಭವಾಗಿ ೧೯೮೩ರಲ್ಲಿ ಮುಕ್ತಾಯಗೊಂಡಿರುವ ಈ ಆಣೆಕಟ್ಟು, ಸುಮಾರು ೪೯೫ ಮೀಟರ್ ಉದ್ದ, ೩೦.೯೨ ಮೀಟರ್ ಎತ್ತರವನ್ನು ಹೊಂದಿದೆ. ಜಲಶೇಖರಣಾ ಭಾಗವಂತೂ ಪ್ರೇಕ್ಷಕರಿಗೆ ಆನಂದವನ್ನು ನೀಡುತ್ತದೆ. ತಾರಾನಗರ ಗೌರೀಪುರ, ಗಂಗಲಾಪುರ, ನಾಗಲಾಪುರ, ದೋಣಿಮಲೆ, ತಾಳೂರು, ಬನ್ನಿಹಟ್ಟಿ ಮೊದಲಾದ ಹಳ್ಳಿಗಳಿಗೆ ನೀರು ನೀಡುವ ಈ ಡ್ಯಾಂ ೨೫೫.೦೮ ಹೆಕ್ಟೇರ್ ಜಲಾವೃತ ಪ್ರದೇಶವನ್ನು ಹೊಂದಿದೆ. ಇತ್ತೀಚೆಗೆ ವಿ.ಎಸ್.ಲಾಡ್‌ರವರು ಇಲ್ಲಿ ಪ್ರವಾಸಿಗರ ಮನರಂಜನೆಗಾಗಿ ಕೊಲ್ಲೂರು ಮೂಕಾಂಬಿಕಾ ಜಲವಿಹಾರವನ್ನು ನಿರ್ಮಿಸಿ ಇದೊಂದು ಸುಂದರ ಪ್ರವಾಸಿ ತಾಣವನ್ನಾಗಿ ಮಾಡಿದ್ದಾರೆ.

[illegible]

ರಾಮಘಡ

ಈ ಪ್ರದೇಶವು ಸಮುದ್ರ ಮಟ್ಟದಿಂದ ೩೨೫೦ ಅಡಿ ಎತ್ತರದಲ್ಲಿರುವ ಈ ಬೆಟ್ಟ ಬಹಳ ಕಾಲದಿಂದಲೂ ಅಸಂಖ್ಯಾತ ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಉತ್ತಮ ಹವಾಗುಣವನ್ನು ಹೊಂದಿರುವ ಪ್ರದೇಶವಾಗಿದೆ. ಬೆಟ್ಟದ ಶಿಖರ ಪ್ರದೇಶವು ಉತ್ತಮ ಗಾಳಿ, ನೀರುಗಳಿಂದ ವಿಶಾಲವಾದ ಭಾಗವಾಗಿದೆ. ನೈಸರ್ಗಿಕ ಆರೋಗ್ಯ ಕೇಂದ್ರವಾಗಿದೆ. ತಾಯಮ್ಮನ ಕೊಳ್ಳದ ಖನಿಜಾಂಶದಿಂದ ಕೂಡಿದ ನೀರು ಈ ಜಾಗದ ಮತ್ತೊಂದು ವಿಶೇಷ. ಹೊಸಪೇಟೆಗೆ ಹೋಗುವ ಮಾರ್ಗಕ್ಕೆ ಎಡಭಾಗದಲ್ಲಿ ಸ್ವಲ್ಪ ದೂರದಲ್ಲಿರುವ ಈ ಬೆಟ್ಟದ ಮೇಲಿನ ವೀಕ್ಷಣಾಕೇಂದ್ರವನ್ನು ನೋಡಿದರೆ ಹೊಸಪೇಟೆ ತುಂಗಭದ್ರಾ ನದಿಯ ಸಮಗ್ರ ನೋಟದ ದರ್ಶನವಾಗುತ್ತದೆ. ೧೮೪೭ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಸಂಡೂರನ್ನು ಪ್ರವೇಶಿಸಿದಾಗ ಸಂಡೂರಿನ ಆಡಳಿತಗಾರರು ಇಲ್ಲಿ ಬಂದು ವ್ಯವಸ್ಥಿತವಾದ ಬಂಗಲೆ ಕಟ್ಟಿಸಿದಂತೆ ತಿಳಿದುಬರುತ್ತದೆ. ಬ್ರಿಟಿಷ್ ಅಧಿಕಾರಿಗಳು ಮತ್ತಿತರರು ೧೮೫೫ ರಿಂದ ೧೯೧೮ರ ವರೆಗೆ ತಂಗಿದ್ದರೆಂದೂ ತಿಳಿದುಬರುತ್ತದೆ. ಇಲ್ಲಿ ಅರಣ್ಯ ಸಂಪತ್ತು ಹೇರಳವಾಗಿದ್ದು, ಹಲವು ಜಾತಿಯ ಮರಗಳು ಬೆಳೆದಿವೆ. 'ರಾಜವೃಕ್ಷ'ವೆನಿಸಿದ ಶ್ರೀಗಂಧ ಸ್ವಾಮಿಮಲೈ ಮತ್ತು ಈ ಬೆಟ್ಟಗಳಲ್ಲಿ ಸಾಕಷ್ಟು ಬೆಳೆದಿದ್ದವು.

ಐತಿಹಾಸಿಕವಾಗಿ ಹೇಳುವುದಾದರೆ ಕಂಪಿಲರಾನಯ ಮೊದಲ ಹೆಂಡತಿಯ ಮಗನಾದ ಕುಮಾರ ರಾಮನನ್ನು ಆತನ ಮಲತಾಯಿ ರತ್ನಾಜಿಯು ಮೋಹಿಸಿದಾಗ ಅದನ್ನು ಪ್ರತಿಭಟಿಸುತ್ತಾನೆ. ಕುಮಾರರಾಮನಿಂದ ಅತೃಪ್ತಳಾದ ರತ್ನಾಜಿ ತನ್ನ ಪತಿಗೆ ಸಲ್ಲದ ಮಾತನ್ನು ಹೇಳಿ ಕುಮಾರರಾಮನ ಶಿರಚ್ಛೇದವಾಗಬೇಕೆಂದು ಬಯಸುತ್ತಾಳೆ. ಆಗ ಬುದ್ಧಿವಂತ ಮಂತ್ರಿ ಬೈಚಪ್ಪನಾಯಕನು ಕುಮಾರರಾಮನನ್ನು ಕರೆತಂದು ಈ ಬೆಟ್ಟದಲ್ಲಿ ಅಡಗಿಸಿಟ್ಟು, ಅವನ ಶಿರಚ್ಛೇದ ಮಾಡಿರುವುದಾಗಿ ಹೇಳುತ್ತಾನೆ. ಹೀಗೆ ಕುಮಾರರಾಮನನ್ನು ತಂದು ಇಲ್ಲಿ ಅಡಗಿಸಿಟ್ಟಿದ್ದರಿಂದ ಈ ಬೆಟ್ಟಕ್ಕೆ 'ರಾಮಘಡ' ಎಂಬ ಹೆಸರು ಬಂದಿದೆ. ಸಂಡೂರನ್ನು ಸಹ ಗಂಡಗಲಿ ಕುಮಾರರಾಮನು ಗಂಡು ಮೆಟ್ಟಿದ ನಾಡು ಎಂದು ಕರೆಯುವುದೂ ಔಚಿತ್ಯ ಪೂರ್ಣವಾಗಿದೆ.

ನರಸಿಂಹಸ್ವಾಮಿ

ಈ ದೇವಾಲಯವು ಸಂಡೂರು ನಗರದ ದಕ್ಷಿಣಕ್ಕೆ ಇದೆ. ಧರ್ಮಾಪುರದಿಂದ ಮುಂದೆ ಸುಮಾರು ೨ ಕಿ.ಮೀ. ಎಡಪಕ್ಕದಲ್ಲಿ ಕಾಲುದಾರಿಯ ಮೂಲಕ ಹೋದರೆ ಈ ದೇವಸ್ಥಾನವು ಸಿಗುತ್ತದೆ. ಓಬಳಗಂಡಿಯ ಅಂಚಿನ ಮೇಲ್ಭಾಗದಲ್ಲಿರುವ ಈ ದೇವಸ್ಥಾನ ಸಾಕಷ್ಟು ವರ್ಷಗಳಿಂದಲೂ ಪೂಜೆಗೊಳಗಾಗುತ್ತ ಬಂದಿದೆ. ಮಾರ್ಚ್ ತಿಂಗಳಲ್ಲಿ ಮೂರು ದಿನಗಳವರೆಗೆ ನಡೆಯುವ ಇಲ್ಲಿಯ ಜಾತ್ರೆಯಲ್ಲಿ ಸುತ್ತಮುತ್ತಲಿನಿಂದಲೂ ಸಾಕಷ್ಟು ಜನರು ಬಂದು ಸೇರುತ್ತಾರೆ. ಸುಮಾರು ಒಂದುನೂರು ಮೀಟರ್ ಗಿಂತಲೂ ಹೆಚ್ಚು ಎತ್ತರವಾದ ಎರಡು ಬಂಡೆಗಳ ಅಭಿಮುಖ ಸ್ಥಿತಿಯ ಓಬಳಗಂಡಿ ಮತ್ತು ಶ್ರೀ ನರಸಿಂಹಸ್ವಾಮಿ ದೇವಸ್ಥಾನ ಇಂದಿಗೂ ವನವಿಹಾರಕ್ಕೆ ಹೆಸರಾಗಿದೆ.

[illegible]

[illegible]

[illegible]

ಬೆಟ್ಟದ ಕಾಡಿನ ಮಧ್ಯದಲ್ಲಿರುವ ಈ ದೇವಾಲಯವು ಗರ್ಭಗೃಹ, ಸಭಾಮಂಟಪ ಹಾಗೂ ದ್ವಾರಗೋಪುರಗಳಿಂದ ಕೂಡಿದೆ. ಸಭಾಮಂಟಪದಲ್ಲಿನ ಕಂಬಗಳು ವಿಜಯನಗರ ಮಾದರಿಯಲ್ಲಿವೆ. ಸಭಾಮಂಟಪವನ್ನು ಪೂರ್ವದಿಂದಲೂ ಪ್ರವೇಶಿಸಬಹುದು. ಗರ್ಭಗೃಹದ ಮೇಲೆ ಶಾಲಾ ಶೈಲಿಯ ಶಿಖರವಿದೆ. ಈ ದೇವಾಲಯವನ್ನು ಕಣ ಶಿಲೆಯಿಂದ ನಿರ್ಮಿಸಲಾಗಿದ್ದು, ಗೋಪುರಗಳಿಗೆ ಇಟ್ಟಿಗೆ ಹಾಗೂ ಗಾರೆಯನ್ನು ಬಳಸಲಾಗಿದೆ.

ದೇವಗಿರಿ

ಕುಮಾರಸ್ವಾಮಿ ದೇವಸ್ಥಾನವಿರುವ 'ಸ್ವಾಮಿಮಲೆ' ಬೆಟ್ಟದ ಹಿಂದಿರುವ ಊರೇ ದೇವಗಿರಿ. ಇದು ಸಂಡೂರು ತಾಲೂಕಿನ ಕಪ್ಪುಬಂಗಾರ ದೊರಕುವ ಪ್ರಸ್ಥಭೂಮಿ. ದಟ್ಟವಾದ ಅರಣ್ಯದಿಂದಲೂ ಅಸಂಖ್ಯಾತ ಪ್ರಮಾಣದ ಕಬ್ಬಿಣದ ಅದಿರಿನಿಂದಲೂ ಕೂಡಿರುವ ಈ ಪ್ರದೇಶವು ವಿಶ್ವದಲ್ಲೇ ಹೆಸರಾದಂತಹ ಪ್ರದೇಶವಾಗಿದೆ. ಕಬ್ಬಿಣ, ಮ್ಯಾಂಗನೀಸ್ ಈ ಭಾಗದಲ್ಲಿ ಹೇರಳವಾಗಿ ಸಿಗುತ್ತದೆ. ಎಚ್ .ಘೋಷ್ (ಅಧಿಕಾರಿ, ಮೈನಿಂಗ್ ಅಂಡ್ ಜಿಯಾಲಜಿಕ್ ಇನ್ ಸ್ಟಿಟ್ಯೂಟ್ ಆಫ್ ಇಂಡಿಯಾ, ೧೯೧೦) ಅವರ ಹೇಳಿಕೆಯ ಪ್ರಕಾರ, ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು ಈ ಭಾಗದಲ್ಲಿ ದೊರಕುತ್ತದೆ. ಅದರಲ್ಲೂ ವಿಶೇಷವಾಗಿ ದೇವಗಿರಿಯ ಅದಿರು ಉತ್ತಮವೆನ್ನುತ್ತಾರೆ. ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾದ ಅಧಿಕಾರಿ ಬ್ರೂಸ್‌ಫ್ರೂಟ್ ಅವರು ಸಂಡೂರು ಕ್ಷೇತ್ರ ಜಗತ್ತಿನಲ್ಲಿಯೇ ಅತ್ಯಂತ ಶ್ರೀಮಂತವಾದ ಕಬ್ಬಿಣದ ಅದಿರಿನ ನಿಕ್ಷೇಪವನ್ನೊಳಗೊಂಡಿದೆ ಎನ್ನುತ್ತಾರೆ. ಮ್ಯಾಂಗನೀಸ್ ಅದಿರಿನ ನಿಕ್ಷೇಪಕ್ಕೆ ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೋಲಿಸಿದಾಗ ಅತೀ ಕಡಿಮೆ ಪ್ರಮಾಣದಲ್ಲಿ ದೊರೆಯುತ್ತದೆ. ಈ ನಿಕ್ಷೇಪ ಮ್ಯಾಂಗನೀಸ್ ಫೇರಸ್ ಫಿಲೈಟ್ ಎಂಬ ಕಲ್ಲಿನಲ್ಲಿ ದೊರೆಯುತ್ತದೆ. ಈ ನಿಕ್ಷೇಪ ದೇವಗಿರಿ ವ್ಯಾಪ್ತಿಗೂ ಸೇರಿರುತ್ತದೆ.

ದೋಣಿಮಲೆ

ದೋಣಿಮಲೆಯ ಕಬ್ಬಿಣದ ಅದಿರಿನ ಗಣಿಯು ಸಂಡೂರು ಕೊಳ್ಳದ ಈಶಾನ್ಯ ದಿಕ್ಕಿಗೆ ಇದೆ. ಇದು ಬಳ್ಳಾರಿ ಮತ್ತು ಹೊಸಪೇಟೆಯಿಂದ ೩೫ ಮೈಲುಗಳು ಹಾಗೂ ಸಂಡೂರಿಗೆ ೭ ಮೈಲುಗಳು ದೂರದಲ್ಲಿ ಈ ಗಣಿಯು ಇದೆ. ಈ ಗಣಿಗೆ ದೋಣಿಮಲೆ ಎಂಬ ಹೆಸರು ಬರಲು ಕಾರಣ, ಈ ಗಣಿಯು ದೋಣಿಯಾಕಾರದ ಕೊಳ್ಳವೆಂದೂ ಬೆಟ್ಟದ ತುದಿಯಲ್ಲಿರುವುದರಿಂದ 'ದೋಣಿಮಲೆ' ಎಂಬ ಹೆಸರು ಬಂದಿತು. ಕುಮಾರಸ್ವಾಮಿ ಬೆಟ್ಟ' ರಾಮಘಡ ಬೆಟ್ಟದ ಜೊತೆಗೆ ಈ ಬೆಟ್ಟವೂ ಸಹ ಅತ್ಯಂತ ಶ್ರೀಮಂತವಾದ ಖನಿಜಾಂಶಗಳಿಂದ ಕೂಡಿದ್ದಾಗಿದೆ.

ಕೆಲವು ವರ್ಷಗಳ ಅವಧಿಗಾಗಿ ಭಾರತ ಸರಕಾರವು ಜೋಷಿ ಕಮಿಟಿಯನ್ನು ೧೯೭೦ - ೭೧ರಲ್ಲಿ ನಿಯುಕ್ತ ಮಾಡಿತು. ಕಾರಣ ಬಳ್ಳಾರಿ ಮತ್ತು ಹೊಸಪೇಟೆ ಭಾಗದಲ್ಲಿಯ ಸುಮಾರು ೮ ಮಿಲಿಯನ್ ಟನ್ ಕಬ್ಬಿಣದ

ಅದಿರನ್ನು ರಫ್ತುಮಾಡುವ ಉದ್ದೇಶದಿಂದ ಸೆಪ್ಟೆಂಬರ್ ೧೯೬೯ರಲ್ಲಿ ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾದ ಶೋಧನೆಯ ಪ್ರಕಾರ ಭಾರತ ಸರಕಾರವು ದೋಣಿಮಲೆಯ ಯೋಜನೆಗೆ ಅಂತಿಮ ಒಪ್ಪಿಗೆ ಕೊಟ್ಟಿತು.

ಇಲ್ಲಿ ದೊರಕುವ ಕಬ್ಬಿಣದ ಅದಿರನ್ನು ಹೊರ ದೇಶಗಳಾದ ಜಪಾನ್, ಯು.ಎಸ್.ಎ. ಯು.ಕೆ. ಫ್ರಾನ್ಸ್, ಬೆಲ್ಜಿಯಂ, ಪೂರ್ವಜರ್ಮನಿ, ಇಟಲಿ, ನೆದರ್‌ಲ್ಯಾಂಡ್ ಮತ್ತು ನಾರ್ವೆಗಳಲ್ಲಿ ರಫ್ತು ಮಾಡಲಾಗುತ್ತದೆ. ಈ ಗಣಿಯಲ್ಲಿ ಅತ್ಯಂತ ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸಿ ಕಬ್ಬಿಣದ ಅದಿರಿನ ಉತ್ಪಾದನೆಯನ್ನು ಮಾಡಲಾಗುತ್ತಿದೆ.

ಈ ಗಣಿಯ ಉದ್ದ ೧೦ ಕಿ.ಮೀ, ಅಗಲ ೫೦ ರಿಂದ ೨೦೦ ಮೀಟರುಗಳು ಇದೆ. ಈ ಗಣಿ ಒಂದು ಬಾರಿ ಉದ್ದವಾದ ಅಂದರೆ ಇಕ್ಕಟಾದ ಅಗಲವಿಲ್ಲದ ಗಣಿ ಇದಾಗಿದೆ. ಈ ಗಣಿಯಲ್ಲಿ ಕೆಲಸವು ಬಹಳ ಕಷ್ಟಕರವಾಗಿದೆ. ಇಲ್ಲಿಯೇ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ (N M D C) ಅದಿರು ಸಂಸ್ಕರಣ ಕಾರ್ಯವನ್ನು ಬೃಹತ್ತಾಗಿ ಕೈಗೊಂಡಿದೆ. ಜಗತ್ಪ್ರಸಿದ್ಧ ಖನಿಜ ನಿಧಿಯನ್ನು ಹೊಂದಿದ ಈ ಬೆಟ್ಟ ಹಾಗೂ ಈ ಊರು, ಈ ಪ್ರದೇಶ ಹಾಗೂ ಇಲ್ಲಿಯ ವ್ಯವಸ್ಥೆ ಮನಸ್ಸಿಗೆ ಆನಂದವನ್ನುಂಟು ಮಾಡುತ್ತದೆ. ಹಾಗೂ ಇದೊಂದು ಅತ್ಯಂತ ಸುಂದರವಾದ ಪ್ರವಾಸಿ ಸ್ಥಳವೂ ಆಗಿದೆ.

ಅಡಿಟಿಪ್ಪಣಿಗಳು

೧. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೫
೨. ಸ್ಕಂದ - ಶ್ರೀಗಂಧ, ಸ್ಮರಣಸಂಚಿಕೆ, ಪು. ೧
೩. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೮, ೧೯, ೨೦, ೨೧, ೨೨, ೨೩, ೨೪
೪. ಸ್ಕಂದ - ಶ್ರೀಗಂಧ, ಸ್ಮರಣ ಸಂಚಿಕೆ, ಪು. ೧, ೨, ೩
೫. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೧೫, ೧೬
೬. ಅದೇ, ಪು. ೧೮
೭. ಅದೇ, ಪು. ೧೬
೮. ಅದೇ, ಪು. ೧೭, ೧೮
೯. ಅದೇ, ಪು, ೨೯, ೩೦
೧೦. ಶ್ರೀ ಕೊಮಾರದೇವರ ಕ್ಷೇತ್ರದ ಕೈಫಿಯತ್ತು, ಪು. ೫೪೦, ೫೪೪
೧೧. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೩೨, ೩೪
೧೨. ಅದೇ, ಪು. ೩೪, ೩೫
೧೩. ಶ್ರೀ ಮದ್ರಾಮಣದ 'ಕಾರ್ತಿಕೇಯ ವನ'ವು ಸಂಡೂರು ಕುಮಾರಸ್ವಾಮಿ ಬೆಟ್ಟವೊ? ಕ.ಇ.ದ. ಪು. ೧೬೭, ೧೬೮
೧೪. ಕುರುಗೋಡು ಸಿಂಧರು ಒಂದು ಅಧ್ಯಯನ, ಪು. ೩೫೧
೧೫. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧, ಪು. XLI
೧೬. ಸಂಡೂರು ಪರಿಸರದ ಕಾರ್ತಿಕೇಯ ತಪೋವನ, ಚಾರಿತ್ರಿಕ ಅಧ್ಯಯನ, ಪು. ೩೯, ೪೧.
೧೭. ಅದೇ, ಪು. ೪೨-೪೪.

೬

ಸಮಾರೋಪ

೬

ಸಮಾರೋಪ

ಕರ್ನಾಟಕ ಸಂಸ್ಕೃತಿ ಪುರಾತನವಾದದ್ದು, ಕರ್ನಾಟಕವು ಐತಿಹಾಸಿಕ ಮಹತ್ವ ಪಡೆದ ಪ್ರಾಚೀನ ನಾಡಾಗಿದೆ. ಸಾಮ್ರಾಜ್ಯಗಳ ನಿರ್ಮಾಣ ಮತ್ತು ಅವುಗಳ ವ್ಯವಸ್ಥೆಯಲ್ಲಿ ಧಾರ್ಮಿಕ ದರ್ಶನದ ದಿವ್ಯದೃಷ್ಟಿ, ಸಾಹಿತ್ಯ ಸೃಷ್ಟಿ, ಶಿಲ್ಪಕಲೆ ಆದಿಯಾಗಿ ಕಲೋಪಾಸನೆಯಲ್ಲಿ - ಹೀಗೆ ಜೀವನದ ಎಲ್ಲ ರಂಗಗಳಲ್ಲಿಯೂ ಕರ್ನಾಟಕದ ಸಾಧನೆ ಸಾರ್ಥಕತೆಯನ್ನು ಪಡೆದಿದೆ. ಅತಿ ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಗೆ ತನ್ನದೇ ಆದ ಉಜ್ವಲ ಪರಂಪರೆಯನ್ನಿತ್ತು ಅದನ್ನು ಬೆಳೆಸಿಕೊಂಡು ಬಂದಿದೆ. ಹಾಗೂ ಸರ್ವಧರ್ಮ ಸಮನ್ವಯವನ್ನು ಸ್ಥಾಪಿಸಿದ ಭೂಮಿ ಇದಾಗಿದೆ. ಇಂತಹ ಹಿನ್ನೆಲೆಯನ್ನು ಪಡೆದ ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಪಟ್ಟಣ ಸಂಡೂರು.

ಸಂಡೂರಿನ ಗತ ಕಾಲದ ಇತಿಹಾಸ ವೈಭವದ ಸಂಸ್ಕೃತಿಯನ್ನು ತಿಳಿಸುವಲ್ಲಿ ಶಾಸನಗಳು ಮತ್ತು ದೇವಾಲಯಗಳು ಪ್ರಮುಖವಾದ ಆಕರಗಳಾಗಿವೆ. ಇವುಗಳು ಕಲೆಗೆ ದೊರೆತ ಪ್ರೋತ್ಸಾಹವನ್ನು ಕಲಾ ಶೈಲಿ ಹಾಗೂ ಧಾರ್ಮಿಕ ಸ್ಥಿತಿಯನ್ನು ತಿಳಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಇವಲ್ಲದೆ ಧಾರ್ಮಿಕವಾಗಿ ಇತರೆ ಸಾಮಾಜಿಕ ಕಾರ್ಯಗಳಿಗಾಗಿ ಅಂದಿನ ರಾಜರುಗಳು, ಸಾಮಂತರು, ಪಾಳೇಗಾರರು, ಪೇಶ್ವೆಗಳು ಹಾಗೂ ಇತರ ವ್ಯಕ್ತಿಗಳು ನೀಡಿದ ದಾನದ ಮಹತ್ವವನ್ನು ನಾವು ಶಾಸನಗಳ ಮುಖಾಂತರ ತಿಳಿದುಕೊಳ್ಳಬಹುದಾಗಿದೆ. ಸಂಡೂರಿನ ಕ್ಷೇತ್ರಕಾರ್ಯವನ್ನು ಕೈಗೊಂಡ ಪ್ರಮುಖ ದೇವಾಲಯಗಳನ್ನು, ಶಾಸನಗಳನ್ನು ಹಾಗೂ ಇನ್ನೂ ಬಳ್ಳಾರಿ ಜಿಲ್ಲಾ ಶಾಸನ ಸಂಪುಟ ೧ ರಲ್ಲಿ ಸೇರಿಸದ ಶಾಸನಗಳ ವಿವರವನ್ನು ಪ್ರಸ್ತುತ ಪ್ರಬಂಧದಲ್ಲಿ ಮೊದಲ ಬಾರಿಗೆ ವಿವರವಾಗಿ ವಿವರಿಸಲಾಗಿದೆ. ದೇವಾಲಯಗಳು ಹಾಗೂ ಶಾಸನಗಳಂತೆ ಇಲ್ಲಿ ವೀರಗಲ್ಲುಗಳು ಸಹ ಲಭ್ಯವಾಗಿವೆ. ಇವು ಇಲ್ಲಿನ ವೀರ ಪರಂಪರೆಯ

[illegible]

[illegible]

[illegible]

ದ್ಯೋತಕಗಳಾಗಿವೆ. ಈ ವೀರಗಲ್ಲಿನ ಜೊತೆಗೆ ಮೂರ್ತಿ ಶಿಲ್ಪವನ್ನು ಕಾಣಬಹುದು. ಹಾಗೆಯೇ ಪುರಾತನ ಕಾಲದ ತೀರ್ಥ ಕ್ಷೇತ್ರಗಳನ್ನು, ಪುಷ್ಕರಣಿಗಳನ್ನು ಕಾಣಬಹುದು. ಕೋಟೆ, ಕೆರೆ, ಬಾವಿ ಹಾಗೂ ಇತ್ತೀಚೆಗೆ ಕಟ್ಟಿಸಿದ ಅರಮನೆಯನ್ನು ಕಾಣಬಹುದು.

ಪ್ರಾಗೈತಿಹಾಸಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಬಳ್ಳಾರಿಜಿಲ್ಲೆಯ ಸಂಡೂರು ಪರಿಸರವು ಇತಿಹಾಸ ಪೂರ್ವ ಕಾಲದಿಂದ, ಇತಿಹಾಸ ಕಾಲದ ಚರಿತ್ರೆಯಲ್ಲಿ ಉಳಿದ ಪ್ರದೇಶಗಳಿಗಿಂತಲೂ ಪ್ರಮುಖಸ್ಥಾನವನ್ನು ಪಡೆದುಕೊಂಡಿದೆ. ಈ ಪರಿಸರದಲ್ಲಿ ನವ ಶಿಲಾಯುಗದಿಂದ ಇತಿಹಾಸ ಕಾಲದವರೆಗಿನ ಅನೇಕ ಅವಶೇಷಗಳು ಕಂಡುಬರುತ್ತವೆ. ಕುಡತಿನಿ ಮತ್ತು ತೋರಣಗಲ್ಲುಗಳು ಕಬ್ಬಿಣಯುಗದ ಮುಖ್ಯ ತಾಣಗಳಾಗಿದ್ದವು. ಕಪ್ಪಗಲ್ಲು, ಸಂಗನಕಲ್ಲು, ತೆಕ್ಕಲಕೋಟೆಗಳಲ್ಲಿ ನವಶಿಲಾ ಸಂಸ್ಕೃತಿಯ ಎರಡು ಹಂತಗಳು ಕಂಡುಬಂದಿವೆ. ಈ ಸಂಸ್ಕೃತಿಯ ಎರಡನೇ ಘಟ್ಟದಲ್ಲಿ ಕಲ್ಲಿನ ಕೊಡಲಿ, ಮಡಕೆಗಳು ಜೊತೆಗೆ ತಾಮ್ರದ ಕೊಡಲಿ ಹಾಗೂ ಉಪಕರಣಗಳ ಬಳಕೆ ಪ್ರಾರಂಭವಾಗಿದ್ದು, ತೆಕ್ಕಲಕೋಟೆಯಲ್ಲಿ ದೊರೆತ ಒಂದು ಮಣ್ಣಿನ ಮುಚ್ಚಳಿಕೆಯ ಮೇಲೆ ಎರಡು ನವಿಲುಗಳು, ಹಾವು, ಗೂಳಿ ಮತ್ತು ಜಿಂಕೆಯ ಚಿತ್ರಗಳನ್ನು ಚುಚ್ಚಿ ಬಿಡಿಸಲಾಗಿದೆ. ಕುಡತಿನಿ ಮತ್ತು ಕಪ್ಪುಗಲ್ಲುಗಳಲ್ಲಿರುವ ಶಿಲಾ - ತಾಮ್ರ ಹಾಗೂ ಬೃಹತ್ ಶಿಲಾ ಕಬ್ಬಿಣಯುಗಕ್ಕೆ ಸಂಬಂಧಿಸಿದ ಬೂದಿ ದಿಬ್ಬಗಳು ಕಂಡು ಬಂದಿವೆ. ಈ ಬೂದಿ ದಿಬ್ಬಗಳಲ್ಲಿ ಮನುಷ್ಯ - ಪ್ರಾಣಿಗಳ ಮೂಳೆಗಳು, ಮಡಿಕೆಗಳು, ತಾಮ್ರ ಕಬ್ಬಿಣದ ಉಪಕರಣಗಳು ಮುಂತಾದ ಕುರುಹುಗಳು ಲಭ್ಯವಾಗಿವೆ. ಈ ಎಲ್ಲ ಹಿನ್ನೆಲೆಯಿಂದ ಕುಮಾರಸ್ವಾಮಿ ಬೆಟ್ಟದ ಕಾರ್ಯಾಗಾರವು ಸುಮಾರು ಕ್ರಿ.ಪೂ. ೧೦೦೦ ವೇಳೆಗೆ ಪ್ರಾರಂಭವಾಗಿರಬಹುದು ಎಂಬುದರ ಬಗ್ಗೆ ಹಾಗೂ ಈ ಪರಿಸರದ ಭೌಗೋಳಿಕ ಲಕ್ಷಣದ ಬಗ್ಗೆ ವಿವರವಾಗಿ ಹೇಳಲಾಗಿದೆ.

ಆಯಾ ಕಾಲಗಳಲ್ಲಿ ಆಳ್ವಿಕೆ ಮಾಡಿದ ಅರಸರು ದಾನ ದತ್ತಿಗಳನ್ನು ಕೊಡುವುದರ ಮೂಲಕ ದೇವಾಲಯಗಳನ್ನು ನಿರ್ಮಿಸುವುದರ ಮೂಲಕ ಸಂಡೂರು ಪರಿಸರದ ಧಾರ್ಮಿಕ ವೈಭವವನ್ನು ಹೇಗೆ ಹೆಚ್ಚಿಸಿದರೆಂಬುದನ್ನು ಇಲ್ಲಿ ನಿರೂಪಿಸಲಾಗಿದೆ.

ಈ ಪ್ರಬಂಧದ ಪ್ರಮುಖ ಸಾರವೆಂದರೆ ಸಂಡೂರು ಪರಿಸರದ ಪ್ರಾಚೀನ ಕಾಲದ ಗತ ವೈಭವದ ಬಗ್ಗೆ ಕುರಿತು ಹೇಳಲಾಗಿದೆ. ಪ್ರಸ್ತುತ ಅಧ್ಯಯನದ ಇತಿಮಿತಿಗಳಲ್ಲಿ ಆಕರಗಳನ್ನು ಸಂಗ್ರಹಿಸಿ ವಿಷಯವನ್ನು ವಿಶ್ಲೇಷಿಸಿ, ಸಂಯೋಜಿಸಲಾಗಿದೆ. ಇತಿಹಾಸಕ್ಕೆ ಪೂರಕವಾದ ಇನ್ನು ಕೆಲವು ವಿವರಣೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಡೂರು ಪರಿಸರದಲ್ಲಿರುವ ದೇವಾಲಯಗಳು ಮತ್ತು ಶಾಸನಗಳನ್ನು ಸಂರಕ್ಷಿಸುವ ಹೊಣೆ ಗ್ರಾಮಸ್ಥರದಾಗಿದೆ. ಹಾಗೂ ಸರಕಾರದ ಜವಾಬ್ದಾರಿಯೂ ಆಗಿದೆ. ಅಲ್ಲಿ ಹಾಳಾಗಿ ಬಿದ್ದಿರುವ ಸ್ಮಾರಕಗಳನ್ನು ಮತ್ತೆ ಪುನರ್ ರಚಿಸಿ ಸಾಂಸ್ಕೃತಿಕ ಕಾರ್ಯಗಳಿಗೆ ಮತ್ತೆ ಚಾಲನೆ ನೀಡಬಹುದು. ನಶಿಸಿ ಹೋಗುತ್ತಿರುವ ಅವುಗಳನ್ನು ಮುಂದಿನ ಪೀಳಿಗೆಗೆ ಉಳಿಸಬಹುದಾಗಿದೆ. ಸಂಡೂರು ಪರಿಸರದ ಶಾಲಾ - ಕಾಲೇಜುಗಳ

[illegible]

[illegible]

[illegible]


ವಿದ್ಯಾರ್ಥಿಗಳಿಗೆ ಸಂಡೂರಿನ ಸಂಸ್ಕೃತಿ ಮತ್ತು ಸ್ಮಾರಕಗಳ ಬಗ್ಗೆ ತಿಳುವಳಿಕೆ ನೀಡುವ ಕಾರ್ಯವಾಗಬೇಕು. ಇಲ್ಲಿ ನಡೆಯುತ್ತಿರುವ ಬೃಹತ್ ಗಣಿಗಾರಿಕೆಯಿಂದ ಇಲ್ಲಿನ ಪ್ರಾಕೃತಿಕ ಸಂಪತ್ತು ಕರಗುತ್ತಿದೆ. ಇಲ್ಲಿನ ಪರಿಸರ ಮಲಿನವಾಗುತ್ತಿದೆ. ಇದನ್ನು ತಪ್ಪಿಸಲು ಗುಡಿಕೈಗಾರಿಕೆಗಳು ಹೆಚ್ಚಬೇಕು. ಇದರಿಂದ ಖನಿಜ, ಅರಣ್ಯ ಮತ್ತು ಪ್ರಾಕೃತಿಕ ಸೌಂದರ್ಯ ಇನ್ನಷ್ಟುಕಾಲ ನಮ್ಮ ಪೀಳಿಗೆಗೆ ಲಭ್ಯವಾಗುತ್ತದೆ. ಸರ್ಕಾರವೂ ಸಹ ಕಾನೂನು ಬಾಹಿರವಾಗಿ ಗಣಿಗಾರಿಕೆ ನಡೆಸುವವರನ್ನು ಶಿಕ್ಷಿಸಬೇಕು. ಈ ಭಾಗದಲ್ಲಿ ಸಾವಿರಾರು ವರ್ಷಗಳಿಂದ ಗಣಿಗಾರಿಕೆ ನಡೆಯುತ್ತಿತ್ತು. ಆದರೆ ಪ್ರಕೃತಿ ಸಮತೋಲನವಾಗಿಯೇ ಇತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಹಣದಾಸೆಗೆ ಬಲಿಯಾದ ಮಾನವ ಒಂದೇ ಏಟಿಗೆ ಇಲ್ಲಿನ ಖನಿಜಸಂಪತ್ತನ್ನು ಬಾಚುವ ದೃಷ್ಟಿಯಿಂದ ಭೂತಾಯಿಯ ಒಡಲಿಗೆ ಬಾಂಬುಗಳನ್ನು ಹಾಕುತ್ತಿರುವನು. ಪರಿಸರ ಪ್ರಿಯರಿಗೆ ಇದಕ್ಕಿಂತ ಘೋರವಾದ ದೃಶ್ಯ ಇನ್ನೊಂದಿಲ್ಲ. ಸಾರ್ವಜನಿಕರು ಮತ್ತು ಸರ್ಕಾರ ಎರಡೂ ಸೇರಿಕೊಂಡು ಪ್ರಕೃತಿಯನ್ನು ಉಳಿಸುವ ಹೊಣೆಗಾರಿಕೆಯನ್ನು ತೋರಬೇಕು. ಮನುಷ್ಯತ್ವವನ್ನು ಮೆರೆಯಬೇಕು. ಪ್ರಕೃತಿಯಲ್ಲಿ ಒಂದಾಗಿ ಬದುಕುವ ಗುಣ ಬೆಳೆಸಿಕೊಳ್ಳಬೇಕು. ಇದೇ ರೀತಿ ಬೃಹತ್ ಗಣಿಗಾರಿಕೆ ನಡೆದರೆ ಇನ್ನೂ ನೂರು ವರ್ಷಗಳಲ್ಲಿ ಇಲ್ಲಿನ ಅರಣ್ಯ - ಬೆಟ್ಟ - ಗುಡ್ಡಗಳು ಬೋಳಾಗಿ ಮತ್ತೊಂದು ಕೂಡ್ಲಿಗಿ ಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

❖❖


೭

ಅನುಬಂಧ


೭.೧. ಸಂಡೂರು ಪರಿಸರದ ನಕ್ಷೆ.




2.೨. ಶಾಸನಗಳ ಛಾಯಾ ಚಿತ್ರ.



ಪಾರ್ವತಿ ದೇವಾಲಯ; ಬಲ ಭಾಗದ ಗೋಡೆಯ ಶಾಸನ; ಕುಮಾರಸ್ವಾಮಿ ಬೆಟ್ಟ.



ಪಾರ್ವತಿ ದೇವಾಲಯ; ಎಡ ಭಾಗದ ಗೋಡೆಯ ಶಾಸನ; ಕುಮಾರಸ್ವಾಮಿ ಬೆಟ್ಟ.



ಪಾರ್ವತಿ ದೇವಾಲಯ; ಎಡ ಭಾಗದ ಗೋಡೆಯ ಶಾಸನ; ಕುಮಾರಸ್ವಾಮಿ ಬೆಟ್ಟ.




ಕುಮಾರಸ್ವಾಮಿ ದೇವಾಲಯ; ಬಲ ಭಾಗದ ಗೋಡೆಯ ಶಾಸನ; ಕುಮಾರಸ್ವಾಮಿ ಬೆಟ್ಟ.




ನವಿಲುಸ್ವಾಮಿ ದೇವಾಲಯ; ಗೋಡೆಗೆ ನಿಲ್ಲಿಸಿರುವ ಶಾಸನ; ಸುಬ್ಬರಾಯನ ಹಳ್ಳಿ ಹತ್ತಿರ.




ರಾಮಘಡದ ದೇವಾಲಯ; ಗೋಡೆಗೆ ನಿಲ್ಲಿಸಿರುವ ಶಾಸನ.




ಕುಮಾರಸ್ವಾಮಿ ದೇವಾಲಯ; ಸಭಾಮಂಟಪದ ಶಾಸನ; ಕುಡತಿನಿ.




ಮಲ್ಲಿಕಾರ್ಜುನ ದೇವಾಲಯ; ಹತ್ತಿರದ ಶಾಸನ.




ಚಿಕ್ಕಕೆರೆಯಾಗಿನ ಹಳ್ಳಿಯ ಕೆರೆಯ ಹತ್ತಿರದ ಶಾಸನ.




ಈಶ್ವರ ದೇವಾಲಯದ ಕಂಬದಲ್ಲಿನ ಶಾಸನ; ಕುರೆಕುಪ್ಪೆ.




ವೀರಭದ್ರ ದೇವಾಲಯ; ಒಳಗಿರುವ ಶಾಸನ; ಚೋರನೂರು.



ಸಂಡೂರು; ತಾರಕೇಶ್ವರ ದೇವಾಲಯದ; ಹತ್ತಿರದ ಶಾಸನ.



ವೀರಭದ್ರ ದೇವಾಲಯದ; ಎದುರುಗಡೆ ಇರುವ ಶಾಸನ; ಚೋರನೂರು.



ನವಿಲುಸ್ವಾಮಿ ದೇವಾಲಯದ ಗೋಡೆಗೆ ನಿಲ್ಲಿಸಿದ ಮತ್ತೊಂದು ಶಾಸನ ಸುಬ್ಬರಾಯನ ಹಳ್ಳಿ ಹತ್ತಿರ.



ರಾಮಘಡ ದೇವಾಲಯದ ಪಕ್ಕದಲ್ಲಿರುವ ವೀರಗಲ್ಲು, ನಾಗಶಿಲ್ಪಗಳು.


೭.೨. ಸ್ಮಾರಕಗಳ ಛಾಯಾ ಚಿತ್ರ.



ರಾಮಘಡ ದೇವಾಲಯದ ಪಕ್ಕದಲ್ಲಿರುವ ವೀರಗಲ್ಲು



ವೀರಗಲ್ಲು; ಗೆಂತಿಕಟ್ಟೆ.



ವೀರಗಲ್ಲು ; ಈಶ್ವರ ದೇವಾಲಯದ ಮುಂದೆ; ತಾಳೂರು.










ವೀರಗಲ್ಲು; ಹನುಮಂತ ದೇವರ ದೇವಾಲಯದ ಮುಂದೆ; ಕುರೆಕುಪ್ಪೆ



ವಾಮನ ಮುದ್ರೆಕಲ್ಲು; ಚಿಕ್ಕ ಅಂತಾಪುರ.



ಹೊರ ನೋಟ; ಕುಮಾರಸ್ವಾಮಿ ದೇವಾಲಯ; ಕುಮಾರಸ್ವಾಮಿ ಬೆಟ್ಟ.


೭.೪. ದೇವಾಲಯಗಳ ಛಾಯಾಚಿತ್ರ.




ಪಾರ್ವತಿ ದೇವಾಲಯ; ಕುಮಾರಸ್ವಾಮಿ ಬೆಟ್ಟ.



ಕುಮಾರಸ್ವಾಮಿ ದೇವಾಲಯ; ಕುಮಾರಸ್ವಾಮಿ ಬೆಟ್ಟ.




ಕುಮಾರಸ್ವಾಮಿ ದೇವಾಲಯ; ಲಿಂಗದ ಕಟ್ಟೆ; ಕುಮಾರಸ್ವಾಮಿ ಬೆಟ್ಟ.




ನವಿಲುಸ್ವಾಮಿ ದೇವಾಲಯ; ಸುಬ್ಬರಾಯನ ಹಳ್ಳಿ ಹತ್ತಿರ



ನವಿಲುಸ್ವಾಮಿ ದೇವಾಲಯದ; ಮುಂದಿನ ಮಾನಸ್ತಂಭ; ಸುಬ್ಬರಾಯನ ಹಳ್ಳಿ ಹತ್ತಿರ



ನವಿಲುಸ್ವಾಮಿ ದೇವಾಲಯದ; ಮುಂದಿರುವ ಕೊಳ; ಸುಬ್ಬರಾಯನ ಹಳ್ಳಿ ಹತ್ತಿರ



ಚಿಕ್ಕಕೆರೆಯಾಗಿನ ಹಳ್ಳಿಯ, ಕೆರೆ



ಈಶ್ವರ ದೇವಾಲಯ; ಗರ್ಭಗೃಹದ ಪ್ರವೇಶದ್ವಾರ; ತಾಳೂರು



ಕುಮಾರಸ್ವಾಮಿ ದೇವಾಲಯ; ಕುಡತಿನಿ.


ಈಶ್ವರ ದೇವಾಲಯ; ಕಂಬದ ಶೈಲಿ ; ಕುರೆಕುಪ್ಪೆ


ಈಶ್ವರ ದೇವಾಲಯ; ತಾಳೂರು



ಈಶ್ವರ ದೇವಾಲಯ; ಕುರೆಕುಪ್ಪೆ



ರಾಮದೇವರ ದೇವಾಲಯ; ರಾಮಘಡ




ಮಲ್ಲಿಕಾರ್ಜುನ ದೇವಾಲಯ; ಅಂತಾಪುರ



ನರಸಿಂಹಸ್ವಾಮಿ ದೇವಾಲಯ; ಸಂಡೂರು ಹತ್ತಿರ




ತಾರಕೇಶ್ವರ ದೇವಾಲಯ; ಸಂಡೂರು




ವೀರಭದ್ರ ದೇವರ; ಮೂರ್ತಿ; ಚೋರನೂರು




ಸಂಡೂರು ತಾರಕೇಶ್ವರ ದೇವರ ಮೂರ್ತಿ




ಹರಿಶಂಕರ ದೇವಾಲಯ; ಕುಮಾರಸ್ವಾಮಿ ಬೆಟ್ಟ



ಸಂಡೂರು ಹತ್ತಿರದ ಗಂಡೀ ನರಸಿಂಹ ದೇವರ ವಿಗ್ರಹ



ತಾರಾನಗರದ ಹತ್ತಿರದ ಭೈರವಿ ತೀರ್ಥ; ಕುಮಾರಸ್ವಾಮಿ ಪಾದ










ಕೃಷ್ಣನಗರ ಕೋಟೆಯ ಹಿಂಭಾಗ; ಸಂಡೂರು



ಕೃಷ್ಣನಗರ ಕೋಟೆಯ ಪ್ರವೇಶದ್ವಾರ; ಸಂಡೂರು



ಕೃಷ್ಣನಗರ ಕೋಟೆಯ ಮೂರನೇದ್ವಾರ



ಕುಮಾರಸ್ವಾಮಿ ವಿಗ್ರಹ; ಕುಮಾರಸ್ವಾಮಿ ಬೆಟ್ಟ



ಪಾರ್ವತಿ ದೇವಿ ವಿಗ್ರಹ; ಕುಮಾರಸ್ವಾಮಿ ಬೆಟ್ಟ



ಘೋರ್ಪಡೆ ಅರಮನೆ; ಸಂಡೂರು

೮

ಗ್ರಂಥಸೂಚಿ

ಗ್ರಂಥಸೂಚಿ

ಕನ್ನಡ ಗ್ರಂಥಗಳು

೧. ಅಪರ್ಣ ಕೂ.ಸ. - ದೇವಾಲಯ ವಾಸ್ತುಶಿಲ್ಪ ಪರಿಚಯ, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೯

೨. ಕಲಬುರ್ಗಿ ಎಂ.ಎಂ. - ಕರ್ನಾಟಕ ಕೈಫಿಯತ್ತುಗಳು, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೪

೩. ಕೊಟ್ರೇಶ್ ಮಾಡಲಗೇರಿ, ಸುರೇಶ್ ಕೆ.ಎಂ, ವಾಸುದೇವ ಬಡಿಗೇರ ಮತ್ತು ಸೋಮಶೇಖರ ಎಸ್.ವೈ. - ಕರ್ನಾಟಕ ದೇವಾಲಯಗಳ ಕೋಶ, ಬಳ್ಳಾರಿ ಜಿಲ್ಲೆ, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೯

೪. ಚನ್ನಬಸವಯ್ಯ ಹಿರೇಮಠ - ಕುರುಗೋಡು ಸಿಂಧರು ಒಂದು ಅಧ್ಯಯನ, ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ, ೧೯೯೫

೫. ತಿಪ್ಪೇರುದ್ರಸ್ವಾಮಿ ಎಚ್. - ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು, ೧೯೯೭

೬. ನರಸಿಂಹಮೂರ್ತಿ ಎ.ವಿ. - ಕರ್ನಾಟಕ ಶಾಸನ ಸಂಪತ್ತು (ಜನವರಿ ೧೯೮೩), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು - ೫೬೦೦೦೨

೭. ನರಸಿಂಹಚಾರ್ ಡಿ.ಎಲ್. - ವಡ್ಡಾರಾಧನೆ, ಮೈಸೂರು, ೧೯೭೦

೮. ನಾಗಯ್ಯ ಜೆ.ಎಂ. - ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, (ಸಂಪುಟ - ೧, ರಾಜಕೀಯ : ವಿಜಯನಗರ ಪೂರ್ವ), ಲೋಹಿಯಾ ಪ್ರಕಾಶನ, ಬಳ್ಳಾರಿ

೯. ಬಸವರಾಜ್ ಎಚ್.ಎಂ. ಗುಡೇಕೋಟೆ ಸಾಂಸ್ಕೃತಿಕ ಅಧ್ಯಯನ, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೨೦೦೨, ಎಂ.ಫಿಲ್ . ಅಧ್ಯಯನ

೧೦. ಬ್ರಹ್ಮಶ್ರೀ ಬಾಲಚಂದ್ರಶಾಸ್ತ್ರಿ - ಶ್ರೀ ಸ್ಕಂದ ಕ್ಷೇತ್ರ ಮಹಾತ್ಮೆ, ಧಾರವಾಡ, ೧೯೫೫

೧೧. ಮಹದೇವ ಸಿ, ಸುಬ್ಬಣ್ಣ ರೈ ಮತ್ತು ಮಾಧವ ಪೆರಾಜೆ - ಹೊಸಪೇಟೆ ತಾಲೂಕು ದರ್ಶನ, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೨೦೦೨

೧೨. ಮಂಜುನಾಥ ಬೇವಿನಕಟ್ಟಿ ಮತ್ತು ಇತರರು - ಕರ್ನಾಟಕದಲ್ಲಿ ಕುಮಾರರಾಮನ ಪಂಥ, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೬

೧೩. ರವಿಕುಮಾರ್ ಎ.ಎಂ ಮತ್ತು ವೃಷಬೇಂದ್ರಚಾರ್ ಎ. - ಮುನ್ನಡೆಯ ಕೂಡ್ಲಿಗಿ, ೧೯೯೮, (ಕೂಡ್ಲಿಗಿ ತಾಲೂಕಿನ ಸಮಗ್ರ ದರ್ಶನ)

೧೪. ರಾಜಶೇಖರ ಸಿಂದಗಿ - ಕರ್ನಾಟಕದ ವಾಸ್ತುಶಿಲ್ಪ, ಚಿತ್ರಕಲೆ, ೧೯೮೮

೧೫. ರಾಮರಾಯರು ಕೆ. - ಶ್ರೀ ಷಣ್ಮುಖಯಾತ್ರೆ, ವಿದ್ವಾನ್ ಕನ್ನಡ ಪಂಡಿತರು, ೧೯೪೭

೧೬. ವಸಂತ ಸಜ್ಜನ - ಕೋಗಳಿನಾಡು ಒಂದು ಅಧ್ಯಯನ, ಎಂ.ಫಿಲ್. (ಅಪ್ರಕಟಿತ)

೧೭. ವಾಸುದೇವ ಬಡಿಗೇರ - ಸಂಡೂರು ಪರಿಸರದ ಕಾರ್ತಿಕೇಯ ತಪೋವನ, (ಚಾರಿತ್ರಿಕ ಅಧ್ಯಯನ), ಮಯ ಪ್ರಕಾಶನ, ೧೯೯೭

೧೮. ಶಿವರಾಮಕಾರಂತ - ಚಾಲುಕ್ಯ ವಾಸ್ತುಶಿಲ್ಪ

೧೯. ಸದಾಶಿವಪ್ಪ ಕುಂ.ಬಾ. - ಹರಪನಹಳ್ಳಿ ಪಾಳೆಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು

೨೦. ಸಂಭಾಪೂರ್ ಜಿ.ಎಚ್. - ಶ್ರೀ ಕಾರ್ತಿಕೇಯ ಸುಪ್ರಭಾತ ಮತ್ತು ಸುಬ್ರಹ್ಮಣ್ಯ ಸ್ತೋತ್ರ, ೧೯೮೦

೨೧. ಹಿರೇಮಠ ಬಿ.ಆರ್. - ವೀರಗಲ್ಲುಗಳು, ಕರ್ನಾಟಕ ವಿಶ್ವವಿದ್ಯಾಲಯ, ಅಕ್ಟೋಬರ್ ೧೯೭೬

ಲೇಖನಗಳು

೧. ಅಭಿಶಂಕರ್ ಕೆ. - ಕಂಪಿಲಿ / ಕಮ್ಮಟ : ಚಿಕ್ಕ ರಾಜ್ಯದ ದೊಡ್ಡ ಮಾರ್ಮಿಕ ಪಾತ್ರ, ಇತಿಹಾಸ ದರ್ಶನ, ಸಂಪುಟ - ೫, ೧೯೯೦
೨. ನಾಗಭೂಷಣ ಎನ್.ಎಂ. - ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ, ಇತಿಹಾಸ ದರ್ಶನ, ಸಂಪುಟ - ೧೦, ೧೯೯೫
೩. ನಾಗಯ್ಯ ಜೆ.ಎಂ. - ವಡ್ಡರಾಧನೆ ಸೂಚಿಸುವ ಬಸದಿ ಮತ್ತು ಸಂಡೂರು, ಇತಿಹಾಸ ದರ್ಶನ, ಸಂಪುಟ - ೧೦, ೧೯೯೫
೪. ಪುರುಷೋತ್ತಮ ರೆಡ್ಡಿ ಆರ್. - ಸಂಡೂರು ಪ್ರದೇಶದ ಕಬ್ಬಿಣ ತಯಾರಿಕೆ ಒಂದು ಐತಿಹಾಸಿಕ ನೋಟ, ಇತಿಹಾಸ ದರ್ಶನ, ಸಂಪುಟ - ೧೭, ೨೦೦೨
೫. ಸದಾಶಿವಪ್ಪ ಕುಂ.ಬಾ. - ಹರಪನಹಳ್ಳಿ ಪಾಳೇಗಾರರಿಗೆ ಸಂಬಂಧಿಸಿದ ನಕ್ಷೆ ಮತ್ತು ಪತ್ರಗಳ ಪರಿಶೀಲನೆ, ಇತಿಹಾಸ ದರ್ಶನ, ಸಂಪುಟ - ೧೨, ೧೯೯೨
೬. ಸದಾಶಿವಪ್ಪ ಕುಂ.ಬಾ. - ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, (ಸಂಶೋಧಿತ ಲೇಖನಗಳು), ೧೯೯೦
೭. ಸುಂದರ ಅ. - ಶ್ರೀಮದ್ರಾರಾಮಾಯಣದ 'ಕಾರ್ತಿಕೇಯ ವನ'ವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ? ಇತಿಹಾಸ ದರ್ಶನ, ಸಂಪುಟ - ೧೦, ೧೯೯೫, ಕ.ಇ.ಅ. ಬೆಂಗಳೂರು

ಇಂಗ್ಲಿಶ್ ಗ್ರಂಥಗಳು

೧. Abishankar K. Ed,- Mysore State Gazetteer, Bellary District, 1972
೨. Patil C.S.- Vijayanagara progress Reaserch, 1987

ಸಂಚಿಕೆಗಳು

೧. ಪ್ರಭು ಪ್ರಕಾಶ - ನೆನಪಿನ ಸಂಚಿಕೆ, ೧೯೯೪, ಶ್ರೀ ಪ್ರಭುದೇವರ ಸಂಸ್ಥಾನ, ವಿರಕ್ತಮಠ, ಸಂಡೂರು
೨. ಸ್ಕಂದ - ಶ್ರೀಗಂಧ - ಸ್ಮರಣ ಸಂಚಿಕೆ, ೧೯೯೧, ಬಳ್ಳಾರಿ ಜಿಲ್ಲಾ ೫ನೇ ಸಾಂಸ್ಕೃತಿಕ ಸಮ್ಮೇಳನ, ಸಂಡೂರು, ಜನವರಿ ೧೨ ಮತ್ತು ೧೩

ಸಂಪುಟಗಳು

೧. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ - ೧, ಸಂ, ದೇವರಕೊಂಡಾರೆಡ್ಡಿ ಮತ್ತು ಇತರರು
೨. ಕೊಪ್ಪಳ ಜಿಲ್ಲಾ ಶಾಸನ ಸಂಪುಟ - ೨, ಸಂ, ದೇವರಕೊಂಡಾರೆಡ್ಡಿ ಮತ್ತು ಇತರರು
೩. ಕರ್ನಾಟಕ ಚರಿತ್ರೆ ಸಂಪುಟ - ೧, ಡಾ.ಅ.ಸುಂದರ
೪. Inscoiptions of Bellary District- C.S.Patil, Vinoda C.Patil, ೧೯೯೭
೫. ಕರ್ನಾಟಕ ರಾಜ್ಯ ಗೆಜೆಟಿಯರ್ - ಭಾಗ - ೧, ಪುಟ ೧೩೦ - ೧೩೦
೬. ಕರ್ನಾಟಕ ರಾಜ್ಯ ಗೆಜೆಟಿಯರ್ - ಭಾಗ - ೩, ಪುಟ ೬೦೮

ಸಂಕೇತ ಸೂಚಿ

೧.	ಸಂ.ಇ.ಸಾಂ.ಪ.	ಸಂಡೂರು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ
೨.	ಸಂ.ಪ.ಕಾ.ತ.	ಸಂಡೂರು ಪರಿಸರದ ಕಾರ್ತಿಕೇಯ ತಪೋವನ
೩.	ಚಾ.ಅ.	ಚಾರಿತ್ರಿಕ ಅಧ್ಯಯನ
೪.	ಶ್ರೀ.ಮ.'ಕಾ.ವ'ವು. ಸಂ.ಕು.ಬೆ?	ಶ್ರೀಮದ್ರಾಮಾಯಣದ 'ಕಾರ್ತಿಕೇಯ ವನ'ವು ಸಂಡೂರಿನ ಕುಮಾರಸ್ವಾಮಿ ಬೆಟ್ಟವೆ?
೫.	ಕ.ಇ.ದ.	ಕರ್ನಾಟಕ ಇತಿಹಾಸ ದರ್ಶನ
೬.	ಕ.ದೇ.ಕೋ.	ಕರ್ನಾಟಕ ದೇವಾಲಯಗಳ ಕೋಶ
೭.	ಬ.ತಾ.	ಬಳ್ಳಾರಿ ತಾಲೂಕು
೮.	ಸಂ.ತಾ.	ಸಂಡೂರು ತಾಲೂಕು
೯.	ಕ.ಶಾ.ಸಂ.	ಕರ್ನಾಟಕ ಶಾಸನ ಸಂಪತ್ತು
೧೦.	ಕ.ಸಂ.ಸ.	ಕರ್ನಾಟಕ ಸಂಸ್ಕೃತಿ ಸಮೀಕ್ಷೆ
೧೧.	ಬ.ಜಿ.ಶಾ.ಸಂ.	ಬಳ್ಳಾರಿ ಜಿಲ್ಲಾ ಶಾಸನ ಸಂಪುಟ
೧೨.	ವ.ಸೂ.ಬ.ಸಂ.	ವಡ್ಡಾರಾಧನೆ ಸೂಚಿಸುವ ಬಸದಿ ಮತ್ತು ಸಂಡೂರು
೧೩.	ಬ.ಜಿ.ಸಾಂ.ಇ.	ಬಳ್ಳಾರಿ ಜಿಲ್ಲೆ ಸಾಂಸ್ಕೃತಿಕ ಇತಿಹಾಸ
೧೪.	ಕ.ಕು.ರಾ.ಪಂ.	ಕರ್ನಾಟಕದಲ್ಲಿ ಕುಮಾರ ರಾಮನ ಪಂಥ
೧೫.	ಕ.ಇ.ಅ.ಬೆಂ.	ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು
೧೬.	I.B.O.	Inscriptions of Bellary Distric
೧೭.	ARSIE	Anual Report of South Indian Epigraphy
೧೮.	ARIE	Anual Report of Indian Epigraphy